- ಓಂ -

- ಶ್ರೀಯತ್ತ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ನಾನ್ಗಾಯಿರಂ

।

ತಿರುವಾಯ್ಮೊಳಿ

ನಮ್ಮಾಳ್ವಾರ್

(ತಿರುಕ್ಕುರುಹೂರ್ ಶಠಗೋಪನ್ ವಿರಚಿತ)

।

ನಾಲ್ಕನೆಯ ಸಾವಿರ

ತಮಿಳು ಮೂಲ ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ
ಮತ್ತು
ವಿವರಣೆಯೊಂದಿಗೆ

ಸಂಪುಟ - 16

ಭಾಗ - ೨

Garani Srinivasan

విషయసూచిక

సంఖ్య	వివరం	పాటలు	పుట
1.	శ్రీ వాయుస్తుత్య యదుభూషణమా	11	— 1
2.	కృష్ణా మా బిడు	11	— 21
3.	యూనిల్ వా ఊయురే	11	— 37
4.	ఆడు పాడు	11	— 56
5.	అన్నా ముక్తన్ను	11	— 72
6.	వృత్రఘ్నా మనో వర్ణానే	11	— 89
7.	కేశవన్ కమర్	11	— 109
8.	అణ్వోవదరవణ్వో మేల్	11	— 133
9	ఎవ్వాలిఖ్ఖరి లా మయమా	11	— 155
10	కిళ్ళరహా ళియళవ్వు	11	— 172
			— 188.
	మొత్తం	110	

— ० —

30.12.79

- ಶ್ರೀಃ - (1) - ಶ್ರೀಯೈ ನಮಃ -

ತಿರುವಾಯ್ಮೊೞಿ – ಎರಡನೆಯ ದಶಕ – ಮೊದಲ ತಿರುವಾಯ್ಮೊೞಿ

திருவாய்மொழி – இரண்டாம் பத்து – முதல் திருவாய்மொழி

1. ವಾಯುನ್ತಿರೈಯುಗಳುಮ್ – வாயுந்திரையுகளும்

1. வாயுந்திரையுகளும் கானல் மடநாராய்,
ஆயுமமருலகும் துஞ்சிலும் நீ துஞ்சாயால்
நோயும் பயலைமையும் மீதூர எம்மேபோல்,
நீயும் திருமாலால் நெஞ்சம் கோட்பட்டாயே

ವಾಯುನ್ತಿರೈಯುಗಳುಮ್ ಕಾನಲ್ ಮಡನಾರಾಯ್,
ಆಯುಮಮರುಲಗುಮ್ ತುಂಜಿಲುಮ್ ನೀ ತುಂಜಾಯಾಲ್
ನೋಯುಮ್ ಪಯಲ್ಲೈಮೈಯುಮ್ ಮೀದೂರ ಎಮ್ಮೇ ಪೋಲ್,
ನೀಯುಮ್ ತಿರುಮಾಲಾಲ್ ನೆಂಜಮ್ ಕೋಟ್ಪಟ್ಟಾಯೇ

ವಾಯುಮ್ வாயும் = ಎಡೆಬಿಡದೆ ಬರುತ್ತಿರುವ, ತಿರೈ திரை ಅಲೆಗಳನ್ನು, ಉಗಳುಮ್ உகளும் = ದಾಯ್ದು (ದಾಟಿ) ದಾಟುವ, ಕಾನಲ್ கானல் = ಕಾಡಿನ (ಕೋಟಿನ), ಮಡಮ್ ನಾರಾಯ್ மடம் நாராய் = ಯೌವನದ ಕೊಕ್ಕರೆಯೇ, ಆಯುಮ್ ஆயும் = ತಾಯಿಯೂ ಸಹ, ಅಮರ್ அமர் = ಆಶ್ರಯಿಸಿಬರುವ, ಉಲಗುಮ್ உலகும் = ಲೋಕವೆಲ್ಲವೂ, ತುಂಜಿಲುಮ್ துஞ்சிலும் = ನಿದ್ರಿಸಿದರೂ ಸಹ, ನೀ நீ = ನೀನು, ತುಂಜಾಯ್ ಆಲ್ துஞ்சாயால் = ನಿದ್ರಿಸದೆ ಯಾದ್ದರಿಂದ, ನೋಯುಮ್ நோயும் = ಸಂಕಟವನ್ನೂ, ಪಯಲ್ಲೈಮೈಯುಮ್ பயலைமையும் = ಹಳದಿಯ ದೇಹವನ್ನೂ, ಮೀದೂರ மீதூர = ಹೊತ್ತಿರುವ, ಎಮ್ಮೇ ಪೋಲ್ எம்மே போல் = ನಮ್ಮಹಾಗೆ, ನೀಯುಮ್ நீயும் = ನೀನೂ ಸಹ, ತಿರುಮಾಲಾಲ್ திருமாலால் = ಲಕ್ಷ್ಮೀನಾಥನಿಂದ, ನೆಂಜಮ್ நெஞ்சம் = ಮನಸ್ಸನ್ನು, ಕೋಟ್ಪಟ್ಟಾಯೇ கோட்பட்டாயே = ಸೂರೆಗೊಳ್ಳಲ್ಪಟ್ಟಿರುವೆಯಾ? (ಕೊಳ್ಳಲ್ಪಟ್ಟಿರುವೆಯಾ?)

ಎಡೆಬಿಡದೆ ಬರುತ್ತಿರುವ ಅಲೆಗಳನ್ನು ದಾಯ್ದು ದಾಟುವ ಕಾಡಿನ ಯೌವನದ ಕೊಕ್ಕರೆಯೇ ತಾಯಿಯೂ ಸಹ, ಆಶ್ರಯಿಸಿಬರುವ ಲೋಕವೆಲ್ಲವೂ ನಿದ್ರಿಸಿದರೂ ಸಹ ನೀನು ನಿದ್ರಿಸದೆಯಾದ್ದರಿಂದ, ಸಂಕಟವನ್ನೂ ಹಳದಿಯ (ಕೃಶವಾದ) ದೇಹವನ್ನೂ ಹೊತ್ತಿರುವ ನಮ್ಮಹಾಗೆ ನೀನೂ ಸಹ ಲಕ್ಷ್ಮೀನಾಥನಿಂದ ನಿನ್ನ ಮನಸ್ಸನ್ನು ಸೂರೆಗೊಳ್ಳಲ್ಪಟ್ಟಿರುವೆಯಾ? (1)

ಲೋಕದಲ್ಲಿ ಕಂಡು ಬರುವ ಸಾಮಾನ್ಯ ವಿಷಯವೊಂದನ್ನು ತೆಗೆದುಕೊಂಡು, ಆಳ್ವಾರರು ಈ ಪಾಶುರದಲ್ಲಿ ಭಗವದ್ವಿಷಯಕ್ಕೆ ಸಂಬಂಧಿಸಿ

Garani Srinivasan

ದಂತೆ, ಸ್ವಾರಸ್ಯವಾಗಿ ಹೋಲಿಸಿ, ಹೇಳುತ್ತಿದ್ದಾರೆ.

ಲೋಕದಲ್ಲಿ ಇತರ ಎಲ್ಲಾ ಪಕ್ಷಿಗಳ ಹಾಗೆ ಕೊಕ್ಕರೆ ಅಲ್ಲ. ಇತರ ಪಕ್ಷಿಗಳು ಹಗಲೆಲ್ಲಾ ಹಾರಾಡಿ, ಆಹಾರವನ್ನು ಹುಡುಕಿ, ತಿಂದು, ಚಟುವಟಿಕೆಯಿಂದಿದ್ದು, ಸಂಜೆಯಾಗುತ್ತಲೂ ಗೂಡು ಸೇರಿ, ರಾತ್ರಿಯನ್ನು ನಿದ್ರೆಯಲ್ಲಿ ಕಳೆಯುತ್ತವೆಯಷ್ಟೆ. ಕೊಕ್ಕರೆಗೆ ಹಗಲೂ ರಾತ್ರಿಯೂ ಒಂದೇ ಬಗೆ. ನಿದ್ದೆಗೆಟ್ಟು ಮೀನು ಹಿಡಿಯುವುದರಲ್ಲಿಯೇ ಅದು ಕಾಲ ಕಳೆಯುತ್ತದೆ.

ಹಾಗೆಯೇ, ಲೋಕದಲ್ಲಿ ಎಲ್ಲ ಜನರೂ ಸಾಮಾನ್ಯವಾಗಿ ಪ್ರಾಪಂಚಿಕರು. ಅವರಿಗೆ ಹಗಲು ಹೊಟ್ಟೆ ಹೊರೆಯುವುದಕ್ಕೆ, ರಾತ್ರಿ ನಿದ್ದೆಗೆ ಮೀಸಲು. ಅವರು ಭಗವಚ್ಚಿಂತನೆಯ ಗೊಡವೆಯನ್ನು ಸಾಮಾನ್ಯವಾಗಿ ಹಚ್ಚಿಕೊಳ್ಳುವುದೇ ಇಲ್ಲ. ಆದರೆ, ಕೆಲವರು ಮಾತ್ರವೇ ಭಗವಚ್ಚಿಂತನೆಯನ್ನು ಮುಖ್ಯವಾಗಿಟ್ಟುಕೊಂಡು, ಮಿಕ್ಕ ಪ್ರಾಪಂಚಿಕ ವ್ಯವಹಾರಗಳನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಅವರಿಗೆ, ಎಲ್ಲರೂ ನಿದ್ರಿಸುವ ಸಮಯವೇ ಬಹಳ ಒಳ್ಳೆಯ ಸಮಯ. ಆದ್ದರಿಂದ, ನಡುರಾತ್ರಿಯಲ್ಲೂ ಅವರು ನಿದ್ದೆಗೆಟ್ಟು ಭಗವಚ್ಚಿಂತನೆಯಲ್ಲಿಯೇ ಕಾಲ ಕಳೆಯುತ್ತಾರೆ. ಈ ಬಗೆಯ ಜನರನ್ನು ಆಳ್ವಾರರು 'ವಿರಹಿಗೆ' ಹೋಲಿಸಿದ್ದಾರೆ. ವಿರಹಿಗೆ ತನ್ನ ಪ್ರಿಯತಮನನ್ನು ಕೂಡಿಕೊಂಡಿರಬೇಕೆಂದೇ ಆಸೆ. ಅದಕ್ಕಾಗಿ, ಅವಳು, ಕೃಶಿಸಿ, ನಿದ್ದೆಗೆಟ್ಟು ಸಂಕಟಪಡುತ್ತಾಳೆ. ಈ ಪಾಶುರದಲ್ಲಿ 'ವಿರಹಿ'ಯೆಂದರೆ ಆಳ್ವಾರರು 'ಪ್ರಿಯತಮ'ನೆಂದರೆ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನೇ

ಆಳ್ವಾರರು ಹೇಳುತ್ತಾರೆ: ಕೊಕ್ಕರೆಯೇ, ನೀನು ಎಡಬಿಡದೆ ಬರುತ್ತಿರುವ ಅಲೆಗಳನ್ನು ದಾಟುತ್ತಾ, ಮೀನನ್ನು ಹಿಡಿಯುತ್ತಾ, ಜಾಗರಿಸುವ ಪಕ್ಷಿ. ಇತರ ಪಕ್ಷಿಗಳಂತೆ ನೀನೂ ರಾತ್ರಿಯಲ್ಲಿ ನಿದ್ರಿಸಬೇಡವೇ? ನೀನೂ ನಿದ್ದೆಗೆಡುವೆಯೇತಕೆ? ನಾನು ವಿರಹಿ. ನನ್ನ ಮನಸ್ಸನ್ನು ಸರ್ವೇಶ್ವರನಾದ ಲಕ್ಷ್ಮೀಪತಿಯು ಸೂರೆಗೊಂಡಿದ್ದಾನೆ. ಅವನೊಡನೆ ಕೂಡಿಕೊಳ್ಳಬೇಕೆಂಬ ಹಂಬಲದಿಂದ, ಸಂಕಟಪಡುತ್ತಿದ್ದೇನೆ. ನನಗೆ ನಿದ್ದೆ ಹತ್ತುವುದಿಲ್ಲ. ನನ್ನ ಮೈಬಣ್ಣ ಹೋಯಿತು. ಕೃಶನಾದ್ದೇನೆ, ಕಂಡೆಯಾ. ಕೊಕ್ಕರೆಯೇ, ನೀನೂ ನಿದ್ರಿಸದೆ ಇರುವುದರಿಂದ, ನಿನ್ನ ಮನಸ್ಸನ್ನೂ ಆ ಲಕ್ಷ್ಮೀನಾಥನು ಸೂರೆಗೊಂಡನೋ ಹೇಗೆ? ಚಿಂತಿಸಿ, ನನ್ನಂತೆ ನೀನೂ ಬಡವಾದೆಯೇ! ಭಗವಂತನನ್ನು ಕುರಿತು ಹುಚ್ಚೇ ನಿನಗೂ ಹತ್ತೀತು!

2. கோட்பட்ட சிந்தையையாய்க் கூர்வாயவன்றிலே,
கோட்பட்ட யாமங்கள் சேராதிரங்குதியால்,
ஆட்பட்ட எம்மே போல் நீயுமரவணையான்,
தாட்பட்ட தண்டுழாய்த் தாமம் காமுற்றாயே.

Garani Srinivasan

ಕೊಟ್ಟಟ್ಟ ಶನ್ದ್ವಿಯ್ಯ್ಯೊಯ್ ಕ್ಕೂರ್ ವಾಯ ವನ್ ಱಿಲೇ,
ಚೇಟ್ಟಟ್ಟ ಯಾಮಙ್ಗಳ್ ಶೇರಾದಿರಙ್ಗದಿಯಾಲ್,
ಆಟ್ಟಟ್ಟ ವೆಮ್ಮೆ ಪೋಲ್ ನೀಯುಮರವಣೈಯಾನ್,
ಶೌಟ್ಟಟ್ಟ ತಣ್ದುಳಾಯ್ ತ್ತಾಮಮಾ ಕಾಮುಟ್ರಾಯೇ

ಕೊಟ್ಟಟ್ಟ கோட்பட்ட = ಗೋಳ್ಳುಕರಗಲಿರುವ, ಶನ್ದ್ವಿಯ್ಯ ಆಯ் சிந்தாக[...]ாயு ஆய் = ಚಿಂತನೆಯೇ ಆಗಿರುವ, ಕೂರ್ ವಾಯ್ கூர் வாய் = ದೀನವಾಗಿ ಕೂಗುತ್ತಿರುವ ಅನ್ ಱಿಲೇ அன்றிலே = ಕ್ರೌಂಚ ಪಕ್ಷಿಯೇ, ಚೇಟ್ಟಟ್ಟ சேட்பட்ட = ದೀರ್ಘವಾಗಿರುವ, ಯಾಮಙ್ಗಳ್ யாமங்கள் = ಜಾವಗಳನ್ನು, ಶೇರಾದು சேராது = (ನಿದ್ದೆಯನ್ನು) ಸೇರದೆಯೇ, ಇರಙ್ಗದಿ ಆಲ್ இரங்குதி ஆல் = ದುಃಖಿಸುತ್ತಿರುವೆಯಾದ್ದರಿಂದ, ಆಟ್ಟಟ್ಟ ஆட்பட்ட = ಸೇವೆಮಾಡುತ್ತಿರುವ ಎಮ್ಮೆ ಪೋಲ್ நாமே போல் = ನಮ್ಮ ಹಾಗೆಯೇ, ನೀಯುಮ್ நீயும் = ನೀನೂ ಸಹ, ಅರವು ಅಣೈಯಾನ್ அரவு அணையான் = ಶೇಷಶಾಯಿಯ, ಶೌಟ್ಟಟ್ಟ தாள்பட்ட = ತಿರುವಡಿಗಳನ್ನು ಸೇರಿದ (ಸಂಬಂಧಪಟ್ಟ), ತಣ್ದುಳಾಯ್ தண் துழாய் = ತಂಪಾದ ತುಳಸಿಯ, ತ್ತಾಮಮಾ தாமம் = ಹಾರವನ್ನು, ಕಾಮುಟ್ರಾಯೇ காமம் உற்றாயே = ಆಶಿಸಿರುವೆಯಾ?

ಗೋಳ್ಳುಕರಗಲಿರುವ ಚಿಂತನೆಯೇ ಆಗಿರುವ ದೀನವಾಗಿ ಕೂಗುತ್ತಿರುವ ಕ್ರೌಂಚ ಪಕ್ಷಿಯೇ, ದೀರ್ಘವಾದ ಯಾಮಗಳನ್ನು ನಿದ್ದೆ ಸೇರದೆಯೇ ದುಃಖಿಸುತ್ತಿರುವೆಯಾದ್ದರಿಂದ, ಸೇವೆಯಲ್ಲಿ ತೊಡಗಿರುವ ನಮ್ಮ ಹಾಗೆಯೇ ನೀನೂ ಸಹ ಶೇಷಶಾಯಿಯ ತಿರುವಡಿಗಳ ಸಂಬಂಧವನ್ನು ಪಡೆದಿರುವ ತಂಪಾದ ತುಳಸಿಯ ಹಾರವನ್ನು ಆಶಿಸಿರುವೆಯಾ? (2)

ರಾತ್ರಿಯು ಕಾಲ ನಿದ್ದೆಗಾಗಿ ಎಂಬ ನಿಯಮವನ್ನು ಮನುಷ್ಯರಂತೆ ಪಕ್ಷಿಗಳೂ ಪಾಲಿಸಬೇಕಲ್ಲವೇ? ರಾತ್ರಿಯಲ್ಲಿ ನಿದ್ದೆಗೆಟ್ಟು ಕಳೆಯುವುದು ದುಃಖಿಗಳು, ಮತ್ತು ವಿರಹಿಗಳು (ಅಥವಾ ದುಃಖಿಗಳು) ಪಾಲಿಗೆ ಬಂದದ್ದು.

ಹಿಂದಿನ ಪಾಶುರದಲ್ಲಿ ಕೊಕ್ಕರೆಯು ನಿದರ್ಶನವಾಯಿತು. ಅದು ಹೊಟ್ಟೆಪಾಡಿಗಾಗಿ, ಅದರಲ್ಲಿ ಆತ್ಮಾಶೆಯಿಂದ ತೃಪ್ತಿಯಿಲ್ಲದಂತೆ, ಹಗಲೂ ರಾತ್ರಿ ಎನ್ನದಂತೆ, ಮೀನು ಹಿಡಿಯುವುದರಲ್ಲಿಯೇ ಆಸಕ್ತಿ ಹೊಂದಿತ್ತು. ಆದ್ದರಿಂದ ಅದಕ್ಕೆ ನಿದ್ದೆಯಿಲ್ಲದೆ ಹೋಯಿತು. ಈ ಪಾಶುರದಲ್ಲಾದರೋ, ಕ್ರೌಂಚ ಪಕ್ಷಿಯು ನಿದರ್ಶನವನ್ನು ತೆಗೆದುಕೊಳ್ಳಲಾಗಿದೆ. ಇದಕ್ಕೆ ಅಗಲಿಕೆ ತನ್ನ ಪ್ರಿಯತಮನಿಂದ ಅಗಲಿರಲಾರದೆ, ಇದು ರಾತ್ರಿಯಲ್ಲಿ ನಿದ್ದೆಗೆಟ್ಟು ಅವನಿಗಾಗಿ ದುಃಖಿಸುತ್ತಾ, ದೀನಸ್ವರದಿಂದ ಗೋಳಿಡುತ್ತಿದೆ. ಹಾಗೆಯೇ ವಿರಹಿಯು ಸಹ. ತನ್ನ ಪ್ರಿಯತಮನ. ಅಗಲಿಕೆಯಿಂದ ಹಗಲಿನಂತೆಯೂ ಹೆಚ್ಚಾಗಿ ರಾತ್ರಿಕಾಲಗಳಲ್ಲಿ ಅವಳು

Garani Srinivasan

ಹೇಳತೀರದಷ್ಟು ಸಂಕಟ ಪಡುತ್ತಿರುವುದರಿಂದ, ಅವಳಿಗೆ ರಾತ್ರಿಯಲ್ಲೂ ನಿದ್ದೆ ಹತ್ತುವುದಿಲ್ಲ. ಇದೆಲ್ಲ ಪ್ರಾಪಂಚಿಕಸ್ಥಿತಿ - ವ್ಯವಹಾರ.

ಇನ್ನು, ಭಗವಂತನನ್ನೇ ತನ್ನ 'ನಾಯಕ'ನನ್ನಾಗಿ ಮಾಡಿಕೊಂಡು, ಅವನೊಡನೆ ಕೂಡಿಕೊಳ್ಳಲಿಲ್ಲ, ಇನ್ನೆಷ್ಟು ಕಾಲ ಈ ಅಗಲಿಕೆ, ಎಂದು ವಿರಹದಿಂದಾಗಿ ಪರಿತಪಿಸುತ್ತಿರುವ 'ನಾಯಕಿ'ಯ ಭಾವವನ್ನು ಕೊಂಡು ಅನುಕರಿಸುವ ಭಕ್ತನ ವಿಷಯವನ್ನು ತೆಗೆದುಕೊಳ್ಳೋಣ. ಈ 'ನಾಯಕಿ'ಯೂ ಹಾಗೇ ಪರದಾಡಬೇಕು! ಆದರೆ, ಅದು ಆಧ್ಯಾತ್ಮಿಕ ರೀತಿಯಲ್ಲಿ! ಅವಳಿಗೂ ರಾತ್ರಿಗಳಲ್ಲೂ ನಿದ್ದೆ ಹತ್ತುವುದಿಲ್ಲ; ರಾತ್ರಿಯ ಒಂದೊಂದು ಜಾವವೂ ಒಂದು ಯುಗದಂತೆ ದೀರ್ಘವಾಗಿ ಕಂಡು ಬರುತ್ತದೆ. ತನ್ನ ಪ್ರಿಯತಮನ ಸಂಗ ತನಗೆ ಹೇಗಾದರೂ, ಯಾವಾ ರೀತಿಯಲ್ಲಾದರೂ, ಲಭಿಸಿದರೆ, ಆಗ ಅವಳ ಮನಸ್ಸಿಗೆ ನೆಮ್ಮದಿ ಸಿಕ್ಕುತ್ತದೆ. ಅದಕ್ಕಾಗಿಯೇ ಅವಳ ಪರಿತಾಪ! ಈ ಬಗೆಯ ವಿರಹಕ್ಕೂ ಪ್ರಾಪಂಚಿಕ ವಿರಹಕ್ಕೂ ಎಷ್ಟು ವ್ಯತ್ಯಾಸ!

ಆಳ್ವಾರರು ಹೇಳುತ್ತಾರೆ: ಕ್ರೌಂಚ ಪಕ್ಷಿಯೇ, ನಿನ್ನ ಸಂಕಟಕ್ಕೆ ಕಾರಣವೇನು? ನಿನ್ನ ಕೂಗು ಬಹಳ ದೀನವಾಗಿದೆ. ನಿನ್ನ ದುಃಖ ನಿನ್ನ ಮನಸ್ಸಿಗೆ ಅಂಟಿರುವ ಹಾಗೆ ಕಾಣುತ್ತದೆಯಲ್ಲ. ಇತರ ಪಕ್ಷಿಗಳ ಹಾಗೆ ರಾತ್ರಿಯಲ್ಲೂ ಬೇರೆ ಹಾದಿಯನ್ನು ತೋರದಂತೆ, ನಿನಗೆ ರಾತ್ರಿಯ ಒಂದೊಂದು ಜಾವವೂ ಬಹಳ ದೀರ್ಘವಾಗಿ ತೋರುತ್ತಿದೆಯಲ್ಲವೇ? ಆದ್ದರಿಂದ ನೀ ಹೀಗೆ ಗೋಳಿಡುತ್ತಿರುವೆ! ನಿನ್ನ ದುಃಖಕ್ಕೆ ಕಾರಣವೇನು? ನನ್ನ ಹಾಗೆ ನೀನೂ ಸರ್ವೇಶ್ವರನಾದ ಭಗವಂತನಲ್ಲಿ ಸಿಲುಕಿರುವೆಯೇ? ಭಗವಂತನ ತಿರುವಡಿಗಳನ್ನು ಅಲಂಕರಿಸಿರುವ ದಿವ್ಯವಾದ ತುಲಸಿಯ ಹಾರವನ್ನು ಪಡೆದುಕೊಳ್ಳಬೇಕೆಂದು ನಿನಗೂ ಆಸೆಯಾಗಿದೆಯೇ?

3. காமுற்ற கையறவோடு எல்லே இராப்பகல்,
நீமுற்றக் கண் துயிலாய் நெஞ்சுருகி யேங்குதியால்,
தீமுற்றத் தென்னிலங்கை ஊட்டினான் தாள் நயந்த
யாமுற்றது உற்றாயோ வாழி கனைகடலே.

ಕಾಮುಱ್ಱ ಕೈಯಱವೋಡು ಎಲ್ಲೇ ಇರಾಪ್ಪಹಲ್,
ನೀಮುಱ್ಱಕ್ಕಣ್ ತುಯಿಲಾಯ್ ನೆಂಜುರುಹಿ ಯೇಂಗುದಿಯಾಲ್,
ತೀಮುಱ್ಱತ್ತೆನ್ನಿಲಂಗೈ ಊಟ್ಟಿನಾನ್ ತಾಳ್ ನಯಂದ,
ಯಾಮುಱ್ಱದುಱ್ಱಾಯೋ ವಾಳಿ ಕನೈಕಡಲೇ

Garani Srinivasan

ಕಾಮುಱ್ಱ ಕಾಮುಱ್ಱ = ಆಶಿಸಿದ್ದ, ಕೈಯುಮಾಪೋದು ವಾಯಿಱ-
ಬೋ(ದು) = ಕೈಗಾದದ್ದರಿಂದ (ಅಥವಾ, ಆಶಿಸಿದವನ್ನು ಕೈಸೇರದ ದುಃಖ
ದಿಂದ) ಎಲ್ಲೇ ಗಾಳಲೆ = ಎಲೇ ಕನ್ನೆ ಕಡಲೇ ಕಡೋ ಕಡಲೇ =
ಘೋಷಿಸುವ ಕಡಲೇ, ಇರಾಪ್ಪಗಲ್ ತಿರಾಪ್ಪಕಲ್ = ರಾತ್ರಿ ಹಗಲೂ
ನೀ ಮುಱ್ಱ ನೀ ಮುಱ್ಱ = ನೀನು ಪೂರ್ತಿಯಾಗಿ, ಕಣ್ ತುಯಿಲಾಯ್
ಕಣ್ ತುಯಿಲಾಯ್ = ನಿದ್ರಿಸಲಾರೆ, ನೆಂಜು ಉರುಗಿ ಉರುಗಿ
ಕ್ = ಮನಸ್ಸು ಕರಗಿ, ಎಲ್ಲಾ ಅಲ್ ಉಗಿಕ್ಕಿಱ್ಱ = ಕೂಗದ
ವೆಯಾದ್ದರಿಂದ, ತೀ ಮುಱ್ಱ ತೀ ಮುಱ್ಱ = ಬೆಂಕಿಯನ್ನು ಪೂರ್ತಿಯಾ
ಗಿ, ತೆನ್ ಇಲಂಗೈ ಕೊಡಿ ಇಲಂಗೈ = ದಕ್ಷಿಣದ, ಸುಂದರ
ವಾದ ಲಂಕಾಪುರಿಯನ್ನು ಊಟ್ಟಿನಾನ್ ಊಟ್ಟಿನಾನ್ = ಉರಿಸಿ
ಬಿಡುವನ, ತಾಳ್ ಕಾಳ್ = ಶಿರುವಡಿಗಳನ್ನು, ನಯನ್ದು ಉಱ್ಱಿಕ
= ಆಶಿಸಿದ, ಯಾಮ್ ಯಾಮ್ = ನಾವು, ಉಯ್ದು ಉಱ್ಱ ಕ್ =
ಪಡೆದದ್ದನ್ನು, ಉಯ್ದಾಯೋ ಉಱ್ಱ ಯೋ = ಪಡೆದೆಯೋ,
ವಾಳಿ ವಾಳಿ = ನಿನಗೆ ಮಂಗಳವಾಗಲಿ.

ಎಲೇ ಶಿಂಬಾಡುವ ಕಡಲೇ, ನೀನು ಆಶಿಸಿದ್ದು ಕೈಗಾದದ್ದ ರಿಂದಲೋ ನೀನು ರಾತ್ರಿ ಹಗಲೂ ಪೂರ್ತಿಯಾಗಿ ನಿದ್ರಿಸದಿರುವೆ? ಮನಸ್ಸು ಕರಗಿ, ಕೂಗರಿರುವೆ! ಆದ್ದರಿಂದ, (ದಕ್ಷಿಣದ) ಸುಂದರವಾದ ಲಂಕಾಪುರಿಯನ್ನು ಪೂರ್ತಿಯಾಗಿ ಬೆಂಕಿಗೆ ಆಹುತಿ ಮಾಡಿದವನ ಶಿರುವಡಿಗಳನ್ನು ಆಶಿಸಿದ ನಾವು ಪಡೆದದ್ದನ್ನು ಪಡೆದೆಯೋ? ನಿನಗೆ ಮಂಗಳವಾಗಲಿ. (3)

ಹಿಂದಿನ ಎರಡು ಪಾಶುರಗಳಲ್ಲಿ, ಎರಡು ವಿಷಯಗಳ ನಿದರ್ಶನವಾಯಿತು. ಮೊದಲ ವಿಷಯ ಹೊಟ್ಟೆ ಹೊರೆಯುವುದರಲ್ಲಿಯೇ ಆಸೆ. ಅದನ್ನು ಪೂರ್ಣ ... ಎರಡನೆಯ ವಿಷಯ ತನ್ನ ನೋಳ್ಪುಕೊಳ್ಳುವುದಕ್ಕಾಗಿಯೇ ನಿದ್ದೆ ಬಿಟ್ಟದ್ದು! ಸದಾ ಅವನೇ ತನ್ನ ಪ್ರಯತ್ನದಿಂದ ಅನುಗ್ರಹಿಸಿ ಬಾರದೆಂದು, ಕಾಪಾಡಿಕೊಂಡರು ಬೇಕೆಂಬುದೇ ಆಸೆ. ತನ್ನ ಈ ಆಸೆ ಈಡೇರದಿದ್ದ ಕಾರಣ ಕಂಗೆಟ್ಟಿರುವುದರಿಂದ ಅದರ ನಿದ್ದೆಯಿಲ್ಲದ ನೋಳ್ಪು! ಈ ಪಾಶುರದಲ್ಲಿ ಕಡಲಿನ ನಿದ ರ್ಶನ ಬಂದಿದೆ. ಕಡಲು ಹಗಲು ರಾತ್ರಿ ಎನ್ನದೆ, ಯಾವಾಗಲೂ ಅಬ್ಬರಿಸುತ್ತಿರುತ್ತದೆ. ಏಳುತ್ತಿರುವ ಅಲೆಗಳಿಂದ ತುಂಬಿರುತ್ತದೆ. ಹಲವು ವೇಳೆಗಳಲ್ಲಿ ಕಡಲು ಉಕ್ಕಿದರೂ ಸಹ, ಅಮೃತವನ್ನು ಅತಿಕ್ರಮಿಸಿ ಹೋಗಲಾರದೆ, ತನ್ನ ಆಸೆಯನ್ನು ತೀರಿಸಿಕೊಳ್ಳಲಾರದೆ, ನೊಂದು, ಗೋಳಾಡುತ್ತದೆ.

ಹಾಗೆಯೇ, ಭಗವಂತನ ಶಿರುವಡಿಗಳನ್ನು ಪಡೆದುಕೊಳ್ಳಬೇಕೆಂಬ ಮಹದಾಸೆಯನ್ನು ಹೊತ್ತ ಭಕ್ತನಿಗೆ, ಅವನ ಆಸೆ ಫಲಿಸದೆ,

ಅದಕ್ಕಾಗಿ ಅವನೆಷ್ಟು ಯತ್ನಿಸಿದರೂ ಭಗವಂತನ ತಿರುವಡಿಗಳು ಲಭ್ಯವಾಗದೆ ಹೋಗುವುದರಿಂದ ರಾತ್ರಿ ಹಗಲು ಎನ್ನದೆ ನಿದ್ದೆಯಿಲ್ಲದೆ ಶೇಗರ, ಕನಿರ ಕಾಣುತ್ತ ಕಾಲ ಕಳೆಯುವನು.

ಆಳ್ವಾರರು ಹೇಳುತ್ತಾರೆ ಎಲೆ ಕಡಲೇ ರಾತ್ರಿಹಗಲು ಎನ್ನದೆ ನೀನು ಅಬ್ಬರಿಸುತ್ತಿರುವೆಯಲ್ಲ ನಿನಗೂ ನಮ್ಮಂತೆ ದುಃಖ... ನಾವು ನಿದ್ದೆಯಿಲ್ಲದೆ ಸರ್ವೇಶ್ವರನ ತಿರುವಡಿಗಳಿಗಾಗಿ ನಾವು ನಿದ್ದೆಯಿಲ್ಲದೆ ಕಾಣುತ್ತಿರುವ ಹಾಗೆಯೇ. ನಿನ್ನ ಮೇಲೆ ಸೇತುವೆ ಕಟ್ಟಿ ಲಂಕಾ ಪಟ್ಟಣ ಹೋಗಿ ಶ್ರೀರಾಮನ ತಿರುವಡಿಯ ಸ್ಪರ್ಶವನ್ನು ಪಡೆದ ನೀನು ಆಶಿಸಿದೆಯಾ? ಅವು ನಿನಗೆ ಲಭ್ಯವಿಲ್ಲದೆ ಹೋದದ್ದರಿಂದ ನೀನು ಹಗಲು ಇರುಳು ನಿದ್ದೆಯಿಲ್ಲದೆ ಅಬ್ಬರಿಸುತ್ತ ನಮ್ಮಂತೆ ಕಾಣುತ್ತ ಶೇಗರ ಹೋಗಿದೆಯಾ? ಹೇಳು

4. கடலும் மலையும் விசும்பும் துழாய் எம் போல்,
சுடர்கொள் இராப்பகல் துஞ்சாயால் தண் வாடாய்,
அடல்கொள் படையாழி அம்மானைக் காண் பான் நீ,
உடலம் நோயுற்றாயோ? ஊழி தோறூழியே.

ಕಡಲುಮ್ ಮಲೈಯುಮ್ ವಿಶುಮ್ಬುಮ್ ತುಳಾಯ್ ಎಮ್ಬೋಲ್,
ಶುಡರ್ಕೊಳ್ ಇರಾಪ್ಪಗಲ್ ತುಂಜಾಯಾಲ್ ತಣ್ ವಾಡಾಯ್,
ಅಡಲ್ಕೊಳ್ ಪಡೈಯಾಳಿ ಅಮ್ಮಾನೈಕ್ಕಾಣ್ಬಾನ್ ನೀ,
ಉಡಲಮ್ ನೋಯುಟ್ರಾಯೋ? ಊಳಿದೋರೂಳಿಯೇ.

ಕಡಲುಮ್ கடலும் = ಸಮುದ್ರವನ್ನು, ಮಲೈಯುಮ್ மலையும் = ಬೆಟ್ಟವನ್ನು, ವಿಶುಮ್ಬುಮ್ விசும்பும் = ಗಗನವನ್ನು, ತುಳಾಯ್ துழாய் = ಹುಡುಕುತ್ತ ಎಮ್ಬೋಲ್ எம் போ = ನಮ್ಮ ಹಾಗೆ, ಶುಡರ್ ಕೊಳ್ சுடர் கொள் = ಬೆಳಕುಗಳ (ನಕ್ಷತ್ರಗಳ) ಹಾಗೆ, ಇರಾಪ್ಪಗಲ್ இராப்பகல் = ರಾತ್ರಿ ಹಗಲು, ತುಂಜಾಯ್ ಆಲ್ துஞ்சாய் ஆல் = ನಿದ್ರಿಸದ್ದರಿಂದ, ತಣ್ ವಾಡಾಯ್ தண் வாடாய் = ಠಂಗಾಗಿಯೇ, ಅಡಲ್ ಕೊಳ್ அடல் கொள் = ಬಲಿಷ್ಠವಾದ, ಪಡೈ படை = ಆಯುಧವಾದ, ಆಳಿ ஆழி = ಚಕ್ರಾಯುಧವನ್ನು ಧರಿಸಿರುವ, ಅಮ್ಮಾನೈ அம்மானை = ಸ್ವಾಮಿಯನ್ನು, ಕಾಣ್ಬಾನ್ காண் பன் = ನೋಡುವುದಕ್ಕಾಗಿ (ಕಾಣಲು ಬಯಸಿ), ಉಡಲಮ್ உடலம் = ಆಶೆಯಿಂದ ಶರೀರವು, ನೋಯ

நோய் = ಸಂಕಟವನ್ನು, ಉಟ್ರಾಯೋ உற்றாயோ = ಪಡೆದೆಯೋ
ಊಳಿದೋರುಮ ஊழிதோறும் = ಜೀವಮಾನ ಪರ್ಯಂತವೂ
ಊಳಿಯೇ ஊழியே = ಕ್ರಮಶಃ ಪ್ರದಂಶೆಯೋ (ವಿಧಿ ಎಂಬಂತೆ)?

ತಂಗಾಳಿಯೇ, ಸಮುದ್ರವನ್ನು, ಬೆಟ್ಟವನ್ನು, ಗಗನವನ್ನು, ಹುಡುಕುತ್ತಾ, ನಮ್ಮ ಹಾಗೆ, ಜ್ಯೋತಿರ್ಗಳ ಹಾಗೆ ರಾತ್ರಿ ಹಗಲೂ ನಿದ್ರೆ ಇಲ್ಲದೆ, ಆದ್ದರಿಂದ, ಶಕ್ತಿಪೂರ್ಣವಾದ [illegible] ಚಕ್ರಾಯುಧವನ್ನು ಧರಿಸಿರುವ ಸ್ವಾಮಿಯನ್ನು ~~[illegible]~~ ಕಾಣುವುದಕ್ಕಾಗಿ, ನೀನು ಆಶೆಯಿಂದ ಕೊರಗುವ ಸಂಕಟವನ್ನು ಜೀವಮಾನ ಎಲ್ಲವೂ, ವಿಧಿ ಎಂಬಂತೆ, (4)
ಪಡೆದೆಯೋ?

ಯಾವೊಂದು ಕಡೆಯೂ ನಿಲ್ಲದೆ, ಎಡೆಬಿಡದಂತೆ ವ್ಯಾಪಿಸಿಕೊಂಡು, ಸ್ಥಳದಿಂದ ಸ್ಥಳಕ್ಕೆ ಚಲಿಸುತ್ತಿರುವುದೇ ಗಾಳಿಯ ಸ್ವಭಾವ. ನೆಲ-ನೀರು, ಹಳ್ಳ-ಕೊಳ್ಳ, ಕಾಡು-ಮೇಡು, ಬೆಟ್ಟ ಬಯಲು ಎನ್ನದೆ ಅದು ಎಲ್ಲೆಲ್ಲೂ ಸಂಚರಿಸುತ್ತಲೇ ಇರುತ್ತದೆ. ಅದಕ್ಕೆ ನಿಲುಗಡೆ ಎಂಬುದೇ ಇಲ್ಲ.

ವಿರಹಿಗೆ ತಂಗಾಳಿ ಶತ್ರುವಿದ್ದಂತೆ ಅದು ಮರ್ಮಭೇದಕವಾದ ವಿರಹವನ್ನು ಹೆಚ್ಚಿಸುತ್ತದೆ

ಗಾಳಿಯ ಅಲೆದಾಟವನ್ನು ಗಮನಿಸುವ ಭಕ್ತನಿಗೆ, ಗಾಳಿಯಲ್ಲಿ ಒಂದು ಬಗೆಯ ಮರುಕ – ಕನಿಕರ. ತನ್ನ ಹಾಗೆ, ಕಣ್ಣಿಗೆ ಕಾಣದ, ಅದ್ವಿತೀಯ ವಸ್ತುವಾದ ಭಗವಂತನನ್ನು ಆ ಗಾಳಿಯೂ ಹುಡುಕುತ್ತಾ, ಸಂಚರಿಸುತ್ತಾ, ವ್ಯಥೆಪಡುತ್ತಿದೆಯೋ ಎನಿಸುತ್ತದೆ. ಈ ಕಾರಣದಿಂದ, ಭಕ್ತನಿಗೂ ಗಾಳಿಗೂ ಇತ್ತ ಹೋಲಿಕೆ ಕಂಡಿರುವುದು

'ಆಳ್ವಾರರು ಹೇಳುತ್ತಾರೆ' ತಂಗಾಳಿಯೇ, ನೀನು ಕಡಲ ಮೇಲೂ, ಬೆಟ್ಟದ ಮೇಲೂ, ಆಕಾಶದಲ್ಲಿಯೂ ವ್ಯಾಪಿಸಿ, ಅಲೆದಾಡುತ್ತಿರುವೆಯಲ್ಲ, ಏಕೆ? ದಿವ್ಯಜ್ಯೋತಿಗಳಾದ ಸೂರ್ಯಚಂದ್ರರ ಹಾಗೆ, ನೀನು ಎಡೆಬಿಡದೆ ನಿಂತಲ್ಲಿ ನಿಲ್ಲದೆ ಚಲಿಸುತ್ತಾ ಇರುವೆಯಲ್ಲ. ನಿನ್ನ ದೇಹ ಸೌಖ್ಯವನ್ನೂ, ನಿದ್ದೆಯನ್ನೂ ಗಮನಿಸದೆ, ಇತರರ ಕಣ್ಣಿಗೆ ಕಾಣಿಸದಷ್ಟು ಕೃಶವಾಗಿ ಹೋಗಿರುವೆಯಲ್ಲ! ನಮ್ಮ ಹಾಗೆಯೇ ನೀನೂ ಸಹ, ಅಪ್ರತಿಮ ಸಾಮರ್ಥ್ಯದ ಚಕ್ರಾಯುಧಧಾರಿಯಾದ ನಮ್ಮ ಸ್ವಾಮಿಯನ್ನು ಹುಡುಕುತ್ತಿದ್ದೀಯಾ? ಅದು ಸಿಗದೆ ಇರುವುದಕ್ಕಾಗಿ, ನಿನ್ನ ಜೀವಮಾನ ಪರ್ಯಂತವೂ ಇದೇ ನಿನ್ನ ವಿಧಿ ಎಂಬಂತೆ ಕೊರಗಿ ಸಂಕಟಪಡುತ್ತಿರುವೆಯಾ?

ಇಲ್ಲಿ, 'ಕಡಲು' ಎಂಬುದಕ್ಕೆ 'ಸಾಮಾನ್ಯವಾದ ಕಡಲುಗಳು' ಎಂದೂ, ಭಗವಂತನ ಶೇಷಶಾಯಿಯಾಗಿ ಯೋಗನಿದ್ದೆಯಲ್ಲಿರು

ನೆಂದು ವರ್ಣಿಸಿರುವ ಪಾಲದಲು ಎಂದು ಆಗುತ್ತದೆ

ಚಿಟ್ಟ ಎಂಬುದಕ್ಕೆ ಸಾಮಾನ್ಯವಾದ ಚಿಟ್ಟಗಳು ಎಂದು ಭೂಲೋಕದ ಭಕ್ತರನ್ನು ಉದ್ಧರಿಸುವುದಕ್ಕೆ ಆ ಭಗವಂತನೇ ಆಸ್ತಿಯೂ ಬಂದು ನೆಲಸಿರುವ ಕಾರಣ ಚಿಟ್ಟ ಎಂದು ಆಗುತ್ತದೆ.

'ವಿಶುಂಬು (ಗಗನ)' ಎಂಬುದಕ್ಕೆ ಸರ್ವವ್ಯಾಪಿಸಿರುವ ಆಕಾಶ ಎಂದು ನಿತ್ಯಸೂರಿಗಳೊಡನೆ ಭಗವಂತನು ನಿತ್ಯವಾಗಿ ವಾಸಿಸುವ ಪರಮಪದ ಎಂದು ಆಗುತ್ತದೆ.

ಜ್ಯೋತಿ" ಎಂಬುದಕ್ಕೆ ಹಗಲನ್ನು ಬೆಳಗಿಸುವ ಸೂರ್ಯ' ಮತ್ತು ರಾತ್ರಿಯನ್ನು ಬೆಳಗಿಸುವುದಕ್ಕೆ 'ಚಂದ್ರ' ಎಂದಾಗುತ್ತದೆ

5. ஊழிதோறூழி உலகுக்கு நீர் கொண்டு,
தோழியரும் யாமும் போல் நீராய் நெகிழ்கின்ற,
வாழிய வானமே நீயும் மதுசூதன்,
பாழிமையில் பட்டு அவன் கண்பாசத்தால் நைவாயே

ಊಳಿದೋಱೂಳಿ ಉಲಗುಕ್ಕು ನೀರ್ ಕೊಂಡು,
ತೋಳಿಯರುಮ್ ಯಾಮುಮ್ ಪೋಲ್ ನೀರಾಯ್ ನೆಗಿಳ್ಗಿನ್ಱ
ವಾಳಿಯ ವಾನಮೇ ನೀಯುಮ್ ಮದುಶೂದನ್, ಅವನ್ ಕಣ್ಪಾಶತ್ತಾಲ್ ನೈವಾಯೇ?
ಪಾಳಿಮೈಯಿಲ್ ಪಟ್ಟು

ಊಳಿದೋಱೂ ಊಳಿ ஊழி தோறு ஊழி = ಎಲ್ಲಾ ಕಾಲದಲ್ಲೂ (ಎಂದರೆ, ಪ್ರಳಯದ ನಂತರದ ಪ್ರಳಯದವರೆಗೂ = ಒಂದೊಂದು ವರ್ಷ ದಲ್ಲೂ ಕಾಲಕ್ಕೆ ತಕ್ಕಂತೆ), ಉಲಗುಕ್ಕು உலகுக்கு = ಲೋಕಕ್ಕೆ, ನೀರ್ ಕೊಂಡು நீர் கொண்டு = ನೀರನ್ನು ತೆಗೆದುಕೊಂಡು, ತೋಳಿಯರುಮ್ ಯಾಮುಮ್ ಪೋಲ್ தோழியரும் யாமும் போல் = (ನನ್ನ) ಗೆಳತಿಯರೂ, ನಾನೂ (ಮಾಡುವ)ಹಾಗೆ, ನೀರ್ ಆಯ್ நீர் ஆய் = ನೀರಾಗಿ ನೆಗಿಳ್ಗಿನ್ಱ நெகிழ்கின்ற = ಕರಗಿಕೊಂಡು, ಕೆಳಗೆ ಬೀಳುತ್ತಿರುವ, ವಾಳಿಯ வாழிய = ಮಂಗಳಕರವಾದ, ವಾನಮೇ வானமே = ಮೋಡವೇ, ನೀಯುಮ್ நீயும் = ನೀನೂ, ಮದುಶೂದನ್ மதுசூதன் = ಮಧುಸೂದನನ, ಪಾಳಿಮೈಯಿಲ್ ಪಟ್ಟು பாழிமையில் பட்டு = ಸಾಮರ್ಥ್ಯಕ್ಕೆ ಸಿಕ್ಕಿ, ಅವನ್ அவன் = ಅವನ, ಕಣ್ ಪಾಶತ್ತಾಲ್ கண் பாசத்தால் = ಕಣ್ಣಿನ ಪಾಶದಿಂದ ಕಟ್ಟಿಬಿದ್ದು (ಕಟಾಕ್ಷಕ್ಕೆ ಸಿಕ್ಕಿಬಿದ್ದು), ನೈವಾಯೇ நைவாயோ = (ನಿನ್ನನ್ನು ನೀನು) ಕರಗಿಸಿಕೊಂಡೆಯಾ?

Garani Srinivasan

ಪ್ರಳಯದಿಂದ ಪ್ರಳಯದ ವರೆಗೆ ಎಂದರೆ ಒಂದೊಂದು ವರ್ಷದಲ್ಲೂ ಕಾಲಕಾಲಕ್ಕೆ ತಕ್ಕಂತೆ ಲೋಕಕ್ಕೆ ನೀರನ್ನು ಶೇಖರಿಸಿಕೊಂಡು, ನನ್ನ ಗೆಳತಿಯರಿಗಾ ನಾನಾ (ಮೋಡದ) ದಾಗಿ, ನೀರಾಗಿ ರೂಪಿಸಿಕೊಂಡು, ಕೆಳಕ್ಕೆ ಬೀಳುತ್ತಿರುವ ಮಂಗಳಕರವಾದ ಮೋಡವೇ, ನೀನೂ ಪದ ಮಧುಸೂದನನ ಸಾಮರ್ಥ್ಯಕ್ಕೂ ಅವನ ಕಟಾಕ್ಷ ವೀಕ್ಷಣಕ್ಕೂ (5)
ಸಿಕ್ಕಿಬಿದ್ದು (ನೀನು ನಿನ್ನನ್ನೇ) ಮರೆತು ಹೋದೆಯಾ?

ಈ ಪಾಶುರದಲ್ಲಿ ಮೋಡದ ನಿದರ್ಶನ. ಒಂದು ಪ್ರಳಯದಿಂದ ಮತ್ತೊಂದು ಪ್ರಳಯದ ವರೆಗೆ, ಈ ಲೋಕ ಇರುವಷ್ಟು ಕಾಲವೂ, ಒಂದೊಂದು ವರ್ಷವೂ ಲೋಕಕ್ಕೆ ಮಂಗಳವನ್ನುಂಟುಮಾಡುವಂಥಾದ್ದು ಕಾರ್ಮುಗಿಲು. ಅದು ಲೋಕಕ್ಕೆ ಬೇಕಾಗುವಷ್ಟು ನೀರನ್ನು ಕಡಲುಗಳಿಂದಲೂ ಇತರ ಎಲ್ಲಾ ನೀರ್ನೆಲೆಗಳಿಂದಲೂ ನೀರನ್ನು ತುಂಬಿಕೊಂಡು ಕಾರ್ಮುಗಿಲಾಗುವುದು. ಗಗನಕ್ಕೇರಿ, ಮೆಲ್ಲಮೆಲ್ಲಗೆ ಸಂಚರಿಸುತ್ತಾ, ಲೋಕದ ಬೇರೆ ಬೇರೆ ಸ್ಥಳಗಳಲ್ಲಿ ತಂಗಿ, ಕರಗಿ ನೀರಾಗಿ ರೂಪುಗೊಂಡು, ನೀರನ್ನು ಕೆಳಕ್ಕೆ ನೆಲದ ಮೇಲಕ್ಕೆ ಸುರಿಸಿಬಿಡುವುದು. ಪ್ರತಿಫಲಾಪೇಕ್ಷೆಯಿಲ್ಲದೆ, ಹೀಗೆ ಸಮೃದ್ಧಿಯಾಗಿ ನೀರನ್ನು ಸುರಿಸುವುದು ಕಾರ್ಮುಗಿಲಿನ ಔದಾರ್ಯ: ಆದ್ದರಿಂದಲೇ ಅದು ಮಂಗಳಕರವಾದ ಕಾರ್ಮುಗಿಲು.

ಭಗವಂತನದು ಕಾರ್ಮುಗಿಲ ದೇಹಕಾಂತಿ. ಅವನ ಅಪ್ರತಿಮ ಔದಾರ್ಯ, ಉಪಕಾರಗಳ ಒಂದಂಶ ಮಾತ್ರವೇ ಕಾರ್ಮುಗಿಲು ತೋರಿಸುವಂಥಾದ್ದು. ಇವುಗಳ ಜೊತೆಗೆ ಭಗವಂತನ ಸಾಟಿಯಿಲ್ಲದ ಸಾಮರ್ಥ್ಯ ಮತ್ತು ಕೃಪೆ! ಭಗವಂತನ ಕಟಾಕ್ಷಕ್ಕೆ ಒಳಗಾದವರು ತಪ್ಪದೆ ಉದ್ಧಾರಗೊಳ್ಳುತ್ತಾರೆ.

ಆಳ್ವಾರರು ಕಂಡ ಕಾರ್ಮುಗಿಲನ್ನು ತಮ್ಮ ಭಕ್ತಿಯ ನೆಲೆಯೊಡನೆ ಹೋಲಿಸಿಕೊಂಡು ಅದನ್ನು ಸಂಬೋಧಿಸಿ ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಕಾರ್ಮುಗಿಲೇ, ನಿನ್ನ ರೂಪದಿಂದಲೂ, ಬಣ್ಣದಿಂದಲೂ, ಔದಾರ್ಯದಿಂದಲೂ, ನೀನು ಮಂಗಳಕರನೇ ಹೌದು. ಲೋಕಕ್ಕೆ ನಿನ್ನ ಉಪಕಾರವಂತು ಹೇಳತೀರದಷ್ಟು, ಲೋಕ ಅದನ್ನು ಮರೆಯಲಾರದಷ್ಟು. ಎಲ್ಲಾ ನೀರ್ನೆಲೆಗಳಿಂದಲೂ ನೀನು ನೀರನ್ನು ಹೀರಿ, ನಿನ್ನಲ್ಲಿ ತುಂಬಿಟ್ಟುಕೊಳ್ಳುವೆ. ನಿನ್ನ ಭಾರವನ್ನು ಸಹಿಸಿಕೊಂಡು, ಗಗನಕ್ಕೇರಿ, (ಗಗನದಲ್ಲಿ) ಮೆಲ್ಲ ಮೆಲ್ಲಗೆ ಸಂಚರಿಸುತ್ತಾ, ಭೂಮಿಯ ಮೇಲೆ ನೀರು ಬೇಕೆಂಬ ಕಡೆಗಳಲ್ಲೆಲ್ಲಾ, ಕರಗಿ, ನೀರಾಗಿ, ಹನಿಯ ರೂಪುಗೊಂಡು, ಇಳಿದು, ಸುರಿದು, ಭೂಮಿಯನ್ನು

ದಿನ.
ಕ್ಷೀಣಿಸುತ್ತೀ!? ಹೀಗೆ ನೀನು ದಿನಗಳುರುಳಿದಲ್ಲಿ ನೀನನ್ನು, ದಂಪತಿಲು
ಕಾರಣವೇನಿರಬಹುದು? ನಾನೂ ನನ್ನ ಕಲ್ಯಾಣಿಯೂ ಮಧುಸೂದನನ
ಭಗವಂತನ ಸಾಮರ್ಥ್ಯಕ್ಕೆ, ಆತನ ಕುಟಿಲತ್ವಕ್ಕೆ ಸೋಲುತ್ತ ಸಿಕ್ಕಿ
ಬಿದ್ದಿದ್ದೇವೆ. ನಮ್ಮನ್ನು ನಾವೇ ಮರೆತುಕೊಂಡಿದ್ದೇವೆ. ನಾವು, ನಮ್ಮ
ವಿಚಾರ ಶಕ್ತಿ ಸ್ವಯಂ ಇಲ್ಲದೆ ನಮಗಿಲ್ಲ ಕಳೆಯಿದಾಗಿದೆ. ನಮ್ಮ ದೇಹ,
ರೂಪ, ಬಣ್ಣ — ಎಲ್ಲವೂ ಕರಗಿ ನೀರಾಗಿ ಹೋಗಿವೆ. ಎಂದರೆ, ನಾವು
ನಾವಲ್ಲದಾಗಿದ್ದೇವೆ. ಕಾಮುಕನಿಂದಲೇ ನಮ್ಮಂತೆ ನೀನೂ ಸಹ ಆ
ಪರಮ ಸಮರ್ಥನಾದ ಮಧುಸೂದನನ ಕಟಾಕ್ಷಕ್ಕೆ ಮರುಳಾದೆ
ಯಾ? ಹೀಗಾಗಿ, ನೀನು ನಿನ್ನ ರೂಪ ಬಣ್ಣಗಳನ್ನು ಕಳೆದುಕೊಂಡು
ನೀರಾಗಿ, ಸುರಿದು ಬೀಳುತ್ತಿರುವೆಯಾ? ಹೇಗೆ?

6. நைவாய எம்மேபோல் நாண் மதியே, நீயிந்நாள்
மைவானிருளகற்றாய் மாழாந்து தேம்புதியால்,
ஐவாயரவணைமேல் ஆழிப்பெருமானார்,
மெய்வாசகம் கேட்டு உன் மெய்ந்நீர்மை தோற்றாயே.

ನೈವಾಯ ಎಮ್ಮೇ ಪೋಲ್ ನಾಳ್ ಮದಿಯೇ, ನೀಯಿನ್ನಾಳ್,
ಮೈವಾನಿರುಳಹಱ್ಱಾಯ್ ಮಾೞಾನ್ದು ತೇಂಬುದಿಯಾಲ್,
ಐವಾಯರವಣೈಮೇಲ್ ಆೞಿಪ್ಪೆರುಮಾನಾರ್,
ಮೆಯ್ವಾಚಗಮ್ ಕೇಟ್ಟು ಉನ್ ಮೆಯ್ನ್ನೀರ್ಮೈ ತೋಱ್ಱಾಯೇ.

ನೈವು ಆಯ நைவு ஆய் = ಸಂಕಟಪಟ್ಟವರಾದ, ಎಮ್ಮೇ ಪೋಲ್
எம்மே போல் = ನಮ್ಮಂತೆ ನಾಳ್ ಮದಿಯೇ நாள் மதியே
= ಪೂರ್ಣಚಂದ್ರನೇ, ನೀ நீ = ನೀನು, ಇನ್ನಾಳ್ (ಕಂಬ) (இ) நாள் = ಇದುವ
ರೆಗೆ, ಮೈ ವಾನ್ மை வான் ಕಪ್ಪಾದ (ಆಕಾಶದ ಇರುಳ್ (இ)
ருள் = ರಾತ್ರಿಯನ್ನು, ಅಹಱ್ಱಾಯ್ அகற்றாய் = ಹೋಗಲಾಡಿಸುವ
ಮಾೞಾನ್ದು மாழாந்து = ಭ್ರಮೆಗೊಂಡು, ತೇಂಬುದಿ தேம்புதி
= ಕ್ಷೀಣಿಸುತ್ತಿರುವೆ, ಆಲ್ ஆல் = ಆದ್ದರಿಂದ, ಐವಾಯ ஐவாய்
= ಐದು ಹೆಡೆಗಳ (ಬಾಯಿಗಳುಳ್ಳ), ಅರವು அரவு (ಇರವು) = ಸರ್ಪದ,
ಅಣೈ ಮೇಲ್ அணை மேல் = ಹಾಸಿಗೆಯ ಮೇಲೆ, ಆೞಿ ஆழி =
ಚಕ್ರಾಯುಧ ಧಾರಿಯಾದ, ಪೆರುಮಾನಾರ್ பெருமானார் = ಭಗವಂ
ತನ, ಮೆಯ್ மெய் = ಸತ್ಯವಾದ, ವಾಚಗಮ್ ಕೇಟ್ಟು வாசகம்
கேட்டு = ಮಾತನ್ನು ಕೇಳಿ, ಉನ್ உன் = ನಿನ್ನ, ಮೆಯ್ மெய் =
ದೇಹದ, ನೀರ್ಮೈ நீர்மை = ಪ್ರಕಾಶವನ್ನು ತೋಱ್ಱಾಯೇ தோற்

ಅಯ್ಯೋ! ಕೊಲ್ಲುತ್ತಿರುವೆಯಲ್ಲಾ!

ನಮ್ಮ ಹಾಗೆ ಸಂಕಟಕ್ಕೊಳಗಾದ ಪ್ರಾಣಿ ಚಂದ್ರನೇ, ನೀನು ಇದುವರೆಗೆ ಕಂಡ ಆಕಾಶದ ಇರುಳನ್ನು ಕೊಲ್ಲಿಸಿದೆಯೆಂದು ಭ್ರಾಂತಿಗೊಂಡು (ಹೆಮ್ಮೆಪಟ್ಟು) ಹೊಳೆಯುತ್ತಿರುವೆ. ಆದ್ದರಿಂದ, ಸಾವಿರ ಹೆಡೆಗಳ ಸರ್ಪದ ಹಾಸುಗೆಯ ಮೇಲೆ ಇರುವ ಶತ್ರುಯುದ್ಧಧಾರಿಯಾದ ಭಗವಂತನ ನಿತ್ಯವಾದ ಮಾತುಗಳನ್ನು ಕೇಳಿ ನಿನ್ನ ದೇಹದ ಪ್ರಕಾಶವನ್ನು ಕಾಪಾಡಿಸುತ್ತಿರುವೆಯಲ್ಲವೇ? (6)

ಚಂದ್ರನಿಗೆ ಹದಿನೈದು ದಿನಗಳ ವೃದ್ಧಿ, ಹದಿನೈದು ದಿನಗಳ ಕ್ಷಯ. ತನ್ನ [redacted] ಕಲೆಯನ್ನು ಒಂದೊಂದಾಗಿ ಹೆಚ್ಚಿಸಿಕೊಳ್ಳುತ್ತಾ ಬಂದು, ಹುಣ್ಣಿಮೆಯಂದು ತನ್ನ ಹದಿನಾರು ಕಲೆಗಳಿಂದ ಶೋಭಿಸುತ್ತಾನೆ. ಬಳಿಕ ಒಂದೊಂದೇ ಕಲೆಯನ್ನು ಕಳೆದುಕೊಳ್ಳುತ್ತಾ ಬಂದು, ಅಮಾವಾಸ್ಯೆಯ ದಿನ ತನ್ನ ಕಲೆಗಳನ್ನೆಲ್ಲಾ ಕಳೆದುಕೊಂಡು, ಅವನಿಲ್ಲದಾಗುತ್ತಾನೆ.

ಸಾವಿರ ಹೆಡೆಗಳ ಸರ್ಪವನ್ನು ಹಾಸಿಗೆಯಾಗಿ ಮಾಡಿಕೊಂಡು ಅದರ ಮೇಲೆ ಪವಡಿಸಿ ಯೋಗನಿದ್ರೆಯಲ್ಲಿರುವವನು ಸರ್ವೇಶ್ವರನಾದ ಭಗವಂತ. ಹೀಗಿದ್ದರೂ ನಿದ್ರೆ, ತನ್ನ ಕೈಯಲ್ಲಿ ಶತ್ರುಯುದ್ಧವನ್ನು ಅವನು ಹಿಡಿದು ಸನ್ನದ್ಧನಾಗಿಯೇ ಇರುತ್ತಾನೆ. ಇದಕ್ಕೆ ಕಾರಣ ತನ್ನ ದಿವ್ಯ ವಾಕ್ಯ. ತನ್ನನ್ನು ಆಶ್ರಯಿಸಿದವರನ್ನು, ಎಲ್ಲ ಬಗೆಯ ಸಂಕಟಗಳಿಂದಲೂ ಪಾರುಮಾಡಿ, ಉದ್ಧರಿಸುವೆನು ಎಂಬ ದಿವ್ಯ ವಾಕ್ಯ.

ಇವೆರಡು ಅಂಶಗಳನ್ನೂ ಜೋಡಿಸಿ, ತಮ್ಮ ವಿಷಯವನ್ನು ಹೋಲಿಸಿ, ಆಳ್ವಾರರು ಹೇಳುವ ಸ್ವಾರಸ್ಯವನ್ನು ನೋಡಬಹುದು

ಆಳ್ವಾರರು ಹೇಳುತ್ತಾರೆ: ಇನ್ನು ಹೊಳೆಯುವ ನಂಬಿ ಸಂಕಟಕ್ಕೊಳಗಾಗಿರುವ ಚಂದ್ರನೇ, ನಮ್ಮ ಹಾಗೆ ನಿನಗೆ ಸಂಕಟವಲ್ಲವೇ? ಇದುವರೆಗೆ, ರಾತ್ರಿಯ ಗಗನವನ್ನೆಲ್ಲಾ ನಿನ್ನ ದಿವ್ಯ ಪ್ರಕಾಶದಿಂದ ಬೆಳಗಿಸುವೆನೆಂದು ನೀನು ಅಹಂಕಾರಗೊಂಡಿದ್ದಿರಬೇಕು. ಈಗ ನೋಡಿದರೆಯೂ ನಿನ್ನ ಆ ಮೆರೆತಕ್ಕೆ ತಕ್ಕ ಶಿಕ್ಷೆ! ನೀನು ಅನುಭವಿಸುತ್ತಿರುವ ಈ ಕ್ಷಯ - ಕಲಾಹೀನತೆ! ನಾವೂ ಹಾಗೆಯೇ ಕಂಡೆಯಾ? ನಮ್ಮ ರೂಪ ಬಣ್ಣಗಳಿಂದ ನಾವು ಭಗವಂತನನ್ನು ಆಕರ್ಷಿಸಿ ಬಿಡುತ್ತೇವೆಂದು ಬಹಳ ಹೆಮ್ಮೆಗೊಂಡಿದ್ದೆವು. ಈ ನಮ್ಮ ಅಹಂಕಾರಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತು. ನಮ್ಮ ರೂಪವನ್ನೂ ಬಣ್ಣವನ್ನೂ ಕಳೆದುಕೊಂಡು, ಕೃಶಿಸಿ ಹೋಗಿದ್ದೇವೆ. ಸರ್ವೇಶ್ವರನ ನಿತ್ಯವಾಕ್ಯವನ್ನು ನಂಬಿಕೊಂಡಿರುವುದರಿಂದಲೇ ನೀನು ಇಷ್ಟು ಮಾತ್ರ ನಿನ್ನ ಪ್ರಕಾಶವನ್ನು ಕಾಪಾಡಿಸುತ್ತಿರುವ ಹಾಗೆಯೇ, ನಾವೂ ಹೊರಗಿನ ನಮ್ಮ ಪ್ರಾಣಗಳನ್ನು ಬಿಗಿ[redacted]ಟ್ಟುಕೊಂಡಿದ್ದೇವೆ.

7. தோற்றோம் மட நெஞ்சம் எம்பெருமான் நாரணற்கு,
எம் ஆற்றாமை சொல்லி அழுவோமை நீ நடுவே,
வேற்றோர் வகையில் கொடிதாய் எனையூழி,
மாற்றாண்மை நிற்றியோ? வாழி கனையிருளே.

ಕೋಲ ಕ್ಕೋಲವಾ ಮಡನೆಂಜಮಾ ಎಮ್ಬೆರುಮಾನ್ ನಾರಣಾಉಕ್ಕು,
ಎಮಾ ಆಟ್ಪಾಟ್ಟ್ ಶೋಲ್ಲಿ ಅಲುಪೋಟ್ಟ ನೀಲನಡುವೇ,
ವೇಟ್ಟೋರ್ ಪಡೈಯುಲ್ ಕೋಡಿಶಾಯ್ ಎನ್ನೈಯುಮ್ ಉಡು,
ಮಾಟ್ಟಾನ್ಯ ನಿಟ್ರಿಯೋ? ವಾಲಿ ಕನ್ನೈಯಿರುಳೇ.

ಮಾಟ್ಟಾನ್ಯ ನಿಟ್ರಿಯೋ? ವಾಲಿ ಕನ್ನೈಯಿರುಳೇ. ಮಡಮಾ ಮಡಮ್ = ಕೋಲ ಕ್ಕೋಲವಾ ಕೊಳ್ಳುಮ್ = ಸ್ವಚ್ಛವಾಗಿರುವ, ಮಡಮಾ ನೆಂಜಮ್ = ಮನಸ್ಸನ್ನು, ಎಮ್ಬೆ ಅರಿಯದ (ವಿವೇಕವಿಲ್ಲದ) ನೆಂಜಮಾ ನೆಂಜಮ್ = ಮನಸ್ಸನ್ನು, ಎಮ್ಬೆರುಮಾನ್ ನಾರಣಾಉಕ್ಕು ನಾರಣಾ ರುಮಾನ್ ಎಮ್ಬೆರುಮಾನ್ = ಸ್ವಾಮಿಯಾದ, ನಾರಣಾಉಕ್ಕು ನಾರಣಾ ನ್ಗೆ = ಶ್ರೀಮನ್ನಾರಾಯಣನಿಗೆ ಎಮಾ ಎಮ್ = ನಮ್ಮ, ಆಟ್ಪಾಟ್ಟ್ ಶೋಲ್ಲಿ ಆಟ್ಪಾಟ್ಟ್ ಶೋಲ್ಲಿ = ದಾಸ್ಯವನ್ನು ಹೇಳಿ ಅಲುಪೋಟ್ಟ ಅಲು ಪೋಟ್ಟ = ಕೂಗುತ್ತಿರುವ ನಮ್ಮ, ನಡುವೇ ನೀಲ ನಡುವೇ = ಇಬ್ಬರ ನಡುವೆ ನೀನು, ವೇಟ್ಟೋರ್ ಪಡೈಯುಲ್ ವೇಟ್ಟೋರ್ ಪಡೈ = ಕಟ್ಟು ಪಡೈ = ಶತ್ರುಗಳ ಸೇನೆಯಲ್ಲಿ, ಕೋಡಿಶಾಯ್ ಕೋಡಿ ಶಾಯ್ = ಕಟ್ಟು ಕೊಡು = ಪ್ರೇಕ್ಷಣೀಯಾಗಿ, ಎನ್ನೈ ಎನ್ನೈ = ಹರೀಶನವನ್ನು ಕಾಲವನ್ನೆಲ್ಲಾ ಮಾಟ್ಟಾನ್ಯ ಮಾಟ್ಟಾನ್ಯ = ನಿಲ್ಲುವೆಯೋ? ವಾಲಿ ವಾಧಿಸುತ್ತ ನಿಟ್ರಿಯೋ ನಿಟ್ರಿಯೋ = ನಿಲ್ಲುವೆಯೋ? ಕನ್ನೈ ಇರುಳೇ ಕಣ್ಣೆ ಇರುಳ್ = ದಟ್ಟ ವಾಲಿ = ಮಂಗಳವಾಗಲಿ, ಕನ್ನೈ ಇರುಳೇ ಕಣ್ಣೆ ಇರುಳ್ = ದಟ್ಟ ವಾದ ರಾತ್ರಿಯೇ

ಕಗ್ಗತ್ತಲೆಯೇ, ಅರಿಯದ (ವಿವೇಕವಿಲ್ಲದ) ಮನಸ್ಸನ್ನು, ಸ್ವಾಮಿ ಯಾದ ಶ್ರೀಮನ್ನಾರಾಯಣನಿಗೆ ನಮ್ಮ ದಾಸ್ಯವನ್ನು ಹೇಳಿಕೊಂಡು ಕೂಗು ತ್ತಿರುವ ನಮ್ಮಿಬ್ಬರ ನಡುವೆ ನೀನು ಶತ್ರುವಿನ ಸೇನೆಯಲ್ಲಿ ಕಟ್ಟು ಕೊಡುತ್ತಿರುವ ನಮ್ಮಿಬ್ಬರ ನಡುವೆ ನೀನು ಶತ್ರುವಿನ ಸೇನೆಯಲ್ಲಿ ಕಟ್ಟು ಪ್ರೇಕ್ಷಣೀಯಾಗಿ ಹರೀಶನವನ್ನು ವಾಧಿಸು ತ್ತಾ (ಕ್ರೂರಿಯಾಗಿ) ಕಾಲವನ್ನೆಲ್ಲಾ ಪ್ರೇಕ್ಷಣೀಯಾಗಿ ಹರೀಶನವನ್ನು ವಾಧಿಸು (7)
ತ್ತಾ ನಿಲ್ಲುವೆಯೋ? ನಿನಗೆ ಮಂಗಳವಾಗಲಿ.

ಹಿಂದಿನ ಪಾಶುರಗಳಲ್ಲಿ ಆರಿಸಿಕೊಂಡಿದ್ದ ನಿದರ್ಶನಗಳು ವಿರಹಿ ವಿರಹಿಗೆ ಶಾಂತಿ ಮನಾದ ಸೇನೆಯಲ್ಲಿ ದಾಸ್ಯ ಕಣ್ಣುಗಳಾದವು. ವಿರಹಿ ಯಂತೆ ಅವ್ಯಾನಿದ್ದರು. ಈ ಪಾಶುರದಲ್ಲಿ ಆರಿಸಿರುವ ನಿದರ್ಶನ ಒಂದು ಬಗೆಯ ಆತಂಕವೇ ಇದ್ದಂತೆ. ರಾತ್ರಿಯಾಗಿ ವಾತಾವರಣವು ಪ್ರಶಾಂತವಾದ್ದರಿಂದ, ನಿಶ್ಶಬ್ದತೆಯೂ ಕಗ್ಗತ್ತಲೆಯೂ ಎಲ್ಲೆಲ್ಲೂ ತಾಂಡವ ವಾಡುತ್ತಿದ್ದರೂ, ಅದೇ ವಿರಹಿಯನ್ನು ಒಂದು ಬಗೆಯಲ್ಲಿ ಉದ್ವಿಗ್ನಗೊ ಳಿಸಿತ್ತು ದ್ದಾಗಿದೆ. ಮನಸ್ಸನ್ನು ನೆಮ್ಮದಿಗೊಳಿಸುವ ಪ್ರಯತ್ನದಲ್ಲಿ, ಅದನ್ನು ಆಬಳಿಕ ಶನ್ನು ಪ್ರಿಯತಮನ ಕಡೆಗೆ ಹರಿಯುಗೊಡುವ ಪ್ರಯ ತ್ನದಲ್ಲಿ ಅಡ್ಡಿಯಾಗಿರುವ ಶತ್ರುವಿನಂತೆ ಆ ಕತ್ತಲ ರಾತ್ರಿಯನ್ನು ಇಲ್ಲಿ ಭಾವಿಸಿಕೊಳ್ಳಲಾಗಿದೆ.

ಬಹುಮಟ್ಟಿಗೆ ಎಲ್ಲ ಜೀವಿಗಳೂ ನಿದ್ದೆಯಲ್ಲಿ ತೊಡಗಿರುವಾಗ,

ಎಲ್ಲೆಲ್ಲೂ ನೀರವತೆ ತುಂಬಿರುವಾಗ, ಕಗ್ಗತ್ತಲೆ ಕವಿದಿರುವಾಗ, ನಿದ್ರೆ
ಯಾದ ಭಕ್ತನು ಜಾಗ್ರತನಾಗಿ, ತನ್ನ ಮನಸ್ಸನ್ನು ನೆಮ್ಮದಿಗೊಳಿಸಿ,
ಬೇರಾವ ಯೋಚನೆಯೂ ಇಲ್ಲದಂತೆ ಮಾಡಿ, ಭಗವಂತನಲ್ಲಿ
ಏಕಾಗ್ರಗೊಳಿಸುವುದಕ್ಕೆ ಅದ್ಭುತವಾದ ಕಾಲವೇ ಕತ್ತಲರಾತ್ರಿ.

ಆಳ್ವಾರರು ಹೇಳುತ್ತಾರೆ: ಕತ್ತಲೆಯ ರಾತ್ರಿಯೇ, ನಾನು ಕಡು
ದುಃಖಿ. ನನ್ನ ಮನಸ್ಸಾದರೋ ಏನೂ ತಿಳಿಯದ್ದು. ವಿವೇಕವಿಲ್ಲದ್ದು.
ಅದನ್ನು ಕದ್ದು, ಹದಗೊಳಿಸಿ, ನನ್ನ ಪ್ರಿಯ ಕಮನೀಯ ಶ್ರೀಮನ್ನಾರಾಯ
ಣನಲ್ಲಿಗೆ ಕಳುಹಿಸಬೇಕೆಂಬುದೇ ನನ್ನ ಪ್ರಯತ್ನ. ಅದಕ್ಕೆ ಅಡ್ಡಿ
ಆತಂಕಗಳಿರಬಾರದು. ಆಗಲೇ ಮನಸ್ಸು ಏಕಾಗ್ರತೆಯನ್ನು ಪಡೆ
ಯಬಲ್ಲದು. ಈ ಕಾರಣದಿಂದಲೇ ನಾನು ಕಗ್ಗತ್ತಲೆಯನ್ನು ನಡು
ರಾತ್ರಿಯನ್ನು ಆರಿಸಿಕೊಂಡಿದ್ದೇನೆ. ನನ್ನ ಮನಸ್ಸು ನನ್ನಿಷ್ಟವಾದ
ಶ್ರೀಮನ್ನಾರಾಯಣನಿಗೆ ನನ್ನ ದುಃಖವನ್ನು ಅರಿಕೆ ಮಾಡಬೇಕು
ಈ ನನ್ನ ಪ್ರಯತ್ನದಲ್ಲಿ ನನಗೂ ನನ್ನ ಮನಸ್ಸಿಗೂ ನಡುವೆ ನೀನು
ಅಡ್ಡಿಯಾಗಬಾರದು ಕಂಡೆಯಾ? ನನ್ನನ್ನಾಗಲೀ, ನನ್ನ ಮನಸ್ಸನ್ನಾ
ಗಲಿ ನೀನು ಕಾಡಬಾರದು. ಬೇರೆ ಕಡೆಗೆ, ಬೇರೆ ಯೋಚನೆಗೆ
ಸೆಳೆದು ಬಿಡಬಾರದು. ಹಾಗೆ ಮಾಡುವುದು ನಮ್ಮ ಶತ್ರುವಿನ
ಕೆಲಸ. ಕತ್ತಲರಾತ್ರಿಯೇ, ನೀನು ನನಗೆ ಸಹಕಾರ ಮಾಡಬೇಕು. ಕ್ರೂ
ರಿಯಾಗಬೇಡ. ಈ ಪ್ರಶಾಂತವಾದ ಅತ್ಯುತ್ತಮ ಕಾಲದಲ್ಲಿ, ಶತ್ರು
ವು ತನ್ನ ಹಗೆತನವನ್ನು ಸಾಧಿಸಿಕೊಳ್ಳುವಂತೆ, ನೀನು ನಮಗೆ ನಮ್ಮ
ಪ್ರಯತ್ನದಲ್ಲಿ ಅಡ್ಡಿಯಾಗಿ ನಿಲ್ಲಬೇಡ. ನಮ್ಮ ಕೆಲಸದಲ್ಲಿ ಈ ನಿನ್ನ
ಉಪಕಾರ ಮಾಡುವೆಯಾದರೆ, ನಮಗೆ ಒಳ್ಳೆಯದಾಗುವುದು ನಿನಗೂ
ಮಂಗಳವಾಗುವುದು.

8. இருளின் திணிவண்ணம் மாநீர்க்கழியே போய்,
மருளுற்றிராப்பகல் துஞ்சிலும் நீ துஞ்சாயால்,
உருளுமசகடம் உதைத்த ~~[struck]~~ பெருமானார்,
அருளின் பெருநசையால் ஆழாந்து நொந்தாயே.

ಇರುಳಿನ್ ತಿಣಿವಣ್ಣಮ್ ಮಾನೀರ್ಕ್ಕಳಿಯೇ ಪೋಯ್,
ಮರುಳುಟ್ರಿರಾಪ್ಪಗಲ್ ತುಂಜಿಲುಮ್ ನೀ ತುಂಜಾಯಾಲ್,
ಉರುಳುಮ್ ಶಕಡಮ್ ಉದೈತ್ತ ಪೆರುಮಾನಾರ್,
ಅರುಳಿನ್ ಪೆರುನಶೈಯಾಲ್ ಆಳಾಂದು ನೊಂದಾಯೇ.

ಇರುಳಿನ್ இருளின் = ಕತ್ತಲೆಯ (ರಾತ್ರಿಯ), ತಿಣಿ திணி =

ದಟ್ಟವಾದ, ಮಣ್ಣಾ ಮಾ ವಣ್ಣಾಣಾಮ್ = ಕಪ್ಪುಬಣ್ಣದ, ಮಾಮಾ ಬಹುದೊಡ್ಡ, ನೀರ್ ಕಡಲೇ ನೀರ್ ಕಳ್ಳಿಯೇ = ನೀರ್ಗಲೆಯೇ, ಪೋಯ್ போய் = ಬದಲ, ಮರುಳ್ ಉಱ್ಱು மருள் உற்று = ಉನ್ಮತ್ತತೆಯನ್ನು ಪಡೆದು, ಇರಾಪ್ಪ ದಲ್ இராப்பகல் = ರಾತ್ರಿ ಹಗಲು ತುಂಜಲುಮಾ துஞ்சலும் = ಕಳೆ ಹೋದರೂ (ನಶಿಸಿದರೂ), ನೀ ತುಂಜಾಯ್ ನೀ துஞ்சாய் = ನೀನು ಕುಗ್ಗು ವುದಿಲ್ಲ ಆಲ್ ಆತು = ಆದ್ದರಿಂದ, ಉರುಳುಮಾ உருளும் = ಉರುಳುವ, ಶಕಡಮಾ சகடம் = ಬಂಡಿಯನ್ನು (ಶಕಟವನ್ನು) ಉದೈತ್ತ உதைத்த = ಒದೆ ದ, ಪೆರುಮಾನಾರ್ பெருமானார் = ಸ್ವಾಮಿಯ, ಅರುಳಿನ್ அருளின் = ಅಗಾಧವಾದ ಪ್ರೇಮ ಕೃಪೆಯ, ಪೆರುನಶೈಯಾಲ್ பெருநசையால் = ಅಗಾಧವಾದ ಪ್ರೇಮ ದಿಂದ, ಆಲಾನ್ನ್ದು ಆಪ್ಪಾನ್ನ್ದು = ಗಾಢವಾಗಿ (ಬಹಳ ಆಳವಾಗಿ), ನೊಂದಾಯೇ ನೊಂದಾಯೇ = ನೊಂದಿರುವೆಯಲ್ಲವೇ?

ರಾತ್ರಿಯ (ಕತ್ತಲೆಯ) ದಟ್ಟವಾದ ಕಪ್ಪುಬಣ್ಣದ ಬಹುದೊಡ್ಡ ನೀರ್ಗಲೆಯೇ, ಬಹಳ ಉನ್ಮತ್ತತೆಯನ್ನು ಪಡೆದ ರಾತ್ರಿ ಹಗಲು ನಶಿಸಿ ಹೋದರೂ ನೀನು ಕುಗ್ಗುವುದಿಲ್ಲವಾದ್ದರಿಂದ, ಉರುಳುವ ಶಕಟವನ್ನು ಒದೆದ ಸ್ವಾಮಿಯ ಕೃಪೆಯ [redacted] ಅಗಾಧವಾದ ಪ್ರೇಮದಿಂದ ಬಹಳ ಆಳವಾಗಿ (ಗಾಢವಾಗಿ) ನೊಂದಿರುವೆಯಲ್ಲವೇ? (8)

ರಾತ್ರಿಯ ಕಗ್ಗತ್ತಲಲ್ಲಿ ಎಲ್ಲಿ ನೆಲ, ಎಲ್ಲಿ ನೀರು ಎಂದು ತಿಳಿಯಲಾರದ ಸಮಯದಲ್ಲಿ, ಆಳವೂ ವಿಸ್ತಾರವೂ ಆಗಿರುವ ನೀರ್ಗಲೆಯನ್ನು (ನೀರಿನ ದೊಡ್ಡ ಗುಂಡಿಯನ್ನು) ಕಂಡ ಆಳ್ವಾರರು ಭ್ರಮೆಗೊಂಡು ಹೇಳುತ್ತಿದ್ದಾರೆ:

ಆಳ್ವಾರರು ಹೇಳುತ್ತಾರೆ: ದೊಡ್ಡ ನೀರ್ಗಲೆಯೇ, ನಿನಗೂ ಮುಗಿಯದೆಯಲ್ಲ! ಹುಟ್ಟು ಹಿಡಿದಂತೆ, ಬಿನ್ನಬಿನ್ನ ರಾತ್ರಿಯ ಕಗ್ಗತ್ತಲು ಮುಸುಕಿದೆಯಲ್ಲ! ಹುಟ್ಟು ಹಿಡಿದಂತೆ, ಚಿತ್ರವಾದ ರಾತ್ರಿಯೂ ಹಗಲೂ ಅವುಗಳ ಗುರುತೇ ವಾಗಿ ಕಂಡುಬಂದ ವಿಚಿತ್ರವಾದ ರಾತ್ರಿಯೂ ಹಗಲೂ ಅವುಗಳ ಗುರುತೇ ಇಲ್ಲದಂತೆ, ನಶಿಸಿ ಹೋದವು. ನೀನು ಮಾತ್ರ ಕುಗ್ಗದೆ ಹಾಗೆಯೇ ಇರುವೆ-ಯಲ್ಲ! ನಿನ್ನ ನೀರಿನ ಪ್ರಮಾಣದಲ್ಲಿ ಸ್ವಲ್ಪವೂ ಇಳಿಮುಖವಾಗಿಲ್ಲವಲ್ಲ! ಇದಕ್ಕೆ ಕಾರಣವೇನಿರಬಹುದು? ಶ್ರೀಕೃಷ್ಣಾವತಾರಿಯಾದ ಭಗವಂತನು ಬಂಡಿಯ ರೂಪದಲ್ಲಿ ಉರುಳುತ್ತಾ ಅವನನ್ನು ಕೊಲ್ಲಲು ಬಂದ ಶಕಟಾಸುರ ನನ್ನು ಕಾಲಿನಿಂದ ಒದೆದು ಕೃಪೆ ಮಾಡಿದ ಹಾಗೆಯೇ ನಿನ್ನನ್ನೂ ಅನುಗ್ರಹಿ ಬದನೇ? ಶಕಟಾಸುರನಾದರೋ ಆ ಪುಟ್ಟ ಕಾಲಿನ ಒದೆತದಿಂದಲೇ ಮುಕ್ತಿ ಸುಖಿಯಾದ. ನೀನೂ ಹಾಗೆಯೇ ಆಳವಾದ ಗುಂಡಿಯಾಗಿ ನೊಂದಿರುವೆಯಾ?

ಭಗವಂತನ ತಿರುವಡಿಗಳ ಸಂಪರ್ಕ ಉಂಟಾದುವುದೇ ಭಗವತ್ಕೃಪೆ. ಅದು ಹೇಗೆ ಪಡೆದರೂ (ಉಂಟಾದರೂ) ಒಳ್ಳೆಯದೇ. ಕೋಪದಿಂದಲೋ, ವಾತ್ಸಲ್ಯದಿಂದಲೋ ಉಂಟಾದ ಅದರಿಂದ ಆದವು

ತಿರುವಡಿಗಳ ಬೇರೆ ಲಕ್ಷಿಸದಂತಿರಲಿ!

9 நொந்தாராக் காதல் நோய் மெல்லாவியுள் உலர்த்த,
நந்தாவிளக்கமே நீயும் அளியத்தாய்,
செந்தாமரைத் தடங்கண் செங்கனிவாய் எம்பெருமான்,
அந்தாமத் தண்டுழாய் ஆசையால் வேவாயே.

ನೊನ್ದಾರಾಕ್ಕಾದಲ್ ನೋಯ್ ಮೆಲ್ಲಾವಿಯುಳ್ಳುಲರ್ತ್ತ
ನನ್ದಾವಿಳಕ್ಕಮೇ, ನೀಯುಮಳಿಯತ್ತಾಯ್,
ಶೆನ್ದಾಮರೈತ್ತಡಕ್ಕಣ್ ಶೆಙ್ಕನಿವಾಯೆಮ್ಪೆರುಮಾನ್
ಅನ್ದಾಮತ್ತಣ್ಡುಳಾಯ್ ಆಶೈಯಾಲ್ ವೇವಾಯೇ.

ನೊನ್ದು நொந்து = ಸಂಕಟಪಟ್ಟರೂ ಬಿಡದ, ಆರಾ ஆரா = ಪೂರ್ಣ… ವಾಗದ, ಕಾದಲ್ ನೋಯ್ காதல் நோய் ಆಶೆಯ (ಪ್ರೇಮದ) ನೋವು, ಮೆಲ್ ಆವಿ மெல் ஆவி = ಮೃದುವಾದ (ಕೋಮಲವಾದ) ಪ್ರಾಣವನ್ನು (ಉಸಿರನ್ನು), ಉಳ್ ಉள் = ಒಳಗೇ, ಉಲರ್ತ್ತ உலர்த்த = ಒಣಗಿಸಿದ, ನನ್ದಾ நந்தா = ನಂದದೇ (ಆರದೆಯೇ) ಇರುವ, ವಿಳಕ್ಕಮೇ விளக்கமே = ದೀಪವೇ, ನೀಯುಮ್ நீயும் ಇರುವ, ಅಳಿಯತ್ತಾಯ್ அளியத்தாய் = ಅಳಿಯಕ್ಕೆ ತಕ್ಕ… ಮ್ = ನೀನೂ ಬಿಡ, ಅಳಿಯತ್ತಾಯ್ ಅಲ್ಲವೆ, ಶೆನ್ದಾಮರೈ செந்தாமரை = ಕೆಂದಾವರೆಯಂತೆ ತಡ, ತಡಕ್ಕಣ್ ಕಣ್ கண் = ಕಣ್ಣುಗಳನ್ನು ಶೆಙ್ಕನಿವಾಯ್ ತಡ = ವಿಶಾಲವಾದ, ಶೆಙ್ಕನಿವಾಯ் செங்கனிவாய் = ಕೆಂಪಾದ ಹಣ್ಣಿನಂತೆ ತುಟಿಯನ್ನು ಉಳ್ಳ, ಎಮ್ಪೆರುಮಾನ್ எம்பெருமான் = ಸ್ವಾಮಿಯ, ಅನ್ ಅம் = ಎಮ್ಪೆರುಮಾನ್ ದಾಮಮ್ = ಹಾರವಾದ, ದೇವಬಗಿನ, [illegible] = ತಾಮಮ್ தாமம் = ಹಾರವಾದ, ತಣ್ ತಣ್ಣ್ = ತಂಪಾದ, ತುಳಾಯ್ துழாய் = ತುಳಸಿಯ, ಆಶೈಯಾಲ್ ஆசையால் = ಆಶೆಯಿಂದ, ವೇವಾಯೇ வேவாயே = ಬೆಂದು ಹೋಗುತ್ತಿರುವೆಯಾ?

ಸಂಕಟಪಟ್ಟರೂ ಬಿಡದ ಪೂರ್ಣವಾಗದ (ತೃಪ್ತಿಯಾಗದ) ಆಶೆಯ (ಪ್ರೇಮದ) ನೋವು ಮೃದುವಾದ ಪ್ರಾಣವನ್ನು (ಕೋಮಲವಾದ ಉಸಿರನ್ನು) ಒಳಗಡೆಯೇ ಒಣಗಿಸಿದ ನಂದದೇ ಇರುವ ದೀಪವೇ, ನೀನೂ ಸಹ ಅಳಿಯತಕ್ಕವಳೇ, ಕೆಂದಾವರೆಯಂತೆ ವಿಶಾಲವಾದ ಕಣ್ಣುಗಳನ್ನು ಕೆಂಪಾದ ಹಣ್ಣಿನಂತೆ ತುಟಿಯನ್ನು ಉಳ್ಳ ಸ್ವಾಮಿಯ ದೇವಬಗಿನ ಹಾರವಾದ ತಂಪಾದ ತುಳಸಿಯ ಆಶೆಯಿಂದ ಬೆಂದು ಹೋಗುತ್ತಿರುವೆಯಾ?

ಕೊನೆಗೆ ಸಂಕಟಕ್ಕೆ ಪ್ರೇಮದ ಸಂಕಟಕ್ಕೆ ಬಹಳ ವ್ಯತ್ಯಾಸ. ಕೊನೆಗೆ ಸಂಕಟವನ್ನು ನಿವಾರಿಸಲು ಸಾಧ್ಯ. ಹಾಗೆ ಅದು ಪೂರ್ಣಗೊಳ್ಳುವುದು.

Gerani Srinivasan

ಪ್ರೇಮ ಅಥವಾ ಆಸೆಯಿಂದ ಉಂಟಾಗುವ ಸಂಕಟಕ್ಕೆ ತೃಪ್ತಿಯೆಂಬುದೇ ಇಲ್ಲ. ವಿರಹಿಯಾದವನು ಎಷ್ಟು ಸಂಕಟಪಟ್ಟರೂ ಅದು ಕಡಿಮೆಯಾಗುವುದೇ ಇಲ್ಲ. ರೋಗದ ಸಂಕಟವನ್ನನುಭವಿಸುತ್ತಾ ದೇಹ ಕೃಶಿಸಿಹೋದರೂ ಸಹ, ರೋಗನಿವಾರಣೆಯಾದಕೂಡಲೇ ಶಕ್ತಿ ಆರೋಗ್ಯದಿಂದ ಮರಳಿ ಪಡೆಯುವುದು. ಪ್ರೇಮದ ಸಂಕಟ, ದೇಹವನ್ನು ಮಾತ್ರವೇ ಅಲ್ಲದೆ, ಮನಸ್ಸನ್ನು, ಕೋಮಲವಾದ ಪ್ರಾಣವನ್ನು ಬಿಳುಕದೆಯೇ ತುಂಡು ತುಂಡು ಒಣಗಿಸಿಬಿಡುವುದು ಮನದ ಮಹದಾಸೆ ತೀರದಾಗಲೇ ಅದು ಸಾಯಿಸುವುದು

ರಾತ್ರಿ ಹಗಲು ಎನ್ನದೆ, ಎಡೆಬಿಡದೆ ಬೆಳಗುತ್ತ ನಂದದೆ ಇರುವ ದೀಪವೇ 'ನಂದಾದೀಪ'! ಈ ಪಾಶುರದಲ್ಲಿ ಇದು ನಿದರ್ಶನವಾಗಿದೆ ಬತ್ತಿ, ಎಣ್ಣೆ ಮತ್ತು ಅವಕ್ಕೆ ಆಧಾರವಾಗಿರುವ ಪಾತ್ರೆ - ಇವು ಪರಸ್ಪರ ಹೊಂದಿಕೊಂಡು, ದೀಪ ಬೆಳಗುವುದು. ಎಣ್ಣೆಯಿಲ್ಲದಾಗ ಬತ್ತಿ ಬೆಳಗದು ಬತ್ತಿ ಚಿಕ್ಕದಾದಾಗಲೂ, ಪಾತ್ರೆಯಲ್ಲಿ ಎಣ್ಣೆಯಿದ್ದರೂ ಸಹ, ದೀಪ ಚೆನ್ನಾಗಿ ಬೆಳಗುವುದಿಲ್ಲ. ಬತ್ತಿಯು ಕರಗಿ ಕರಗುತ್ತ, ಎಣ್ಣೆ ಕಡಿಮೆಯಾದರಂತು, ಆಗ ದೀಪ ಸಂಕಟಪಟ್ಟುಕೊಂಡು ಉರಿಯುತ್ತಿರುವಂತೆ ಕಂಡುಬರುತ್ತದೆ. ದೀಪದ ಈ ಪರಿಸ್ಥಿತಿಯನ್ನು ಪ್ರೇಮದಿಂದ ನೊಂದು, ಕೃಶಿಸಿ, ಬೆಂದು ಹೋಗುತ್ತಿರುವ ಮನಸ್ಸಿಗೆ ಇಲ್ಲಿ ಹೋಲಿಸಲಾಗಿದೆ

ಆಳ್ವಾರರು ಹೇಳುತ್ತಾರೆ: ಮಂಕಾಗಿ ಉರಿಯುತ್ತಿರುವ ನಂದಾದೀಪವೇ, ನಿನಗೂ ಸಂಕಟವೇ? ಎಷ್ಟೆಷ್ಟು ಸಂಕಟಪಟ್ಟರೂ ಸಹ ತೀರದಂಥ ಪೂರ್ಣಗೊಳ್ಳದಂಥ ಆಸೆಗೆ ನೀನು ಪಕ್ಕಾದೆಯಾ? ಅದು ಮೃದುವಾದ ಕೋಮಲವಾದ ಪ್ರಾಣವನ್ನು ಬಿಳುಕದೆಯೇ ತುಂಡು ತುಂಡು ಒಣಗಿಸಿಬಿಡುತ್ತದೆ. ಕೆಂದಾವರೆಯಂತೆ ವಿಶಾಲವಾದ ಕಣ್ಣುಗಳುಳ್ಳ, ತೊಂಡೆಯ ಹಣ್ಣಿನಂತೆ ತುಟಿಗಳುಳ್ಳ ಘನವಂತನ ತಿರುವಡಿಗಳನ್ನು ಆಶ್ರಯಿಸಿ, ಅವುಗಳ ಮೇಲೆ ಅಲಂಕೃತವಾಗಿರುವ ತಂಪಾದ ತುಲಸಿಯ ಹಾರವನ್ನು ಪಡೆದುಕೊಳ್ಳಬೇಕೆಂಬುದು ನನ್ನ ಮಹದಾಸೆ. ಆ ಆಸೆಯಿಂದ ನನ್ನ ಪ್ರಾಣವೇ ಬೆಂದು ಹೋಗುತ್ತಿದೆ. ನಂದಾದೀಪವೇ, ನಿನಗೂ ಅದೇ ಆಸೆಯೇ? ಆ ದಿವ್ಯ ತಿರುವಡಿಗಳ ಹಾರವನ್ನು ಪಡೆದುಕೊಳ್ಳುವುದಕ್ಕಾಗಿ ನೀನೂ ಆಶಿಸಿ, ಬೆಂದುಹೋಗುತ್ತಿರುವೆಯಾ?

10. வேவாரா வேட்கை நோய் மெல்லாவியுள் உலர்த்த,
ஓவாதிராப்பகல் உன்பாலே வீழ்த்தொழிந்தாய்,
மாவாய்பிளந்து மருதிடைபோய் மண்ணளந்த,
மூவாமுதல்வா, இனியெம்மைச்சோரேலே.

ವೇವಾರಾ ವೇಟ್ಕೈ ನೋಯ್ ಮೆಲ್ಲಾವಿಯುಳ್ಳುಲರ್ತ್ತ,
ಓವಾದಿರಾಪ್ಪಗಲ್ ಉನ್ ಪಾಲೇ ವೀಳ್ತ್ತೊಳಿನ್ದಾಯ್,
ಮಾವಾಯ್ ಪಿಳನ್ದು ಮರುದಿಡೈ ಪೋಯ್ ಮಣ್ಣಳನ್ದ,
ಮೂವಾ ಮುದಲ್ವಾ, ಇನಿ ಎಮ್ಮೈ ಚ್ಚೋರೇಲೇ

ವೇವು வேவு = ಬೇಯುವ ಆರಾ ஆராத = ಪೂರ್ಣಗೊಳ್ಳದಂಥ ವೇಟ್ಕೈ ನೋಯ್ வேட்கை நோய் = ಆಶೆಯ ಸಂಕಟವು, ಮೆಲ್ மெல் ಸೂಕ್ಷ್ಮವಾದ, ಆವಿ ஆவி = ಆತ್ಮವನ್ನು ಉಳ್ உள் = ಒಳಗಡೆಯೇ, ಉಲರ್ತ್ತ உலர்த்த = ಒಣಗಿಸಿಬಿಟ್ಟು, ಓವಾದು ஓவாது = ಎಡೆಬಿಡದೆ ಇರಾಪ್ಪಗಲ್ இராப்பகல் = ರಾತ್ರಿಹಗಲು, ಉನ್ ಪಾಲೇ உன்பாலே = ನಿನ್ನಲ್ಲಿಯೇ, ವೀಳ್ತ್ತು வீழ்த்து = ಕೆಡುವಡಿಸಿ, ಒಳಿನ್ದಾಯ್ ஒழிந்தாய் = ಅಲಕ್ಷಿಸಿದೆ. ಮಾ ವಾಯ್ ಪಿಳನ್ದು மா வாய் பிளந்து = ಕುದುರೆಯ ಬಾಯನ್ನು ಸೀಳಿದವನೇ, ಮರುದು ಇಡೈ ಪೋಯ್ மருது இடை போய் = (ಜೋಡಿ) ಮತ್ತೀ ಮರಗಳ ನಡುವೆ ಹೋದವನೇ, ಮಣ್ ಅಳನ್ದ மண் அளந்த = ಭೂಮಿ (ನೆಲವನ್ನು)ಯನ್ನು ಅಳೆದುಕೊಂಡವನೇ, ಮೂವಾ மூவா = ಮುಪ್ಪೇ ಇಲ್ಲದವನೇ, ಮುದಲ್ವಾ முதல்வா = ಆದಿಕಾರಣನೇ, ಇನಿ இனி = ಇನ್ನು, ಎಮ್ಮೈ எம்மை = ನಮ್ಮನ್ನು, ಶೋರೇಲೇ சோரேலே = ಸೊರಗದ ಬೇಡ (ಕೈಬಿಡಬೇಡ).

ಬೇಯುವ ಪೂರ್ಣಗೊಳ್ಳದಂಥ ಆಶೆಯ ಸಂಕಟವು ಸೂಕ್ಷ್ಮವಾದ ಆತ್ಮವನ್ನು ಒಳಗಡೆಯೇ ಒಣಗಿಸಿಬಿಟ್ಟು, ಎಡೆಬಿಡದೆ ರಾತ್ರಿಹಗಲು ನಿನ್ನಲ್ಲಿಯೇ ಕೆಡುವಡಿಸಿ ಅಲಕ್ಷಿಸಿದೆ, ಕುದುರೆಯ ಬಾಯನ್ನು ಸೀಳಿದವನೇ, ಮತ್ತೀ ಮರಗಳ ನಡುವೆ ಹೋದವನೇ, ನೆಲವನ್ನು ಅಳೆದುಕೊಂಡವನೇ, ಮುಪ್ಪೇ ಇಲ್ಲದವನೇ, ಆದಿಕಾರಣನೇ, ಇನ್ನು ನಮ್ಮನ್ನು ಸೊರಗದ ಬೇಡ (ಕೈಬಿಡಬೇಡ). (10)

ಈ ಪಾಶುರ ಭಕ್ತನ ಹೃದಯಸ್ಪರ್ಶಿಯಾದ ಮನವಿಯಾಗಿದೆ. ಭಗವಂತನು ತನ್ನ ಸಾಟಿಯಿಲ್ಲದ ಸಾಮರ್ಥ್ಯದಿಂದ, ಅದ್ಭುತ ಕಾರ್ಯಗಳಿಂದ, ಅದ್ವಿತೀಯವಾದ [illegible] ಸೌಂದರ್ಯದಿಂದ ಭಕ್ತನ ಅಂತರಂಗವನ್ನು ಸೂರೆಗೊಂಡು, ಅವನಿಗೆ (ಭಕ್ತಿಯ) ತೃಷ್ಣೆ ಹುಟ್ಟಿಸಿ, ಎಡೆಬಿಡದಂತೆ ಸ್ವಾಮಿಯನ್ನು ಕೂಡಿಕೊಂಡಿರಬೇಕೆಂಬ ಹಂಬಲಕ್ಕೆ ಒಳಪಡಿಸಿ, ಇನ್ನೂ ಅವನನ್ನು ಪರೀಕ್ಷಿಸುವುದೇ? ತನ್ನ ಪ್ರಾಣಕೃಶೆಗೆ ಭಕ್ತನನ್ನು ಸ್ವಾಮಿಯು ಒಳಪಡಿಸಿ ಉದ್ಧರಿಸಬೇಕೆಂಬುದೇ ಈ ಕಾತರದ ಮನವಿ.

ಆಳ್ವಾರರು ಹೇಳುತ್ತಾರೆ, ಭಗವಂತ, ನೀನು ಎಲ್ಲಕ್ಕೂ ಆದಿ.

ಎಲ್ಲಕ್ಕೂ ಕಾರಣನು. ಮುಪ್ಪೇ ಇಲ್ಲದವನು ನಿತ್ಯನಾಯಿರುವ ಸುಂದರನು.
ಆಶ್ಚರ್ಯಕರವಾದ ಶರೀರ. ಕುದುರೆಯ ಬಾಯನ್ನು ಅಗಿದು ಸೀಳಿದವನು
ಮತ್ತೇ ಮರಗಳ ನಡುವೆ ನುಗ್ಗಿ ಆ ಎರಡು ಮರಗಳನ್ನು ಮುರಿ-
ದು ಹಾಕಿದವನು. ಕುಬ್ಜ ವಾಮನನಾಗಿ ಬಂದು ಬಲಿಯಿಂದ ಪಡೆದು
ಕೊಂಡ ಮೂರಡಿ (ಮೂರು ಹೆಜ್ಜೆಗಳ) ನೆಲವನ್ನು ತ್ರಿವಿಕ್ರಮನಾಗಿ
ಬೆಳೆದು, ನಿನ್ನ ಒಂದೇ ಹೆಜ್ಜೆಯಿಂದ ಇಡೀ ಭೂಮಂಡಲವನ್ನೇ
ಅಳೆದುಕೊಂಡವನು. ಇಂಥ ಅನೇಕಾನೇಕ ಕಾರ್ಯಗಳಿಂದಲೂ
ನಿನ್ನ ಔದಾರ್ಯ, ವಾತ್ಸಲ್ಯ, ಸೌಶೀಲ್ಯ, ಸೌಲಭ್ಯಾದಿ ಗುಣಗಳಿಂದಲೂ
ನಮ್ಮಲ್ಲಿ ಬಂದಿರುವಂಥ ಆಶೆಯನ್ನು ಹುಟ್ಟಿಸಿದ್ದೀಯೆ. ನಿನ್ನ ಕರು-
ಣೆಗಳನ್ನು ಶಾಶ್ವತವಾಗಿ ಪಡೆದುಕೊಳ್ಳ ಬೇಕೆಂಬ ಹಂಬಲವನ್ನು
ಎಬ್ಬಿಸಿದಂತೆ ಉಂಟು ಮಾಡಿದ್ದೀಯೆ. ನೀನು ನಮಗೆ ದೂರದ
ನಮ್ಮ ಆತ್ಮವನ್ನು ಸಂಕಟಕ್ಕೆ ಈಡು ಮಾಡಿದ್ದೀಯೆ. ನಮ್ಮನ್ನು
ಉಪೇಕ್ಷಿಸಿದ್ದೀಯೆ. ಇನ್ನು ಮುಂದಾದರೂ ನಮ್ಮನ್ನು ಕೊರಗಾ
ಹೊರಗಾಗಿ ಸಿಕ್ಕಿ ಸಂಕಟಪಡಿಸಬೇಡ. ನಮ್ಮಲ್ಲಿ ಕೃಪೆತೋರು.
ನಮ್ಮ ಕೈಬಿಡದಂತೆ ನಮ್ಮನ್ನು ಉದ್ಧರಿಸು

11. சோராத எப்பொருட்கும் ஆதியாம் சோதிக்கே,
ஆராத காதல் குருகூர்ச் சடகோபன்,
ஓராயிரம் சொன்ன அவற்றுள் இவை பத்தும்,
சோரார் விடார் கண்டீர் வைகுந்தம் திண்ணனவே.

ಸೋರಾದ ಎಪ್ಪೊರುಟ್ಕುಮ್ ಆದಿಯಾಂ ಜೋದಿಕ್ಕೇ,
ಆರಾದ ಕಾದಲ್ ಕುರುಗೂರ್ ಚ್ಚಡಗೋಪನ್,
ಓರಾಯಿರಮ್ ಶೊನ್ನ ಅವತ್ತುಳ್ ಇವೈ ಪತ್ತುಮ್,
ಸೋರಾರ್ ವಿಡಾರ್ ಕಣ್ಡೀರ್ ವೈಕುನ್ದಮ್ ತಿಣ್ಣನವೇ.

ಸೋರಾದ சோராத = ಅಳಿಯದ, ಎಪ್ಪೊರುಟ್ಕುಮ್ எப்பொருட்கும் = ಯಾವ ವಸ್ತುವಿಗಾದರೂ (ಎಲ್ಲಾ ವಸ್ತುಗಳಿಗೂ), ಆದಿ ಆಮ್ ஆதி ஆம் = ಆದಿಯಾಗಿರುವ, ಶೋದಿಕ್ಕೇ சோதிக்கே = ಪರಂಜ್ಯೋತಿಗೇಯೇ, ಆರಾದ ஆராத = ಪೂರ್ಣಗೊಳ್ಳದ, (ತೃಪ್ತಿಯಾಗದ), ಕಾದಲ್ காதல் = ಆಸೆಯ, ಕುರುಗೂರ್ ಶಡಗೋಪನ್ குருகூர் சடகோபன் = ತಿರುಕ್ಕುರುಗೂರಿನ ಶಠಗೋಪನು, ಶೊನ್ನ சொன்ன = ಹೇಳಿದ, ಓರ್ ಆಯಿರಮ್ ஓர் ஆயிரம் = ಒಂದು ಸಾವಿರ ಪಾಶುರ(ಗಳು), ಅವತ್ತುಳ್ அவற்றுள் = ಅವುಗಳಲ್ಲಿ ಇವೈ இவை

Garari Srinivasan.

ಇವುಗಳಾದ ಪತ್ತುಮಾ ಪರಪ್ಪುಮ್ = ಹತ್ತನ್ನು (ಹತ್ತು ಪಾಶುರಗಳನ್ನು), ಶೊಲ್ಲಾರ್ ಕೋಲಾಗಾರ್ = ಮರೆತುಹೋಗದವರು, ಪಿದಾರ್ ಶಕ್ತೀರ್ ವಿಡಾರ್ ಕಣ್ಣಡೀರ್ = ಬಿಡರು ಕಂಡಿರಾ, ವೈಕುಂಠಮಾ ನಾಡು ಅಗರಮ್ = ವೈಕುಂಠವನ್ನು, ಶಿಲ್ಪನವೇ ಶೆಲ್ವರಾಗುವರ್ = ವೃದ್ಧಿಯಾಗಿಯೇ

ಅಳಿಯದ (ನಾಶವಿಲ್ಲದ) ಎಲ್ಲಾ ವಸ್ತುಗಳಿಗೂ ಆದಿಯಾಗಿರುವ ಪರಂಜ್ಯೋತಿಯೇ ಆಶಯವನ್ನಿಟ್ಟ ತಿರುಕ್ಕುರುಗೂರಿನ ಶಠಗೋಪ ನು ಹೇಳಿದ ಒಂದು ಸಾವಿರ ಪಾಶುರಗಳಲ್ಲಿ ಈ ಹತ್ತು ಪಾಶುರಗಳನ್ನು ಮರೆತುಹೋಗದವರು ವೃದ್ಧಿಯಾಗಿ ವೈಕುಂಠವನ್ನು ಬಿಡುವುದೇ ಇಲ್ಲ ಕಂಡಿರಾ! (11)

ಇದು ಈ ತಿರುವಾಯ್ ಮೊಳಿಯ ಕಡೆಯ ಪಾಶುರ. ಇದರ ಇತರ ಎಲ್ಲಾ ಪಾಶುರಗಳೂ ಭಗವಂತನ ಅದ್ವಿತೀಯವಾದ ಕಲ್ಯಾಣಗುಣಗಳನ್ನು ಹೇಳುತ್ತಾ ತನ್ನ ಪ್ರಿಯತಮನಲ್ಲಿ ಅತ್ಯಂತ ಅನುರಕ್ತಳಾದ ನಾಯಕಿಯಂತೆ ಆಳ್ವಾರರಾದರೋ, ಸಕಲಕಲ್ಯಾಣಗುಣಪರಿಪೂರ್ಣನಾದ ಸರ್ವೇಶ್ವರನೊಡನೆ ಕೂಡಿಕೊಳ್ಳಬೇಕೆಂಬ ಉತ್ಕಟೇಚ್ಛೆಯನ್ನು ಹೊರಪಡಿಸುತ್ತಾರೆ. ತಮ್ಮ ಹಾಗೆಯೇ (ವಿರಹ)ದಿಂದ ಬಳಲುತ್ತಿರುವವರಿಗಾಗಿ ನಿದ್ದೆಗೆಟ್ಟು ಗೋಳಿಡುವ, ಅಥವಾ, ಹಾಗೆ ಕಂಡುಬರುವ ಪಕ್ಷಿ ಪ್ರಾಣಿ, ಪ್ರಾಕೃತಿಕ ವಸ್ತುಗಳನ್ನು ಕುರಿತು ಅವುಗಳ ದುಃಖಕ್ಕೆ ಕಾರಣವೇನೆಂದು ಪ್ರಶ್ನಿಸುತ್ತಾ, ತಮ್ಮೊಂದಿಗೆ ಅವುಗಳನ್ನು ಹೋಲಿಸಿಕೊಳ್ಳುತ್ತಾ, ಆಳ್ವಾರರು ತಮ್ಮ ಅಂತರಂಗವನ್ನು ಬಯಲು ಮಾಡುತ್ತಾರೆ. ಪ್ರೇಮಿಗಳು ಅಗಲಿ, ವಿರಹವನ್ನನುಭವಿಸುತ್ತಿರುವುದರ ಬದಲಾಗಿ ಅವರು ಸೇರಿ ಒಂದಾಗುವುದರಿಂದ ಹೇಗೆ ತೃಪ್ತಿಯೂ, ಆನಂದವೂ, ಶಾಂತಿಯೂ ಲಭಿಸುವುದೋ, ಹಾಗೆಯೇ ಆಳ್ವಾರರಿಗೆ ತಮ್ಮ ಪ್ರಿಯತಮನಾದ ಸರ್ವೇಶ್ವರನನ್ನು ಕೂಡಿಕೊಂಡರೆ. ಅದನ್ನು ಮುಂದಿಟ್ಟೇ ಈ ತಿರುವಾಯ್ ಮೊಳಿಯ ಪಾಶುರಗಳಲ್ಲಿ ಕಂಡುಬರುವುದು ಹೃದಯವನ್ನು ಮುಟ್ಟುವಂಥ ಭಕ್ತಿಯ ಕರೆ!

ಭಗವಂತನನ್ನು ನಾಶವಿಲ್ಲದವನು ಎನ್ನುತ್ತಾರೆ, ಬಿಡು. ಆದರೆ, 'ನಾಶವಿಲ್ಲದ ವಸ್ತುಗಳು ಬೇರೆ ಎಷ್ಟೋ ಇವೆಯಲ್ಲ!' ಎಂದು ಉದ್ಗರಿಸಿದರೆ, ಅದಕ್ಕೆ ಉತ್ತರವಾಗಿ, 'ನಾಶವನ್ನರಿಯದ ಆ ವಸ್ತುಗಳಿಗೆಲ್ಲ ಆದಿಯಾದವನು, ಅವುಗಳಿಗೆಲ್ಲ ಕಾರಣನಾದವನು ಆ ಭಗವಂತನೇ' ಎಂಬುದನ್ನು ಸ್ಪಷ್ಟವಾದ ಮಾತುಗಳಿಂದ ಇಲ್ಲಿ ತಿಳಿಸಲಾಗಿದೆ.

ಸರ್ವೇಶ್ವರನಾದ ಭಗವಂತನ ತಿರುವಡಿಗಳಲ್ಲಿ ಅತ್ಯಂತ ಹೆಚ್ಚಿನ ಶಕ್ತವಾದ ಆಶಯವನ್ನಿಟ್ಟ ತಿರುಕ್ಕುರುಗೂರಿನ ಶಠಗೋಪನು ರಚಿಸಿ,

Garani Srinivasan

ಹಾಡಿರುವ ಒಂದು ಸಾವಿರ ಪಾಶುರಗಳಲ್ಲಿ ಒಂದಂಶವಾದ ಈ ಹತ್ತು ಪಾಶುರಗಳನ್ನು ಚೆನ್ನಾಗಿ ಮರೆಯದಂತೆ ಕಲಿತು, ಎಡೆಬಿಡದೆ ಇವುಗಳನ್ನು ಅನುಸಂಧಾನ ಮಾಡುವ ಭಕ್ತನಿಗೆ ಭಗವದ್ಭಕ್ತಿಯು ದೃಢಪಡುವುದು. ಅದರ ಪರಿಣಾಮವಾಗಿ, ಅವನಿಗೆ ಅವಸಾನಾನಂತರ ಶಾಶ್ವತವಾದ ಪರಮಪದವೇ ~~[illegible]~~ ಪ್ರಾಪ್ತವಾಗುವುದು. ಇಂತಿದೆ ಈ ತಿರುವಾಯ್ಮೊಳಿಯ ಫಲಶ್ರುತಿ!

— — o — —

ತಿರುವಾಯ್ಮೊಳಿ – ಎರಡನೆಯ ದಶಕ – ಎರಡನೆಯ ತಿರುವಾಯ್ಮೊಳಿ.

திருவாய்மொழி – இரண்டாம் பத்து – இரண்டாந் திருவாய்மொழி

2. திண்ணன் வீடு – ತಿಣ್ಣನ್ ವೀಡು

1. திண்ணன் வீடு முதல் முழுதுமாய்,
எண்ணின் மீதியன் எம்பெருமான்,
மண்ணும் விண்ணுமெல்லாம் உடனுண்ட, நம்
கண்ணன் கண்ணல்லது இல்லையோர் கண்ணே

ತಿಣ್ಣನ್ ವೀಡು ಮುದಲ್ ಮುಳುದುಮಾಯ್,
ಎಣ್ಣಿನ್ ಮೀದಿಯನ್ ಎಮ್ಬೆರುಮಾನ್,
ಮಣ್ಣುಮ್ ವಿಣ್ಣುಮೆಲ್ಲಾಮ್ ಉಡನುಣ್ಡ, ನಮ್
ಕಣ್ಣನ್ ಕಣ್ಣಲ್ಲದು ಇಲ್ಲೈಯೋರ್ ಕಣ್ಣೇ.

ತಿಣ್ திண் = ಶಾಶ್ವತವಾದ, ನಲ್ (ನನ್) நல = ಶ್ರೇಷ್ಠವಾದ (ವಿಶುದ್ಧವಾದ), ವೀಡು வீடு = ಬಿಡುಗಡೆಯೂ (ಮೋಕ್ಷವೇ), ಮುದಲ್ முதல் = ಮೊದಲಾದ, ಮುಳುದುಮ್ ಆಯ್ முழுதும் ஆய் = ಎಲ್ಲವೂ ಆದ, ಎಣ್ಣಿನ್ எண்ணின் = ಯೋಚನೆಗೆ (ಚಿಂತನೆಗೆ), ಎಮ್ಬೆರುಮಾನ್ ಎಮ್ ಮೀದಿಯನ್ மீதியன் = ಮೇಲ್ಪಟ್ಟವನೂ, ಮಣ್ಣುಮ್ ವಿಣ್ಣುಮ್ ಎಲ್ಲಾಮ್ பெருமான் = ನಮ್ಮ ಸ್ವಾಮಿಯೂ, எல்லாம் மண்ணும் விண்ணும் = ಭೂಲೋಕವನ್ನು ಮೇಲಣಲೋಕಗಳನ್ನು ಎಲ್ಲವನ್ನು, ಉಡನ್ உடன் = ಒಟ್ಟಿಗೆ, ಉಣ್ಡ உண்ட = ಉಂಡವನೂ, ಆದ, ನಮ್ ಕಣ್ಣನ್ நம் கண்ணன் = ನಮ್ಮ ಕೃಷ್ಣ ಪರಮಾತ್ಮನ, ಕಣ್ ಅಲ್ಲದು கண் அல்லது = ಕೃಪಾಶ್ರಯವಲ್ಲದೆ, ಇಲ್ಲೈ ಓರ್ ಕಣ್ಣೇ இல்லை ஓர் கண்ணே = ಬೇರೊಂದು ಕೃಪಾಶ್ರಯವಿಲ್ಲವೇ ಇಲ್ಲ.

ಶಾಶ್ವತವಾದ ಶ್ರೇಷ್ಠವಾದ (ಉತ್ತಮವಾದ) ಬಿಡುಗಡೆಯೂ ಮೊದಲಾದ ಎಲ್ಲವೂ ಆದ, ಚಿಂತನೆಗೆ ಮೀರಿದವನಾದ, ನಮ್ಮ ಸ್ವಾಮಿಯಾದ, ಭೂಲೋಕವನ್ನು ಮೇಲಣಲೋಕಗಳನ್ನು ಎಲ್ಲವನ್ನು ಒಟ್ಟಿಗೆ ಉಂಡವನಾದ ನಮ್ಮ ಕೃಷ್ಣಪರಮಾತ್ಮನ ಕೃಪಾಶ್ರಯವಲ್ಲದೆ ಬೇರೊಂದು ಕೃಪಾಶ್ರಯವೇ ಇಲ್ಲ.

ಹಿಂದಿನ ತಿರುವಾಯ್ಮೊಳಿಯಲ್ಲಿ ಆಳ್ವಾರರು ಭಗವಂತನ ಕಲ್ಯಾಣಗುಣಗಳನ್ನು ವಿವರಿಸುತ್ತಾ ಅವುಗಳನ್ನೆಲ್ಲಾ ಗಮನಿಸಿದ ಬಳಿಕ-

ಲಾದರೂ ತಮ್ಮ ಮನಸ್ಸು ಆ ಪರಮೇಶ್ವರನ ದಿವ್ಯ ಗುಣಗಳನ್ನು ದೃಢವಾಗಿ ಆಶ್ರಯಿಸ ಬೇಕೆಂದು ಅದಕ್ಕೆ ಕರೆ ಕೊಟ್ಟರಷ್ಟೆ.

ಈ ತಿರುವಾಯ್‌ಮೊಳಿಯ ಮೊದಲ ಪಾಶುರವಾದ ಇದರಲ್ಲಿ ಸಹ ಆ ವಿಷಯವನ್ನೇ ಅವರು ಮುಂದುವರಿಸುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಭಗವಂತನ ಕಲ್ಯಾಣಗುಣಗಳನ್ನು ಅಲ್ಲ ವಿಭೂತಿಗಳನ್ನು ಎಣಿಸಿ, ಲೆಕ್ಕಮಾಡಿ ಹೇಳಲು ಸಾಧ್ಯವಿಲ್ಲ. ಅವುಗಳ ಪರಿಮಿತಿಯನ್ನು ತಿಳಿಸಿ ಗುರುತಿಸಲೂ ಆಗುವುದಿಲ್ಲ. ಸ್ವಾಮಿಯು ಪರಮಕಾರುಣ್ಯನಿಧಿ. ತಾನು ಸೃಷ್ಟಿಸಿದ ಎಲ್ಲಾ ಚೇತನಾಚೇತನಗಳ ರಕ್ಷಣೆಯ ಹೊಣೆಯನ್ನು ಹೊತ್ತಿದ್ದಾನೆ. ಸಾಮಾನ್ಯವಾದ ಸುಖ ಶಾಂತಿ ಸಂತೋಷಗಳನ್ನು ಹಿಡಿದು, ಅತ್ಯುತ್ತಮವೂ ಶಾಶ್ವತವೂ ಶ್ರೇಷ್ಠವೂ ಆದ ಮೋಕ್ಷದ ವರೆಗೆ ಎಲ್ಲವನ್ನೂ ದಯೆ- ನೀಡತಕ್ಕವನು ಅವನೇ. ಜನನ ಮರಣಾದಿ ದುಃಖ ಸಂಕಟಗಳನ್ನು ನಿವಾರಿಸುವವನೂ ಅವನೇ. ಎಲ್ಲ ಲೋಕಗಳ ನಿರ್ವಾಹಕನೂ ಅವನೇ. ಪ್ರಳಯ ಕಾಲ ಬಂದಾಗಲೂ ಸಹ, ಭೂಲೋಕವನ್ನು ಮೊದಲು ಎಲ್ಲಾ ಲೋಕಗಳನ್ನು ಅವನು ಹೊಟ್ಟೆಗೆ ಕಬಳಿಸಿ ಅವುಗಳನ್ನೆಲ್ಲಾ ತನ್ನ ಹೊಟ್ಟೆಯಲ್ಲೇ ಅಡಗಿಸಿಟ್ಟು ಕೊಂಡು, ಮತ್ತೆ ಸೃಷ್ಟಿ ಕಾಲ ಬರುವವರೆಗೂ ಸಂರಕ್ಷಿಸುವವನು. ಸಾಮಾನ್ಯ ಮಾನವನಾಗಿ ಭೂಲೋಕದಲ್ಲಿ ಬಂದು ತನ್ನ ಆಶ್ಚರ್ಯಾದ್ಭುತ ಲೀಲೆಗಳಿಂದ ಲೋಕವನ್ನು ಮುಗ್ಧಗೊಳಿಸಿದ ಮನಮೋಹಕನಾದ ಶ್ರೀಕೃಷ್ಣನೂ ಅವನೇ. ಚೇತನನು ಅವನ ಕೃಪೆಯನ್ನು ಆಶ್ರಯವನ್ನು ತಪ್ಪದೆ ಗಳಿಸಿಕೊಳ್ಳಲೇಬೇಕು. ಅದನ್ನು ಬಿಟ್ಟರೆ ಅಂಥ ಆಶ್ರಯ ಬೇರೊಂದಿಲ್ಲ.

'ಕಣ್ಣನ್ ಕಣ್ಣಲ್ಲದು ಇಲ್ಲೈಯೋರ್ ಕಣ್ಣೇ" —

'ಕಣ್' ಎಂಬುದಕ್ಕೆ 'ಕರುಣೆ ಕೃಪೆ, ದಯೆ, ಅನುಗ್ರಹ, ನೋಟ, ಕಣ್ಣು, ಸ್ಥಳ, ಅವಕಾಶ, ಮುಂಭಾಗ, ಎದುರು, ಆಶ್ರಯ ಎಂದೆಲ್ಲ ಅರ್ಥವಾಗುತ್ತದೆ. ಇವಿಷ್ಟು ಅರ್ಥಗಳನ್ನೂ ಮೊದಲನೆ ವಾಕ್ಯದಲ್ಲಿ ಅನ್ವಯಿಸಿಕೊಂಡು ಆನಂದಿಸಬಹುದಾದ ಸೊಗಸಾದ ವಾಕ್ಯವಿದು. 'ಕಣ್ಣನ' ಎಂದರೆ ಶ್ರೀಕೃಷ್ಣರೂಪಿಯಾದ ಭಗವಂತನು ಈ ಎಲ್ಲ ಗುಣಗಳಿಂದಲೂ ಪರಿಶೋಭಿತನು. ಅವನ ಕಣ್ಣಿಗೆ ಬೀಳುವವನಿಗೆ ಸುಖ, ಶಾಂತಿ, ಸಂತೋಷಗಳಿಗೆ ಕೊರತೆಯಿಲ್ಲ. ಕಣ್ಣನ

Garani Srinivasan

ಕಣ್ಣೇ ಕಣ್ಣು! ನಿಜವಾದ, ಆಶ್ಚರ್ಯಕರ್ಷಕವಾದ, ಕೃಪಾಪೂರ್ಣವಾದ, ಮನೋಹರವಾದ ಕಣ್ಣು! ಮುಕ್ತನನ್ನು ಯಾವ ಬಗೆಯಲ್ಲೂ ಅದ ಕೊಂಡಿಗೆ ಹೋಲಿಸಲು ಆಗದೆ ಇರುವುದರಿಂದ ಅವುಗಳನ್ನು 'ಕಣ್ಣು' ಎನ್ನಲೇ ಬಾರದು. ಕಣ್ಣಿನ ಕಣ್ಣಿನ ಮುದ್ದು ಅಷ್ಟು ಹಿರಿದು!

2. ஏ பாவம்! பரமே! ஏழுலகும்,
ஈ பாவம் செய்து அருளாலளிப்பாரார்?,
மாபாவம் விட ~~[struck]~~ அரற்குப் பிச்சை பெய்,
கோபால கோளரி ஏறன்றியே.

ಏ ಪಾವಮ್! ಪರಮೇ! ಏಳುಲಗುಮ್,
ಈ ಪಾವಮ್ ಶೆಯ್ದು ಅರುಳಾಲಳಿಪ್ಪಾರಾರ್?,
ಮಾ ಪಾವಮ್ ವಿಡ ಅರಱ್ಕುಪ್ಪಿಚ್ಚೈ ಪೆಯ್,
ಕೋಪಾಲ ಕೋಳರಿ ಏಱನ್ಱಿಯೇ.

ಏ ಪಾವಮ್ ஏ பாவம் = ಎಂಥ ~~[struck]~~ ಭಾವನೆ! ಪರಮೇ பரமே = ಎಷ್ಟು ಶ್ರೇಷ್ಠ! ಏಳುಲಗುಮ್ ஏழுலகும் = ಏಳು ಲೋಕಗಳನ್ನು, ಪಾವಮ್ பாவம் = (ಈ ಬಗೆಯ) ಭಾವನೆಗಳನ್ನು, ಈ ಶೆಯ್ದು ஈ செய்து = ಉಂಟುಮಾಡಿ, ಅರುಳಾಲ್ அருளால் = ಕೃಪೆಯಿಂದ, ಅಳಿಪ್ಪಾರ್ ಆರ್ அளிப்பார் ஆர் = ರಕ್ಷಿಸುವವರು ಯಾರು? ಮಾ மா = ಬಲುದೊಡ್ಡ, ಪಾವಮ್ பாவம் = ಪಾಪವು, ವಿಡ விட = ತೊಲಗುವಂತೆ, ಅರಱ್ಕು அரற்கு = ಶಿವನಿಗೆ, ಪಿಚ್ಚೈ ಪೆಯ್ பிச்சை பெய் = ಭಿಕ್ಷೆಯನ್ನಿತ್ತ, ಕೋವಾಲನ್ கோபாலன் = ಗೋಪಾಲಕನಾದ (ಗೋಪಾಲನೆಂಬ), ಕೋಳ್ கோள் = ಬಲಿಷ್ಠ, ಅರಿ ஏறு அரி ஏறு = ಗಂಡು ಸಿಂಹ, ಅನ್ಱಿಯೇ அன்றியே = ಅಲ್ಲದೆಯೇ.

ಎಂಥ ಭಾವನೆ! ಎಷ್ಟು ಶ್ರೇಷ್ಠ! ಈ ಬಗೆಯ ಭಾವನೆಗಳನ್ನುಂಟುಮಾಡಿ, ಕೃಪೆಯಿಂದ ರಕ್ಷಿಸುವವರು ಯಾರು? ಬಲುದೊಡ್ಡ ಪಾಪವು ತೊಲಗುವಂತೆ ಶಿವನಿಗೆ ಭಿಕ್ಷೆಯನ್ನಿತ್ತ ಗೋಪಾಲನೆಂಬ ಬಲಿಷ್ಠ ಗಂಡು ಸಿಂಹವಲ್ಲದೆಯೇ? (2)

ಹಿಂದಿನ ಪಾಶುರದಲ್ಲಿ 'ಕಣ್ಣನಲ್ಲದೆ ಬೇರೊಂದು ಕಣ್ಣೇ ಇಲ್ಲ' ಎಂಬುದನ್ನು ಸ್ಪಷ್ಟಪಡಿಸಲಾಯಿತು. ಈಗ, ಅದು ಹೇಗೆ ಎಂಬುದನ್ನು ನಿದರ್ಶ

Garani Srinivasan

ಪೂರ್ವಕವಾಗಿ ಧ್ಯಾನ ಮಾಡಲಾಗುತ್ತದೆ

ಕೃಪೆ ರಕ್ಷಣೆ - ಈ ಎರಡೂ ಭಗವಂತನ ಅಪಾರವಾದ ಅತಿಶಯ ಕಾರ್ಯಗಳು. ಎಲ್ಲಾ ಲೋಕಗಳೂ ಎಲ್ಲಾ ಕಾಲಗಳಲ್ಲಿಯೂ ಭಗವಂತನ ರಕ್ಷಣೆ ಎಂಬುದರಡಿಯಲ್ಲಿ. ಇದನ್ನು ಮನಸ್ಸಿಗೆ ತಂದುಕೊಳ್ಳುವುದೂ ಹಾಗೆಯೇ ಧ್ಯಾನವಾಗಿ ನಂಬುವುದೂ ನಿಜವಾಗಿಯೂ ಬಹಳ ಉತ್ತಮವಾದ ಕಾರ್ಯವೇ! ಇಂಥ ಉದಾತ್ತ ಭಾವನೆ ಮನದಲ್ಲಿ ಮೂಡಿ ಬರುವುದೂ ಸಹ ಭಗವಂತನ ಕೃಪೆಯಿಂದಲೇ. ಭಗವಂತನ ಕಲ್ಯಾಣಗುಣಗಳನ್ನು ನೆನೆಯುವುದೂ, ಅವುಗಳ ಬಗೆಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದೂ ಭಗವಂತನ ಹಿರಿಮೆಯನ್ನು ಹೊಗಳಿದಂತೆಯೇ.

ಶಿವನಿಗೆ ಒಂದೆ ಬ್ರಹ್ಮಹತ್ಯಾದೋಷ ಬಂದಿತಂತೆ. ನಿಜವಾಗಿಯೂ ಅದು ಬಲು ದೊಡ್ಡ ಪಾಪ! ಶಿವನು ತನ್ನ ಕೈಗೆ ಅಂಟಿಕೊಂಡಿದ್ದ ಬ್ರಹ್ಮಕಪಾಲವನ್ನು ಹಿಡಿದು ಅಲೆದು ಅಲೆದು ಬೇಡಿದ್ದನಂತೆ. ಯಾರೂ ಅದನ್ನು ತುಂಬಲು ಸಮರ್ಥರಾಗಲಿಲ್ಲವಂತೆ. ಕಡೆಗೆ, ಸರ್ವೇಶ್ವರನಾದ, ಸರ್ವರಕ್ಷಕನಾದ ಭಗವಂತನ ಬಳಿಗೆ ಶಿವನು ಭಿಕ್ಷೆ ಯಾಚಿಸಿದನಂತೆ. ಸ್ವಾಮಿಯು ತನ್ನ ಕೈಯಿಂದಲೇ ರಕ್ತವನ್ನು ಅದರೊಳಕ್ಕೆ ಹರಿಸುತ್ತಾ 'ಅಕ್ಷಯಂ' ಎಂದನಂತೆ. ಬ್ರಹ್ಮಕಪಾಲವು ರಕ್ತದಿಂದ ತುಂಬಿದ ಕೂಡಲೇ, ಶಿವನ ಕೈಗೆ ಅಂಟಿದ್ದ ಪೀಡೆ ಕೈಯಿಂದ ಕಳಚಿ ಬಿತ್ತಂತೆ. ಶಿವನಿಗೆ ಅಂಟಿದ್ದ ಬ್ರಹ್ಮಹತ್ಯಾದೋಷವನ್ನು ಭಗವಂತನು ನೀಗಿಸಿದ್ದು ಹೀಗೆ.

ಜಗತ್ತಿನಲ್ಲಿ 'ಗೋಪಾಲ' ಎಂಬ ಹೆಸರಿನಿಂದ ಮೆರೆಯುತ್ತಾ ಗೋವುಗಳ ಪಾಲಕನಾಗಿ, ಮನಮೋಹಕನಾದ ಶ್ರೀಕೃಷ್ಣನಾಗಿ ಬಂದ ಭಗವಂತನು ಪರಮ ಸಮರ್ಥನಾದ ಪುರುಷಸಿಂಹನೇ!

ಆಳ್ವಾರರು ಹೇಳುತ್ತಾರೆ: ಭಗವಂತ ಎಂಥ ಕೃಪಾಸಾಗರ ಎಂಥ ಜಗದ್ರಕ್ಷಕ ಧುರೀಣ! ಈ ಬಗೆಯ ಭಾವನೆಗಳು ಭಕ್ತನ ಮನದಲ್ಲಿ ಮೂಡಿ ಬರುವಂತೆ ಆಗುವುದು ಸ್ವಾಮಿಯ ಅಸದೃಶವಾದ ಕಾರ್ಯಗಳಿಂದಲೇ. ಶಿವನಿಗೆ ಅಂಟಿದ್ದ ಬ್ರಹ್ಮಹತ್ಯಾದೋಷವನ್ನು ನಿವಾರಿಸಿದ್ದು ಅವನ (ಸ್ವಾಮಿಯ) [illegible] ಸಾಮರ್ಥ್ಯವೇ! ಆ ಪುರುಷಸಿಂಹನನ್ನು ಆಶ್ರಯಿಸಿ, ಅವನ ಪೂರ್ಣಕೃಪೆಗೆ ಪಾತ್ರರಾಗಬೇಕು

3. ஏறனைப் பூவனைப் பூமகள் தன்னை,
வேறன்றி விண் தொழத் தன்னுள் வைத்து

Garani Srinivasan

மேல் கண்ணை மீக்கிட நிமிர்ந்து மண்கொண்ட,
மால் கண்ணில் மிக்கமோர் தெய்வமுண்டே.

ಏಱನೈ ಪೂವನೈ ಪೂ ಮಗಳ್ ತನ್ನೈ,
ವೇಱನ್ಱಿ ವಿಣ್ಣೋರ್ ಕಳುಕ್ಕ ತನ್ನುಳ್ ವೈತ್ತು,
ಮೇಲ್ ತನ್ನೈ ಮೀದಿಟ ನಿಮಿರ್ನ್ದು ಮಣ್ಕೊಣ್ಡ,
ಮಾಲ್ ತನಿಲ್ ಮಿಕ್ಕುಮೋರ್ ತೇವುಮುಳದೇ

ಏಱನೈ ஏறனை = ವೃಷಭವುಳ್ಳವನನ್ನು (ವೃಷಭವಾಹನನನ್ನು), ಪೂವನೈ பூவனை = ಹೂವಿನವನನ್ನು (ಹೂವಿನಲ್ಲಿ ಹುಟ್ಟಿದವನನ್ನು), ಪೂಮಗಳ್ ತನ್ನೈ பூமகள் தன்னை = ಹೂವಿನಮಗಳನ್ನು (ಲಕ್ಷ್ಮೀದೇವಿಯನ್ನು), ವೇಱು வேறு = ಬೇರೆ, ಅನ್ಱಿ அன்றி = ಎನ್ನದಂತೆ, ವಿಣ್ಣೋರ್ ಕಳು விண்ணோர்கள் = ಮೇಲಣಲೋಕದವರು ಪೂಜಿಸುವಂತೆ, ತನ್ ಉಳ್ தன் உள் = ತನ್ನಲ್ಲಿಯೇ (ಮತ್ತು), ವೈತ್ತು வைத்து = ಇಟ್ಟುಕೊಂಡವನಾದ, ಮೇಲ್ மேல் = ಮೇಲೆ, ತನ್ನೈ தன்னை = ತನ್ನನ್ನು, ಮೀದಿಟ மீதிட = (ಅವರೆಲ್ಲರ) ಮೇಲಾಡಿಸುವಂತೆ, ನಿಮಿರ್ನ್ದು நிமிர்ந்து = ಬೆಳೆದು (ಎತ್ತರಕ್ಕೆ ಬೆಳೆದು), ಮಣ್ಕೊಣ್ಡ மண்கொண்ட = ಭೂಮಿಯನ್ನಳೆದುಕೊಂಡ, ಮಾಲ್ ತನಿಲ್ மால் தனில் = ಸರ್ವೇಶ್ವರನಿಗೆ, ಮಿಕ್ಕುಮ್ மிக்கும் = ಹೆಚ್ಚಿನ (ಮೇಲ್ಪಟ್ಟ) ಓರ್ ದೇವುಮ್ ಉಳದೇ ஓர் தெய்வம் உளதே = ಬೇರೊಬ್ಬ ದೈವವುಂಟೇ?

ವೃಷಭದವನನ್ನು ಹೂವಿನವನನ್ನು ಹೂವಿನಮಗಳನ್ನು ಬೇರೆ ಎನ್ನದಂತೆ ಮೇಲಣಲೋಕದವರು ಪೂಜಿಸುವಂತೆ ತನ್ನಲ್ಲಿಯೇ ಇಟ್ಟುಕೊಂಡವನಾದ, ಮತ್ತು ತನ್ನನ್ನು ಅವರೆಲ್ಲರ ಮೇಲಾಡಿಸುವಂತೆ ಎತ್ತರಕ್ಕೆ ಬೆಳೆದು ಭೂಮಿಯನ್ನಳೆದುಕೊಂಡವನಾದ ಸರ್ವೇಶ್ವರನಿಗೆ ಮೇಲ್ಪಟ್ಟ ಬೇರೊಬ್ಬ ದೈವವುಂಟೇ? (3)

ವೃಷಭವನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿರುವ ಶಿವನು 'ವೃಷಭದವನು'. ಕಮಲದ ಹೂವಿನಲ್ಲಿ ಹುಟ್ಟಿದ ಚತುರ್ಮುಖ ಬ್ರಹ್ಮನು 'ಹೂವಿನವನು'. ಹಾಗೆಯೇ ಹೂವಿನಲ್ಲಿ ಹುಟ್ಟಿದವಳಾದ ಮಹಾಲಕ್ಷ್ಮಿ 'ಹೂವಿನಮಗಳು'.

ಸರ್ವೇಶ್ವರನಾದ ಭಗವಂತನು ಶಿವನನ್ನು ತನ್ನ ದೇಹದ ಬಲಭಾಗದಲ್ಲಿಟ್ಟುಕೊಂಡಿದ್ದಾನೆ. ತನ್ನ ನಾಭಿಯಿಂದಲೇ ಹೊರಟು ಅರಳಿದ ಕಮಲದ ಹೂವಿನಲ್ಲಿ ಹುಟ್ಟಿ, ಅಲ್ಲಿಯೇ ಅದನ್ನೇ ಆಸನವನ್ನಾಗಿ ಮಾಡಿಕೊಂಡು ವಾಸಿಸುವ ಚತುರ್ಮುಖನನ್ನು ತನ್ನಿಂದ ಬೇರ್ಪಡದಂತೆ ಅಲ್ಲಿಯೇ ಇಟ್ಟುಕೊಂಡಿದ್ದಾನೆ. ಸಮುದ್ರ ಮಥನ ಸಮಯದಲ್ಲಿ ಕಮಲದ ಹೂವಿನಲ್ಲಿ ಹುಟ್ಟಿದ ಮಹಾಲಕ್ಷ್ಮಿ ಭಗವಂತನನ್ನು ವರಿಸಿ ಮದುವೆ-

ಯಾದ ಬಳಿಕ, ತನ್ನನ್ನು ಅಗಲಿ ಹೋಗದಂತೆ, ಸ್ವಾಮಿಯು ತನ್ನ ವಕ್ಷದಲ್ಲಿಯೇ ಅವಳನ್ನಿರಿಸಿಕೊಂಡಿದ್ದಾನೆ.

ಶಿವನೂ, ಬ್ರಹ್ಮನೂ, ಲಕ್ಷ್ಮಿಯೂ ತನ್ನ ಒಂದು ಭಾಗವೇ ಎಂದೂ ಅವರು ಬೇರೆಯಲ್ಲವೆಂದೂ ಅವರನ್ನು ಪೂಜಿಸಿದರೂ ತನ್ನನ್ನೇ ಪೂಜಿಸಿದಂತೆ ಎಂದೂ ತೋರಿಸುವುದಕ್ಕಾಗಿ ಸ್ವಾಮಿಯು ಅವರನ್ನು ತನ್ನಲ್ಲಿಯೇ ಇಡುವ ವ್ಯವಸ್ಥೆ ಮಾಡಿಕೊಂಡಿದ್ದಾನೆ.

ಅಲ್ಲದೆ ತಾನು ಅವರೆಲ್ಲರಿಗಿಂತಲೂ ಮಿಗಿಲಾದವನು ಎಂದು ತೋರಿಸುವ ಸಲುವಾಗಿ ಇನ್ನೂ ಉನ್ನತನಾಗಿ ಬೆಳೆದು, ತ್ರಿವಿಕ್ರಮನೆನಿಸಿ, ಎಲ್ಲ ಲೋಕಗಳನ್ನೂ ತನ್ನ ಎರಡೇ ಹೆಜ್ಜೆಗಳಿಂದ ವ್ಯಾಪಿಸಿ ಅಳೆದುಕೊಂಡಿದ್ದಾನೆ.

ಭಗವಂತನಿಗಿಂತಲೂ ಮೇಲ್ಪಟ್ಟ ದೈವ ಬೇರೆ ಇಲ್ಲವೇ ಇಲ್ಲ. ಅವನೇ ಸರ್ವೇಶ್ವರ.

ಆಳ್ವಾರರು ಹೇಳುತ್ತಾರೆ: ಶಿವ, ಬ್ರಹ್ಮ, ಲಕ್ಷ್ಮಿ, ನಾರಾಯಣ, ಎಂದು ಬೇರೆ ಬೇರೆಯಾಗಿ ಎಣಿಸಿ ಪೂಜಿಸುವ ಆವಶ್ಯಕತೆ ಇಲ್ಲವೆಂ ಬಂತೆಯೂ, ಅವರೆಲ್ಲರ ಪೂಜೆಯೂ ಸರ್ವೇಶ್ವರನಾದ ತನಗೇ ಸಲ್ಲುತ್ತದೆಯೆಂದು ತೋರಿಸಲು ಭಗವಂತನು ಶಿವ, ಬ್ರಹ್ಮ, ಲಕ್ಷ್ಮಿಯರನ್ನು ತನ್ನ ದೇಹದಲ್ಲಿಯೇ ಇರಿಸಿಕೊಂಡಿದ್ದಾನೆ. ಅಲ್ಲದೆ, ಅವರೆಲ್ಲರಿಗಿಂತಲೂ ಉನ್ನತನಾಗಿ ಬೆಳೆದು ತ್ರಿವಿಕ್ರಮನಾಗಿ, ಭೂಮಿಯನ್ನು ತನ್ನ ಒಂದೇ ಹೆಜ್ಜೆಯಿಂದ ಅಳೆದುಕೊಂಡಿದ್ದಾನೆ. ಆ ಸರ್ವೇಶ್ವರನಿಗಿಂತಲೂ ಬೇರೆಯಾದ ದೈವವೂ ಇಲ್ಲ.

4. தேவுமெப்பொருளும் படைக்க,
பூவில் நான்முகனைப் படைத்த,
தேவன் எம்பெருமானுக்கல்லால்,
பூவும் பூசனையும் தகுமே?

ತೇವುಮೆಪ್ಪೊರುಳುಮ್ ಪಡೈಕ್ಕ,
ಪೂವಿಲ್ ನಾನ್ಮುಹನ್ನೈಪ್ಪಡೈತ್ತ,
ತೇವನ್ ಎಮ್ಬೆರುಮಾನುಕ್ಕಲ್ಲಾಲ್
ಪೂವುಮ್ ಪೂಶನೈಯುಮ್ ತಹುಮೇ,

ತೇವುಮ್ தேவும் = ದೇವತೆಗಳನ್ನೂ, ಎಪ್ಪೊರುಳುಮ್ எப்பொருளும் = ಎಲ್ಲಾ ವಸ್ತುಗಳನ್ನೂ, ಪಡೈಕ್ಕ படைக்க = ಸೃಷ್ಟಿಸುವುದಕ್ಕಾಗಿ, ಪೂವಿಲ್ பூவில் = ಕಮಲದ ಹೂವಿನಲ್ಲಿ, ನಾನ್ಮುಹನ್ನೈ நான்முகனை = ನಾಲ್ಕುಮುಖನನ್ನು, ಪಡೈತ್ತ படைத்த = ಸೃಷ್ಟಿಸಿದ, ತೇವನ್ தேவன் = ಪರದೈವವಾದ, ಎಮ್ಬೆರುಮಾ

Garani Srinivasan

ನಮ್ಮ ಅಲ್ಲಾಲ್ எம்பெருமானுக்கு அல்லால் = ಸರ್ವೇಶ್ವರನಿಗೆ ಅಲ್ಲದೆ, ಪೂವುಮ್ பூவும் = ಹೂವೂ, ಪೂಶನೈಯುಮ್ பூசனையும் = ಪೂಜೆಯೂ, ತಗುಮೇ தகுமே = ತರವೇ?

ದೇವತೆಗಳನ್ನೂ ಎಲ್ಲಾ ವಸ್ತುಗಳನ್ನೂ ಸೃಷ್ಟಿಸುವುದಕ್ಕಾಗಿ ಕಮಲದ ಹೂವಿನಲ್ಲಿ ನಾಲ್ಮುಖನನ್ನು ಸೃಷ್ಟಿಸಿದ ಪರದೈವವಾದ ಸರ್ವೇಶ್ವರನಿಗೆ ಅಲ್ಲದೆ ಹೂವೂ ಪೂಜೆಯೂ ತರವೇ? (4)

ಯಾವ ದೈವವನ್ನು ಪೂಜಿಸಬೇಕು? ಯಾರಿಗೆ ಮಣಿಯಬೇಕು? ಯಾರಿಗೆ ಗಂಧ ಪುಷ್ಪಾದಿ ಉಪಚಾರಗಳನ್ನು ಸಲ್ಲಿಸಬೇಕು? ಯಾರನ್ನು ದೃಢವಾಗಿ ಆಶ್ರಯಿಸಿ ಉಜ್ಜೀವನಗೊಳ್ಳಬೇಕು? ಈ ಬಗೆಯ ಪ್ರಶ್ನೆಗಳೆಲ್ಲಕ್ಕೂ ಉತ್ತರವೋ ಎಂಬಂತೆ ಈ ಪಾಶುರದ ವಿಷಯವಿದೆ.

ಆಳ್ವಾರರು ಹೇಳುತ್ತಾರೆ: ಎಲ್ಲಕ್ಕೂ ಆದಿಯೂ ಕಾರಣನೂ ದೇವತೆಗಳಿಗೂ ಆಗಿರುವ ಪರದೈವ ಒಬ್ಬನು ಅವನೇ ಸರ್ವೇಶ್ವರ. ದೇವತೆಗಳಿಂದ ಹಿಡಿದು ಎಲ್ಲಾ ಚೇತನಾಚೇತನ ವಸ್ತುಗಳನ್ನು ಸೃಷ್ಟಿಸಲು ಸಂಕಲ್ಪಿಸಿದ ಕೂಡಲೇ ಅವನು ಚತುರ್ಮುಖ ಬ್ರಹ್ಮನನ್ನು ತನ್ನ ನಾಭಿಕಮಲದಲ್ಲಿ ಸೃಷ್ಟಿಸಿದನು. ಮತ್ತು ಜಗತ್ಸೃಷ್ಟಿಯ ಕಾರ್ಯಕ್ಕೆ ಅವನನ್ನು ನಿಯಮಿಸಿದನು. ಸರ್ವೇಶ್ವರನೂ ಸರ್ವಜ್ಞನೂ ಸರ್ವಶಕ್ತನೂ ಆದ ಆ ದೈವವನ್ನಲ್ಲದೆ ಮತ್ತಾರನ್ನು ಪೂಜಿಸುವುದು? ಅವನೇ ಎಲ್ಲ ಬಗೆಯ ಉಪಚಾರಕ್ಕೂ ತಕ್ಕವನು. ಅವನನ್ನೇ ದೃಢವಾಗಿ ಆಶ್ರಯಿಸಿ ಉಜ್ಜೀವನಗೊಳ್ಳತಕ್ಕದ್ದು

5. தகும் சீர்த் தன் தனிமுதலினுள்ளே,
மிகுந் தேவும் எப்பொருளும் படைக்க,
தகுங் கோலத் தாமரைக் கண்ணனெம்மான்,
மிகுஞ் சோதி மேலறிவார் யவரே.

ತಗುಮ್ ಶೀರ್‌ತ್ತನ್ ತನಿಮುದಲಿನುಳ್ಳೇ,
ಮಿಗುನ್ದೇವುಮ್ ಎಪ್ಪೊರುಳುಮ್ ಪಡೈಕ್ಕ,
ತಗುಙ್ಗೋಲತ್ತಾಮರೈಕ್ಕಣ್ಣನೆಮ್ಮಾನ್,
ಮಿಗುಞ್ಜೋದಿ ಮೇಲರಿವಾರ್ ಯವರೇ.

ತಗುಮ್ தகும் = ಯುಕ್ತವಾದ (ತಕ್ಕದಾದ), ಶೀರ್ சீர் = ಗುಣಗಳನ್ನುಳ್ಳವನೂ, ತನ್ தன் = ತನ್ನ, ತನಿ தனி = ಸಾಟಿಯಿಲ್ಲದ, ಮುದಲಿನುಳ್ಳೇ முதலினுள்ளே = ಮೊಟ್ಟಮೊದಲನ ಸಂಕಲ್ಪದಲ್ಲಿ, ಮಿಗುಮ್ மிகும் = ಇತರ, ದೇವುಮ್ தேவும் = ಬ್ರಹ್ಮಾದಿದೇವತೆಗಳನ್ನೂ, ಎಪ್ಪೊರುಳುಮ್ எப்பொருளும் = ಎಲ್ಲಾ ವಸ್ತು

Garani Srinivasan

ಗಳನ್ನು, ಪುದೈಕ್ಕ படைக்க = ಸೃಷ್ಟಿಸುವುದಕ್ಕಾಗಿ, ತಿರುವುಮ್ திரும் = ಶಕ್ತನಾದ, ಕೋಲವುಮ್ கோலம் = ಸುಂದರವಾದ, ತಾಮರೈಕ್ಕಣ್ಣನ್ தாமரைக்கண்ணன் = ಕೆಂದಾವರೆಯಂತೆ ಕಣ್ಣುಗಳುಳ್ಳವನೂ, ಆದ, ಎಮ್ಮಾನ್ எம்மான் = ನಮ್ಮ ಸ್ವಾಮಿಯುಳ್ಳವನು, ಮಿಗುವುಮ್ மிகும் = ಅತಿಶಯವಾದ, ಶೋದಿ சோதி = ಜ್ಯೋತಿ (ಪ್ರಭೆ)ಯನ್ನುಳ್ಳ), ಮೇಲ್ மேல் = ಶ್ರೇಷ್ಠ (ಮೇಲಾದ) ವಸ್ತುವನ್ನು, ಅರಿವಾರ್ அறிவார் = ಅರಿಯುತಕ್ಕವರು, ಯಾವರ್ யவர் = ಯಾರಿದ್ದಾರೆ? (ಯಾರು?)

ಯುಕ್ತವಾದ (ತಕ್ಕದ್ದಾದ) ಗುಣಗಳನ್ನುಳ್ಳವನೂ ತನ್ನ ಸಾಟಿಯಿಲ್ಲದ ಶ್ರೇಷ್ಠ ಮೊದಲಿನ ಸಂಕಲ್ಪದಲ್ಲಿ, ಉಳಿದ ಎಲ್ಲಾ (ಬ್ರಹ್ಮಾದಿ) ದೇವತೆಗಳನ್ನು, ಎಲ್ಲಾ ವಸ್ತುಗಳನ್ನು ಸೃಷ್ಟಿಸುವುದಕ್ಕಾಗಿ ಶಕ್ತನಾದ ಸೊಬಗಿನ ಕೆಂದಾವರೆಯಂತೆ ಕಣ್ಣುಗಳುಳ್ಳವನಾದ ನಮ್ಮ ಸ್ವಾಮಿಯನ್ನುಳ್ಳವನು, ಅತಿಶಯವಾದ ಪ್ರಭೆಯನ್ನುಳ್ಳ ಮೇಲಾದ ವಸ್ತುವನ್ನು ಅರಿಯುತಕ್ಕವರು ಯಾರು? (5)

ಈ ಪಾಶುರದಲ್ಲಿ ಭಗವಂತನ ಕೆಲವು ವಿಶಿಷ್ಟವಾದ ಪರತ್ವ-ಗುಣಗಳನ್ನು ನಿರೂಪಿಸಲಾಗಿದೆ.

ಭಗವಂತನು ತನ್ನ ಸೃಷ್ಟಿ ಕಾರ್ಯಕ್ಕೆ ಯುಕ್ತವಾದ ಜ್ಞಾನ, ಬಲ, ವೀರ್ಯ, ತೇಜಸ್ ಮೊದಲಾದ ಸಾಟಿಯಿಲ್ಲದ ಗುಣಗಳಿಂದಲೂ, ತನ್ನ ಸಂಕಲ್ಪ ಮಾತ್ರದಿಂದಲೇ ಬ್ರಹ್ಮನೇ ಮೊದಲಾದ ಎಲ್ಲಾ ದೇವತೆಗಳನ್ನು ಮತ್ತು ಇತರ ಎಲ್ಲಾ ಚೇತನಾಚೇತನ ವಸ್ತುಗಳನ್ನು ಸೃಷ್ಟಿಸಿಬಿಡಬಲ್ಲ ಸಾಮರ್ಥ್ಯದಿಂದಲೂ, ಕೆಂದಾವರೆಯಂತೆ ವಿಶಾಲವೂ ಸುಂದರವೂ ಆದ ಕಣ್ಣುಗಳುಳ್ಳವನಾಗಿ, ತನ್ನಂತೆ ಸರ್ವಾತಿಶಯ ಪ್ರಭೆ (ತೇಜಸ್)ಯಿಂದಲೂ, ಅದ್ವಿತೀಯವಾದ ರೀತಿಯಲ್ಲಿ ದಿವ್ಯಸುಂದರನಾಗಿದ್ದಾನೆ. ಗುಣಗಳಲ್ಲೂ, ಸೌಂದರ್ಯದಲ್ಲೂ, ಸಂಕಲ್ಪಶಕ್ತಿಯಲ್ಲೂ, ಸಾಟಿಯಿಲ್ಲದ ಜ್ಞಾನದಲ್ಲೂ ಭಗವಂತನನ್ನು ಮೀರಿಸುವ ಪರವಸ್ತು ಬೇರೊಂದಿಲ್ಲ. ಎಲ್ಲ ವಿಷಯದಲ್ಲೂ ಅವನೇ ಸರ್ವಾಧಿಕನು.

6. யவரும் யாவையும் எல்லாப்பொருளும்,
கவர்வின்றித் தன்னுள் ஒடுங்க நின்ற,
பவர்கொள் ஞான வெள்ளச் சுடர்மூர்த்தி,
அவரெம்மாழியம் பள்ளியாரே

ಯವರುಮ್ ಯಾವೈಯುಮ್ ಎಲ್ಲಾಪ್ಪೊರುಳುಮ್
ಕವರ್ವಿನ್ರಿತ್ತನ್ನುಳೊಡುಙ್ಗ ನಿನ್ರ,
ಪವರ್ಕೊಳ್ ಞಾನ ವೆಳ್ಳಚ್ಚುಡರ್ ಮೂರ್ತ್ತಿ,
ಅವರೆಮ್ಮಾೞಿಯಮ್ ಪಳ್ಳಿಯಾರೇ.

Garani Srinivasan

யாவரும் = ಎಲ್ಲಾ ಚೇತನರನ್ನು, யாவையும் = ಎಲ್ಲಾ ಅಚೇತನಗಳನ್ನು, ಎಲ್ಲಾ ಪ್ರೊರುಳುಮ್ = ಎಲ್ಲಾ ವಸ್ತುಗಳನ್ನು, கவர்வு இல் = ಕವಲುಗಳು ಇಲ್ಲದಂತೆ, தன்னுள் = ತನ್ನಲ್ಲಿಯೇ, ಒಡುಂಗ = ಅಡಕಮಾಡಿಕೊಂಡು, நிலாவிய = ಇರುವ, ಪರಂದ = ವಿಶಾಲವಾಗಿ ಹರಡಿರುವ, ಞಾನ ವೆಳ್ಳ = ಜ್ಞಾನ (ಸಾಗರ) ಪ್ರವಾಹವು, ಶುಡರ್ = ಕಾಂತಿಯಾಗಿ ಬೆಳಗುವ, ಮೂರ್ತ್ತಿ = (ಹೊಂಬಗಿನ) ಮೂರ್ತಿಯುಳ್ಳ, ಅವರ್ = ಆ ದೇವರ್ ಶ್ವರನು, ಎಮ್ ನಾಮ್ = ನಮ್ಮ, ಆಲ್ = ಪ್ರಳಯ ಜಲದಲ್ಲಿ, ಅಮ್ = ಹೊಂದಾಗಿ, (ನಿರಾತಂಕವಾಗಿ), ಪಳ್ಳಿಯಾನೇ = ಮಲಗಿರುವವನೇ.

ಎಲ್ಲಾ ಚೇತನ ಅಚೇತನ ವಸ್ತುಗಳನ್ನು ಕವಲುಗಳಿಲ್ಲದಂತೆ ತನ್ನಲ್ಲಿಯೇ ಅಡಕಮಾಡಿಕೊಂಡು ಇರುವವನೂ ವಿಶಾಲವಾಗಿ ಹರಡಿರುವ ಜ್ಞಾನ ಪ್ರವಾಹದ ಕಾಂತಿಯಿಂದ ಬೆಳಗುವವನೂ, ಹೊಂಬಗಿನ ಮೂರ್ತಿಯುಳ್ಳ ಆ ದೇವರ್ ಶ್ವರನು ಪ್ರಳಯ ಜಲದಲ್ಲಿ ನಿರಾತಂಕವಾಗಿ (ಹೊಂದಾಗಿ) ಮಲಗಿರುವವನೇ. (6)

ಹಿಂದಿನ ಪಾಶುರಗಳಲ್ಲಿ ಭಗವಂತನು ಸೃಷ್ಟಿಗೆ ಮುಂಚಿತವಾಗಿ ಸೃಷ್ಟಿ ಕಾರ್ಯನಿರತನಾಗಿ ಇರುತ್ತಾನೆಂದೂ, ಅವನ ಸಂಕಲ್ಪ ಮಾತ್ರದಿಂದಲೇ ಸೃಷ್ಟಿ ಕಾರ್ಯನಡೆ ಈ ಪಾಶುರದಲ್ಲಿ, ಮಹಾಪ್ರಳಯ ಯುಂಟಾಗಿ, ಎಲ್ಲೆಲ್ಲೂ ಜಲಮಯವೇ ಆಗಿದ್ದಾಗಲೂ ಸಹ ಭಗವಂತನು ಮಾತ್ರ ಆ ಪ್ರಳಯ ಜಲದಲ್ಲಿ ನಿಶ್ಚಿಂತೆಯಿಂದ ನಿರಾತಂಕವಾಗಿ ಪವಡಿಸಿ ಯೋಗ ನಿದ್ದೆಯಲ್ಲಿರುವವನೆಂದೂ ಹೇಳಲಾಗುತ್ತದೆ. ಹೀಗೆ, ಈ ಪಾಶುರವು ಭಗವಂತನ ಅನಾದಿತ್ವವನ್ನು ಅವಿನಾಶತ್ವವನ್ನು ಇದು ಸಾರುತ್ತದೆ. ಸೃಷ್ಟಿಯೇ ಬರಲಿ, ಪ್ರಳಯವೇ ಬರಲಿ, ಭಗವಂತನು ತನ್ನ ಕೆಲಸವನ್ನು ನಿರ್ವಹಿಸುತ್ತಾನೆ. [redacted]. ಪ್ರಳಯ ಸೃಷ್ಟಿಯ ಎಲ್ಲ ವಸ್ತುಗಳನ್ನು ತನ್ನ ಹೊಟ್ಟೆಯಲ್ಲಿ ಅಡಕಮಾಡಿಕೊಂಡು ಬಂದಾಗ ಆ ವಸ್ತುಗಳನ್ನೆಲ್ಲ ತನ್ನ ಹೊಟ್ಟೆಯಲ್ಲಿ ಕಾಪಾಡಿಕೊಂಡಿದ್ದು, ಸೃಷ್ಟಿಕಾಲ ಬಂದಕೂಡಲೇ ಮರುಸೃಷ್ಟಿಯ ಮೂಲಕ ಕಾಪಾಡಿಕೊಂಡಿದ್ದು, ಸೃಷ್ಟಿ ಪ್ರಳಯಗಳ ನಡುವಣ ಕಾಲ ಅವಸ್ಥೆಯಲ್ಲಿ ಹೊರಹಾಕುತ್ತಾನೆ. ಸೃಷ್ಟಿ ಪ್ರಳಯಗಳ ನಡುವಣ ಕಾಲ ಅವನೇ ಎಲ್ಲವನ್ನು ಸಂರಕ್ಷಿಸುತ್ತಾನೆ. ಎಂಥ ದಯಾಳುವಾದ ಕೃಪಾಳು ಭಗವಂತ!

ಆಳ್ವಾರರು ಹೇಳುತ್ತಾರೆ: ಪ್ರಳಯಕಾಲದಲ್ಲಿ ಸರ್ವೇಶ್ವರನಾದ ಭಗವಂತನು ಎಲ್ಲಾ ಚೇತನಾ ಚೇತನ ವಸ್ತುಗಳನ್ನೂ, ಚಿನ್ನಚಿನ್ನ ಭಾಗ ವಿಂಗಡಿಸದಂತೆ, ಎಲ್ಲವನ್ನು ಒಟ್ಟಾಗಿ ಕಬಳಿಸಿ, ತನ್ನ ಹೊಟ್ಟೆಯಲ್ಲಿ ಅಡಕ ಮಾಡಿಕೊಳ್ಳುತ್ತಾನೆ: ಬಳಿಕ, ನಿರಾತಂಕವಾಗಿ, ಹಾಯಾಗಿ, ಆ ಪ್ರಳಯ ಜಲದಲ್ಲಿಯೇ ಕಲ್ಪಾಂತದವರೆಗೂ ಪವಡಿಸಿ ಯೋಗನಿದ್ದೆಯಲ್ಲಿರುತ್ತಾನೆ. ಎಲ್ಲೆಲ್ಲಿಯೂ ಹರಡಿಕೊಂಡಿರುವ ಜ್ಞಾನ ಪ್ರವಾಹದ ಪ್ರಭೆಯು ಅವನನ್ನು ದಿವ್ಯಸುಂದರನನ್ನಾಗಿ ಬೆಳಗಿಸುತ್ತದೆ.

7. பள்ளியாலிலை ஏழுலகும் கொள்ளும்,
வள்ளல் வல் வயிற்றுப் பெருமான்,
உள்ளுளார் அறிவார்? அவன் தன்,
கள்ளமாய மனக்கருத்தே.

ಪಳ್ಳಿಯಾಲಿಲೈ ಏಳುಲಗುಮ್ ಕೊಳ್ಳುಮ್
ವಳ್ಳಲ್ ವಲ್ ವಯಿಱ್ಱುಪ್ಪೆರುಮಾನ್
ಉಳ್ಳುಳಾರಱಿವಾರ್? ಅವನ್ ತನ್
ಕಳ್ಳಮಾಯ ಮನಕ್ಕರುತ್ತೇ

ಪಳ್ಳಿ பள்ளி = ಮಲಗುವ ಸ್ಥಳ, ಆಲ್ ಇಲೈ ஆல் இலை ಆಲದ ಎಲೆ, ಏಳುಲಗುಮ್ ஏழ் உலகும் = ಏಳು ಲೋಕಗಳನ್ನು ಕೊಳ್ಳುಮ್ கொள்ளும் = ಇಟ್ಟುಕೊಳ್ಳುವಂಥ (ನುಂಗಿಕೊಳ್ಳುವಂಥ), ವಳ್ಳಲ್ வள்ளல் = ಉದಾರವಾದ, ವಲ್ வல் = ಬಲಿಷ್ಠವಾದ, ವಯಿಱ್ಱು வயிற்று = ಹೊಟ್ಟೆಯುಳ್ಳ, ಪೆರುಮಾನ್ பெருமான் = ಹಿರಿಮೆಯುಳ್ಳವನು (ಸ್ವಾಮಿಯು), ಉಳ್ಳುಳ್ உள்ளுள் = ಅಂತರಂಗದಲ್ಲಿ, ಆರ್ ಅಱಿವಾರ್ ஆர் அறிவார் = ಯಾರು ಅರಿಯಬಲ್ಲರು? ಅವನ್ ತನ್ அவன் தன் = ಅವನ, ಕಳ್ಳಮ್ கள்ளம் = ಕಪಟದಿಂದಕೂಡಿದ, ಮಾಯಮ್ மாயம் = ಆಶ್ಚರ್ಯಗಳು, ಮನಮ್ மனம் = ಮನಸ್ಸಿನ, ಕರುತ್ತೇ கருத்தே = ವಿಷಯವೇ.

ಮಲಗುವ ಸ್ಥಳ ಆಲದೆಲೆ. ಏಳು ಲೋಕಗಳನ್ನು ನುಂಗಿಕೊಳ್ಳುವಂಥ ಉದಾರವಾದ (ಬಲುದೊಡ್ಡ) ಬಲಿಷ್ಠವಾದ ಹೊಟ್ಟೆ. ಇಂಥ ಹಿರಿಮೆಯುಳ್ಳವನನ್ನು (ಸ್ವಾಮಿಯನ್ನು). ಅಂತರಂಗದಲ್ಲಿ ಯಾರು ಅರಿಯಬಲ್ಲರು? ಅವನ ಕಪಟದಿಂದ ಕೂಡಿದ ಆಶ್ಚರ್ಯಗಳು ಮನಸ್ಸಿನ ವಿಷಯವೇ. (7)

ಭಗವಂತನು ಹೇಗೆ ಜಗನ್ನಿಯಾಮಕನೆಂಬುದನ್ನು, ಜಗನ್ನಿವಾರಕನೆಂಬುದನ್ನು ಅವನ ಔದಾರ್ಯವೆಷ್ಟು ಹಿರಿದು ಎಂಬುದನ್ನು ಹಿಂದಿನ ಪಾಶುರಗಳಲ್ಲಿ ಹೇಳಲಾಯಿತು. ಈಗ ಅವನ 'ಮಾಯೆ'ಯನ್ನು ಕುರಿತು ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನ ಒಂದೊಂದು ಕೆಲಸವೂ ಆಶ್ಚರ್ಯಕಾರಕ. ಅದು ಅಷ್ಟೇ ಕಪಟವೂ ಹೌದು. ಅವನ ರೀತಿಯನ್ನು ಅರಿತುಕೊಳ್ಳುವುದಕ್ಕೆ ಸುಲಭವಾಗಿ ಆಗುವುದಿಲ್ಲ. ಪ್ರಳಯಕಾಲ ಬಂದಾಗ, ಇಡೀ ಬ್ರಹ್ಮಾಂಡವನ್ನೇ ನುಂಗುವಾಗ

ಬಲಿಷ್ಠವೂ ಉದಾರವೂ ಆದ ತನ್ನ ಹೊಟ್ಟೆಯಲ್ಲಿ ಸೇರಿಟ್ಟುಕೊಳ್ಳು
ವವನಿಗೆ ಮಲಗುವ ಸ್ಥಳವಾದರೂ ಎಂಥದ್ದು! ಅದಿಕಡೆಯಿಲ್ಲದೆ
ಎಲ್ಲೆಲ್ಲೂ ತುಂಬಿಕೊಂಡು, ಹೊಯ್ದಾಡುವ ಅಲೆಗಳಿಂದ ಕೂಡಿ, ಸ್ವಲ್ಪ
ವೂ ನಿಲುಕಡೆಯಿಲ್ಲದಂಥ ಅಪಾರವಾದ ಜಲರಾಶಿಯಲ್ಲಿ ಪುಟ್ಟದೊಂದು
ಆಲದೆಲೆಯ ಮೇಲೆಯೇ ಅವನು ಮಲಗುವುದು? ಏನೂ ಅರಿಯದ
ಪುಟ್ಟ ಶಿಶುವಾಗಿ ಅಲ್ಲಿ ಮಲಗಿ ನಾಟಕವಾಗಿ, ನಿರ್ಲಿಪ್ತತೆಯಿಂದ
ಯೋಗನಿದ್ರೆ ಮಾಡುವುದಂತೆ! ಅದ್ಭುತಾಶ್ಚರ್ಯಗಳಿಂದ ತುಂಬಿದ
ಇಂಥ ವಿಷಯಗಳನ್ನು ತಿಳಿದುಕೊಳ್ಳಬೇಕಾದದ್ದು ಮನಸ್ಸಿನ ಮೂಲ
ಕವೇ ಎಂದರಾದರೆ, ಆ ಮನಸ್ಸಿನಿಂದ ಭಗವಂತನ ಮಹಿಮೆಯನ್ನು
ಪೂರ್ಣವಾಗಿ ಅರಿತುಕೊಳ್ಳಬಲ್ಲವರು ಬಹಳ ವಿರಳ. ಇಲ್ಲವೇ ಇಲ್ಲ
ಎನ್ನಬಹುದಲ್ಲವೇ?

8 கருத்தில் தேவும் எல்லாப் பொருளும்,
வருத்தித்த மாயப்பிரானையன்றி, ஆரே
திருத்தித்திண்ணிலை மூவுலகும், தம்முள்
இருத்திக்காக்குமியல்வினரே

ಕರುತ್ತಿಲ್ ತೇವುಮ್ ಎಲ್ಲಾಪ್ಪೊರುಳುಮ್,
ವರುತ್ತಿತ್ತ ಮಾಯಪ್ಪಿರಾನೈಯನ್ರಿ, ಆರೇ
ತಿರುತ್ತಿತ್ತಿಣ್ಣಿಲೈ ಮೂವುಲಗುಮ್, ತಮ್ಮುಳ್
ಇರುತ್ತಿಕ್ಕಾಕ್ಕುಮಿಯಲ್ವಿನರೇ.

ಕರುತ್ತಿಲ್ கருத்தில் = ಸಂಕಲ್ಪಮಾತ್ರದಿಂದಲೇ, ತೇವುಮ್ தேவு
ம் = ದೇವತೆಗಳನ್ನು, ಎಲ್ಲಾಪ್ಪೊರುಳುಮ್ எல்லாப் பொருளும்
= ಎಲ್ಲಾ ವಸ್ತುಗಳನ್ನು, ವರುತ್ತಿತ್ತ வருத்தித்த = ಬರಮಾಡಿದ (ಸೃ
ಷ್ಟಿಸಿದ), ಮಾಯಮ್ மாயம் = ಆಶ್ಚರ್ಯಕಾರಕನಾದ, ಪಿರಾನೈ
ಅನ್ರಿ பிரானை அன்றி = ಸ್ವಾಮಿಯನ್ನಲ್ಲದೆ, ಆರೇ ஆரே = ಬೇರೆ
ಯಾರಿದ್ದಾರೆ, ಮೂವುಲಗುಮ್ மூவுலகும் = ಮೂರು ಲೋಕಗಳನ್ನು,
ತಿರುತ್ತಿ திருத்தி = ಕ್ರಮಗೊಳಿಸಿ, ತಿಣ್ ನಿಲೈ திண்ணிலை =
ಸುಭದ್ರವಾಗಿ ನೆಲೆಗೊಳಿಸಿ, ತಮ್ ಉಳ್ தம் உள் = ತಮ್ಮ ಒಳಗಡೆ
ಯಲ್ಲಿಯೇ, ಇರುತ್ತಿ இருத்தி = ಇರಿಸಿಕೊಂಡು, ಕಾಕ್ಕುಮ್ கா
க்கும் = ರಕ್ಷಿಸತಕ್ಕ, ಇಯಲ್ವಿನರೇ இயல்வினரே = ಸ್ವಭಾವ
ದವರು

ಸಂಕಲ್ಪಮಾತ್ರದಿಂದಲೇ ದೇವತೆಗಳನ್ನು ಎಲ್ಲಾ ವಸ್ತುಗಳನ್ನು

ಬರಮಾಡಿದ (ಸೃಷ್ಟಿಸಿದ) ಅತ್ಯಾಶ್ಚರ್ಯ ಕಾರಕನಾದ ಸ್ವಾಮಿಯನ್ನಲ್ಲದೆ, ಮೂರು ಲೋಕಗಳನ್ನು ಕ್ರಮಗೊಳಿಸಿ, ಸುಭದ್ರವಾಗಿ ನೆಲೆಗೊಳಿಸಿ, ತನ್ನ ಚಿಂತನೆಯಲ್ಲಿಯೇ ಇರಿಸಿಕೊಂಡು, ರಕ್ಷಿಸತಕ್ಕ (8)
ಸ್ವಭಾವವನ್ನುಳ್ಳವರು ಬೇರೆ ಯಾರಿದ್ದಾರೆ?

ಹಿಂದಿನ ಪಾಶುರದಲ್ಲಿ ಹೇಳಿದ ಭಗವಂತನ "ಕಳ್ವಾ, ಮಾಯಮ' ಎಂಬ ವಿಷಯವನ್ನೇ ಇಲ್ಲಿಯೂ ಮುಂದುವರಿಸಲಾಗುತ್ತದೆ

ಆಳ್ವಾರರು ಹೇಳುತ್ತಾರೆ ಸರ್ವೇಶ್ವರನಾದ ಭಗವಂತನು ಅತ್ಯಾಶ್ಚರ್ಯಕಾರಕನೇ ಸರಿ! ಇನ್ನು ಸೃಷ್ಟಿಯಾಗಬೇಕು' ಎಂದು ಮನಸ್ಸಿಗೆ ಬಂದಕೂಡಲೇ, ಈ ಸಂಕಲ್ಪ ಮಾತ್ರದಿಂದಲೇ ಬ್ರಹ್ಮಾದಿ ಎಲ್ಲಾ ದೇವತೆಗಳನ್ನು ಚೇತನ ವಸ್ತುಗಳನ್ನು ಅಚೇತನ ವಸ್ತುಗಳನ್ನು ಆಗಲೇ ಉಂಟುಮಾಡುತ್ತಾನೆ ಅಲ್ಲದೆ, ತನ್ನ ಈ ಸೃಷ್ಟಿಯನ್ನೆಲ್ಲ ಮೂರು ಲೋಕಗಳಾಗಿ ವಿಂಗಡಿಸುತ್ತಾನೆ ಅವುಗಳನ್ನು ಕ್ರಮಗೊಳಿಸಿ, ಹದವಾಗಿ ವ್ಯವಸ್ಥೆಮಾಡುತ್ತಾನೆ. ಎಡೆಬಿಡದೆ ಅವುಗಳ ಚಿಂತನೆಯನ್ನಿಟ್ಟುಕೊಂಡು, ಅವುಗಳನ್ನು ರಕ್ಷಿಸುತ್ತಾನೆ ಇದೆಲ್ಲ ಅವನಿಗೆ ಸಹಜ ಸ್ವಭಾವವಾಗಿಬಿಟ್ಟಿದೆ. ಈ ಬಗೆಯ ಸ್ವಭಾವವನ್ನು ಆಶ್ಚರ್ಯಕಾರಕ ಮಹಿಮೆಯನ್ನುಳ್ಳ ದೈವ ಸರ್ವೇಶ್ವರನೇ. ಅವನನ್ನುಳಿದು ಬೇರೆ ಯಾವ ದೈವಕ್ಕೂ ಈ ಸ್ವಭಾವವಿಲ್ಲ.

ಮೂರು ಲೋಕಗಳು — ಎಂದರೆ, ಸ್ವಾಭಾವಿಕವಾಗಿ ಸ್ವರ್ಗ, ಮರ್ತ್ಯ ಪಾತಾಳ. ಅವುಗಳ ಬದಲಾಗಿ ಭೂಲೋಕ, ಮೇಲಣ ಲೋಕಗಳು, ಪರಮಪದ (ಮಣ್ಣುಲಗು, ವಿಣ್ಣುಲಗು, ಪರಮಪದ) ಎಂದು ಹೇಳಲಾಬಹುದೇನೋ? ಈ ಲೋಕಗಳನ್ನು ಆಳ್ವಾರರು ಯಾನಾನೆನೆದದ್ದೇಕೋ!

9. காக்குமியல்வினன் கண்ணபெருமான்,
சேர்க்கைசெய்து தன்னுந்தியுள்ளே,
வாய்த்ததிசைமுகன் இந்திரன் வானவர்,
ஆக்கினான் தெய்வவுலகுகளே.

ಕಾಕ್ಕುಮಿಯಲ್ವಿನನ್ ಕಣ್ಣ ಪೆರುಮಾನ್,
ಶೇರ್ಕ್ಕೈ ಶೆಯ್ದು ತನ್ನುನ್ದಿಯುಳ್ಳೇ,
ವಾಯ್ತ್ತ ತಿಶೈಮುಗನ್ ಇನ್ದಿರನ್ ವಾನವರ್,
ಆಕ್ಕಿನಾನ್ ತೆಯ್ವುಲಗುಕಳೇ.

ಕಾಕ್ಕುಮ್ காக்கும் = ರಕ್ಷಿಸುವ, ಇಯಲ್ವಿನನ್ இயல்வினன் = ಸ್ವಭಾವದವನಾದ, ಕಣ್ಣ ಪೆರುಮಾನ್ கண்ண பெருமான் = ಶ್ರೀಕೃಷ್ಣ ಪರಮಾತ್ಮನು, ಶೇರ್ಕ್ಕೈ ಶೆಯ್ದು சேர்க்கை செய்து = ಒ

Garani Srinivasan

ಗೂಡಿಸಿ, ತನ್ தன் = ತನ್ನ, ಉನ್ದಿಯುಳ್ಳೇ உந்தி உள்ளே = ತಿರುನಾಭಿಯಲ್ಲಿಯೇ, ವಾಯ್ತ್ತ வாய்த்த = (ಸೃಷ್ಟಿಕಾರ್ಯಕ್ಕೆ) ಯೋಗ್ಯನಾದ, ತಿಶೈಮುಗನ್ திசைமுகன் = ದಿಶಾಮುಖನನ್ನು, ಇನ್ದಿರನ್ இந்திரன் = ಇಂದ್ರನನ್ನು ವಾನವರ್ வானவர் = (ಇತರ) ದೇವತೆಗಳನ್ನು, ಆಕ್ಕಿನಾನ್ ஆக்கினான் = ಉಂಟು ಮಾಡಿದನು, ದೇಯ್ವ ಉಲಗುಗಳೇ தெய்வ உலகுகளே = ದೇವತೆಗಳ ಲೋಕಗಳನ್ನೂ.

ರಕ್ಷಿಸುವ ಸ್ವಭಾವದವನಾದ ಶ್ರೀಕೃಷ್ಣ ಪರಮಾತ್ಮನು ಒಟ್ಟುಗೂಡಿಸಿದ ತರುವಾಯ. ತನ್ನ ತಿರುನಾಭಿಯಲ್ಲಿಯೇ (ಸೃಷ್ಟಿಕಾರ್ಯಕ್ಕೆ) ಯೋಗ್ಯನಾದ ದಿಶಾಮುಖನನ್ನು ಇಂದ್ರನನ್ನು (ಇತರ) ದೇವತೆಗಳನ್ನೂ ದೇವತೆಗಳ (9) ಲೋಕಗಳನ್ನೂ ಉಂಟು ಮಾಡಿದನು.

ಆಳ್ವಾರರು ಹೇಳುತ್ತಾರೆ ರಕ್ಷಣೆಯೇ ಭಗವಂತನ ಸ್ವಭಾವ. ಲಯ ಕಾಲದಲ್ಲೂ ಅದು ನಡೆಯುತ್ತದೆ. ಸೃಷ್ಟಿ ಕಾಲದಲ್ಲೂ ಅದು ನಡೆಯುತ್ತದೆ. ಎಂದರೆ, ಭಗವಂತನ ಮೂರು ಕಾರ್ಯಗಳಾದ ಸೃಷ್ಟಿ, ಸ್ಥಿತಿ, ಲಯ ಗಳಲ್ಲಿ ಒಂದೊಂದರಲ್ಲೂ ಅವನ ರಕ್ಷಣೆಯ ಕಾರ್ಯವಿದ್ದೇ ಇರುತ್ತದೆ. ಆದ್ದರಿಂದ ಭಗವಂತನ ರಕ್ಷಣೆಯ ಕಾರ್ಯ ಎಡೆಬಿಡದಂತೆ ನಡೆಯುತ್ತಿರುತ್ತದೆ. ಶ್ರೀಕೃಷ್ಣನಾಗಿ ಅವತರಿಸಿದ ಆ ಸರ್ವೇಶ್ವರನೇ ಎಲ್ಲವನ್ನೂ ಒಂದುಗೂಡಿಸುವ ಲಯ ಕಾರ್ಯ ಮುಗಿದ ಬಳಿಕ, ಮತ್ತೆ ತಾನೇ ಸೃಷ್ಟಿ ಕಾರ್ಯದಲ್ಲಿ ತೊಡಗುತ್ತಾನೆ. ಮೊದಲು ಆ ಕಾರ್ಯ ನಿರ್ವಹಣೆಗೆ ಯೋಗ್ಯನಾದ ಚತುರ್ಮುಖನನ್ನು (ನಾಲ್ಮುಖ ಬ್ರಹ್ಮನನ್ನು) ತನ್ನ ನಾಭಿಯಲ್ಲೇ ಉಂಟು ಮಾಡುತ್ತಾನೆ. (ಸೃಷ್ಟಿಸುವವನು ತಾನೇ ಎಂಬುದನ್ನು ಇದು ಸೂಚಿಸುತ್ತದೆ). ಬಳಿಕ, ದೇವೇಂದ್ರನನ್ನು ದಿಕ್ಪಾಲಕರನ್ನೂ ಇನ್ನಿತರ ಎಲ್ಲಾ ದೇವತೆಗಳನ್ನೂ, ಅವರವರ ಲೋಕಗಳನ್ನೂ ಸೃಷ್ಟಿಸುತ್ತಾನೆ.

"ಶೇರ್ಕ್ಕೈ ಶೆಯ್ದು" — ಎಂದರೆ, ಮೇಲಣ ಲೋಕದವರಾದ ಬ್ರಹ್ಮಾದಿ ದೇವತೆಗಳನ್ನೂ, ಭೂಲೋಕದವರನ್ನೂ ಪ್ರಾಣಿ, ಪಕ್ಷಿ, ಕೀಟ ಗಳನ್ನೂ, ಇತರ ಎಲ್ಲಾ ಚೇತನ ವಸ್ತುಗಳನ್ನೂ, ಎಲ್ಲಾ ಅಚೇತನ ವಸ್ತು ಗಳನ್ನೂ - ಸೃಷ್ಟಿಯಲ್ಲಿರುವ ವಸ್ತುಗಳೆಲ್ಲವನ್ನೂ - ಮೇಲು ಕೀಳು ಎನ್ನದಂತೆ ಎಲ್ಲವನ್ನೂ ಒಟ್ಟಾಗಿ ಸೇರಿಸುವ ಕಾರ್ಯ - ಲಯ ಕಾರ್ಯವ ಮಾಡಿ, ಎಂದರ್ಥ. ಆಗಲೂ ಭಗವಂತನು ಇಡಿಯ ಸೃಷ್ಟಿಯನ್ನೂ ತ ಹೊಟ್ಟೆಯಲ್ಲಿ ಅಡಗಿಸಿಕೊಂಡು ಎಲ್ಲವನ್ನೂ ರಕ್ಷಿಸುವನಲ್ಲ!

10. கள்வா எம்மையும் ஏழுலகும், நின்
னுள்ளே தோற்றிய இறைவ வென்று,
வெள்ளேறன் நான்முகன் இந்திரன் வானவர்
புள்ளூர்தி கழல் பணிந்தேத்துவரே.

ಕಳ್ವಾ ಎಮ್ಮೈಯುಮ್ ಏಳುಲಗುಮ್, ನಿ
ನ್ನುಳ್ಳೇ ತೋನ್ರಿಯ ಇಱೈವಾ ಎನ್ರು,
ವೆಳ್ಳೇಱನ್ ನಾನ್ಮುಗನ್ ಇನ್ದಿರನ್ ವಾನವರ್,
ಪುಳ್ಳೂರ್ತಿ ಕಳಲ್ ಪಣಿನ್ದೇತ್ತುವರೇ.

ಕಳ್ವಾ கள்வா = ಮಾಯಾವಿಯೇ (ಕಪಟಿಯೇ), ಎಮ್ಮೈಯುಮ್ எம்மையும் = ನಮ್ಮನ್ನು, ಏಳುಲಗುಮ್ ஏழுலகும் = ಏಳು ಲೋಕಗಳನ್ನು, ನಿನ್ நின் = ನಿನ್ನ, ಉಳ್ಳೇ உள்ளே = ಸಂಕಲ್ಪದಿಂದಲೇ, ತೋನ್ರಿಯ தோற்றிய = ಸೃಷ್ಟಿಸಿದ, ಇಱೈವಾ இறைவா = ಒಡೆಯನೇ, ಎನ್ರು என்று = ಎಂದು (ಮುಂತಾಗಿ), ವೆಳ್ಳೇಱನ್ வெள் ஏறன் = ಬಿಳಿಯ ಎತ್ತಿನವನೂ, ನಾನ್ಮುಗನ್ நான்முகன் = ನಾಲ್ಕುಮುಖನೂ, ಇನ್ದಿರನ್ இந்திரன் = ಇಂದ್ರನೂ, ವಾನವರ್ வானவர் = ನಿತ್ಯಸೂರಿಗಳೂ ದೇವತೆಗಳೂ, ಪುಳ್ಳೂರ್ತಿ புள்ளூர்தி = ಗರುಡವಾಹನನ, ಕಳಲ್ கழல் = ತಿರುವಡಿಗಳನ್ನು, ಪಣಿನ್ದು பணிந்து = ಎರಗಿ, ಏತ್ತುವರೇ ஏத்துவரே = ಸ್ತುತಿಸುತ್ತಾರೆ.

ಮಾಯಾವಿಯೇ (ಕಪಟಿಯೇ), ನಮ್ಮನ್ನೂ ಏಳುಲೋಕಗಳನ್ನೂ ನಿನ್ನ ಸಂಕಲ್ಪದಿಂದಲೇ ಸೃಷ್ಟಿಸಿದ ಒಡೆಯನೇ, ಎಂದು ಮುಂತಾಗಿ, ಬಿಳಿಯ ಎತ್ತಿನವನೂ, ನಾಲ್ಕುಮುಖನೂ, ಇಂದ್ರನೂ, ನಿತ್ಯಸೂರಿಗಳೂ ದೇವತೆಗಳೂ ಗರುಡವಾಹನನ ತಿರುವಡಿಗಳಿಗೆ ಎರಗಿ ಸ್ತುತಿಸುತ್ತಾರೆ. (10)

"ಬಿಳಿಯ ಎತ್ತಿನವನು" - ಶಿವ ಪರಮಾತ್ಮ. ಶುದ್ಧವಾದ ಬಿಳಿಯ ಎತ್ತಾದ 'ನಂದಿ'ಯನ್ನು ತನ್ನ ವಾಹನವಾಗಿ ಉಳ್ಳವನು

"ನಾಲ್ಕುಮುಖ" - ಬ್ರಹ್ಮ. ನಾಲ್ಕು ಮುಖಗಳನ್ನು ಹೊಂದಿ, ನಾಲ್ಕು ದಿಕ್ಕುಗಳನ್ನು ನೋಡುತ್ತಾ ನಾಲ್ಕು ವೇದಗಳನ್ನು ~~ ~~ ನಾಲ್ಕು ಮುಖಗಳಿಂದ ಪಠಿಸುತ್ತಾ, ಭಗವಂತನನ್ನು ಸ್ತುತಿಸುತ್ತಾ, ತನ್ನ ಸೃಷ್ಟಿಕಾರ್ಯದಲ್ಲಿ ತೊಡಗಿರುವವನು.

"ವಾನವರ್" - ಬಾನಿನ (ಆಕಾಶದ) ಲೋಕದಲ್ಲಿ ವಾಸಿಸುವವರು - ದೇವತೆಗಳು. ಮತ್ತು ಪರಮಪದದಲ್ಲಿ, ಭಗವಂತನ ಸೇವೆಯಲ್ಲಿ ತೊಡಗಿರುವ ನಿತ್ಯಸೂರಿಗಳು

"ಗರುಡವಾಹನ" - ಸರ್ವೇಶ್ವರನಾದ ಮಹಾವಿಷ್ಣು- ಶ್ರೀಮನ್ನಾರಾಯಣ. ಗರುಡನನ್ನು ವಾಹನವಾಗಿ ಮಾಡಿಕೊಂಡು, ತನ್ನ ಭಕ್ತನ ಸಂ... ವನ್ನು ನಿವಾರಿಸುವುದಕ್ಕಾಗಿ ಅಲ್ಲಿಗೆ ಧಾವಿಸಲು ಸದಾ ಸಿದ್ಧನಾಗಿರುವ ಭಗವಂತ.

ಆಶ್ರಿತರ ಘೋರ ಪಾಪಗಳಿಗೆ ಕ್ರೂರವಾದ ವಿಷವಾಗಿರುವವನನ್ನು, ನಿಶ್ಚಿತವಾದ ಬುದ್ಧಿ (ವಾಸ್ತವವಾದ ಜ್ಞಾನ) ಪ್ರದನನ್ನು, ಭಕ್ತರೊಂದವರ ಮನಸ್ಸಿನಿಂದ ಅಗಲಿಹೋಗದೆ, ಅವರ ಆತ್ಮದಾಣಿಯೇ ಇರುವವನನ್ನು, ಹೊರಗಿ ಬೇರೆ ವಸ್ತು ದೂರದಲ್ಲಿಯೂ (ಅಗಲಿಹೋಗಲು) ಅವಕಾಶಕೊಡದ ದಂಢ ಜ್ಯೋತಿಸ್ವರೂಪನನ್ನು, ಕಾಷ್ಟಿಯ ಮಾನನ್ನು ಕಾಯ್ದವನನ್ನು, ಪಾದಸೇವಕನಾದ ನಾನು ಮೊಟ್ಟ ಮೊದಲಲ್ಲಿಯೇ ಸೇರಿದೆನು. (6)

ಆಳ್ವಾರರು ಹೇಳುತ್ತಾರೆ: ಭಗವಂತನು ತನ್ನನ್ನು ಆಶ್ರಯಿಸಿದ ಭಕ್ತರ ಕಡು ಕ್ರೂರ ಪಾತಕಗಳನ್ನೆಲ್ಲಾ ಹೊಡೆದು ಹಾಕುತ್ತಾನೆ. ಆತ್ಮೋದ್ಧಾರಕ್ಕೆ ಬೇಕಾದ ನಿಶ್ಚಿತವಾದ ಬುದ್ಧಿಯನ್ನು ವಾಸ್ತವವಾದ ಜ್ಞಾನವನ್ನು ದಯಪಾಲಿಸುತ್ತಾನೆ. ಭಕ್ತಿ ಮಾರ್ಗದಲ್ಲಿ ಪಕ್ವಗೊಂಡಿರುವವರ ಮನಸ್ಸಿನಿಂದ ಅಗಲಿಹೋಗುವುದಿಲ್ಲ. ಅವರ ಅಂತರಂಗದಲ್ಲಿಯೇ, ಅವರ ಅಂತರಾತ್ಮನಾಗಿ, ನೆಲಸಿರುತ್ತಾನೆ. ಭಕ್ತನು ತನಗೆ ಒದಗಿ ಬರುವ ಕಷ್ಟಗಳಿಂದಲೂ ಸಂಕಟಗಳಿಂದಲೂ ಬೇಸರಗೊಂಡು ಭಗವಂತನನ್ನು ಮರೆತು ಅವನಿಂದ ದೂರವಾಗಬೇಕೆನ್ನುವ ಸಂದರ್ಭದಲ್ಲಿಯೂ ಸಹ, ಅದಕ್ಕೆ ಅವಕಾಶ ಕೊಡದಂತೆ, ತನ್ನಿಂದ ಅವನು ಬೇರ್ಪಟ್ಟು ಹೋಗದಂತೆ ನೋಡಿಕೊಂಡು, ಕೃಪಾಪೂರ್ಣನಾಗಿ, ಮಾರ್ಗದರ್ಶಕನಾಗಿ, ಅವನನ್ನು ಉದ್ಧರಿಸುತ್ತಾನೆ. ಸನ್ಮಾರ್ಗದಲ್ಲಿ ನಡೆಯುವ ಭಕ್ತರಿಗೆ ತೊಂದರೆ ಕೊಡಲು ಬಂದ ಕೆಟ್ಟ ಜನರನ್ನು ನಿಷ್ಠುರನಾಗಿ, ತಕ್ಕ ರೀತಿಯಲ್ಲಿ ಶಿಕ್ಷಿಸುತ್ತಾನೆ. ಈ ಎಲ್ಲ ಆದರ್ಶ ಗುಣಗಳಿಂದ ಶೋಭಿಸುವ ಸರ್ವೇಶ್ವರನನ್ನು ನಾನು ಮೊಟ್ಟ ಮೊದಲಲ್ಲಿಯೇ ಆಶ್ರಯಿಸಿದೆ. ಅವನು ನನ್ನ ಕೈಬಿಡದಂತೆ ನನ್ನನ್ನು ಉದ್ಧರಿಸುತ್ತಾನೆಂಬ ದೃಢ ವಿಶ್ವಾಸ ನನಗಿದೆ.

7 முன்னல் யாழ் பயில் நூல் நரம்பின் முதிர் சுவையே
பன்னலார் பயிலும் பரனே! பவித்திரனே,
கன்னலே! அமுதே! கார் முகிலே! என் கண்ண(ா)!,
நின்னலால் இலேன் காண் என்னை நீ குறிக்கொள்ளே

ಮುನ್ನಲ್ ಯಾೞ್ ಪಯಿಲ್ ನೂಲ್ ನರಮ್ಬಿನ್ ಮುದಿರ್ ಶುವೈಯೇ!
ಪನ್ನಲಾರ್ ಪಯಿಲುಮ್ ಪರನೇ! ಪವಿತ್ತಿರನೇ,
ಕನ್ನಲೇ! ಅಮುದೇ! ಕಾರ್ ಮುಹಿಲೇ! ಎನ್ ಕಣ್ಣಾ!,
ನಿನ್ನಲಾಲ್ ಇಲೇನ್ ಕಾಣ್ ಎನ್ನೈ ನೀ ಕುಱಿಕ್ಕೊಳ್ಳೇ.

ಮುನ್ முன் = ಮೊದಲಿನಿಂದಲೂ (ಅನಾದಿಕಾಲದಿಂದಲೂ), ನಲ್ நல் = ಶ್ರೇಷ್ಠವಾದ (ಉತ್ತಮವಾದ), ಯಾೞ್ யாழ் = ವೀಣೆಯು, ಪಯಿಲ್ பயில் = ~~ಅಭ್ಯಾಸ~~ ಸಹಕಾರದಿಂದ, ಬಂದ, ನೂಲ್ நூல் = ಶಾಸ್ತ್ರ

ಭೂದೇವಿಯನ್ನು ಹಿರಣ್ಯಾಕ್ಷನು ಕದ್ದೊಯ್ದು ಕಡಲಲ್ಲಿ ಬಚ್ಚಿಟ್ಟು ಕೊಂಡಾ
ಗ, ಭಗವಂತನು ಮಹಾವರಾಹನಾಗಿ ಅವತರಿಸಿ, ಕಡಲಲ್ಲಿ ನುಗ್ಗಿ
ಹಿರಣ್ಯಾಕ್ಷನನ್ನು ಕೊಂದು ಭೂದೇವಿಯನ್ನುದ್ಧರಿಸಿದನು ಇಲ್ಲಿ ಈ
ವಿಷಯವನ್ನು ಸ್ವಲ್ಪ ಉತ್ಪ್ರೇಕ್ಷಿಸಲಾಗಿದೆ. "ಎಲ್ಲಾಲೋಕಗಳನ್ನೂ
ಮಹಾವರಾಹನಾಗಿ ಉದ್ಧರಿಸಿದೆ" ಎಂದು ಹೇಳುವಾಗ ಭಗವಂತನ
ಅದ್ವಿತೀಯ ಸಾಮರ್ಥ್ಯವನ್ನು ಸ್ಮರಿಸುವುದೇ ಆಗಿದೆ.

6. சேர்ந்தார் தீவினைகட்கு அருநஞ்சைத் திண்மதியை,
தீர்ந்தார்தம் மனத்துப் பிரியாது அவருயிரை,
சோர்ந்தே போகல்கொடாச் சுடரை அரக்கியைமூக்
கீர்ந்தாயை, அடியேனடைந்தேன் முதல் முன்னமே.

ಶೇರ್ನ್ದಾರ್ ತೀವಿನೈಕಟ್ಕು ಅರುನಂಜೈತ್ತಿಣ್ ಮದಿಯೈ,
ತೀರ್ನ್ದಾರ್ ತಮ್ಮನತ್ತು ಪ್ಪಿರಿಯಾದವರುಯಿರೈ,
ಶೋರ್ನ್ದೇ ಪೋಗಲ್ ಕೊಡಾಚ್ಚುಡರೈ ಅರಕ್ಕಿಯೈ ಮೂ
ಕ್ಕೀರ್ನ್ದಾಯೈ, ಅಡಿಯೇನಡೈನ್ದೇನ್ ಮುದಲ್ ಮುನ್ನಮೇ.

ಶೇರ್ನ್ದಾರ್ சேர்ந்தார் = ಆಶ್ರಯಿಸಿದವರ, ತೀವಿನೈಕಟ್ಕು தீவி
னைகட்கு = ಘೋರ ಪಾಪಗಳಿಗೆ, ಅರು அரு = ದುರ್ಭರವಾದ (ಶಿಕ್ಷಿಸಾದ), ನಂಜೈ நஞ்சை = ವಿಷವಾಗಿರುವವನನ್ನು, ತಿಣ್ ಮದಿಯೈ திண் மதியை = ನಿಶ್ಚಲವಾದ
(ಶಾಶ್ವತವಾದ) ಬುದ್ಧಿ (ಜ್ಞಾನ) ಉಳ್ಳವನನ್ನು, ತೀರ್ನ್ದಾರ್ தீர்ந்தார் தம் = ಪರಿಯಾದು
ಪಟ್ಟುಗೊಂಡವರ, ಮನತ್ತು மனத்து = ಮನಸ್ಸಿನಿಂದ, ಅವರ್ அவர் = ಅವರ, ಉಯಿರೈ உயி
பிரியாது = ಅಗಲದೆ,
ரை = ಆತ್ಮಸ್ವರೂಪವನ್ನು, ಶೋರ್ನ್ದೇ சோர்ந்தே = ಸೊರಗಿ ಬೀ
ಳಲು, ಪೋಗಲ್ ಕೊಡಾ போகல்கொட = ಅಗಲಿ ಹೋಗಲು
ಅವಕಾಶಕೊಡದಂಥ, ಶುಡರೈ சுடரை = ಜ್ಯೋತಿಸ್ವರೂಪನನ್ನು, ಅರ
ಕ್ಕಿಯೈ அரக்கியை = ರಾಕ್ಷಸಿಯ, ಮೂಕ್ಕು மூக்கு = ಮೂಗನ್ನು,
ಈರ್ನ್ದಾಯೈ ஈர்ந்தாயை = ಕತ್ತರಿಸಿದವನನ್ನು, ಅಡಿಯೇನ್ அடி
யேன் = ಪಾದಸೇವಕನಾದ ನಾನು, ಅಡೈನ್ದೇನ್ அடைந்தேன் = ಹೊ
ಂದಿದೆನು, ಮುದಲ್ ಮುನ್ನಮೇ முதல் முன்னமே = ಮೊದ
ಲಲ್ಲಿಯೇ.

ಗಳನ್ನು ನಾಟಿಯಿಲ್ಲದ ವರಾಹನಾಗಿ ಮೇಣಬಾದ ಕೋಲಗೆದಲ್ಲಿಗಳಿಂದ
ಉದ್ಧರಿಸಿ ಸ್ಥಾಪಿಸಿದವನೇ ನಿನ್ನ ತಿರುವಡಿಗಳನ್ನು ನೋಡಿದ್ದೇನೆ (ಆಶ್ರಯಿ (5)
ಸಿದ್ದೇನೆ).

ಇಂದಿನ ಪಾಶುರದಲ್ಲಿ ಆಳ್ವಾರರು ತಮ್ಮ ಸರ್ವಸ್ವವನ್ನು ಭಗವಂತ
ನಲ್ಲಿ ಸಮರ್ಪಿಸಿದರು. ಹೀಗೆ ಅವರಿಗೆ ಭಗವಂತನ ತಿರುವಡಿಗಳೇ ಎಲ್ಲ
ವಿಷಯದಲ್ಲೂ ಆಶ್ರಯ.

ಆಳ್ವಾರರು ಹೇಳುತ್ತಾರೆ: ಸ್ವಾಮೀ ನೀನು ಎಂಥ ಜ್ಞಾನಿಗೂ ಸುಲಭ
ಸಾಧ್ಯನಲ್ಲ. ಎಂಥ ಜ್ಞಾನವಿಶೇಷಕ್ಕೂ ನೀನು ಎಟುಕದವನು, ಅತ್ಯಂತ
ಮಧುರವಾದ ಪೂರ್ಣಾನಂದಸ್ವರೂಪನೇ ನೀನು. ಕಡಲಲ್ಲಿ ಹುಟ್ಟದಿರುವ
ದಿವ್ಯಾಮೃತವೇ ನೀನು. ಹಿಂದೆ ಮಹಾವರಾಹನಾಗಿ ಅವತರಿಸಿ, ಎಲ್ಲಾ ಲೋ
ಕಗಳನ್ನು ಅದರದರ ಸ್ಥಾನದಲ್ಲಿ ಸ್ಥಾಪಿಸಿದೆ. ಎಲ್ಲ ಬಗೆಯಲ್ಲೂ ಅಸಹಾಯಕ
ನಾದ, ಅಕಿಂಚನನಾದ ನನ್ನ ಬಾಳ್ವೆಗೆ ಕಾರಣನಾಗಿರುವ ನಿನ್ನ ತಿರುವಡಿಗಳ
ನ್ನು ನಾನು ಆಶ್ರಯಿಸಿದ್ದೇನೆ. ನನ್ನನ್ನುದ್ಧರಿಸುವ ಭಾರ ನಿನ್ನದೇ.

"ಕನಿವಾರ್ ವೀಟ್ಟಿನ್ಬಮೇ - கனிவார் வீட்டின்பமே" — ಕಳಿತು
ಮಾಗಿದ ಹಣ್ಣು ರಸದಿಂದ ತುಂಬಿಕೊಂಡು, ಮಧುರವಾಗಿ, ರುಚಿಕರವಾಗಿ, ಆಸ್ವಾ
ದಿಸಲು ಮತ್ತು ಆನಂದಿಸಲು ಅನುಕೂಲವಾಗಿರುತ್ತದೆ. ಹಾಗೆಯೇ, ಬಿಡುಗ
ಡೆ ಅಥವಾ ಮೋಕ್ಷ ಎಂಬುದು ಆನಂದವೆಂಬ ಪೂರ್ಣಫಲದಿಂದ ತುಂಬಿ
ಸಿದ್ಧವಾಗಿರುತ್ತದೆ. ಅದನ್ನು ಅನುಭವಿಸುತ್ತಾ, ಆನಂದಿಸುತ್ತಾ, ಶಾಶ್ವತವಾಗಿ
ಬಾಳ್ವೆಯನ್ನು ನಡೆಸಲು ಅನುಕೂಲವಾಗಿರುತ್ತದೆ.

"ಎನ್ ಕಡಲ್ ಪಡಾ ಅಮುದೇ - என் கடல் படா அமுதே" — ಹಾಲ್
ಗಡಲನ್ನು ಕಡೆದದ್ದರ ಫಲವಾಗಿ ಅಮೃತ ಉದ್ಭವಿಸಿತು. ಅದನ್ನು
ಕುಡಿದ ದೇವತೆಗಳು ಅಮರರಾದರು. ಭಗವಂತನು ಯಾವ ಕಡಲಿನ
ಮಥನದಿಂದಲೂ ಉಂಟಾದವನಲ್ಲ. ಆದರೂ, ಅವನನ್ನಾಶ್ರಯಿಸಿ,
ಎಡೆಬಿಡದೆ, ಅವನ ನಾಮವನ್ನು ಅನುಸಂಧಾನ ಮಾಡುವುದರಿಂದ, ಭಕ್ತ
ನಿಗೆ ತಪ್ಪದೆ ಅಮರತ್ವ ಉಂಟಾಗುವುದು. ಆದ್ದರಿಂದ ಭಗವಂತನು
"ಕಡಲಲ್ಲಿ ಹುಟ್ಟದಂಥ ಅಮೃತ."

ತನಿಯೇನ್ ವಾಳ್ ಮುದಲೇ - தனியேன் வாழ் முதலே — 'ತನಿ' ಎಂದರೆ, 'ಒಂಟಿಗ, ಅಸಹಾಯಕ, ನಿರಾಶ್ರಿತ, ಅಕಿಂ
ಚನ'. "ಯಾರ ಆಶ್ರಯವೂ ಇಲ್ಲದಂಥ, ಒಂಟಿಗನೂ, ಬಡವನೂ
ಆಗಿರುವ ನನ್ನ ಬಾಳ್ವೆಗೆ ಕಾರಣನು ಭಗವಂತನಾದ ನೀನೇ" ಎಂದರ್ಥ
ವಾಗುತ್ತದೆ.

ಪನಮೇನ್ ಞಾಯ್ - ஞானமான்றாய்" — ಇಂದೆ,

ನನಗೇನು ಅಧಿಕಾರ? ನನಗೆ ಯಾವ ಬಗೆಯ ಅರ್ಹತೆಯೂ ಇಲ್ಲ. ಆದ್ದರಿಂದ ನಿನ್ನ ವಸ್ತುವೇ ಆದ 'ನನ್ನನ್ನು', 'ನನ್ನ ಆತ್ಮವನ್ನು' ಉದ್ಧರಿಸತಕ್ಕವನು ನೀನೇ.

ನಾನು, ನನ್ನದು ಎಂಬ ಅಜ್ಞಾನ ಮನದಲ್ಲಿ ತುಂಬಿರುವವರೆಗೆ, ಮನುಷ್ಯನು ಭಗವಂತನಿಂದ ದೂರವಾದಂತೆಯೇ. ನಾನು, ನನ್ನದು ಎಂಬುದು ಇಲ್ಲವೇ ಇಲ್ಲ; ಎಲ್ಲವೂ ನೀನೇ, ನಿನ್ನದೇ" ಎಂಬ ವಿವೇಕ ಉಂಟಾದರೆ, ಭಗವಂತನು ಬಂದು ನೆಲಸಲು ಅವನು ಅರ್ಹನಾಗುತ್ತಾನೆ. ಇದೇ 'ಆತ್ಮನಿವೇದನ' ಅಥವಾ 'ಭರನ್ಯಾಸ'ದ ಸಾರ.

5. இனியார் ஞானங்களால் எடுக்கலெழாத வெந்தாய்,
கனிவார் வீட்டின்பமே! என் கடல் படா அமுதே!,
தனியேன் வாழ் முதலே! பொழிலேழும் ஏனமொன்றாய்,
நுனியார் கோட்டில் வைத்தாய்! உனபாதம் சேர்ந்தேனே.

ಇನಿಯಾರ್ ಞಾನಙ್ಗಳಾಲ್ ಎಡುಕ್ಕಲೆಳಾದ ಎನ್ದಾಯ್,
ಕನಿವಾರ್ ವೀಟ್ಟಿನ್ಬಮೇ! ಎನ್ ಕಡಲ್ ಪಡಾ ಅಮುದೇ!
ತನಿಯೇನ್ ವಾಳ್ ಮುದಲೇ! ಪೊಳಿಲೇಳುಂ ಏನಮೊನ್ರಾಯ್,
ನುನಿಯಾರ್ ಕೋಟ್ಟಿಲ್ ವೈತ್ತಾಯ್! ಉನ ಪಾದಮ್ ಶೇರ್ನ್ದೇನೇ.

ಇನಿ இனி = ಇನ್ನು, ಯಾರ್ யார் = ಯಾರಿಂದಲೂ, ಞಾನಙ್ಗಳಾಲ್ ஞானங்களால் = ಬಗೆ ಬಗೆಯ ಜ್ಞಾನ ವಿಶೇಷದಿಂದಲೂ, ಎಡುಕ್ಕಲ್ எடுக்கல் = ಅರಿವಿಗೆ, ಎಳಾದ எழாத = ಅಸಾಧ್ಯನಾದ (ಎಟುಕದ), ಎನ್ದಾಯ್ எந்தாய் = ನನ್ನ ಸ್ವಾಮಿಯೇ, ಕನಿ கனி = (ಮಾಗಿದ) ಫಲದಂತೆ, ವಾರ್ வார் = ಪೂರ್ಣವಾದ, ವೀಡು வீடு = ಬಿಡುಗಡೆಯೆಂಬ, ಇನ್ಬಮೇ இன்பமே = ಆನಂದಸ್ವರೂಪನೇ, ಎನ್ என் = ನನ್ನ, ಕಡಲ್ ಪಡಾ கடல் படா = ಕಡಲಿನಲ್ಲಿ ಉದ್ಭವಿಸದಂಥ, ಅಮುದೇ அமுதே = ಅಮೃತವೇ, ತನಿಯೇನ್ தனியேன் = ಅಸಹಾಯಕನಾದ ನನ್ನ, ವಾಳ್ வாழ் = ಬಾಳ್ವೆಗೆ, ಮುದಲೇ முதலே = ಕಾರಣನೇ, ಪೊಳಿಲ್ ಏಳುಂ பொழில் ஏழும் = ಏಳು ಲೋಕಗಳನ್ನು, ಏನಮ್ ಒನ್ರಾಯ್ ஏனம் ஒன்று ஆய் = ಸಾಟಿಯಿಲ್ಲದ ವರಾಹನಾಗಿ, ನುನಿಯಾರ್ நுனி ஆர் = ಮೊನೆಯಿಂದ ಕೂಡಿರುವ, ಕೋಟ್ಟಿಲ್ கோட்டில் = ಕೋರೆಹಲ್ಲಿನಿಂದ, ವೈತ್ತಾಯ್ வைத்தாய் = ಉದ್ಧರಿಸಿ ಇಟ್ಟವನೇ, ಉನ உன = ನಿನ್ನ, ಪಾದಮ್ பாதம் = ತಿರುವಡಿಗಳನ್ನು, ಶೇರ್ನ್ದೇನೇ சேர்ந்தேனே = ಸೇರಿದ್ದೇನೆ (ಆಶ್ರಯಿಸಿದ್ದೇನೆ).

ಇನ್ನು ಯಾರಿಂದಲೂ, ಯಾವ ಬಗೆಯ ಜ್ಞಾನ ವಿಶೇಷದಿಂದಲೂ ತಿಳಿಯಲಸಾಧ್ಯನಾದ ನನ್ನ ಸ್ವಾಮಿಯೇ, ಮಾಗಿದ ಫಲದಂತೆ ~~ಪೂರ್ಣವಾದ~~ ಪೂರ್ಣವಾದ ಬಿಡುಗಡೆಯೆಂಬ ಆನಂದಸ್ವರೂಪನೇ, ಕಡಲಲ್ಲಿ ಉದ್ಭವಿಸದಂಥ ನನ್ನ ಅಮೃತವೇ, ಅಸಹಾಯಕನಾದ (ಅಕಿಂಚನನಾದ) ನನ್ನ ಬಾಳ್ವೆಗೆ ಕಾರಣನೇ ಏಳುಲೋಕ-

ಆತ್ಮನ ಆತ್ಮನು ನೀನೇ, ಪೊಳಿಲ್ ಏಳುಮ் பொழில் ஏழும் = ಏಳು ಲೋಕಗಳನ್ನು, ಉಣ್ಡಾ உண்ட = ಉಂಡವನಾದ, ಎಂದಾಯ್ எந்தாய் = ನನ್ನ ಸ್ವಾಮಿಯೇ ಎನದು ಆವಿಯಾರ್ எனதாவி யார் = ನನ್ನ ಆತ್ಮ ಯಾರು? ಯಾನ್ ಆರ್ யான் ஆர் = ನಾನು ಯಾರು?, ತಂದ ನೀ தந்த நீ ಸೃಷ್ಟಿಸಿದ ನೀನು ಕೊಂಡಾಕ್ಕಿನೈಯೇ கொண்டாக்கினையே = ಸ್ವೀಕರಿಸಿಕೊಂಡವನ್ ಅಲ್ಲವೇ?

ನನ್ನ ಆತ್ಮದ ಒಳಗೆ ಸೇರಿಕೊಂಡಿರುವ ಮಹೋಪಕಾರಕ್ಕೆ ಪ್ರತ್ಯುಪಕಾರವಾಗಿ, ನನ್ನ ಆತ್ಮವನ್ನೇ ನಿನಗೆ ಅರ್ಪಣಾ ಮಾಡಿ ಮುಗಿಸುತ್ತೇನೆ. ಇನ್ನು ~~ನನ್ನ~~ ನನ್ನಿಂದ ಹಿಂದಕ್ಕೆ ಪಡೆದು ಕೊಳ್ಳಬೇಕು ಎನ್ನುವುದು ಬೇರೆ ಏನಾದರೂ ಇದೆಯೇ? ನನ್ನ ಆತ್ಮನು ಆತ್ಮನು ನೀನೇ. ಏಳು ಲೋಕಗಳನ್ನುಂಡವನಾದ ನನ್ನ ಸ್ವಾಮಿಯೇ, ನನ್ನ ಆತ್ಮ ಯಾರು? ನಾನು ಯಾರು? ಸೃಷ್ಟಿಸಿದ ನೀನೇ (4)
ಸ್ವೀಕರಿಸಿಕೊಂಡವನಲ್ಲವೇ?

ಈ ಪಾಶುರ ಬಲು ಸುಂದರವಾದದ್ದು 'ಆತ್ಮಸಮರ್ಪಣಾ'ವೆಂಬ ವಿಷಯದಿಂದ ಗಭೀರವಾದದ್ದು. ಭಕ್ತನೆನಿಸಿಕೊಂಡವನ ಮನಸ್ಸನ್ನು ಮಿಡಿಯತಕ್ಕದ್ದು. ಆ ಕೆಲಸವನ್ನು ತಾನೂ ಮಾಡಬೇಕೆಂಬ ಆಸೆಯನ್ನು ಮೂಡಿಸತಕ್ಕದ್ದು.

ಭಗವಂತನು ಪರಮ ಕೃಪಾಸಾಗರನಾಗಿ, ಭಕ್ತನ ತೀವ್ರವಾದ ಆಸೆಯನ್ನು ಅರಿತುಕೊಂಡು, ಅವನ ಅಂತರಂಗದಲ್ಲಿ ಬಂದು ನೆಲಸಿ, ಅವನನ್ನು ಅನುಗ್ರಹಿಸುವುದು ಸ್ವಾಮಿಯ ಬಲು ದೊಡ್ಡ ಉಪಕಾರ. ಭಕ್ತನು ಈ ಮಹೋಪಕಾರಕ್ಕೆ ಪ್ರತಿಯಾಗಿ, ಕೃತಜ್ಞತಾರೂಪವಾಗಿ, ಏನು ಮಾಡಬೇಕು? ಏನು ಮಾಡಲು ಸಾಧ್ಯ?

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನನ್ನ ಆತ್ಮನಲ್ಲಿ ನೀನೇ ಬಂದು ನೆಲಸಿರುವೆ. ನಿನ್ನ ಈ ಉಪಕಾರ ಬಲು ದೊಡ್ಡದು. ಇದಕ್ಕೆ, ನನ್ನ ಕೃತಜ್ಞತೆಗಾಗಿ, ನಾನೇನನ್ನು ಕೊಡಬಲ್ಲೆ? ನನ್ನದು ಎಂದುಕೊಂಡಿರುವ ನನ್ನ ಆತ್ಮವನ್ನೇ ನಿನಗೆ ಸಮರ್ಪಿಸಿ, ನಾನು ಕೃತಾರ್ಥನಾದೆನೆಂದು ಭಾವಿಸುತ್ತೇನೆ. 'ನನ್ನದು' ಎಂಬುದು ಇದೊಂದೇ ನನ್ನಲ್ಲಿದ್ದದ್ದು ಅದನ್ನು ನಿನಗೆ ಸಮರ್ಪಿಸಿದ ಬಳಿಕ ನನ್ನದಾಗಿ ನಿನಗೆ ಕೊಡತಕ್ಕದ್ದಾದದ್ದು ಬೇರೆ ಏನೂ ಉಳಿದಿಲ್ಲ. ನನ್ನ ಆತ್ಮಕ್ಕೇ ಆತ್ಮನಾಗಿರುವವನು ನೀನು. ಇದುವರೆಗೆ 'ನಾನು' 'ನನ್ನ ಆತ್ಮ' ಎಂದು, ಅದು ನನ್ನದೇ ಆಗಿರುವ ಹಾಗೆ, ಅವಿವೇಕದಿಂದ, ಮಾತನಾಡಿದೆ. ಏಳು ಲೋಕಗಳನ್ನು ಉಂಡು, ಎಲ್ಲವನ್ನು ನಿನ್ನ ಹೊಟ್ಟೆಯಲ್ಲಿಟ್ಟುಕೊಂಡು ಸಂರಕ್ಷಿಸಿದವನು ನೀನು. ನನ್ನನ್ನು ನನ್ನ ಆತ್ಮವನ್ನು ಸೃಷ್ಟಿಸಿದವನು ನೀನು. ನೀನೇ ಸೃಷ್ಟಿಸಿದ ನಿನ್ನ ವಸ್ತುಗಳನ್ನೇ ನೀನು ಆಸೆಯಿಂದ ಸ್ವೀಕರಿಸಿದ್ದೀ. ನಾನು, ನನ್ನದು ಎಂಬವು ಇನ್ನೆಲ್ಲಿವೆ? ಎಲ್ಲವೂ ನಿನ್ನ ಸೃಷ್ಟಿಯೇ! ಎಲ್ಲವೂ ನಿನ್ನವೇ! ನಿನ್ನ ವಸ್ತುವಾದ 'ಆತ್ಮ'ವನ್ನು ನಿನಗೆ ಸಮರ್ಪಿಸುವುದಕ್ಕೆ

ಚೆನ್ನಾಗಿ, ತೃಪ್ತಿಕರವಾಗಿ, ಎಡೆಬಿಡದಂತೆ ಭೂಡುವುದಕ್ಕೆ ನನಗೆ ನೀನು ಅವಕಾಶ ಕೊಟ್ಟೆಯಾ? ಅನುಭವವಾಗಲಿ ಅಭ್ಯಾಸವಾಗಲಿ ಇಲ್ಲದ ಸಂಸಾರಬಂಧನದಲ್ಲಿ ನನ್ನನ್ನು ಕಟ್ಟಿ ಕೆಡವಿದೆ. ಅಡಕುಕೊಳ್ಳಲಾಗದ ಈ ಬಲು ದೊಡ್ಡ ಮಾಯೆಯಲ್ಲಿ ಸಂಕಟಪಡುವುದನ್ನು ನನಗೆ ಉಂಟುಮಾಡಿದೆಯಲ್ಲ! ಅಯ್ಯೋ!

ಬಲಿ ಬಂದಿನ ಕಾಲದಲ್ಲಿ, ಯಾರೂ ಅಡಕುಕೊಳ್ಳದದಾಗ ಯಾರಿಗೂ ಅನುಮಾನವುಂಟಾಗದದಾಗ, ನೀನು ಕುಳ್ಳ ಬ್ರಹ್ಮಚಾರಿಯಾಗಿ ರೂಪವನ್ನು ತಳೆದೆ. ಮಹಾಬಲಿಯ ಯಾಗಶಾಲೆಗೆ ಹೋದೆ. ಮಹಾಬಲಿಯ "ನನಗೆ ಮೂರು ಹೆಜ್ಜೆ ನೆಲ" ಎಂದು ಯಾಚಿಸಿದೆ. ಅದನ್ನು ಪಡೆದ ಕೂಡಲೇ ಯಾರಿಂದಲೂ ಅಡಕುಕೊಳ್ಳಲಾಗದಂಥ ತ್ರಿವಿಕ್ರಮನಾಗಿ ಬೆಳೆದು ನಿಂತೆ. ನಿನ್ನ ಒಂದು ಹೆಜ್ಜೆಯಿಂದ ಭೂಮಿಯನೆಲ್ಲಾ ಆವರಿಸಿಬಿಟ್ಟೆ ಇನ್ನೊಂದು ಹೆಜ್ಜೆಯಿಂದ ಮೇಲಣ ಲೋಕಗಳೆಲ್ಲವನ್ನು ಆವರಿಸಿದೆ ಮೂರನೆಯ ಹೆಜ್ಜೆಗೆ ಸ್ಥಳವಿಲ್ಲದಂತೆ ಮಾಡಿ, ಮಹಾಬಲಿಯನ್ನು ನಿನ್ನ ತಿಳಿಯಲಾರದ ಮಾಯೆಯಲ್ಲಿ ಸಿಲುಕಿಸಿ, ನನ್ನ ಹಾಗೆಯೇ ಅವನನ್ನು ~~[illegible]~~. ವಂಚಿಸಿದೆಯಲ್ಲ!

ನಿನ್ನ ಮಾಯೆಯನ್ನು ಯಾರಿಂದ ಅರಿಯಲು ಸಾಧ್ಯ?

4. எனதாவியுள் கலந்த பெருநல்லுதவிக்கைம்மாறு,
எனதாவி தந்தொழிந்தேன் இனிமீள்வதென்பதுண்டே,
எனதாவியாவியும் நீ பொழிலேழும் உண்ட எந்தாய்,
எனதாவியார்? யானார்? தந்த நீ கொண்டாக்கினையே.

ಎನದಾವಿಯುಳ್ ಕಲನ್ದ ಪೆರುನಲ್ಲುದವಿಕ್ಕೈಮ್ಮಾಱು,
ಎನದಾವಿ ತನ್ದೊಳಿನ್ದೇನ್ ಇನಿಮೀಳ್ವದೆನ್ಬದುಣ್ಡೇ,
ಎನದಾವಿಯಾವಿಯುಮ್ ನೀ ಪೊಳಿಲೇಳುಮುಣ್ಡ ಎನ್ದಾಯ್,
ಎನದಾವಿಯಾರ್? ಯಾನಾರ್? ತನ್ದ ನೀ ಕೊಣ್ಡಾಕ್ಕಿನೈಯೇ.

ಎನದು எனது = ನನ್ನ, ಆವಿ ಉಳ್ ಕಲನ್ದ ஆவி உள் கலந்த = ಆತ್ಮದೊಳಗೆ ಸೇರಿಕೊಂಡಿರುವ, ಪೆರು பெரு = ದೊಡ್ಡ, ನಲ್ நல் = ಒಳ್ಳೆಯ, ಉದವಿ உதவி = ಉಪಕಾರಕ್ಕೆ, ಕೈಮ್ಮಾಱು கைம்மாறு = ಪ್ರತಿಯಾಗಿ (ಪ್ರತ್ಯುಪಕಾರವಾಗಿ), ಎನದು எனது = ನನ್ನ, ಆವಿ ஆவி = ಆತ್ಮವನ್ನು, ತನ್ದೊಳಿನ್ದೇನ್ தந்தொழிந்தேன் = ನಿನಗೆ ಅರ್ಪಣಾಮಾಡಿ ಮುಗಿಸಿದ್ದೇನೆ. ಇನಿ இனி = ಇನ್ನು, ಮೀಳ್ವದು மீள்வது = ಹಿಂದಕ್ಕೆ ಪಡೆಯತಕ್ಕದ್ದು, ಎನ್ಬದು என்பது = ಎನ್ನುವುದು, ಉಣ್ಡೇ உண்டே = (ಬೇರೆ ಏನಾದರೂ) ಇದೆಯೇ? ~~ಎನದು ಆವಿ ಯಾರ್ எனது ஆவி யார் = ನನ್ನ ಆತ್ಮ ಯಾರು? ಯಾನ್ ಆರ್ யான் ஆர் = ನಾನು ಯಾರು?~~

ಎನದು ಆವಿ ಆವಿಯುಮ್ ನೀ எனது ஆவி ஆவியும் நீ = ನನ್ನ

ಅಱಿಯಾ ಕಾಲತ್ತುಳ್ಳೇ அறியா காலத்துள்ளே = ತಿಳುವಳಿಕೆಯಿಲ್ಲದ ಕಾಲದಲ್ಲಿಯೇ, ಅಡಿಮೈಕ್ಕಣ್ அடிமை கண் = ಸೇವೆಯಲ್ಲಿ, ಅನ್ಪು ಶೆಯ್ವಿತ್ತು அன்பு செய்வித்து = ಆಸೆಯನ್ನುಂಟುಮಾಡಿ, ಅಱಿಯಾ அறியா = (ಅನುಭವ) ಅಭ್ಯಾಸವಿಲ್ಲದ, ಮಾ ಮಾಯತ್ತು மா மாயத்து = ಬಲುದೊಡ್ಡ ಮಾಯೆಯಲ್ಲಿ, ಅಡಿಯೇನೈ அடியேனை = ಪಾದಸೇವಕನನ್ನು, ವೈತ್ತಾಯ್ வைத்தாய் = ಹಾಕಿದೆ, ಆಲ್ ஆல் = ಅಯ್ಯೋ, ಅಱಿಯಾಮೈ அறியாமை = ಯಾರೂ ಅರಿತುಕೊಳ್ಳದಹಾಗೆ, ಕುಱಳ್ ಆಯ್ குறள் ஆய் = ವಾಮನವಟುವಾಗಿ, ಮಾವಲಿ மாவலி = ಮಹಾಬಲಿಯೇ, ನಿಲಮ್ ಮೂ ಅಡಿ நிலம் மூ அடி = ಮೂರು ಹೆಜ್ಜೆಯ ನೆಲವನ್ನು (ಕೊಡು), ಎನ್ಱು என்று = ಎಂದು ಯಾಚಿಸಿ, ಅಱಿಯಾಮೈ அறியாமை = (ಅವನು) ಅರಿತುಕೊಳ್ಳದಹಾಗೆಯೇ, ವಂಜಿತ್ತಾಯ್ வஞ்சித்தாய் = ವಂಚಿಸಿದೆ, ಎನದು எனது = ನನ್ನ, ಆವಿಯುಳ್ ஆவியுள் = ಆತ್ಮನಲ್ಲಿ, ಕಲನ್ದೇ கலந்தே = ಕೂಡಿಕೊಂಡಿರುವಹಾಗೆಯೇ.

ತಿಳುವಳಿಕೆಯಿಲ್ಲದ ಕಾಲದಲ್ಲಿಯೇ ಸೇವೆಯಲ್ಲಿ ಆಸೆಯನ್ನು ಹುಟ್ಟಿಸಿ, ಅನುಭವ, ಅಭ್ಯಾಸ, ಇಲ್ಲದ ಬಲುದೊಡ್ಡ ಮಾಯೆಯಲ್ಲಿ ಪಾದಸೇವಕನನ್ನು ಹಾಕಿದೆ, ಅಯ್ಯೋ! ಯಾರೂ ಅರಿತುಕೊಳ್ಳದಹಾಗೆ ವಾಮನವಟುವಾಗಿ "ಮಹಾಬಲಿಯೇ, ಮೂರುಹೆಜ್ಜೆ ನೆಲ(ವನ್ನು ಕೊಡು)" ಎಂದು (ಯಾಚಿಸಿ) (ಅವನೂ ಇತರರೂ) ಅರಿತುಕೊಳ್ಳದಹಾಗೆಯೇ, (ಅವನನ್ನು) ವಂಚಿಸಿದೆ, (3)
ನನ್ನ ಆತ್ಮನಲ್ಲಿ ಕೂಡಿಕೊಂಡಿರುವಹಾಗೆಯೇ

"ತಿಳುವಳಿಕೆ ಇಲ್ಲದ ಕಾಲ" – ಚಿಕ್ಕತನ, ಜ್ಞಾನ ಬಲಿಯದ ಕಾಲ,

"ಬಲುದೊಡ್ಡ ಮಾಯೆ — ಭೂಮಿಯ ಮೇಲೆ ಹುಟ್ಟಿ, ಹುಟ್ಟು-ಸಾವುಗಳೆಂಬುದರ, ಸಂಸಾರಬಂಧನದ, ಕೋಟಲೆಯೇ ಈ ಮಾಯೆ. ಅನುಭವವಾಗಲಿ ಅಭ್ಯಾಸವಾಗಲಿ ಇಲ್ಲದ ಇದರಲ್ಲಿ ಸಿಕ್ಕಿಬಿದ್ದು ಗೋಳಲು ಪಡಬೇಕಾಯಿತು!

"ನನ್ನ ಅಂತರಂಗದಲ್ಲಿದ್ದುಕೊಂಡೇ" — ನನ್ನ ಅಂತರಂಗದಲ್ಲಿ, ನನ್ನ ಜೊತೆಯಲ್ಲಿಯೇ ಇದ್ದುಕೊಂಡು, ನನ್ನೊಡನೆ ಅತ್ಯಂತ ಮಧುರವಾಗಿ ಕಲೆತುಕೊಂಡು ಇದ್ದವನೂ, ನನ್ನನ್ನು ಈಗ, ನಾನರಿಯದ ಮಾಯೆಯಲ್ಲಿ ಕೆಡವಿರುವುದು ನಿನ್ನ (ಭಗವಂತನ) ವಂಚನೆಯ ಕೆಲಸ. ಇದಕ್ಕೆ ಇನ್ನೊಂದು ನಿದರ್ಶನ ಬಲಿಯ ವೃತ್ತಾಂತ.

ಆತ್ಮನು ಹೇಳುತ್ತಾನೆ: ಮಾಯನೇ (ವಂಚಕನೇ), ನೀನು ನನ್ನ ಅಂತರಂಗದಲ್ಲಿಯೂ ವಾಸಮಾಡುತ್ತೀ. ನನ್ನೊಡನೆ ಆತ್ಮೀಯವಾಗಿ ಕೂಡಿಕೊಂಡಿದ್ದೀ. ನಿನ್ನ ಪಾದಸೇವೆಯಲ್ಲಿ ತೊಡಗಬೇಕೆಂಬ ಆಸೆಯನ್ನು ನನ್ನಲ್ಲಿ ನನ್ನ ಚಿಕ್ಕಂದಿನಿಂದಲೇ ಉಂಟುಮಾಡಿದ್ದೀ. ಅದನ್ನು

ಉಯಿರ್ ಆಯ್ = ಪ್ರಾಣಾಧಾರನಾಗಿ, ಎನ್ನೈ ಪ್ಪೆಱ್ಱ பெற்ற =
ನನ್ನನ್ನು ಹಡೆದ, ಅ-ತಾಯ್ ಆಯ್ அ-த்தாய் ஆய் = ತಾಯಿಯಿಲ್ಲದ
ತಾಯಿಯೂ ಆಗಿ, ತನ್ದೈ ಆಯ್ தந்தை ஆய் = ತಂದೆಯೂ ಆಗಿ, ಅಱಿಯಾ
ದನ அறியாதன = ಅಜ್ಞಾನಿಗೆ, ಅಱಿವಿತ್ತ அறிவித்த =
ಅರಿವನ್ನಿತ್ತ, ಅತ್ತಾ அத்தா = ಉಪಕಾರಿಯೇ ನೀ நீ = ನೀನು,
ಶೆಯ್ದನ செய்தன = ಮಾಡಿದ ಉಪಕಾರಗಳನ್ನು, ಅಡಿಯೇನ್
அடியேன் = ಪಾದಸೇವಕನಾದ ನಾನು, ಅಱಿಯೇನೇ அறியே
ணே = ಅರಿತುಕೊಳ್ಳಲಾರೆನಲ್ಲ (ಅರಿಯೆನಲ್ಲ!)!

ಸಮನಾದವರನ್ನು ಮಿಗಿಲಾದವರನ್ನು ಇಲ್ಲದವನಾದ ಮಹಾ ಆಶ್ಚರ್ಯಕಾರಕನಾದವನೇ, ಎಲ್ಲಾ ವಸ್ತುಗಳಿಗೂ ಕರ್ತೃವನಾಗಿ ಅವುಗಳಿಗೆಲ್ಲ ಪ್ರಾಣಾಧಾರನಾಗಿರುವವನೇ, ನನ್ನನ್ನು ಹಡೆದ ತಾಯಿಯಿಲ್ಲದ ತಾಯಿಯೂ ತಂದೆಯೂ ಆಗಿರುವವನೇ, ಅಜ್ಞಾನಿಗೆ ಅರಿವನ್ನಿತ್ತ ಉಪಕಾರಿಯೇ, ನಿನ್ನ ಉಪಕಾರಗಳನ್ನು ಪಾದಸೇವಕನಾದ ನಾನು ಅರಿಯೆನಲ್ಲ! (2)

ಹಿಂದಿನ ಪಾಶುರದಲ್ಲಿ ಹೇಳಿದಂತೆ, ಆತ್ಮನು ಪರಮಾತ್ಮನಲ್ಲಿ ಬೇರ್ಪಡಿಸಲಾಗದಂತೆ ಸೇರಿಕೊಂಡೆನೆಂದು ಹೇಳಿಕೊಂಡನಷ್ಟೆ. ಅಷ್ಟು ಮಟ್ಟಿನ ಸೇರಿಕೆಯಿದ್ದಾಗಲೂ ಸಹ, ತಾನು ಪರಮಾತ್ಮನ ಅಧೀನನೆಂಬ ಮೂಲ ವಿಷಯವನ್ನು ಮರೆಯದಂತೆ, ಈ ಪಾಶುರದಲ್ಲಿ ಆತ್ಮನು ಪರಮಾತ್ಮನಲ್ಲಿ ಬಿನ್ನವಿಸಿಕೊಳ್ಳುತ್ತಾನೆ:

ಆತ್ಮನು ಹೇಳುತ್ತಾನೆ: ಸ್ವಾಮೀ, ನಿನಗೆ ಸಮ ಎಂಬುವರೇ ಇಲ್ಲ. ನಿನಗೆ ಮೇಲ್ಪಟ್ಟವರೂ ಇಲ್ಲ. ನೀನೇ ಸರ್ವೇಶ್ವರ. ನೀನು ಅತ್ಯಂತ ವಿಸ್ಮಯಕಾರಕ! ಅದ್ಭುತಾಶ್ಚರ್ಯಕಾರಕ! ಎಲ್ಲ ವಸ್ತುಗಳಿಗೂ ನೀನು ಕರ್ತೃವನು. ಎಲ್ಲ ವಸ್ತುಗಳಿಗೂ ನೀನೇ ಪ್ರಾಣಾಧಾರನು. ನನ್ನನ್ನು ಹಡೆದ ತಾಯಿಯೂ ತಂದೆಯೂ ನೀನೇ. ಅಜ್ಞಾನಿಯಾದ ನನಗೆ ನಿನ್ನನ್ನು ನಿನ್ನ ಮಹಿಮೆಯನ್ನು ತಿಳಿದುಕೊಳ್ಳಬಲ್ಲ ಅರಿವನ್ನಿತ್ತ ಗುರುವೂ ನೀನೇ. ನಿನ್ನ ಉಪಕಾರಗಳಂತು ಲೆಕ್ಕವಿಲ್ಲದಷ್ಟು! ಅವುಗಳನ್ನೆಲ್ಲಾ ನಾನರಿಯೆನಲ್ಲ! ಅರಿತುಕೊಳ್ಳಲಾರೆನಲ್ಲ!

3. அறியாக்காலத்துள்ளே அடிமைக்கண்அன்பு செய்வித்து,
அறியாமாமாயத்தடியேனை வைத்தாயால்,
அறியாமைக்குறளாய் நிலம்மாவலிமூவடியென்று,
அறியாமை வஞ்சித்தாய் எனதாவியுள் கலந்தே

ಅಱಿಯಾಕ್ಕಾಲತ್ತುಳ್ಳೇ ಅಡಿಮೈಕ್ಕಣನ್ಬು ಶೆಯ್ ವಿತ್ತು,
ಅಱಿಯಾ ಮಾ ಮಾಯತ್ತಡಿಯೇನೈ ವೈತ್ತಾಯಾಲ್,
ಅಱಿಯಾ ಮೈಕ್ಕುಱಳಾಯ್ ನಿಲಮ್ಮಾವಲಿ ಮೂವಡಿಯೆನ್ಱು,
ಅಱಿಯಾ ಮೈ ವಂಜಿತ್ತಾಯ್ ಎನದಾವಿಯುಳ್ ಕಲನ್ದೇ.

ಈ ಪಾಶುರದಲ್ಲಿ ಭಗವಂತನನ್ನು 'ಕಳ್ವಾ' ಎಂದು ಆದರದಿಂದ ಕರೆಯಲಾಗಿದೆ. ಹೀಗೆನ್ನುವವರು ನಮ್ಮಂಥ ಸಾಮಾನ್ಯರಲ್ಲ — "ಬಿಳಿಯ ಎತ್ತಿನವನೂ, ನಾಲ್ಮುಖನೂ, ಇಂದ್ರನೂ, ದೇವರೂ" ಭಗವಂತನನ್ನು ಹೀಗೆ ಸಂಬೋಧಿಸಬಹುದೇ? ಒಬ್ಬರಿಗೂ ತಿಳಿಯದಂತೆ, ನಿಶ್ಶಬ್ದವಾಗಿ, ಗುಟ್ಟಾಗಿ, ಕಪಟದ ಅರಿಯಲ್ಲಿ, ಬೇರೆಯವರ ಬೆಲೆಬಾಳುವ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡು, ಪತ್ತೆಯಿಲ್ಲದಂತೆ ಹೊರಟುಹೋಗುವವನನ್ನು "ಕಳ್ವಾ" (=ಕಳ್ಳ) ಎನ್ನಬೇಕು. ಭಗವಂತನು ಅಂಥವನೇ? ಎಂದರೆ, ಭಗವಂತನ ಕೆಲಸಗಳು (ಕಳ್ಳನ) ಹಾಗೆಯೇ ಇವೆಯಂತೆ. ಅವನು ಎಲ್ಲ ಚೇತನ ಅಚೇತನ ವಸ್ತುಗಳ ಅಂತರ್ಯಾಮಿಯಾಗಿರುವುದು ಯಾರಿಗೂ ಕಾಣಿಸದ ಹಾಗೆಯೇ ಅಲ್ಲವೇ? ಅಂತರಂಗದಲ್ಲಿ ಸೇರಿಕೊಂಡು ಸ್ವಾಮಿಯು ಒಬ್ಬೊಬ್ಬನು ಮಾಡುವುದನ್ನು ಸಾಕ್ಷಿಯಾಗಿ ನೋಡುತ್ತಿದ್ದು, ತನ್ನನ್ನವನು ನೆನೆದಾನೇ ಎಂದು ಆತುರದಿಂದ ಕಾದುಕೊಂಡಿದ್ದು, ಅವನ ಸಂಕಲ್ಪದ ಸಮಯದಲ್ಲಿ ಅವನಿಗೆ ನೆರವಾಗಿ, ಅವನ ಅಂತರಂಗವನ್ನು ಸೂರೆಗೊಂಡು, ಅವನನ್ನುದ್ಧರಿಸುವ ಆಶ್ಚರ್ಯಕರನಾಗಿ, ಮಾಯಾವಿಯಾಗಿ, ಕಪಟಿಯಾಗಿ, ಪ್ರೇಮಾದರಗಳಿಗೆ ಪಾತ್ರನಾದ 'ಕಳ್ವ'ನೇ ಸರಿ!

ಆಳ್ವಾರರು ಹೇಳುತ್ತಾರೆ: ಚತುರ್ಮುಖನಾದ ಬ್ರಹ್ಮನೂ ಶಿವನೂ, ದೇವೇಂದ್ರನೂ, ನಿತ್ಯಸೂರಿಗಳೂ, ದೇವತೆಗಳೂ ಸರ್ವೇಶ್ವರನನ್ನು ಹೀಗೆ ಸ್ತುತಿಸುತ್ತಾರೆ: "ಆಶ್ಚರ್ಯಕಾರಕನೇ, ಕಪಟಿಯೇ, ಕಳ್ಳನೇ, ನೀನೇ ನಮ್ಮೊಡೆಯ: ನಿನ್ನ ಸಂಕಲ್ಪಮಾತ್ರದಿಂದಲೇ ನೀನು ಎಲ್ಲ ಲೋಕಗಳನ್ನೂ, ನಮ್ಮನ್ನೂ, ಸೃಷ್ಟಿಸಿ ರಕ್ಷಿಸುವ ಸರ್ವಶಕ್ತನು. ಗರುಡವಾಹನನಾಗಿರುವ ನಿನ್ನ ದಿವ್ಯ ತಿರುವಡಿಗಳಿಗೆ ನಾವು ಎರಗುತ್ತೇವೆ. ನಿನ್ನ ವಿಶಿಷ್ಟ ಕಲ್ಯಾಣ ಗುಣಗಳನ್ನು ಕೊಂಡಾಡಿ ಸ್ತುತಿಸುತ್ತೇವೆ."

11. ஏத்தவேழுலகுங்கொண்ட கோலக்-
கூத்தனை, குருகூர்ச்சடகோபன்சொல்,
வாய்த்த வாயிரத்துள்ளிவை பத்துடன்,
ஏத்தவல்லவர்க்கு இல்லையோரூனமே.

ಏತ್ತವೇೞುಲಗುಙ್ಕೊಣ್ಡ ಕೋಲ
ಕ್ಕೂತ್ತನೈ, ಕುರುಕೂರ್ಚ್ಚಡಗೋಪನ್ ಶೊಲ್,
ವಾಯ್ತ್ತ ವಾಯಿರತ್ತುಳ್ಳಿವೈ ಪತ್ತುಡನ್,
ಏತ್ತವಲ್ಲವರ್ಕ್ಕು ಇಲ್ಲೈಯೋರೂನಮೇ.

ಏತ್ತ ஏத்த = ಸ್ತುತಿಸಲು, ಏೞ್ ಉಲಗುಮ್ ஏழ் உலகும் = ಏಳು ಲೋಕಗಳನ್ನು, ಕೊಣ್ಡ கொண்ட = ಅಳೆದುಕೊಂಡ (ಉದ್ಧರಿಸಿದ), ಕೋಲಮ್ கோலம் = ಸುಂದರವಾದ, ಕೂತ್ತನೈ கூத்தனை = ನಾಟ್ಯನಿಪುಣನನ್ನು, ಕುರುಕೂರ್ குருகூர் = ತಿರುಕ್ಕುರುಗೂರಿನ, ಶಠಕೋಪನ್ சடகோபன் = ಶಠಕೋಪನ, ಶೊಲ್ சொல் = ಮಾತುಗಳಾದ, ವಾಯ್ನ್ದ வாய்ந்த = ಸುಪ್ರಸಿದ್ಧವಾದ, ಆಯಿರತ್ತುಳ್ ஆயிரத்துள் = ಒಂದು ಸಾವಿರದಲ್ಲಿ, ಇವೈ ಪತ್ತುಮ್ இவை பத்தும் = ಈ ಹತ್ತು (ಈ ಹತ್ತರ ಮೂಲಕ), ಏತ್ತ ವಲ್ಲಾರ್ಕ್ಕು ஏத்த வல்லார்க்கு = ಸ್ತುತಿಸಶಕ್ತರಿಗೆ, ಇಲ್ಲೈ ಓರ್ ಊನಮೇ இல்லை ஓர் ஊனமே = ಯಾವೊಂದು ಕೊರತೆಯೂ ಇರುವುದಿಲ್ಲ.

ಸ್ತುತಿಸಲು, ಏಳು ಲೋಕಗಳನ್ನು ಅಳೆದುಕೊಂಡ (ಉದ್ಧರಿಸಿದ) ಸುಂದರವಾದ ನಾಟ್ಯನಿಪುಣನನ್ನು ತಿರುಕ್ಕುರುಗೂರಿನ ಶಠಕೋಪನ ಮಾತುಗಳಾದ ಸುಪ್ರಸಿದ್ಧವಾದ ಒಂದು ಸಾವಿರ ಪಾಶುರಗಳಲ್ಲಿ ಈ ಹತ್ತು ಪಾಶುರಗಳಿಂದ ಸ್ತುತಿಸಶಕ್ತರಿಗೆ ಯಾವೊಂದು ಕೊರತೆಯೂ (ನ್ಯೂನತೆಯೂ) ಇರುವುದಿಲ್ಲ. (11)

ಇದು ಈ ತಿರುವಾಯ್ಮೊಳಿಯ ಕಡೆಯ ಪಾಶುರ. ತಿರುವಾಯ್ಮೊಳಿಯ ಉದ್ದಕ್ಕೂ ಸರ್ವೇಶ್ವರನಾದ ಭಗವಂತನ ಎಡೆಬಿಡದ ರಕ್ಷಕತ್ವವನ್ನು, ಪರಮೌದಾರ್ಯವನ್ನು ಬೇರೆ ಬೇರೆ ರೀತಿಯಲ್ಲಿ ನಿದರ್ಶನಗಳೊಡನೆ ಹೇಳಲಾಗಿದೆ. ಅವನ ತಿರುವಡಿಗಳನ್ನು ಸೇರಿ, ದೃಢವಾಗಿ ಆಶ್ರಯಿಸಿ, ಎಂದು ಹೇಳಲಾಗಿದೆ. ಅವನ ತಿರುವಡಿಗಳನ್ನು ಸೇರಿ, ಭಗವಂತನ ಕೃಪೆಗೆ ಪೂರ್ಣವಾಗಿ ಶರಣಾಗತನಾಗುವುದೇ ಎಂಬುದು ಪ್ರಯೋಜನವೆಂಬುದು ಇದರ ಸಾರಾಂಶ.

ದೇವತೆಗಳೆಲ್ಲರೂ ಒಂದು ಸಲ ಒಬ್ಬೊಬ್ಬರಾಗಿ ಭಗವಂತನಲ್ಲಿ ಮೊರೆಯಿಟ್ಟರಂತೆ. ದಾನವ ಚಕ್ರವರ್ತಿಯಾದ ಮಹಾಬಲಿ ತನ್ನ ಕೊಡುಗೈಯಿಂದಲೂ, ಬಿಡದೆ ನಡೆಸುವ ಯಜ್ಞಯಾಗಾದಿಗಳಿಂದಲೂ ಅಜೇಯನಾಗಿ, ಮೂರು ಲೋಕಗಳ ಒಡೆಯನಾಗಿ ಬಿಡುತ್ತಾನೆಂದೂ, ತಮ್ಮನ್ನೆಲ್ಲಾ ಅವನ ಅಧಿಕಾರದಿಂದ ಪಾರು ಮಾಡಬೇಕೆಂದೂ ದೇವತೆಗಳು ಭಗವಂತನಲ್ಲಿ ಅಂಗಲಾಚಿದರಂತೆ. ಕೃಪಾಳುವಾದ ಭಗವಂತನು ಕೂಡಲೇ ವಾಮನನಾಗಿ ಅವತರಿಸಿದನಂತೆ. ತನ್ನ ಪುಟ್ಟ ಹೆಜ್ಜೆಯಿಂದಲೇ ಬಲಿಯ ಯಾಗಶಾಲೆಯನ್ನು ಪ್ರವೇಶಿಸಿದನಂತೆ. ತನ್ನ ಪುಟ್ಟ ಹೆಜ್ಜೆಯಿಂದ ಬಲಿಯಿಂದ ಮೂರಡಿ ನೆಲವನ್ನು ಬೇಡಿದನಂತೆ. ಬಲಿಯಿಂದ ಅದನ್ನು ದಾನವಾಗಿ ಪಡೆದ ಕೂಡಲೇ ಭಗವಂತನು ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದು ಹೆಜ್ಜೆಯಿಂದಲೇ ಭೂಮಂಡಲವನ್ನೆಲ್ಲಾ ಅಳೆದುಕೊಂಡ

Garani Srinivasan

ನಂತೆ. ಮೇಲಣ ಎಲ್ಲ ಲೋಕಗಳನ್ನು ತನ್ನ ಇನ್ನೊಂದು ಹೆಜ್ಜೆಯಿಂದ ಆವರಿಸಿಬಿಟ್ಟನಂತೆ. ತನ್ನ ಮೂರನೆಯ ಹೆಜ್ಜೆಯನ್ನು ದಾನಕ್ಕೊಳಗಾದ ಬಲಿಯ ತಲೆಯ ಮೇಲೆಯೇ ಇರಿಸಿ, ಅವನನ್ನು ಸಂಪೂರ್ಣವಾಗಿ ಅನುಗ್ರಹಿಸಿದನಂತೆ.

ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ ಮಾಡಿದ ಅದ್ಭುತ ಲೀಲೆಗಳಲ್ಲಿ- ಯಮುನಾನದಿಯಲ್ಲಿ ಕಾಳಿಂಗ ಮಡುವಿನಲ್ಲಿ ವಾಸವಾಗಿದ್ದ ಕಾಳೀಯನೆಂಬ ವಿಷಸರ್ಪವನ್ನು ಕಂಡು, ಅದರ ಹೆಡೆಯ ಮೇಲೇರಿ, ನಾನಾಭಂಗಿಗಳಿಂದ ನರ್ತನ ಮಾಡಿ, ಸರ್ಪವನ್ನು ವಿರಾಮವಗೊಳಿಸಿದ್ದು ಒಂದು ನಿದರ್ಶನ ಮಾತ್ರ. ಆಳ್ವಾರರು ವಿವರಿಸುವಂತೆ, ಅವನು ಕೊಡದ ಕುಣಿತದಲ್ಲಿಯೂ ಸಾಟಿಯಿಲ್ಲದ ನಿಪುಣನು ಎಂಬುದು ಇನ್ನೊಂದು ನಿದರ್ಶನ. ಈ ನಿದರ್ಶನಗಳಿಂದ ಭಗವಂತನು ನಾಟ್ಯಕಲಾ ನಿಪುಣನೆಂಬುದು ವಿಶದವಾಗುತ್ತದೆ.

ಸರ್ವರಕ್ಷಕನೂ, ಕೃಪಾಪೂರ್ಣನೂ, ಪರಮೋದಾರಿಯೂ ಆದ ಭಗವಂತನನ್ನು ಕುರಿತು, ಅವನ ಕಲ್ಯಾಣಗುಣಗಳನ್ನು ಕುರಿತು ತಿರುಕ್ಕುರುಕೂರಿನ ಶಠಗೋಪನು (ನಮ್ಮಾಳ್ವಾರರು) ಒಂದು ಸಾವಿರ ಪಾಶುರಗಳನ್ನು ಬಹು ಸ್ವಾರಸ್ಯವಾಗಿ ರಚಿಸಿ ಹಾಡಿದ್ದಾರೆ. ಅವುಗಳಲ್ಲಿ, ಈ ಹತ್ತು ಪಾಶುರಗಳನ್ನು ಚೆನ್ನಾಗಿ ಕಲಿತು, ಆ ಮಾಲೆ ಭಗವಂತನನ್ನು ತೃಪ್ತಿಪಡಿಸುವವರಿಗೆ ಯಾವ ಬಗೆಯ ತೊಂದರೆಯೂ ಇಲ್ಲದಂತೆ ಪೂರ್ಣ ಸುಖ ಆನಂದಗಳು ಅವರ ಇಹಪರಗಳೆರಡರಲ್ಲೂ ಲಭಿಸುತ್ತವೆ ಎಂಬುದು ಈ ತಿರುವಾಯ್ಮೊಳಿಯ ಫಲಶ್ರುತಿ.

— o —

14 1.80

ತಿರುವಾಯ್ಮೊಳಿ - ಎರಡನೆಯ ದಶಕ - ಮೂರನೆಯ ತಿರುವಾಯ್ಮೊಳಿ

திருவாய்மொழி - இரண்டாம் பத்து - மூன்றாந் திருவாய்மொழி

3. ಊನಿಲ್ ವಾಳುಯಿರೇ - ஊனில் வாழுயிரே

1. ஊனில் வாழுயிரே நல்லைபோ வுன்னைப்பெற்று,
வானுளார் பெருமான் மதுசூதனென்னம்மான்,
தானும் யானுமெல்லாம் தன்னுள்ளே கலந்தொழிந்தோம்,
தேனும் பாலும் நெய்யும் கன்னலும் அமுதுமொத்தே.

ಊನಿಲ್ ವಾಳುಯಿರೇ ನಲ್ಲೈ ಪೋ ವುನ್ನೈ ಪ್ಪೆಱ್ಱು,
ವಾನುಳಾರ್ ಪೆರುಮಾನ್ ಮದುಸೂದನೆನ್ನಮ್ಮಾನ್,
ತಾನುಮ್ ಯಾನುಮೆಲ್ಲಾಮ್ ತನ್ನುಳ್ಳೇ ಕಲನ್ದೊಳಿನ್ದೋಮ್,
ತೇನುಮ್ ಪಾಲುಮ್ ನೆಯ್ಯುಮ್ ಕನ್ನಲುಮಮುದುಮೊತ್ತೇ.

ಊನಿಲ್ ஊனில் = ದೇಹದಲ್ಲಿ, ವಾಳ್ வாழ் = ಬಾಳುವ, ಉಯಿರೇ உயிரே = ಜೀವವೇ, ನಲ್ಲೈ நல்லை = ನೀನು ಒಳ್ಳೆಯದು, ಪೋ போ = ಹೋ(ಬಾ), ಉನ್ನೈ உன்னை = ನಿನ್ನನ್ನು, ಪೆಱ್ಱು பெற்று = ಪಡೆದು, ವಾನುಳಾರ್ வானுளார் = ಪರಮಪದದಲ್ಲಿರುವವರ, (ನಿತ್ಯಸೂರಿಗಳ), ಪೆರುಮಾನ್ பெருமான் = ಸ್ವಾಮಿಯೂ, ಮದುಸೂದನ್ மதுசூதன் = ಮಧುಸೂದನನೂ, ಎನ್ ಅಮ್ಮಾನ್ என் அம்மான் = ನನ್ನ ಒಡೆಯನೂ ಆದ, ತಾನುಮ್ தானும் = ಅವನೂ, ಯಾನುಮ್ யானும் = ನಾನೂ, ಎಲ್ಲಾಮ್ எல்லாம் = ಎಲ್ಲವೂ, ತನ್ನುಳ್ಳೇ தன்னுள்ளே = ಅವನಲ್ಲಿಯೇ, ಕಲನ್ದು கலந்து = ಕಲೆತು, ಒಳಿನ್ದೋಮ್ ஒழிந்தோம் = ಇಲ್ಲವಾಗಿಹೋದೆವು (ಸೇರಿಕೊಂಡುಹೋದೆವು), ತೇನುಮ್ தேனும் = ಜೇನೂ, ಪಾಲುಮ್ பாலும் = ಹಾಲೂ, ನೆಯ್ಯುಮ್ நெய்யும் = ತುಪ್ಪವೂ, ಕನ್ನಲುಮ್ கன்னலும் = ಸಕ್ಕರೆಯೂ, ಅಮುದುಮ್ அமுதும் = ಅಮೃತವೂ, ಒತ್ತೇ ஒத்தே = (ಕಲೆತುಹೋಗುವ) ಹಾಗೆಯೇ.

ದೇಹದಲ್ಲಿ ಬಾಳುವ ಜೀವವೇ, ನೀನು ಒಳ್ಳೆಯದು. ಹೋಗು (ಬಾ). ನಿನ್ನನ್ನು ಪಡೆದು ಪರಮಪದದಲ್ಲಿರುವವರ (ನಿತ್ಯಸೂರಿಗಳ) ಸ್ವಾಮಿಯೂ, ಮಧುಸೂದನನೂ, ನನ್ನ ಒಡೆಯನೂ ಆದ ಅವನೂ ನಾನೂ ಎಲ್ಲವೂ ಅವನಲ್ಲಿಯೇ ಕಲೆತು ಇಲ್ಲವಾಗಿ ಸೇರಿಕೊಂಡುಹೋದೆವು. ಜೇನೂ, ಹಾಲೂ, ತುಪ್ಪವೂ, ಸಕ್ಕರೆಯೂ ಅಮೃತವೂ ಕಲೆತುಕೊಳ್ಳುವ ಹಾಗೆಯೇ. (1)

ಇಲ್ಲಿ ಜೀವ ಅಥವಾ ಪ್ರಾಣವನ್ನು ಕುರಿತು ಹೇಳಲಾಗುತ್ತಿದೆ. ಮೊದಲು ಹುಟ್ಟಿಕೊಂಡ ದೇಹದಲ್ಲಿ ಆತ್ಮನೂ, ಪರಮಾತ್ಮನೂ ಪ್ರಾಣವೂ, ಬಿಡಿಬಿಡಿಯಾಗಿ ಮನೆ ಮಾಡಿಕೊಂಡಿರುವುದು ಸರಿಯಷ್ಟೆ. ಇವುಗಳು ಮಧುರವಾದ ವಸ್ತು ಸಂಪೂರ್ಣವಾದ ಹೊಂದಿಕೆಯೊಡನೆ ಪರಮಾತ್ಮನೊಡನೆ ಆತ್ಮನು ಕಲೆತುಕೊಂಡದ್ದರಿಂದ, ಯಾವ ಬಗೆಯ ಅಂತರವೂ ಆತ್ಮನಿಗೆ ಇಲ್ಲವಾಗಿದೆ.

ಆತ್ಮನು ಹೇಳುತ್ತಾನೆ: ಜೀವವೇ, ನಿನ್ನ ಭಾಗ್ಯ ತುಂಬ ಒಳ್ಳೆಯದು.

Garani Srinivasan

ನಿತ್ಯಸೂರಿಗಳ ಒಡೆಯನಾದ ಮಧುಸೂದನನಾದ, ಮತ್ತು ನನ್ನ ನಿರ್ವಾಹಕನೇ ಆದ ನನ್ನ ಸ್ವಾಮಿ ಪರಮಾತ್ಮನೊಡನೆ ನಾನು ಸಂಪೂರ್ಣವಾಗಿ ಕಲೆತುಹೋಗಿದ್ದೇನೆ. ಪರಮಾತ್ಮನಿಂದ ನನ್ನನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ ಎನ್ನುವಷ್ಟು ನಮ್ಮಿಬ್ಬರ ಸೇರಿಕೆಯಾಗಿ ಹೋಗಿದೆ. ನನಗೆ ಎಲ್ಲ ವಿಧವಾದ ಭ್ರಾಂತಿ ತೊಲಗಿದೆ. ಜೇನು, ಹಾಲು, ತುಪ್ಪ ಸಕ್ಕರೆ, ಅಮೃತ ಇವುಗಳು ಪರಸ್ಪರ ಕೂಡಿಕೊಂಡು, ಹೇಗೆ ಸುರುಚಿಕರವಾದಂತೆ ಆಗಿ, ಬಹಳ ರುಚಿಕರವಾಗಿರುವುದೋ ಹಾಗೆಯೇ ನನ್ನ ಮತ್ತು ಪರಮಾತ್ಮನ ಸೇರಿಕೆ ಬಹಳ ಮಧುರವಾಗಿದೆ. ಆದ್ದರಿಂದ, ಜೀವವೇ, ನಿನಗಿನ್ನು ಚಿಂತೆಯೂ ಬೇಡ, ವ್ಯಥೆಯೂ ಬೇಡ. ನಿಶ್ಚಿಂತೆಯಾಗಿ ನೀನು ದೇಹವನ್ನು ಬಿಟ್ಟು ಹೋಗು.

ಈ ಪಾಶುರ ಕೊಡತಕ್ಕದು. ಜೀವವೇ ಆತ್ಮ, ಅದನ್ನು 'ಜೀವಾತ್ಮ' ಎನ್ನಬಹುದು - ಎಂಬುದು ಒಂದು ಕಡೆ. ದೇಹ, ಇಂದ್ರಿಯ, ಮನಸ್ಸು, ಪ್ರಾಣ - ಇವುಗಳಿಗಿಂತ ಭಿನ್ನವಾದದ್ದು ಆತ್ಮ - ಎಂಬುದು ಇನ್ನೊಂದು ಕಡೆ. ದೇಹವೇ ಆತ್ಮ - ಎಂಬುದು ಮತ್ತೊಂದು ಕಡೆ. ಆತ್ಮ ಎಂದರೆ ಪರಮಾತ್ಮನೇ - ಎಂಬುದು ಮಗದೊಂದು ಕಡೆ. ಇವುಗಳಲ್ಲಿ ವಾಸ್ತವವಾಗಿ ಆಳ್ವಾರರು ಯಾವುದನ್ನು ಕುರಿತು ನಮಗೆ ತಿಳಿಯ ಹೇಳುತ್ತಿದ್ದಾರೆ ಎಂಬುದನ್ನು ಸರಿಯಾಗಿ ಕಂಡುಕೊಂಡವರಿಂದ ಇದರ ವಿವರಣೆಯನ್ನು ಕೇಳಿ ಅರಿಯಬೇಕಾದದ್ದಿದೆ.

"ಉಯಿರ್" ಎಂಬ ಪದಕ್ಕೆ "ಆತ್ಮ, ಜೀವ, ಉಸಿರು, ಗಾಳಿ, ಉಸ್ ಎನ್ನುವುದು, ಪರಿಮಳ, ನಿದ್ದೆ" - ಇವೆಲ್ಲ ಅರ್ಥವಿದೆ.

"ಆತ್ಮ" ಎಂಬುದಕ್ಕೆ "ಪರಮಾತ್ಮ, ಬ್ರಹ್ಮ, ದೇಹ, ಯತ್ನ, ಸ್ವಭಾವ, ಮನಸ್ಸು, ಚಿತ್ತ, ಬುದ್ಧಿ, ಜ್ಞಾನ, ತಾನು, ಸ್ವರೂಪ, ಅಗ್ನಿ, ಸೂರ್ಯ, ವಾಯು, ಮಗ, ಇಂದ್ರಿಯ" - ಎಂದೆಲ್ಲ ಅರ್ಥವಾಗುತ್ತದೆ.

ಆದರೆ, 'ಉಯಿರ್' ಎಂಬುದನ್ನು 'ಮನಸ್ಸು' ಎಂದು ಅರ್ಥಮಾಡಿ, ಸುಂದರವಾಗಿ ವಿವರಣೆಯನ್ನು, ಅರಿತವರೊಬ್ಬರು ಹೇಳಿದ್ದಾರೆ. ಅದನ್ನು ಗಮನಿಸಬಹುದಾಗಿದೆ.

2. ஒத்தார் மிக்காரை இலையாய மாமாயா,
ஒத்தாயெப்பொருட்கு முயிராய், என்னைப்பெற்ற
அத்தாயாய்த்தந்தையாய் அறியாதனவறிவித்த,
அத்தா நீசெய்தன அடியேனறியேனே.

ಒತ್ತಾರ್ ಮಿಕ್ಕಾರೈ ಇಲೈಯಾಯ ಮಾಮಾಯಾ,
ಒತ್ತಾಯೆಪ್ಪೊರುಟ್ಕುಮುಯಿರಾಯ್, ಎನ್ನೈಪ್ಪೆತ್ರ
ಅತ್ತಾಯಾಯ್ತ್ತಂದೈಯಾಯ್ ಅರಿಯಾದನವರಿವಿತ್ತ,
ಅತ್ತಾ ನೀಶೆಯ್ದನ ಅಡಿಯೇನರಿಯೇನೇ.

~~ಒತ್ತಾಯ್ ஒத்தாய்~~ ಒತ್ತಾರ್, ஒத்தார் = ಸರಿಸಮಾನರು. ಮಿಕ್ಕೈ மிக்காரை = ಮಿಗಿಲಾದವರು, (ಮಿಗಿಲಾದವರನ್ನು), ಇಲ್ಲೈ ಆಯ இலை ஆய = ಇಲ್ಲದವನಾದ, ಮಾ ಮಾಯಾ மா மாயா = ಮಹಾ ಆಶ್ಚರ್ಯಕಾರಕನೇ, ಒತ್ತಾಯ್ ஒத்தாய் = ತಕ್ಕವನಾಗಿ, ಎಪ್ಪೊರುಟ್ಕುಮ್ எப்பொருட்கும் = ಎಲ್ಲಾ ವಸ್ತುಗಳಿಗೂ, ಉಯಿರ್ ಆಯ್

(ಆಲೋಚನೆ), ನರಮ್ಬಿನ್ நரம்பின் = ನರಗಳ (ತಂತಿಗಳ), ಮುದಿರ್
முதிர் = ಬಲಿತ (ಪುಷ್ಟವಾದ, ದೃಢವಾದ), ಶುವೈಯೇ சுவையே =
ರುಚಿಯಲ್ಲಿ, ಪಲ್ பல = ಅನೇಕ, ನಲ್ಲೋರ್ நல்லார் = ಒಳ್ಳೆಯವರು
(ಸದ್ಗುಣಿಗಳು) ಪಯಿಲುವರ್ பயின்றும் = ಅನುಭವಿಸುವ, ಪರನೇ
பரனே = ಪರಮ ಪುರುಷನೇ (ಪರಮಪದದನಿಯಾಮಕನೇ), ಪವಿತ್ರ
ನೇ பவித்திரனே = ಪವಿತ್ರನೇ (ಪರಿಶುದ್ಧನೇ), ಕನ್ನಲೇ கன்ன
லே = ಕಬ್ಬಿನ ಹಾಲೇ, ಅಮುದೇ அமுதே = ಅಮೃತವೇ, ಕಾರ್ಮು
ಗಿಲೇ கார்முகிலே = ಕಾರ್ಮುಗಿಲೇ, ಎನ್ ಕಣ್ಣಾ என் கண்
ணா = ನನ್ನ ಕೃಷ್ಣನೇ (ನನ್ನನ್ನು ಕರ್ಷಿಸುವವನೇ), ನಿನ್ ಅಲಾಲ್ நின்
~~ನಿನ್ನನ್ನ~~ அலால் = ನಿನ್ನನ್ನಲ್ಲದೆ, ಇಲೇನ್ ಕಾಣ್ இலேன் கா
ண் = (ಬೇರೆಯಾರನ್ನು) ಪಡೆದಿಲ್ಲ ತಂದೆಯಾ, ಎನ್ನೈ என்னை = ನನ್ನ
ನ್ನು, ನೀ நீ = ನೀನು, ಕುಱಿಕ್ಕೊಳ್ಳೇ குறிக்கொள் கண்டாய் =
ಗುರುತಿಡು (ಕೃಪೆದೋರು).

ಅನಾದಿಕಾಲದಿಂದಲೂ ಶ್ರೇಷ್ಠವಾದ ವೀಣೆಯ ಝಂಕಾರದಿಂದ ಬಂದ ಶ್ರುತಿ ಮತ್ತು ತಂತಿಗಳ (ನರಗಳ) ಪರಿಪಕ್ವವಾದ ರುಚಿಯೇ (ಮಾಧುರ್ಯವೇ), ಅನೇಕ ಸದ್ಗುಣಿಗಳು ಅನುಭವಿಸುವ ಪರಮಪದನಿರ್ವಾಹಕನೇ, ಪವಿತ್ರನೇ (ಪರಿಶುದ್ಧನೇ), ಕಬ್ಬಿನ ಹಾಲೇ, ಅಮೃತವೇ, ಕಾರ್ಮುಗಿಲೇ, ನನ್ನನ್ನು ಕರ್ಷಿಸುವವನೇ, ನಿನ್ನನ್ನಲ್ಲದೆ ಬೇರೆಯಾರನ್ನು ಪಡೆದಿಲ್ಲ ತಂದೆಯಾ! ನನ್ನನ್ನು ನೀನು ಗುರುತಿಟ್ಟು (7)
ಕೋ (ಕೃಪೆದೋರು).

ಅನಾದಿಕಾಲದಲ್ಲಿ ವೀಣೆಯ ತಂತಿಗಳ ಮಿಡಿತದಿಂದ ಬಂದದ್ದು ಓಂಕಾರ. ವೀಣಾನಾದದ ಝೇಂಕಾರದಿಂದ ಆಕರ್ಷಕವಾಗಿ ಹೃದಯಂಗಮವಾಗಿ ಹೊಮ್ಮಿದ್ದು ವೇದಗಳು. ಇವೆರಡರ ಅತ್ಯುತ್ತಮವಾದ ಸಂಮಿಶ್ರದಿಂದ ಆಹ್ಲಾದಕರವಾಗುವುದು ಭಗವದ್ದೃಷ್ಟಿಯ. ಭಗವಂತನನ್ನು ನಾದಸ್ವರೂಪಿ, ಓಂಕಾರಸ್ವರೂಪಿ ಎನ್ನುವುದಿಲ್ಲವೇ!

ಭಗವಂತನನ್ನು ಆಶ್ರಯಿಸಿ, ಎಡೆಬಿಡದೆ ಅವನ ಗುಣಾತಿಶಯಗಳನ್ನನುಭವಿಸಿ, ಅವನ ಕೃಪೆಗೆ ಪಾತ್ರರಾಗಿ, ಕಡೆಗೆ ಪರಮಪದವಾಸಿಗಳಾಗಿ, ಭಗವಂತನ ಸಾನ್ನಿಧ್ಯದಲ್ಲಿ ಕೂಡಿರುವ "ನಲ್ಲಾರ್" (ಸಜ್ಜನರು) ಎಷ್ಟೋ ಮಂದಿ. ಅವರ ನಿರ್ವಾಹಕನಾಗಿ ಭಗವಂತ.

ಕಬ್ಬಿನ ಹಾಲು ಎಷ್ಟು ಮಧುರವೋ ಅದಕ್ಕಿಂತಲೂ ಹೆಚ್ಚು ಮಧುರ ಭಗವದ್ಗುಣಾನುಭವ.

ಅಮೃತಪಾನದಿಂದ ಬರುವ ~~ಅಮರತ್ವ~~ ಅಮರತ್ವವನ್ನು ಭಗವನ್ನಾಮ ಸ್ಮರಣೆಯಿಂದಲೇ ಲಭಿಸುತ್ತದೆ. ಆದ್ದರಿಂದ ಭಗವಂತನು ಅಮೃತವೇ.

Garani Srinivasan

ಕಾಯುರ್ಗಳು ಕಣ್ಣಿಗೆ ಆಕರ್ಷಕವಾಗಿ, ಮನದಲ್ಲಿ ಉತ್ಸಾಹ ತುಂಬುವುದಾಗಿ, ಔದಾರ್ಯಪೂರ್ಣವಾಗಿ ಸಮೃದ್ಧಿಯಾಗಿ ಮುಳ್ಳಿಯುನ್ನು ನುಂಡಿ ಕಣ್ಣದ್ದು. ಹಾಗೆಯೇ ಭಗವಂತನೂ.

ಶ್ರೀ ಕೃಷ್ಣನಾಗಿ ಅವತರಿಸಿ ಭಗವಂತನು ಸ್ತ್ರೀ ಪುರುಷರೆನ್ನದೆ, ಆಬಾಲವೃದ್ಧರಾದ ಎಲ್ಲರನ್ನು ಆಕರ್ಷಿಸಿ, ಅವರನ್ನುದ್ಧರಿಸಿದನು.

ಆಳ್ವಾರರು ಹೇಳುತ್ತಾರೆ: ಎಲೆಕೋಯು ಮುಡಿಸದ ಮಾಧುರ್ಯದೊಂದಿಗೆ ವೇದಗಾನದ ಇಂಪಿನೊಂದಿಗೆ ಕೂಡಿಕೊಂಡಿರುವ ನಾದಸ್ವರೂಪನೇ (ಓಂಕಾರಸ್ವರೂಪನೇ), ಪರಮಪದವಾಸಿಗಳಾದ 'ನಲ್ಲಾರ್'ರ ನಿವಾರ್ದಕನೇ, ಅತ್ಯಂತ ರುಚಿಕರನಾದ ಹಣ್ಣೇ, ಅಮರ ಪವಿತ್ರನೇ, ಪರಮ ಪುರುಷನೇ, ಅಮರತ್ವವನ್ನು ನೀಡುವವನೇ, ಪರಮ ಉದಾರಿಯೇ, ಆಕರ್ಷಕನಾದ ಕೃಷ್ಣನೇ, ನಾನು ನಿನ್ನನ್ನು ಬಿಟ್ಟು ಬೇರೆ ಯಾರ ಆಶ್ರಯವನ್ನು ಪಡೆದಿಲ್ಲವೆಂಬುದು ನಿನಗೇ ಗೊತ್ತಿದೆ. ಆದ್ದರಿಂದ, ನನ್ನನ್ನು ನೀನು ನಿನ್ನವನೆಂದು ಸ್ವೀಕರಿಸಿ, ಕೃಪೆದೋರು.

8. குறிக்கொள் ஞானங்களால் எனையூழி செய்தவமும்
கிறிக்கொண்டிப்பிறப்பே சிலநாளிலெய்தினான் யான்,
உறிக்கொண்ட வெண்ணெய்பால் ஒளித்துண்ணும் அம்மான்பின்,
நெறிக்கொண்ட நெஞ்சனாய்ப் பிறவித்துயர் கடிந்தே.

ಕುಱಿಕ್ಕೊಳ್ ಜ್ಞಾನಙ್ಗಳಾಲ್ ಎನೈಯೂಳಿ ಶೆಯ್ ತವಮುಮ್,
ಕಿಱಿಕ್ಕೊಂಡಿಪ್ಪಿಱಪ್ಪೇ ಶಿಲನಾಳಿಲೆಯ್ದಿನನ್ ಯಾನ್,
ಉಱಿಕ್ಕೊಂಡ ವೆಣ್ಣೆಯ್ ಪಾಲ್ ಒಳಿತ್ತುಣ್ಣುಮಮ್ಮಾನ್ ಪಿನ್,
ನೆಱಿಕ್ಕೊಂಡ ನೆಂಜನಾಯ್ ಪ್ಪಿಱವಿತ್ತುಯರ್ ಕಡಿನ್ದೇ.

ಕುಱಿಕ್ಕೊಳ್ குறிக்கொள் = ಏಕಾಗ್ರ ಗಮನಿಸಬೇಕಾದಕ್ಕ, ಜ್ಞಾನಙ್ಗಳಾಲ್ ஞானங்களால் = ವಿವಿಧ ಜ್ಞಾನಗಳಿಂದ ಎನೈಊಳಿ எனையூழி = ಎಷ್ಟೋ ಯುಗಗಳು, ಶೆಯ್ செய் = ಮಾಡಬೇಕಾದ, ತವಮುಮ್ தவமும் = ತಪಸ್ಸನ್ನು (ಸಾಧನೆಯನ್ನು), ಕಿಱಿಕ್ಕೊಂಡು கிறிக்கொண்டு = ಉಪಾಯ ಮೂಲಕ, ಇ-ಪ್ಪಿಱಪ್ಪೇ இப்பிறப்பே = ಈ ಜನ್ಮದಲ್ಲಿಯೇ, ಶಿಲನಾಳಿಲ್ சிலநாளில் = ಸ್ವಲ್ಪ ಕಾಲದಲ್ಲೇ ಎಯ್ದಿನನ್ ಯಾನ್ எய்தினான் யான் = ನಾನು ಪಡೆದೆ, ಉಱಿಕ್ಕೊಂಡ உறிக்கொண்ட = ನೆಲುವುಗಳಲ್ಲಿ

Garani Srinivasan

ಶೇಖರಿಸಿದ್ದ, ವೆಣ್ಣೆಯ್ ಪಾಲ್ [illegible] = ಬೆಣ್ಣೆಯನ್ನು ಹಾಲನ್ನು ಒಳಿತ್ತು [illegible] = ಮರೆಯಲ್ಲಿ (ಬಚ್ಚಿಟ್ಟು ಕೊಂಡು), ಉಣ್ಡ [illegible] = ಉಂಡಂಥ, ಅಮ್ಮಾನ್ ಪಿನ್ [illegible] = ಅವನ = ಸ್ವಾಮಿಯು ಹಿಂದೆ, ನೆಱಿಕ್ಕೊಳ್ಳ [illegible] = ನ್ಯಾಯ ಮಾರ್ಗವನ್ನು (ಧರ್ಮಮಾರ್ಗದಲ್ಲಿ ನಡೆಯುವ) ಹಿಡಿಯುವ, ನೆಂಜತ್ತಾಲ್ [illegible] = ಮನಸ್ಸಿನವನಾಗಿ (ಬುದ್ಧಿಯುಳ್ಳವನಾಗಿ), ಪಿಱವಿ ತುಯರ್ [illegible] ದುಃಖದ ಸಂಕಟವನ್ನು, ಕಡಿನ್ದೇ [illegible] = ನೀಗಿಯೇ.

ಚೆನ್ನಾಗಿ ಗಮನಿಸುವದಕ್ಕೆ ವಿವಿಧ ಜ್ಞಾನಗಳಿಂದ ಎಷ್ಟೋ ಯುಗಗಳು ಮಾಡಬೇಕಾದ ತಪಸ್ಸನ್ನು (ಸಾಧನೆಯನ್ನು) ಉಪಾಯದ ಮೂಲಕ ಈ ಜನ್ಮದಲ್ಲಿಯೇ, ಸ್ವಲ್ಪ ಕಾಲದಲ್ಲಿಯೇ ನಾನು ಪಡೆದುಕೊಂಡೆ. ನೆಲುವುಗಳಲ್ಲಿ ಶೇಖರಿಸಿದ್ದ ಬೆಣ್ಣೆಯನ್ನು ಹಾಲನ್ನು ಮರೆಯಲ್ಲಿ ಉಂಡಂಥ ಸ್ವಾಮಿಯು ಹಿಂದೆ, ಅವನ ನ್ಯಾಯ ಮಾರ್ಗವನ್ನು ಹಿಡಿಯುವ ಮನಸ್ಸಿನವನಾಗಿ (ಬುದ್ಧಿಯುಳ್ಳವನಾಗಿ), ದುಃಖದ (8) ಸಂಕಟವನ್ನೇ ನೀಗಿದೆ

ಈ ಪ್ರಕಾರದಲ್ಲಿ ಜ್ಞಾನ ಮಾರ್ಗದಿಂದ ಭಗವಂತನನ್ನು ಪಡೆಯುವುದು ಸುಲಭವೋ ಭಕ್ತಿ-ಪ್ರಪತ್ತಿಗಳಿಂದ ಅದು ಸುಲಭವೋ ಎಂಬುದನ್ನು ವಿವರಿಸಲಾಗಿದೆ. ಜ್ಞಾನ ಮಾರ್ಗ ಕಠಿಣ ಬಹುಕಾಲ ಪಠನ, ಮನನ, ಅನುಷ್ಠಾನ ಮುಂತಾದ ಸಾಧನೆಗಳನ್ನು ನಡೆಸಿದ ಹೊರತು ಅದನ್ನು ಅನುಸರಿಸಲು ಸಾಧ್ಯವಿಲ್ಲ. ಈ ಮಾರ್ಗವನ್ನು ಹಿಡಿದರೆ ಎಷ್ಟೆಷ್ಟೋ ಜನ್ಮಗಳನ್ನು ಕಳೆದರೂ ದುಃಖ ಎಂಬ ಸಂಕಟ ನಿವಾರಣೆಯಾಗುವುದಿಲ್ಲ ಎನ್ನಬಹುದು. ಆದರೆ ಭಕ್ತಿ-ಪ್ರಪತ್ತಿಗಳು ಬಲು ಸುಲಭವಾದ ಉಪಾಯ. ಈ ಮಾರ್ಗವನ್ನು ಹಿಡಿಯುವುದರಿಂದ ಒಂದೇ ಜನ್ಮದಲ್ಲಿ, ಅದೂ ಕೆಲವೇ ವರ್ಷಗಳಲ್ಲಿಯೇ, ಮುಕ್ತರಾಗಬಹುದು.

ಆಳ್ವಾರರು ಹೇಳುತ್ತಾರೆ: ನಾನಾ ವಿಧವಾದ ಜ್ಞಾನೋಪಾಯಗಳನ್ನು ಕಷ್ಟಪಟ್ಟು ಸಾಧಿಸುವುದಕ್ಕೆ ಕೆಲವು ಯುಗಗಳೇ, ಕೆಲವು ಕಲ್ಪಗಳೇ ಬೇಕಾಗಬಹುದು. ಅದಕ್ಕೆ ಬದಲಾಗಿ, ನಾನು ಒಂದೇ (ಈ) ಜನ್ಮದ ಕೆಲವೇ ವರ್ಷಗಳಲ್ಲೇ, ಒಂದು ಸುಲಭೋಪಾಯವನ್ನು ಹಿಡಿದು, ಧ್ಯಾನಿಸಿಕೊಂಡೆ. ಶ್ರೀಕೃಷ್ಣನ ಬಾಲ ಲೀಲೆಗಳನ್ನು, ಅವನು ತೋರಿಸಿದ ಮಾರ್ಗವಾದ ಭಕ್ತಿ-ಪ್ರಪತ್ತಿಗಳನ್ನು ಅನುಸಂಧಾನ ಮಾಡಿ ಅನುಸರಿಸಿ, ದುಃಖ ಎಂಬ ಸಂಕಟದಿಂದ ನಾನು ಪಾರಾಗಿದ್ದೇನೆ.

9. கடிவார் தண்ணந்துழாய்க் கண்ணன் விண்ணவர் பெருமான்,
படிவானமிறந்த பரமன் பவித்திரன் சீர்,
செடியார் நோய்கள் கெடப் படிந்து குடைந்தாடி
அடியேன் வாய்மடுத்துப் பருகிக் களித்தேனே.

ಕಡಿವಾರ್ ತಣ್ಣಂತುೞಾಯ್ ಕ್ಕಣ್ಣನ್ ವಿಣ್ಣವರ್ ಪೆರುಮಾನ್,
ಪಡಿವಾನಮಿರಂದ ಪರಮನ್ ಪವಿತ್ತಿರನ್ ಶೀರ್,
ಶೆಡಿಯಾರ್ ನೋಯ್‌ಗಳ್ ಕೆಡಪ್ಪಡಿಂದು ಕುಡೈಂದಾಡಿ,
ಅಡಿಯೇನ್ ವಾಯ್ ಮಡುತ್ತು ಪ್ಪರುಗಿ ಕ್ಕಳಿತ್ತೇನೇ.

ಕಡಿ கடி = ಪರಿಮಳ, ವಾರ್ வார் = ತುಂಬಿರುವ, ತಣ್ தண் = ತಂಪಾದ, ಅಮ್ அம் = ಸೊಬಗಿನ, ತುೞಾಯ್ துழாய் = ತುಳಸಿಯ, ಕಣ್ಣನ್ கண்ணன் = ಶ್ರೀಕೃಷ್ಣನೆನಿಸಿದ, ವಿಣ್ಣವರ್ விண்ணவர் = ನಿತ್ಯಸೂರಿಗಳ, ಪೆರುಮಾನ್ பெருமான் = ಒಡೆಯನಾದ, ಪಡಿ படி = ಪ್ರತಿಯಾದವರು (ಸಮನಾದವರು), ವಾನಮ್ வானம் = ಮೇಲಣ ಲೋಕಗಳಲ್ಲಿ (ಪರಮಪದದಲ್ಲಿ), ಇರಂದ இறந்த = ಇಲ್ಲದ, ಪರಮನ್ பரமன் = ಪರಮಪುರುಷನಾದ, ಪವಿತ್ತಿರನ್ பவித்திரன் = ಪವಿತ್ರನಾದವನ, ಶೀರ್ சீர் = ಕಲ್ಯಾಣಗುಣಗಳಲ್ಲಿ, ಶೆಡಿ செடி = ಪಾಪಗಳು (ಕೆಂಡಗಳು), ಆರ್ ஆர் = ತುಂಬಿರುವ, ನೋಯ್‌ಗಳ್ நோய்கள் = ವ್ಯಾಧಿಗಳು, ಕೆಡ கெட = ನಾಶವಾಗುವುದಕ್ಕಾಗಿ, ಪಡಿಂದು படிந்து = ಬಿದ್ದು, ಕುಡೈಂದು குடைந்து = ಮುಳುಗಿ, ಆಡಿ ஆடி = ಆನಂದಿಸಿ, ಅಡಿಯೇನ್ அடியேன் = ಪಾದಸೇವಕನಾದ ನಾನು, ವಾಯ್ ಮಡುತ್ತು வாய்மடுத்து = ಬಾಯಿಹಚ್ಚಿ, ಪರುಗಿ பருகி = ಕುಡಿದು, ಕಳಿತ್ತೇನೇ களித்தேனே = ಪರವಶನಾದೆನಲ್ಲ (ಉನ್ಮತ್ತನಾದೆನಲ್ಲ)

ಪರಿಮಳ ತುಂಬಿರುವ ತಂಪಾದ ಸೊಬಗಿನ ತುಳಸಿಯ ಶ್ರೀಕೃಷ್ಣನೆನಿಸಿದ, ನಿತ್ಯಸೂರಿಗಳ ಒಡೆಯನಾದ, ತನಗೆ ಸಮನಾದವರು ಮೇಲಣ ಲೋಕಗಳಲ್ಲಿ ಇಲ್ಲದವನಾದ, ಪರಮಪುರುಷನಾದ ಪವಿತ್ರನ ಕಲ್ಯಾಣಗುಣಗಳಲ್ಲಿ ಪಾಪಗಳು ತುಂಬಿಕೊಂಡಿರುವ ವ್ಯಾಧಿಗಳೆಲ್ಲ (ದೇಹಬಾಧೆಗಳೆಲ್ಲ) ನಾಶವಾಗುವುದಕ್ಕಾಗಿ, ಬಿದ್ದು, ಮುಳುಗಿ, ಅತಿ ಆನಂದಿಸಿ, ಪಾದಸೇವಕನಾದ ನಾನು ಬಾಯಿಹಚ್ಚಿ ಕುಡಿದು ಪರವಶನಾದೆನಲ್ಲ (ಉನ್ಮತ್ತನಾದೆನಲ್ಲ!) (9)

ಹಿಂದಿನ ಪಾಶುರದಲ್ಲಿ ಮೋಕ್ಷವನ್ನು ಪಡೆಯಲು ಭಗವಂತನೇ ಕಲಿಸಿಕೊಟ್ಟ ಸುಲಭೋಪಾಯವನ್ನು ತಿಳಿಸಿ ಹೇಳಲಾಯಿತು. ಇಲ್ಲಿ ಭಗವದ್ಗುಣಾನುಭವದ ಮಹಿಮೆ ಯೇನೆಂಬುದನ್ನು (ಎಷ್ಟೆಂಬುದನ್ನು) ಹೇಳಲಾಗುತ್ತದೆ

ಮೇಲಣ ಲೋಕಗಳಲ್ಲಾಗಲಿ, ಪರಮಪದದಲ್ಲೇ ಆಗಲಿ, ತನಗೆ ಸಂ-

ಕ್ಷಾಂತಿ ಎಂಬುವರೇ ಇಲ್ಲದಂಥವನು ನಿರ್ವಿಕಾರನು. ನಿತ್ಯನೂ ಅಗಲ್ಪಡದವನು. ಪರಮ ಶ್ರೇಷ್ಠನು ಪರಮಪುರುಷನು. ಪರಿಪೂರ್ಣ ತುಂಬಿದವನಾಗಿಯಿಂದ ತೋರ್ಪಡಿಸಿದವನು. ಶ್ರೀಕೃಷ್ಣನಾಗಿ ಅವತರಿಸಿ ಆಶ್ರಿತರಿಗೆ ಸುಲಭನಾಗಿ ಆಶ್ರಿತವತ್ಸಲನಾಗಿ ಕೃಪಾಸಿಂಧುವಾಗಿ ತೋರ್ಪಡಿಸಿದವನು. ಅನಂತ ಕಲ್ಯಾಣ ಗುಣಗಳುಳ್ಳವನು.

ಪುಣ್ಯತೀರ್ಥ ಕ್ಷೇತ್ರಗಳಲ್ಲಿ ಮುಳುಗುವುದರ ಫಲವಾಗಿ ಮಾಡಿದ ಪಾಪಗಳು ಪರಿಹಾರವಾಗುವುದರ ಹಾಗೆಯೇ, ಭಗವನ್ನಾಮವೆಂಬ ಪವಿತ್ರ ತೀರ್ಥದಲ್ಲಿ ಮಿಂದು ಅನುಭವಿಸುವುದರ ಫಲವಾಗಿ ಜನ್ಮ ಜನ್ಮಾಂತರಗಳಿಂದಲೂ ಕೂಡಿಕೊಂಡು ಬಂದ ಪಾಪರಾಶಿಯೆಲ್ಲ ಭಸ್ಮವಾಗುವುದು. ಮತ್ತು, ಆ ಪಾಪ ಕರ್ಮಗಳ ಫಲವಾಗಿ ಅನುಭವಿಸಲೇ ಬೇಕಾದ ಸಂಕಟಗಳೆಲ್ಲವೂ ತೊಲಗಿ ಹೋಗುತ್ತವೆ. ~~ಹೀಗೆ~~ ಪರಿಶುದ್ಧನಾದವನು ಭಗವತ್ಸಾನ್ನಿಧ್ಯವನ್ನು ಪಡೆದುಕೊಳ್ಳಲು ಅರ್ಹನಾಗುತ್ತಾನೆ.

ಆಳ್ವಾರರು ಹೇಳುತ್ತಾರೆ: ಪರಮ ಪವಿತ್ರನೂ, ದಿವ್ಯತೇಜನೂ, ಸರ್ವರಕ್ಷಕನೂ ಆದ ಪರಮಪುರುಷನ ಅನಂತ ಕಲ್ಯಾಣಗುಣಗಳೆಂಬ ಪವಿತ್ರ ತೀರ್ಥದ ಬಳಿಸಾರಿ, ಅದರಲ್ಲಿ ಮಿಂದು, ಮುಳುಗಿದೆ. (ಆಡಿ, ಕುಣಿದೆ.) ಆನಂದ ಬಾಯಿಬಿಟ್ಟು, ಸಮೃದ್ಧಿಯಾಗಿ ಕುಡಿದು, ಹೊಟ್ಟೆಯನ್ನು ತುಂಬಿಕೊಂಡೆ. ಪರವಶನಾದೆ. ಹಾಗೆಯೇ ಉನ್ಮತ್ತನೂ ಆದೆನಲ್ಲ!

10. களிப்பும் கவர்வு மற்றும் பிறப்புப்பிணிமூப்பிறப்பற்று,
ஒளிக்கொண்ட சோதியுமாய் உடன்கூடுவதென்று கொலோ,
துளிக்கின்ற வானிந்நிலம் சுடராழிசங்கேந்தி,
அளிக்கின்ற மாயப்பிரான் அடியார்கள் குழாங்களையே.

ಕಳಿಪ್ಪುಮ್ ಕವರ್ವುಮತ್ತು ಪ್ಪಿರಪ್ಪು ಪ್ಪಿಣಿ ಮೂಪ್ಪಿರಪ್ಪತ್ತು,
ಒಳಿಕ್ಕೊಂಡ ಶೋದಿಯುಮಾಯ್ ಉಡನ್ ಕೂಡುವದೆನ್ರುಕೊಲೋ,
ತುಳಿಕ್ಕಿನ್ರ ವಾನಿನ್ನಿಲಮ್ ಶುಡರಾೞಿ ಶಙ್ಗೇನ್ದಿ,
ಅಳಿಕ್ಕಿನ್ರ ಮಾಯಪ್ಪಿರಾನ್ ಅಡಿಯಾರ್‌ಗಳ್ ಕುೞಾಙ್ಗಳೈಯೇ.

ಕಳಿಪ್ಪುಮ್ களிப்பும் = ಅಲ್ಪ ಸಂತೋಷವನ್ನೂ, ಕವರ್ವುಮ್ கவர்வும் = ಆಸೆಯ ಪಡಿತವನ್ನೂ, ಅತ್ತು அற்று = ಕಳೆದುಹಾಕಿ, ಪಿಱಪ್ಪು பிறப்பு = ಜನ್ಮವನ್ನು (ಹುಟ್ಟುವಿಕೆಯನ್ನು), ಪಿಣಿ பிணி = ದುಃಖವನ್ನು (ಸಂಕಟವನ್ನು), ಮೂಪ್ಪು மூப்பு = ಮುಪ್ಪನ್ನು, ಇಱಪ್ಪುಮ್ இறப்பும் = ಮರಣವನ್ನು, ಅತ್ತು அற்று = ನಾಶಪಡಿಸಿ, ಒಳಿಕ್ಕೊಂಡ ஒளிக்கொண்ட = ಜ್ಞಾನ ಪ್ರಭೆಯಿಂದ ಕೂಡಿದ,

ಕಂಡರಿಯುಂ ವಣ್ ಅಂತು ಚೋತಿಯುಂ ಆಯ = ಜ್ಯೋತಿಸ್ವರೂಪನಾ
ಆಗಿರುವವನ, ಉಡನ್ ಉಡನ್ = ಜೊತೆ, ಕೂಡುವುದು ಕೂಡುವತು
= ಕೂಡಿಕೊಳ್ಳುವುದು, ಎನ್ರು ಕೊಲೋ ಎನ್ರು ಕೊಲೋ =
ಎಂದಿಗೋ, ತುಳಿಕ್ಕಿನ್ರ ತುಳಿಕ್ಕಿನ್ರ = ಹನಿಸುತ್ತಿರುವ,
ವಾನ್ ವಾನಮ್ = ಆಕಾಶವನ್ನು, ಇ-ನಿಲಮ್ ಇ-ನಿಲಮ್ = ಈ ಭೂ
ಮಿಯನ್ನು, ಸುಡರ್ ಸುಡರ್ = ಪ್ರಜ್ವಲಿಸುವ, ಆಳಿ ಆಳಿ = ಚಕ್ರಾ
ಯುಧವನ್ನು, ಶಙ್ಖು ಸಙ್ಗು = ಶಂಖವನ್ನು, ಏನ್ದಿ ಏನ್ದಿ = ಧರಿ
ಸಿ, ಅಳಿಕ್ಕಿನ್ರ ಅಳಿಕ್ಕಿನ್ರ = ರಕ್ಷಿಸುತ್ತಿರುವ, ಮಾಯ
ಮ್ ಪಿರಾನ್ ಮಾಯಮ್ ಪಿರಾನ್ = ಆಶ್ಚರ್ಯಕಾರಕನಾದ ಸರ್ವೇಶ್ವರನ,
ಅಡಿಯಾರ್‌ಗಳ್ ಅಡಿಯಾರ್‌ಗಳ್ = ಭಕ್ತರ, ಕೂಟಂಗಳೈಯೇ
ಕುಳಾಂಗಳೈಯೇ = ಕೂಟಗಳನ್ನೇ, (ಕೂಡಿಕೊಳ್ಳುವುದಾದರೂ
ಎಂದಿಗೋ)

ಅಲ್ಪ ಸಂತೋಷವನ್ನು, ಆಸೆಯ ಬಡಿತವನ್ನು ಕೊಡುವ ದಾರಿದ್ರ್ಯ, ಹುಟ್ಟುವಿಕೆಯನ್ನು, ದುಃಖವನ್ನು (ಸಂಕಟವನ್ನು), ಮುಪ್ಪನ್ನು, ಮರಣವನ್ನು ನಾಶಪಡಿಸಿ, ಜ್ಞಾನಪ್ರಭೆಯಿಂದ ಕೂಡಿದ ಜ್ಯೋತಿಸ್ವರೂಪನ ಜೊತೆನೆ ಕೂಡಿಕೊಳ್ಳುವುದು ಎಂದಿಗೆ ಲಭಿಸುವುದೋ? ಹನಿಸುತ್ತಿರುವ ಆಕಾಶವನ್ನು ಈ ಭೂಮಿಯನ್ನು ಪ್ರಜ್ವಲಿಸುತ್ತಿರುವ ಚಕ್ರಾಯುಧವನ್ನು ಶಂಖವನ್ನು ಧರಿಸಿ ರಕ್ಷಿಸುತ್ತಿರುವ ಆಶ್ಚರ್ಯಕಾರಕನಾದ ಸರ್ವೇಶ್ವರನ ಭಕ್ತರ (ಪಾದಸೇವಕರ) ಕೂಟಗಳನ್ನು ಕೂಡಿಕೊಳ್ಳುವುದು ಎಂದಿಗೋ? (10)

ಈ ಪಾಶುರದಲ್ಲಿ ಎರಡು ಸುಂದರವಾದ ವಿಷಯಗಳನ್ನು ವ್ಯಕ್ತಗೊಳ್ಳಲಾಗಿದೆ. ಮೊದಲನೆಯದು ಭಗವಂತನೊಡನೆ ಆಗಲೇಬೇಕಾದ ಭಕ್ತನ ಸಮಾಗಮದ ವಿಷಯ. ಎರಡನೆಯದು ಭಗವದ್ಧ್ಯಾನಪರ ಭಾವದಲ್ಲಿಯೇ ತಲ್ಲೀನರಾದ ಭಗವತ್ಪಾದಸೇವಕರಾದ ಭಾಗವತರೊಡನೆ ಆಗಲೇಬೇಕಾದ ಭಕ್ತನ ಸಮಾಗಮ. ಭಕ್ತನನ್ನು ಪರಿಪಕ್ವಗೊಳಿಸುವುದಕ್ಕೆ ಈ ಎರಡು ಸಮಾಗಮಗಳೂ ಬೇಕೇ ಬೇಕು. ಅದಕ್ಕಾಗಿಯೇ ಭಕ್ತನ ಕಾತರವೂ.

ಚೇತನನಿಗೆ ಸ್ವಾಭಾವಿಕವಾದ ಹುಟ್ಟು, ರೋಗ, ಮುಪ್ಪು, ಸಾವು ಇವು ತಪ್ಪಿದ್ದೇ ಅಲ್ಲ. ಅವು ಬಂದೇ ಬರುವುವು. ಪುನರಾವರ್ತನಗೊಳ್ಳುತ್ತಲೇ ಇರುತ್ತೆ ಅವನನ್ನು ಕೊಳ್ಳಲುಸುವುವು ಜೊತೆಗೆ, ಅವನಿಗೆ ಸಾಂಸಾರಿಕವಾದ ಬಂಧನ! ಅದು ಅವನು ಆಸೆಯ ಬಡಿತದಲ್ಲಿ ಸಿಕ್ಕಿಬಿದ್ದು, ಕ್ಷಣಿಕವಾದ ಸಂತೋಷಕ್ಕಾಗಿ ಹಾತೊರೆದು ಕೊಳ್ಳುವ ಕಾರಣದಿಂದ.

Garani Srinivasan

ಈ ಎರಡು ಕೋಳಲಕೆಗಳೂ ಕೊನೆಗೊಳ್ಳುವುದೆಂದಿಗೆ? ಇವುಗಳಿಂದ ಬಿಡುಗಡೆಯಾವಾಗ? ಇದಕ್ಕೆ ಉತ್ತರ - ಜ್ಯೋತಿಸ್ವರೂಪನಾದ ಜ್ಞಾನವು ದನು ಆದ ಸರ್ವೇಶ್ವರನ ಕೃಪೆಯಿಂದಾಗಲೇ. ಈ ಜ್ಞಾನದಿಂದಲೇ ಚೇತನನಲ್ಲಿ ಕ್ಷಣಿಕ ಶಾಶ್ವತ ಎಂಬ ತಾರತಮ್ಯ ಜ್ಞಾನವುಂಟಾಗುವು ದು ಕ್ಷಣಿಕವಾದದ್ದನ್ನು ಕಳಚುದಾಕ, ಶಾಶ್ವತವಾದದ್ದನ್ನು ದೃಢವಾಗಿ ಅವನು ಆಶ್ರಯಿಸುವಂತಾಗುವುದು

ಚೇತನನಿಗೆ ಈ ಭಗವತ್ಕೃಪೆಯು ದೊರೆ ಉಂಟಾಗುವುದು ಹೇಗೆ? ಇದು ಭಗವಂತನ ಪಾದಸೇವಕರಾದ ಭಾಗವತರ ಸಂಗದಿಂದಲೇ. ಅವರು ಎಚ್ಚರದೆ ಭಗವಂತನ ಆಶ್ಚರ್ಯಕರವಾದ ಲೀಲೆಗಳನ್ನು ಸ್ಮರಿಸುತ್ತಾ, ಸಾಮಾನ್ಯರಿಂ ಮೈಮರೆತು ಆನಂದಿಸುತ್ತಾ ಕಾಲಕಳೆಯುವವರಾದ್ದರಿಂದ, ಸಾಮಾನ್ಯನಾದವನು ಅವರೊಡನೆ ಕಲೆತಿರುತ್ತಿದ್ದಾಗ ಅವರ ಸಹವಾಸದ ಕಡೆಗೆ ವಾಲುತ್ತದೆ. ಫಲವಾಗಿ, ಅವನ ಮನಸ್ಸು ಭಗವದ್ಗುಣಾನುಭವದ ಕಡೆ ವಿಠರಾಮ ಕ್ರಮಕ್ರಮವಾಗಿ ಅದರಲ್ಲಿಯೇ ನೆಲಸಿ, ಬೆಳೆಯುತ್ತದೆ. ಇದರಿಂದಾಗಿ ಅವನೂ ಭಕ್ತನೇ ಆಗಿಬಿಡುತ್ತಾನೆ

ಆಳ್ವಾರರು ಹೇಳುತ್ತಾರೆ: ಜೀವನದಲ್ಲಿ ಆಸೆ ಮತ್ತು ಕ್ಷಣಿಕ ಸಂತೋಷಗಳ ಬಲೆಯಿಂದ ತಪ್ಪಿಸುವವನೂ, ದುಃಖ, ರೋಗ, ಮುಪ್ಪು, ಮರಣಗಳ ಪುನರಾವರ್ತನೆಯಿಂದ ಬಿಡಿಸುವವನೂ, ಜ್ಞಾನವನ್ನು ಪ್ರಬೋಧಿಸುವವನೂ ಆದ ಜ್ಯೋತಿಸ್ವರೂಪನಾದವನ ನನ್ನ ಕೇಳಿಕೆ ಎಂದಿಗೆ ಬರುವುದೋ? ಅಲ್ಲದೆ, ಶಂಖ ಚಕ್ರಗಳನ್ನು ಧರಿಸಿ ಮಳೆಗರೆಯುವ ಆಕಾಶವನ್ನು ಸದೃಶವಾದ ಭೂಮಿ ಯನ್ನು ಸಂರಕ್ಷಿಸಲೆಂದು ಸನ್ನದ್ಧನಾಗಿರುವ ಭಗವಂತನ ಪಾದಸೇ ವಕರಾದ ಭಾಗವತರ ಸಹವಾಸ ನನಗೆ ಲಭಿಸುವುದಾದರೂ ಎಂದಿಗೋ?

11. குழாங்கொள் பேரரக்கன் குலம் வீய முனிந்தவனை,
குழாங்கொள் தென்குருகூர்ச் சடகோபன் தெரிந்துரைத்த,
குழாங்கொளாயிரத்துள் இவைபத்துமுடன் பாடி,
குழாங்களாயடியீருடன் கூடிநின்றாடுமினே.

ಕುೞಾಙ್ಗೊಳ್ ಪೇರರಕ್ಕನ್ ಕುಲಮ್ ವೀಯ ಮುನಿನ್ದವನೈ,
ಕುೞಾಙ್ಗೊಳ್ ತೆನ್ ಕುರುಗೂರ್ಚ್ ಚಡಗೋಪನ್ ತೆರಿನ್ದುರೈತ್ತ,
ಕುೞಾಙ್ಗೊಳಾಯಿರತ್ತುಳ್ ಇವೈಪತ್ತುಮುಡನ್ ಪಾಡಿ,
ಕುೞಾಙ್ಗಳಾಯಡಿಯೀರುಡನ್ ಕೂಡಿನಿನ್ರಾಡುಮಿನೇ.

ಕುೞಾಮ್ ಕೊಳ್ குழாம் கொள் = ಕೂಟಗಳನ್ನು ಪಡೆದಿದ್ದ, ಪೇರ್ ಅರಕ್ಕನ್ பேர் அரக்கன் = ಮಹಾ ಪ್ರಬಲನಾದ ರಾಕ್ಷಸನ, ಕುಲಮ್

Garani Srinivasan

குலம் = ಕುಲವೆಲ್ಲ ವೀಯ ತೀಯ = ನಾಶವಾಗುವಂತೆ ಮುನಿದ್ದವನ್ನೆ முனிந்தவனை = ಕೋಪಗೊಂಡವನನ್ನು ಕುರಿತು ಕುಳಾಮ ಕೋಳ್ குழாம் கொண் = ಕೂಟಗಳನ್ನು ಪಡೆದಿದ್ದ ತೆನ್ ಕುರುಕೂರ್ ಶಠಕೋಪನ್ தென் குருகூர் சடகோபன் = ಸುಂದರವಾದ ತಿರುಕ್ಕುರುಕೂರಿನ ಶಠಕೋಪನು, ತೆರಿಂದು தெரிந்து = ಅರಿತು, ಉರೈತ್ತ உரைத்த = ಹೇಳಿದಂಥ, ಕುಳಾಮ ಕೋಳ್ குழாம் கொண் = ಕೂಟಗಳನ್ನು ಪಡೆದಿರುವ, ಆಯಿರತ್ತುಳ್ ஆயிரத்துள் = ಒಂದು ಸಾವಿರದಲ್ಲಿ ಇವ್ವೆ ಪತ್ತುಮ್ இவை பத்தும் = ಈ ಹತ್ತನ್ನು ಉಡನ್ ಪಾಡಿ உடன் பாடி = ಒಟ್ಟಾಗಿ ಹಾಡಿ, ಕುಳಾಙ್ಗಳ್ ಆಯ್ குழாங்கள் ஆய் = ಕೂಟಗಳನ್ನು ಮಾಡಿಕೊಂಡು, ಅಡಿಯೀರ್ அடியீர் = ಭಕ್ತರೇ (ಭಗವತ್ಪಾದ ಸೇವಕರೇ), ಉಡನ್ உடன் = ಒಟ್ಟಾಗಿ (ನಿಂತು), ಕೂಡಿ கூடி = ಕೂಡಿಕೊಂಡು, ನಿನ್ರು நின்று = ಇದ್ದು, ಆಡುಮಿನೇ ஆடுமி னே = ಕುಣಿದಾಡಿರಿ.

ಕೂಟಗಳನ್ನು ಪಡೆದಿದ್ದ ಮಹಾ ಪ್ರಬಲ ರಾಕ್ಷಸನ ಕುಲವೆಲ್ಲ ನಾಶವಾಗುವಂತೆ ಕೋಪಗೊಂಡವನನ್ನು ಕುರಿತು ಕೂಟಗಳನ್ನು ಪಡೆದಿದ್ದ ಸೊಬಗಿನ ತಿರುಕ್ಕುರುಕೂರಿನ ಶಠಕೋಪನು ಅರಿತು, ಹೇಳಿದಂಥ ಒಂದು ಸಾವಿರದಲ್ಲಿ ಈ ಹತ್ತನ್ನು ಭಗವತ್ಪಾದ ಸೇವಕರೇ, ಕೂಟಗಳಾಗಿ ಸೇರಿಕೊಂಡು, ಒಟ್ಟಾಗಿ ನಿಂತು (11)
ಹಾಡಿ, ಕುಣಿದಾಡಿ.

ಲೆಕ್ಕವಿಲ್ಲದಷ್ಟು ಸೇನಾ ಕೂಟಗಳನ್ನು ಪಡೆದಿದ್ದ ಮಹಾ ಪ್ರಬಲ ರಾಕ್ಷಸನೊಡೆಯ ರಾವಣಾಸುರ. ಭಗವಂತನು ಶ್ರೀರಾಮನಾಗಿ ಅವತರಿಸಿ, ರಾಕ್ಷಸ ಕುಲವನ್ನೇ ನಿರ್ಮೂಲ ಮಾಡಿದನು

ಸೊಬಗಿನ ತಿರುಕ್ಕುರುಕೂರು ಕ್ಷೇತ್ರದಲ್ಲಿ ವಾಸಿಸುತ್ತಿದ್ದವನು ಶಠಕೋಪನು. ಸ್ವತಃ ಪರಮ ಭಾಗವತನಾಗಿ, ಅಪ್ರತಿಮ ಜ್ಞಾನಿಯಾಗಿ, ಭಗವಂತನ ಸಾಟಿಯಿಲ್ಲದ ಅಸಂಖ್ಯಾತ ಕಲ್ಯಾಣಗುಣಗಳನ್ನು ಪರಿಪೂರ್ಣವಾಗಿ ಅರಿತು, ಆನಂದಿಸಿದವನು. ತನ್ನ ಅರಿವು ಅನುಭವಗಳನ್ನು ಭಗವಂತನ ಗುಣ ಸ್ವಭಾವಗಳನ್ನು ಕುರಿತು ಸ್ತುತಿಸಿ ಹಾಡುವುದರಲ್ಲಿಯೇ ಬಳಸಿಕೊಂಡವನು. ಹಾಗೆ, ಶಠಕೋಪನು ಭಗವಂತನನ್ನು ಸ್ತುತಿಸುವ ಪಾಶುರಗಳು ಒಂದು ಸಾವಿರ. ಅವುಗಳನ್ನು ಹತ್ತು ಹತ್ತು ಪಾಶುರಗಳ ತಿರುವಾಯ್ ಮೊಳಿಗಳಾಗಿಯೂ, ಹತ್ತು ತಿರುವಾಯ್ ಮೊಳಿಗಳ ಎಂದರೆ ನೂರು ಪಾಶುರಗಳ ದಶಕಗಳಾಗಿಯೂ, ಇಂಥ ಹತ್ತು ದಶಕಗಳ ಸಾವಿರ ತಿರುವಾಯ್ ಮೊಳಿಯಾಗಿಯೂ ಜೋಡಿಸಿ, ಕೂಡಿಸಿಟ್ಟಿದ್ದಾನೆ. ಇಂಥ ಜೋಡಣೆಯಲ್ಲಿ ಬಂದಾಗಿರುವುದು ಈ ತಿರುವಾಯ್ ಮೊಳಿ. ಇದರಲ್ಲಿ ತನ್ನ ಭಾಗವತ ಕೂಟಕ್ಕೆ ಒಂದು ಅದ್ವಿತೀಯವಾದ ಕರೆಯನ್ನು ಶಠಕೋಪನು ಕೊಟ್ಟಿದ್ದಾನೆ.

ಹಿಂದಿನ ತಿರುವಾಯ್ ಮೊಳಿಗಳ ಕಡೆಯ ಪಾಶುರಗಳಲ್ಲಿ, ಒಂದು

ಬಗೆಯ ಫಲಶ್ರುತಿ ಕಂಡುಬಂತು "ಈ ದಶ ಪಾಶುರಗಳನ್ನು ಚೆನ್ನಾಗಿ ಕಲಿತು ಪಠಿಸುವವರಿಗೆ 'ಅಮರತ್ವ ಲಭಿಸುವುದು', 'ಪರಮಪದಪ್ರಾಪ್ತಿಯಾಗುವುದು', 'ಪರಮಪದದಲ್ಲಿ ಉತ್ತಮ ಸ್ಥಾನ ದೊರಕುವುದು', 'ಭಗವಂತನ ತಿರುವಡಿಗಳ ಎಡೆಬಿಡದ ಸೇವೆ ಲಭಿಸುವುದು" ಇತ್ಯಾದಿ ಫಲಶ್ರುತಿ ಕಂಡುಬಂತು. ಈ ತಿರುವಾಯ್ಮೊಳಿಗೆ ಕಡೆಯ ಪಾಶುರವಾದ ಇದರಲ್ಲಿ ಸೇವೆಯ ಫಲದ ಹೇಳಿಕೆಯಿಲ್ಲ. ಭಗವತ್ಪಾದ ಸೇವಕರಾದ ಭಾಗವತರು ಬಿಟ್ಟುಕೊಡಬೇಕು ಕೂಟ ಕಂಟಕಗಳಾಗ ಮಾಡಿಕೊಂಡು, ಅವರು ಈ ದಶ ಪಾಶುರಗಳನ್ನು ಸಾಮೂಹಿಕವಾಗಿ, (ಭಕ್ತಿಯಿಂದ) ಆದರದಿಂದ ಹೇಳಬೇಕು. ಅದರ ಫಲವಾಗಿ ಅವರಿಗೆ ಮುಕ್ತರು ಕೂಡ ದಾಸರಾಗುವರು. ಭಗವದ್ಗುಣಾನುಭವವೆಂದರೆ ಇದೇ! ಹೀಗಿದೆ ಆನಂದ ಲಭಿಸುವುದು. ತಿರುವಾಯ್ಮೊಳಿಯ ಫಲಶ್ರುತಿ

———— o ————

Garani Srinivasan

ತಿರುವಾಯ್ಮೊಳಿ - ಎರಡನೆಯ ದಶಕ - ನಾಲ್ಕನೆಯ ತಿರುವಾಯ್ಮೊಳಿ

திருவாய்மொழி - இரண்டாம்பத்து - நான்காந்திருவாய்மொழி.

4. ಆಡಿಯಾಡಿ - ஆடியாடி.

1. ஆடியாடி அகங்கரைந்து, இசை
பாடிப்பாடி கண்ணீர் மல்கி, எங்கும்
நாடிநாடி நரசிங்காவென்று,
வாடிவாடும் இவ்வாணுதலே

ಆಡಿಯಾಡಿ ಅಹಙ್ಕರೈನ್ದು, ಇಶೈ
ಪಾಡಿಪ್ಪಾಡಿ ಕಣ್ಣೀರ್ ಮಲ್ಗಿ, ಎಙ್ಗುಮ್
ನಾಡಿನಾಡಿ ನರಶಿಙ್ಗಾ ವೆನ್ರು,
ವಾಡಿ ವಾಡುಮ್ ಇವ್ವಾಣುದಲೇ.

ಆಡಿ ಆಡಿ ஆடி ஆடி = ಕುಣಿದಾಡುತ್ತಾ ಕುಣಿದಾಡುತ್ತಾ, ಅಹಮ್ அகம் = ಮನಸ್ಸನ್ನು, ಕರೈನ್ದು கரைந்து = ಕರಗಿ, ಇಶೈ இசை = ಹಾಡನ್ನು, ಪಾಡಿ ಪಾಡಿ பாடி பாடி = ಹಾಡುತ್ತಾ ಹಾಡುತ್ತಾ, ಕಣ್ಣೀರ್ ಮಲ್ಗಿ கண்ணீர் மல்கி = ಕಣ್ಣುಗಳಲ್ಲಿ ನೀರು ತುಂಬಿ [illegible], ಎಙ್ಗುಮ್ எங்கும் = ಎಲ್ಲೆಲ್ಲಿಯೂ (ಎಲ್ಲ ಕಡೆಗಳಲ್ಲಿಯೂ) ನಾಡಿ ನಾಡಿ நாடி நாடி = ಹುಡುಕುತ್ತಾ ಹುಡುಕುತ್ತಾ, ನರಶಿಙ್ಗಾ ವೆನ್ರು நரசிங்கா என்று = ನರಸಿಂಹಾ ಎಂದು, ವಾಡಿ ವಾಡುಮ್ வாடி வாடும் = ಸೊರಗಿ ಬೇಸತ್ತು ಹೋಗುತ್ತಿದ್ದಾಳೆ, ಇ ವಾಣ್ ನುದಲೇ இ வாண் நுதலே = ಈ ತೇಜಸ್ಸ (ಹೊಳೆಯುವ) ಮುಖದವಳು

ಈ ತೇಜಸ್ಸಿನ ಮುಖದವಳು ಕುಣಿದಾಡುತ್ತಾ ಕುಣಿದಾಡುತ್ತಾ ತನ್ನ ಮನಸ್ಸನ್ನು ಕರಗಿಸಿಕೊಳ್ಳುತ್ತಾಳೆ. ಹಾಡನ್ನು ಹಾಡುತ್ತಾ ಹಾಡುತ್ತಾ ಕಣ್ಣುಗಳಲ್ಲಿ ನೀರು ತುಂಬುತ್ತದೆ. 'ನರಸಿಂಹಾ' ಎಂದು ಎಲ್ಲೆಲ್ಲಿಯೂ ಹುಡುಕುತ್ತಾ ಹುಡುಕುತ್ತಾ ಸೊರಗಿ ಹೋಗುತ್ತಾಳೆ. (1)

ಹಿಂದಿನ ತಿರುವಾಯ್ಮೊಳಿಯಲ್ಲಿ ಪರಮಪುರುಷನನ್ನು ಕೂಡಿಕೊಳ್ಳುವುದು ಎಂದಿಗೋ? ಎಂಬ ಭಕ್ತನ ~~[illegible]~~ ಕೊರಗನ್ನು ಉದ್ಗರಿಸಲಾಯಿತಷ್ಟೆ. ಈ ತಿರುವಾಯ್ಮೊಳಿ ಅದೇ ಭಾವನೆಯನ್ನು ಮುಂದುವರಿಸುತ್ತದೆ.

ಭಗವಂತನಿಗಾಗಿ ಎಷ್ಟೆಷ್ಟು ಬಗೆಯಾಗಿ ಕಷ್ಟ ಪಡಬೇಕು? ದೇಹ ತನುಮನಗಳನ್ನು ಸವೆಸಬೇಕು? ಅದರ ಪರಿಣಾಮವಾದರೂ ಏನು? ಭಗವಂತನ ದರ್ಶನ ಲಭ್ಯವಾಗುವುದೇ? ಅವನನ್ನು ಸೇರುವುದಾದರೂ ಆದೀತೇ? - ಎಂಬುದು ಪ್ರಶ್ನೆ.

ಭಕ್ತನು ಇಲ್ಲಿ 'ನಾಯಕಿ' ಯಾಗಿದ್ದಾನೆ. ಆ ಭಾವದಲ್ಲಿದ್ದುಕೊಂಡು ತನ್ನ ಪ್ರಿಯತಮನನ್ನು ಹುಡುಕುವ ವಿಷಯವನ್ನು, ಅವನಿಗಾಗಿ ವಿರಹಪಡುವ ವಿಷಯವನ್ನು ಬೇರೆಯವರ ಬಾಯಿಂದ ಹೇಳಿಸಲಾಗುತ್ತದೆ. (ಎಂದರೆ, ಆ ನಾಯಕಿಯ ತಾಯಿ, ಇತರ ಬಳಗ), ಅವಳ ದುರವಸ್ಥೆಯನ್ನು ಕಂಡು ಮರುಗುವವರೊಬ್ಬರು ವಿವರಿಸುತ್ತಾರೆ: ಅವರು ನೇರವಾಗಿ ಭಗವಂತನಲ್ಲಿಯೇ ಅರಿಕೆ ಮಾಡಿಕೊಳ್ಳುತ್ತಾರೆ.

ಆ ಮಾತುಗಳಿವು: ಸ್ವಾಮೀ, ನಮ್ಮ ಹುಡುಗಿ (ಈ ನಾಯಕಿ) ಇವಳು ...ನಿಂದ ಕೂಡಿದ ಮುಖವುಳ್ಳವಳು. ನಿಮ್ಮನ್ನು ಒಲಿಸಿಕೊಳ್ಳುವುದಕ್ಕಾಗಿ ಇವಳು ಹಲವಾರು ಭಾವ ಭಂಗಿಗಳನ್ನು ಪ್ರದರ್ಶಿಸುತ್ತಾ ಕುಣಿದಾಡುತ್ತಾಳೆ. ನಿಮ್ಮ ಒಲುಮೆ ಇವಳಿಗೆ ದೊರೆಯುವುದಿಲ್ಲವೋ ಎಂಬಂತೆ ಇವಳ ಮನಸ್ಸು ತರಗ ಹೋಗಿದೆ. ನಿಮ್ಮ ಗುಣ ಸ್ವಭಾವಗಳನ್ನು ಕುರಿತು ಚಿತ್ತಾಕರ್ಷಕವಾಗಿ ಹಾಡುತ್ತಾಳೆ. ಹಾಡುತ್ತ ಹಾಡುತ್ತ ಇವಳ ಕಣ್ಣುಗಳಲ್ಲಿ ನೀರು ತುಂಬಿ ತುಳುಕುತ್ತದೆ. ನಿಮ್ಮನ್ನು ಕಾಣಬೇಕೆಂದು ನಿಮ್ಮ ದಿವ್ಯನಾಮಗಳನ್ನು ಹಿಡಿದು ಕೂಗಿ ಕರೆಯುತ್ತಾಳೆ. ನಿಮ್ಮನ್ನು ಸೇರಬೇಕೆಂದು, ನಿಮ್ಮನ್ನು ಹುಡುಕುತ್ತಾ ಹುಡುಕುತ್ತಾ, ಸೊರಗಿ ಹೋಗಿದ್ದಾಳೆ. ನಿಮಗಾಗಿ ಕೊಳಲು ವ ಈ ಸುಂದರ ಯುವತಿಯಲ್ಲಿ ನೀವು ಕೃಪೆ ತೋರೀರಾ? ಇವಳನ್ನು ನಿಮ್ಮ ಬಳಿಗೆ ಬರಮಾಡಿಕೊಳ್ಳಲಾರಿರಾ?

"'ನರಸಿಂಹಾ' ಎಂದು ಎಲ್ಲೆಲ್ಲಿಯೂ ಹುಡುಕುತ್ತಾ" — 'ನರಸಿಂಹ' ಎಂಬ ನಾಮ ಭಕ್ತನಾದ ಪ್ರಹ್ಲಾದನನ್ನು ನೆನಪಿಗೆ ತರುತ್ತದೆ. ಅವನ ತಂದೆ ಹಿರಣ್ಯಕಶಿಪು ಹರಿ ದ್ವೇಷಿ. ಅವನು ಹರಿಭಕ್ತ. ಹೀಗೆ ಇವರಿಬ್ಬರಿಗೆ ತಿಕ್ಕಾಟ. ತನ್ನ ಮಗನು ಹಿಡಿದ "ಹರಿ" ಜಪವನ್ನು ಬಿಡಿಸಲೇಬೇಕೆಂದು ಹಿರಣ್ಯಕಶಿಪು ಮಾಡಿದ ಪ್ರಯತ್ನಗಳು ಚಿತ್ರಹಿಂಸೆಗಳು, ಘೋರ ಶಿಕ್ಷೆಗಳು ವಿಫಲಗೊಂಡವು. "ಹರಿ ಎಲ್ಲೆಲ್ಲೂ ಇದ್ದಾನೆ" ಎಂದು ಹೇಳುತ್ತಿದ್ದ ಪ್ರಹ್ಲಾದನ ಮೇಲೆ ಹಿರಣ್ಯಕಶಿಪುವಿಗೆ ತಡೆಯಲಾರದ ಕೋಪವುಂಟಾಗಿ, ತನ್ನ ಎದುರಲ್ಲಿದ್ದ ಉಕ್ಕಿನ ಕಂಬವನ್ನು ಕಾಲಿನಿಂದ ಒದೆದು "ತೋರಿಸು, ನಿನ್ನ ಹರಿ ಇಲ್ಲಿರುವನೇನೋ? ಎಂದು ಗದ್ದರಿಸಿದನು ಭಕ್ತಾಧೀನನಾದ ಹರಿ ಆ ಉಕ್ಕಿನ ಕಂಬದಲ್ಲೇ ಉದ್ಭವಿಸಿ, ನರಸಿಂಹನಾಗಿ ಬಂದು ಹಿರಣ್ಯಕಶಿಪುವನ್ನು ಕೊಂದು, ಭಕ್ತ ಪ್ರಹ್ಲಾದನನ್ನುದ್ಧರಿಸಿದನು.

ಪ್ರಹ್ಲಾದ 'ಹರಿ'ಗಾಗಿ ಹುಡುಕಿಕೊಂಡು ಅಲೆದಾಡಲಿಲ್ಲ. ಅದರ ಅಗತ್ಯವೂ ಇರಲಿಲ್ಲ. ಹೀಗೆ ಹರಿ ಸರ್ವವ್ಯಾಪಿಯಾದವನೆಂದು ಈ ಪಾಶುರದ ನಾಯಕಿಗೆ ಮನವರಿಕೆಯಾದ್ದರಿಂದ ಆ ಸ್ವಾಮಿಯನ್ನು

Garani Srinivasan

ಹಾಡುತ್ತಕೊಂಡು ಅವಳು ಅಲೆದಾಡಿದಳಂತೆ. ಅಲೆದು ಸೊರಗಿದಳಂತೆ.
ಭಗವಂತನ ಮನಸ್ಸು ಕರಗಬಾರದೇ ?

2. வாணுதலம்மடவரல், உம்மைக்
காணுமாசையுள் நைகின்றாள், விறல்
வாணனாயிரம் தோள் துணித்தீர்!, உம்மைக்
காண நீரிரக்கமிலீரே

ವಾಣುದಲಮ್ಮಡವರಲ್, ಉಮ್ಮೈಕ್
ಕ್ಕಾಣುಮಾಶೈಯುಳ್ ನೈಗಿನ್ರಾಳ್, ವಿಱಲ್
ವಾಣನಾಯಿರಮ್ ತೋಳ್ ತುಣಿತ್ತೀರ್!, ಉಮ್ಮೈಕ್
ಕ್ಕಾಣ ನೀರಿರಕ್ಕಮಿಲೀರೇ.

ವಾಳ್ ನುದಲ್ வாண் நுதல் = ವರ್ಚಸ್ಸಿನಿಂದ ಕೂಡಿದ ಮುಖವುಳ್ಳ ಇ-ಮಡವರಲ್ இ-மடவரல் = ಈ ಸಾಧ್ವಿಯು, ಉಮ್ಮೈ உம்மை = ನಿಮ್ಮನ್ನು, ಕ್ಕಾಣುಮ್ காணும் = ಪಡೆದುಕೊಳ್ಳಬೇಕೆಂಬ, ಆಶೈಯುಳ್ ஆசையுள் = ಆಶೆಯಿಂದ, ನೈಗಿನ್ರಾಳ್ நைகின்றாள் = (ಕೊರಗುತ್ತಾ) ಕೃಶಳಾಗುತ್ತಿದ್ದಾಳೆ, ವಿಱಲ್ விறல் = ಬಲಿಷ್ಠನಾದ, ವಾಣನ್ வாணன் = ಬಾಣಾಸುರನ, ಆಯಿರಮ್ ತೋಳ್ ஆயிரம் தோள் = ಒಂದು ಸಾವಿರ ತೋಳುಗಳನ್ನು, ತುಣಿತ್ತೀರ್ துணித்தீர் = ಕಡಿದವರು ನೀವು, ಉಮ್ಮೈಕ್ಕಾಣ உம்மைக் காண = ನಿಮ್ಮನ್ನು ನೋಡದಿದ್ದರೆ, ನೀರ್ நீர் = ನೀವು, ಇರಕ್ಕಮ್ ಇಲೀರೇ இரக்கம் இலீரே ಕರುಣೆ ಇಲ್ಲದವರಾಗಿದ್ದೀರಲ್ಲ!

ವರ್ಚಸ್ವಿಯಾದ ಈ ಸಾಧ್ವಿಯು ನಿಮ್ಮನ್ನು ಪಡೆದುಕೊಳ್ಳಬೇಕೆಂಬ ಆಶೆಯಿಂದ (ಕೊರಗುತ್ತಾ) ಕೃಶಳಾಗುತ್ತಿದ್ದಾಳೆ ಬಲಿಷ್ಠನಾದ ಬಾಣಾಸುರನ ಸಾವಿರ ತೋಳುಗಳನ್ನು ಕಡಿದಂತಹ ಸಮರ್ಥರು ನೀವು! ನಿಮ್ಮನ್ನು (2)
ನೋಡದಿದ್ದರೆ ನೀವು ಕರುಣೆ ಇಲ್ಲದವರಾಗಿದ್ದೀರಲ್ಲ!

ಹಿಂದಿನ ಪಾಶುರದಲ್ಲಿ, ಭಗವಂತನಲ್ಲಿ ಅತೀವವಾದ ಆಶೆಯನ್ನಿಟ್ಟುಕೊಂಡು, ಅವನನ್ನು ಕಂಡು ಕೂಡಿಕೊಳ್ಳಬೇಕೆಂದು, ಅವನ ನಾಮಸಂಕೀರ್ತನೆ ಮಾಡುತ್ತಾ ಅಲೆದಾಡುತ್ತಾ ಸೊರಗುವ ಭಕ್ತನ (ತನ್ನನ್ನು 'ನಾಯಕಿ' ಎಂದು ಭಾವಿಸಿಕೊಂಡು ಅಲೆದಾಡುತ್ತಾ ಸೊರಗುವ ಭಕ್ತನ) ಸಂಕಟವನ್ನು ಕುರಿತು ಬಹುಶಃ ಅವನ (ಅವಳ) ತಾಯಿ, ಅವಳ (ನಾಯಕಿಯ) ಪ್ರಿಯತಮನಾದ ಭಗವಂತನಲ್ಲಿ ಅರಿಕೆ ಮಾಡಿಕೊಂಡಳಷ್ಟೆ. ಆ 'ತಾಯಿ'ಯು ಬಗೆಗೆ ಒಂದೆರಡು ಮಾತನ್ನು ಇಲ್ಲಿ ಹೇಳಬಹುದೇನೋ ಎನಿಸುತ್ತದೆ.

ಭಗವಂತನಿಗೆ ನಿತ್ಯಾನಪಾಯಿನಿಯಾಗಿ ಅವನ ವಕ್ಷಸ್ಥಲವಾಸಿನಿಯಾಗಿರುವ ಶ್ರೀದೇವಿಯನ್ನು 'ದಯಾಸ್ವರೂಪಿಣಿ' ಎನ್ನುತ್ತಾರೆ. ಆಕೆಯು ಕೃಪೆಗೆ ಒಳಗಾದ ಭಕ್ತನ ತೊಳಲಾಟವನ್ನರಿತು, ಕನಿಕರಗೊಂಡು, ಆಕೆ

Garani Srinivasan

ಅವನನ್ನು ಅನುಗ್ರಹಿಸಬೇಕೆಂದು ತನ್ನ ಪತಿಯಾದ ಭಗವಂತನಲ್ಲಿ ಅರಿಕೆ ಮಾಡಿ ಕೊಳ್ಳುತ್ತಾಳೆ. ಮತ್ತು, ಸ್ವಾಮಿಯನ್ನು ಭಕ್ತನ ಕಡೆಗೆ ಒಲಿಸಿಕೊಳ್ಳುತ್ತಾಳೆ. ಶ್ರೀದೇವಿಯ ಈ ಕೆಲಸವನ್ನು 'ಪುರುಷಕಾರ' ಎನ್ನಲಾಗುತ್ತದೆ. ಶ್ರೀದೇವಿಯನ್ನು 'ಪುರುಷಕಾರಳು' ಎಂದು ಕರೆಯುವುದೂ ಈ ಕಾರಣದಿಂದಲೇ. ಸರ್ವಲೋಕ ಜನನಿಯಾದ ಶ್ರೀದೇವಿಯಂತೆಯೇ ಭಕ್ತನ ಪರವಾಗಿ ಇಲ್ಲಿ ಪುರುಷಕಾರವನ್ನು ಮಾಡುತ್ತಿದ್ದಾಳೆಯೋ ಎನಿಸುತ್ತದೆ.

ಈ ಪಾಶುರದಲ್ಲಿಯೂ ಆ ಮಾತಾಯಿಯೇ ತನ್ನ 'ಮಗಳ' ವಿಷಯವಾಗಿ ಮಾತನ್ನು ಮುಂದುವರಿಸುತ್ತಿದ್ದಾಳೆ:

ತಾಯಿ ಹೇಳುತ್ತಾಳೆ: ಸ್ವಾಮೀ, ಪರಮಸಾಧ್ವಿಯಾದ ಈ ಸುಂದರಿಯು ವರಿಸಿ ~~...~~ ನಿಮ್ಮನ್ನು ಪಡೆದುಕೊಳ್ಳಬೇಕೆಂಬ ಮನದಾಕೆ. ನಿಮ್ಮನ್ನು ಒಲಿಸಿಕೊಳ್ಳುವುದಕ್ಕಾಗಿ ನಾನಾ ರೀತಿಯಲ್ಲಿ ಕೇಳುತ್ತಾ, ದಿನದಿನಕ್ಕೂ ಕೃಶಳಾಗುತ್ತಿದ್ದಾಳೆ. ನಿಮ್ಮನ್ನು ಗಮನಿಸಿದರೆ ನೀವು ಕಲ್ಲು ಮನಸ್ಸಿನವರು ಎಂದು ತೋರುತ್ತದೆ. ಹಿಂದೆ ಮಹಾಬಲಿಷ್ಠನೆಂಬ ಬಾಣಾಸುರನ ಸಾವಿರ ತೋಳುಗಳನ್ನು ಕತ್ತರಿಸಿ ಹಾಕಿದಿರಲ್ಲ! ನಿಮಗೆ ಕರುಣೆ ಎಂಬುದು ಇಲ್ಲವೇ ಇಲ್ಲವೆಂದು ತೋರುತ್ತದೆ. ದಯೆಯಿಲ್ಲ!

ಸರ್ವೇಶ್ವರನಿಗೆ ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣ ಎಂಬ ಎರಡು ಕೆಲಸಗಳು. ತನ್ನ ಆಶ್ರಿತರನ್ನು ರಕ್ಷಿಸುವುದು ಮತ್ತು ಅದಕ್ಕೆ ಅಡ್ಡಿಯಾಗುವ, ಆ ಆಶ್ರಿತರನ್ನು ತೊಂದರೆಪಡಿಸುವ, ದುಷ್ಟರನ್ನು ಮಟ್ಟಹಾಕುವುದು - ಇವು. ಬಾಣಾಸುರನ ವೃತ್ತಾಂತ ಇಲ್ಲಿ ಭಗವಂತನ ದುಷ್ಟಶಿಕ್ಷಣಕ್ಕೆ ನಿದರ್ಶನವಾಯಿತು. ಆ ಸಂದರ್ಭದಲ್ಲಿ ದಯೆ, ಕನಿಕರಗಳಿಗೆ ಎಡೆಯುಂಟೇ? ಭಕ್ತನನ್ನು ಉದ್ಧರಿಸುವುದು ಕನಿಕರದ ಕೆಲಸ. ಇದಕ್ಕೂ ತಕ್ಕ ನಿದರ್ಶನ ಬೇಡವೇ ಎಂಬುದು ಇಲ್ಲಿ ಧ್ವನಿ ಇರಬಹುದೇ?

3. இரக்கமனத்தோடு எரியணை,
அரக்குமெழுகுமொக்குமிவள்,
இரக்கமெழீர் இதற்கென்செய்கேன்?,
அரக்கனிலங்கை செற்றிருக்கே.

ಇರಕ್ಕಮನತ್ತೋಡು ಎರಿಯಣೈ,
ಅರಕ್ಕುಮೆಳುಹುಮೊಕ್ಕುಮಿವಳ್,
ಇರಕ್ಕಮೆಳೀರ್ ಇದಱ್ಕೆನ್ ಶೆಯ್ಗೇನ್?,
ಅರಕ್ಕನಿಲಙ್ಗೈ ಶೆಱ್ಱಿರುಕ್ಕೇ.

ಇರಕ್ಕಮ್ ಮನತ್ತೋಡು இரக்கம் மனத்தோடு = ದುಃಖ ತುಂಬಿದ ಮನದಿಂದ, ಎರಿ எரி = ಬೆಂಕಿಯೊಡನೆ, ಅಣೈ அணை = ಕೂಡಿದ (ಸಂಬಂಧಿಸಿದ), ಅರಕ್ಕುಮ್ அரக்கும் : ಅರಗನ್ನು,

ಮೆಯುಧುಮ் மெழுகும் = ಮೇಣವನ್ನು, ಒಕ್ಕ ஒக்க = ಹೋಲುವ, ಇವಳ್ ತಿರತ್ = ಇವಳ ವಿಷಯದಲ್ಲಿ, ಇರಕ್ಕಮ್ இரக்கம் = ಕರುಣೆ ಎಲ್ಲೀರ್ ಉಳ್ಳೀರ್ = ಇಲ್ಲದವರಾಗಿದ್ದೀರಿ! ಇದರ್ಕು இதற்கு = ಇದಕ್ಕೆ, ಎನ್ ಶೆಯ್‌ಗೇನ್ என் செய்கேன் = ಏನು ಮಾಡಲಿ? ಅರಕ್ಕನ್ அரக்கன் = ರಾವಣನ, ಇಲಂಗೈ இலங்கை = ಲಂಕಾಪಟ್ಟಣವನ್ನು, ಶೆತ್ತಿರುಕ್ಕೇ செற்றீருக்கே = ನಾಶಪಡಿಸಿದ ನಿಮಗೆ.

ದುಗುಡ ತುಂಬಿದ ಮನಸ್ಸಿನಿಂದ (ಕೂಡಿದ,) ಬೆಂಕಿಯೊಡನೆ ಸಂಬಂಧಿಸಿದ ಅರಗನ್ನು ಮೇಣವನ್ನು ಹೋಲುವ ಇವಳ ವಿಷಯದಲ್ಲಿ ಕರುಣೆ ಇಲ್ಲದವರಾಗಿದ್ದೀರಿ! ಇದಕ್ಕೆ ಏನು ಮಾಡಲಿ? ರಾವಣನ ಲಂಕಾಪಟ್ಟಣವನ್ನು ನಾಶಪಡಿಸಿದ ನಿಮಗೆ! (3)

"ಎರಿಯುಣ್ಣ ಅರಕ್ಕು ಮೆಯುಧು ಒಕ್ಕುಮಿವಳ್" — ಬಹಳ ಸುಂದರವಾದ ಉಪಮಾನವಿದು. ಬೆಂಕಿಗೆ ಅರಗು ಮೇಣಗಳಿಗೆ ಇರುವ ಸ್ವರೂಪ, ಸ್ವಭಾವ, ಸಂಬಂಧಗಳನ್ನು ಹೇಳಬೇಕಾಗಿಲ್ಲವು. "ಬೆಂಕಿಯನ್ನು ಕೂಡಿಕೊಳ್ಳಬೇಕೆಂಬ ಅರಗು ಮೇಣಗಳ ಹಾಗೆ (ಇವಳು) ಎಂಬುದು ಇದರ ಅರ್ಥ. ಬೆಂಕಿಯ ಸಮೀಪಕ್ಕೆ ಕೊಂಡೊಯ್ದರೆ ಕರಗು – ಅರಗು ಕರಗುತ್ತದೆ. ಮೇಣವು ಮೃದುವಾಗುತ್ತದೆ, ಕರಗುತ್ತದೆ. ಬೆಂಕಿಯ ಸಂಬಂಧವನ್ನು ಅವಕ್ಕೆ ತಂದುಕೊಡಲೇ ಅವು ಕಾವೇರುತ್ತವೆ. ಬೆಂದು, ಉರಿದು, ಹೆಸರಿಲ್ಲದಂತಾಗುತ್ತವೆ. ~~ಇವಳು~~

ಉಪಮಾನದ ಇನ್ನೊಂದು ಭಾಗ ಹೀಗಿದೆ: ಬೆಂಕಿಗೆ ಭಗವಂತನಿಗೂ ಹೋಲಿಕೆ. ಭಕ್ತನಿಗೆ 'ಇವಳಿಗೆ' (ನಾಯಕಿಗೆ ಹೆಣ್ಣು) ಹೋಲಿಕೆ. ಗುಣ ಸ್ವಭಾವ ಸ್ವರೂಪಗಳಲ್ಲಿ ಭಗವಂತನು ಬೆಂಕಿಯಂತೆ. ಸುಡುವ ಭಸ್ಮಮಾಡುವ ಸ್ವಭಾವದ ತೇಜೋರೂಪ, ತೇಜೋಮಯ, ಸುಟ್ಟು ಭಸ್ಮಮಾಡುವ ಸ್ವಭಾವದವನು. ಯಾರೂ ಅವನ ಹತ್ತಿರ ಹೋಗಲಾರರು ಉದ್ದೀಪನವಾದ ಯಾರಾದರೂ ಅವನನ್ನು ಸಮೀಪಿಸಿದರೆ ಅವರು ಕಾವೇರಿ ಬೆಂದು ಹೆಸರಿಲ್ಲದಂತಾಗುತ್ತಾರೆ. ಭಕ್ತನು ('ಇವಳು') ಅರಗು ಮೇಣಗಳ ಹಾಗೆ ಹೊರನೋಟಕ್ಕೆ ಗಡುಸು. ಭಗವತ್ಸಂಬಂಧವಾದ ವಿಷಯಗಳು ಮನಸ್ಸಿಗೆ ಬಂದಾಗಲಿ, ಇಂದ್ರಿಯಗಳ ಮೂಲಕ ಗ್ರಹಿಸಿದಾಗಲಿ, ಭಗವಂತನ ಜೊತೆಗೂಡಲೇ ಅವನು (ಇವಳು) ಕರಗಿ ಹೋಗುತ್ತಾನೆ (ಳೆ). ಭಗವಂತನ ಸಂಸರ್ಗವನ್ನೇ ಅದೃಷ್ಟವಶಾತ್ ಪಡೆದುಕೊಂಡರೋ? ಅರಗು ಮೇಣಗಳ ಗತಿಯೇ ಅವನಿಗೂ ಬರಬಹುದು ಭಗವಂತನಲ್ಲಿ ಒಂದಾಗಿ ಹೋಗಿಬಿಡಬಹುದು. ಇಲ್ಲವೇ, ಸುಟ್ಟು ಭಸ್ಮವಾಗಲೂ ಬಹುದು. ಬೆಂಕಿಯಾದರೆ ಅರಗು ಮೇಣವನ್ನು ಆದರಿಸಿ ಸ್ವೀಕರಿಸದು.

Garani Srinivasan

ಭರವಂಶನ ಲಕಿ ಒಲೆ ಬೇಕೆ!

ತಾಯಿ ಅಂಕೆ ಮಾಡಿಕೊಳ್ಳುತ್ತಾಳೆ: ಸ್ವಾಮೀ, ಇವಳು ನಿಮ್ಮ
ನ್ನು ಕೂಡಿಕೊಳ್ಳಲಾರದೆ ಇರುವುದರಿಂದ, ಇವಳ ಮನಸ್ಸು ದುಃಖದಿಂದ
ತುಂಬಿ ಹೋಗಿದೆ. ಲಂಕೆಯ ಸಂಹಾರವನ್ನು ಪಡೆಯ ಬೇಕೆಂಬುದಂ
ಬಲದ ಆರಗು ಮೇಲಾಗಿಕೊಂಡೆ ಇವಳು ನಿಮ್ಮೊಡನೆ ಕೂಡಿಕೊಳ್ಳ
ಬೇಕೆನ್ನುತ್ತಾಳೆ. ಲಂಕೆಯ ರಾಷ್ಟ್ರದ ಕುಲವನ್ನೇ ನಿರ್ನಾಮಗೊಳಿಸಿ
ದವರು ನೀವಲ್ಲವೇ? ಇವಳ ವಿಷಯದಲ್ಲಿ ನಿಮಗೆ ಕರುಣೆಯಾದ
ಗೂ ಉಂಟಾಗಬೇಕೇ? ನಾನೇನು ಮಾಡಲಿ? ಇವಳ ಸಂಕಟಕ್ಕೆ
ಪರಿಹಾರವೇನು? ಇವಳ ತೀವ್ರವಾದ ~~ಆಸೆ~~ ಬೇಗೆ ಪೂರ್ಣವಾಗ
ಬಲ್ಲವುದು?

ಮಾತುಗಳು ನವ್ಯರಾದ ನಿಂದೆಯಂತೆ, ಸುಂದರವಾದ ಪರೋಕ್ಷ
ಲಕಿಯ ಸ್ತುತಿಯಂತೆ ಎನಿಸುತ್ತವೆ!

4. இலங்கை செற்றவனே! என்னும், பின்னும்
வலங்கொள் புள்ளுயர்த்தாய்! என்னும், உள்ளம்
மலங்க வெவ்வுயிர்க்கும், கண்ணீர் மிகக்
கலங்கிக் கைதொழும் நின்றிவளே.

ಇಲಙ್ಗೈ ಶೆಱ್ಱವನೇ! ಎನ್ನುಮ್, ಪಿನ್ನುಮ್
ವಲಙ್ಗೊಳ್ ಪುಳ್ಳುಯರ್ತ್ತಾಯ್! ಎನ್ನುಮ್, ಉಳ್ಳಮ್
ಮಲಙ್ಗ ವೆವ್ವುಯಿರ್ಕ್ಕುಮ್, ಕಣ್ಣೀರ್ ಮಿಗ
ಕ್ಕಲಙ್ಗಿಕ್ಕೈ ತೊಳುಮ್ ನಿನ್ಱಿವಳೇ.

ಇಲಙ್ಗೈ ~~ಶೆಱ್ಱವನೇ~~ இலங்கை = ಲಂಕೆಯನ್ನು, ಶೆಱ್ಱವನೇ செற்ற
வனே = ನಾಶಪಡಿಸಿದವನೇ, ಎನ್ನುಮ್ என்னும் = ಎನ್ನುತ್ತಾಳೆ, ಪಿನ್ನುಮ್
பின்னும் = ಆಬಳಿಕ, ವಲಮ್ ಕೊಳ್ வலம் கொள் = ಬಲಿಷ್ಠವಾದ,
ಪುಳ್ ಪುள் = ಪಕ್ಷಿಯ, ಉಯರ್ತ್ತಾಯ್ உயர்த்தாய் = ಧ್ವಜವನ್ನುಳ್ಳ
ವನೇ, ಎನ್ನುಮ್ என்னும் = ಎನ್ನುತ್ತಾಳೆ, ಉಳ್ಳಮ್ உள்ளம் = ಅಂತ
ರಂಗವು (ಮನಸ್ಸು), ಮಲಙ್ಗ மலங்க = ಕದಡಿಹೋಗಲು, ವೆವ್ವುಯಿರ್ಕ್ಕುಮ್
வெவ்வுயிர்க்கும் = ಬಿಸಿಯಾಗಿ ನಿಟ್ಟುಸಿರು ಬಿಡುತ್ತಾಳೆ, ಕಣ್ಣೀರ
கண்ணீர் = ಕಣ್ಣೀರು, ಮಿಗ மிக = ಬಹಳ ಹೆಚ್ಚು, ಕಲಙ್ಗಿ கலங்கி =
ಉಕ್ಕಿ ಬರಲು, ಕೈತೊಳುಮ್ கைதொழும் = ಕೈಮುಗಿದು, ನಿನ್ಱ
நின்ற = ನಿಂತಿರುವ, ಇವಳೇ இவளே = ಈ ಹೆಣ್ಣೇ

ಈ ಹೆಣ್ಣು ~~ನಿಂತಿರುವ ಹಾಗೆಯೇ~~, ಕೈಮುಗಿದುಕೊಂಡು ನಿಂತಿರುವ ಹಾಗೆಯೇ
'ಲಂಕೆಯನ್ನು ನಾಶಪಡಿಸಿದವನೇ', ಮತ್ತು 'ಬಲಿಷ್ಠವಾದ ಪಕ್ಷಿಯ ಧ್ವಜವನ್ನು
ಳ್ಳವನೇ' ಎನ್ನುತ್ತಾಳೆ. ಮನಸ್ಸು ಕದಡಿ ಹೋಗುವುದರಿಂದ ಬಿಸಿಯಾಗಿ ನಿಟ್ಟು
ಸಿರು ಬಿಡುತ್ತಾಳೆ. ಬಹು ಹೆಚ್ಚಾಗಿ ಕಣ್ಣೀರು ~~ಉಕ್ಕಿ~~ ಬರುತ್ತಿರಲು ಕೈಮುಗಿದು ನಿಲ್ಲು
ತ್ತಾಳೆ.

Garani Srinivasan

ಲಂಕೆಯನ್ನು ನಾಶಮಾಡಿದವನೇ" – ಭಗವಂತನ ಪಾಟಿಯಲ್ಲಿನ ಸ್ವಭಾವಕ್ಕೆ ಇದು ಒಂದು ನಿದರ್ಶನವಾಗಿದೆ. ಲಂಕೆಯನ್ನು ಶ್ರೀರಾಮನು ನಾಶಮಾಡಿದ್ದೇಕೆ? ಅಸಹಾಯಕಳಾಗಿ, ಒಂಟಿಯಾಗಿದ್ದ ಸೀತಾದೇವಿಯನ್ನು ಕಪಟದಿಂದ ರಾವಣನು ಅಪಹರಿಸಿ, ಲಂಕೆಯಲ್ಲಿ ಸೆರೆಯಿಟ್ಟಿದ್ದಕ್ಕಾಗಿ ಅಲ್ಲವೇ? ಅಧರ್ಮಿಯಾದ ರಾವಣನನ್ನು ಶಿಕ್ಷಿಸುವುದಕ್ಕೂ, ಆಶ್ರಿತಳಾದ ಸೀತಾದೇವಿಯನ್ನು ಸೆರೆವಾಸದಿಂದ ಬಿಡಿಸುವುದಕ್ಕೂ ಅಲ್ಲವೇ? ಭಗವಂತನು ತನ್ನ ಆಶ್ರಿತರಿಗೆ ಒದಗಿದ ಕಷ್ಟವನ್ನು ನಿವಾರಿಸುವುದಕ್ಕಾಗಿ ಏನನ್ನು ಬೇಕಾದರೂ ಮಾಡುತ್ತಾನೆ. ಅವನಿಗೆ ಆಶ್ರಿತರಲ್ಲಿ ಮಿತಿಮೀರಿದ ಕನಿಕರ ಎಂಬುದನ್ನು ಇದು ಸೂಚಿಸುತ್ತದೆ.

ಬಲಿಷ್ಠವಾದ ಪಕ್ಷಿಯ ಧ್ವಜವುಳ್ಳವನೇ" – ಇದೂ ಭಗವಂತನ ಕನಿಕರದ ಸ್ವಭಾವವನ್ನು ತಿಳಿಸುತ್ತದೆ. 'ಬಲಿಷ್ಠವಾದ ಪಕ್ಷಿ' ಎಂದರೆ 'ಗರುಡ'. ಗರುಡನನ್ನು ಭಗವಂತನು ತನ್ನ ವಾಹನವನ್ನಾಗಿಯೂ, ಧ್ವಜವನ್ನಾಗಿಯೂ ಮಾಡಿಕೊಂಡಿದ್ದಾನೆ. ತನ್ನ ಆಶ್ರಿತನು ಎಲ್ಲೇ ಇರಲಿ, ಅವನು ಆಪತ್ತಿನಲ್ಲಿ ಸಿಕ್ಕಿಕೊಂಡಾಗ "ಮತ್ತ 'ಸ್ವಾಮೀ, ನೀನೇಗತಿ" ಎಂದು ಅನನ್ಯವಾಗಿ ಕರೆ ಕೊಟ್ಟಾಗ, ಭಗವಂತನು ಅಲ್ಲಿಗೆ ಧಾವಿಸಿ ಬಂದು ಅವನ ಆಪತ್ತನ್ನು ನಿವಾರಿಸಿ, ರಕ್ಷಿಸುವನು. ಈ ಕಾರ್ಯಕ್ಕೆ ಭಗವಂತನು ಗರುಡನನ್ನು ತನ್ನ ವಾಹನವನ್ನಾಗಿ ಮಾಡಿಕೊಂಡು ಅಲ್ಲಿಗೆ ಧಾವಿಸಿ ಬರುತ್ತಾನೆ. 'ಆಶ್ರಿತ ರಕ್ಷಣೆಯೇ ನನ್ನ ಗುರಿ' ಎಂದು ಜಗತ್ತಿಗೆ ಸಾರಿ ಹೇಳುವುದಕ್ಕಾಗಿ, ಸ್ವಾಮಿಯು ಗರುಡನನ್ನು ಧ್ವಜದ ಚಿಹ್ನೆಯನ್ನಾಗಿ ಮಾಡಿಕೊಂಡಿದ್ದಾನೆ.

ತಾಯಿ ಅರಿಕೆ ಮಾಡಿಕೊಳ್ಳುತ್ತಾಳೆ: ಸ್ವಾಮೀ, ಈ ಮಗಳು ತಮ್ಮನ್ನು ಕುರಿತು ಬಗೆಬಗೆಯಾಗಿ ಹೇಳುತ್ತಾಳೆ. 'ಲಂಕೆಯನ್ನು ನಾಶಮಾಡಿದವನೇ' ಎನ್ನುತ್ತಾಳೆ. 'ಗರುಡನನ್ನು ಧ್ವಜವಾಗಿ ಉಳ್ಳವನೇ' ಎನ್ನುತ್ತಾಳೆ. ನಿಮ್ಮ ಗುಣಸ್ವಭಾವಗಳನ್ನು ಚಿಂತಿಸುತ್ತ ಇವಳ ಮನಸ್ಸು ಕದಡಿಹೋಗಿದೆ. ಆಗಾಗ ಬಿಸಿಬಿಸಿಯಾಗಿ ನಿಟ್ಟುಸಿರು ಬಿಡುತ್ತಾಳೆ. ಇದು ಇವಳ ಸಂಕಟವನ್ನು ಸೂಚಿಸುವುದಿಲ್ಲವೇ? ಕಣ್ಣೀರು ಧಾರಾಕಾರವಾಗಿ ಸುರಿಯುತ್ತದೆ. ಕೈಜೋಡಿಸಿ ನಿಂತು ಬಿಡುತ್ತಾಳೆ. ಸ್ವಾಮೀ, ಇವಳಲ್ಲಿ ಕನಿಕರವಿಲ್ಲವೇ? ಈ ಬಗೆಯ ಅನುಭವಗಳೆಲ್ಲವೂ ಭಗವತ್ಕೃಪೆಯಿಂದ. ಭಕ್ತನಿಗೆ ಸಹಜವಾದದ್ದೇ!

5. இவளிராப்பகல் வாய்வெரீஇ, தன
குவளையொண் கண்ணநீர் கொண்டாள், வண்டு
திவளும் தண்ணந்துழாய் கொடீர், என
தவளவண்ணர் தகவுகளே.

ಇವಳಿರಾಪ್ಪಗಲ್ ವಾಯ್ ವೆರೀಇ, ತನ
ಕುವಳೈಯೊಣ್ ಕಣ್ಣನೀರ್ ಕೊಣ್ಡಾಳ್, ವಣ್ಡು
ತಿವಳುಮ್ ತಣ್ಣನ್ದುಳಾಯ್ ಕೊಡೀರ್, ಎನ
ತವಳವಣ್ಣರ್ ತಗವುಗಳೇ.

ಇವಳ್ (ಇ)ರವುಂ = ಇವಳು, ಇರಾ ಪಗಲ್ (ಇ)ರಾ ಬಕಲು = ರಾತ್ರಿ ಹಗಲೂ, ವಾಯ್ ವೆರೀಇ ವಾಯ್ (ವ)ರ್(ಇ) = ಬಾಯಿಂದ ಬಡಬಡಿಸುತ್ತಾ ತನ ಕುವಳೈ ಒಣ್ ಕಣ್ (ಕು)ವಳೈ ಒಣ್ ಕಣ್ಣ = ಕನ್ನೈದಿಲೆ ಯಂತಿರುವ ಕಣ್ಣುಗಳಲ್ಲಿ, ನೀರ್ ಕೊಣ್ಡಾಳ್ ನೀರ್ ಕೊಣ್ಡಾಳ್ = ನೀರನ್ನು ತುಂಬಿಕೊಂಡಿದ್ದಾಳೆ, ವಣ್ಡು ವಣ್(ಡು) = ದುಂಬಿಗಳು, ಉಣ್ = ತಿನ್ನುವ, ತಣ್ ತುಳಾಯ್ = ತಂಪಾದ, ತುಳಸಿಯ ದಾರವನ್ನು, ಅವಳ ಅಂ = ಕೇಳುತ್ತಿದ್ದಳು, (ನಿರಾಕರಿಸಲಾಯಿತು), ಎನ ಗಣ = ಕೊಡಲಿಲ್ಲ, ಬಳಿಯ ಬಂದವರ ಎಂದರೆ, ತವಳ ವಣ್ಣರ್ ತವಳ ವಣ್ಣರ್ = ಬಿಳಿಯ ಬಣ್ಣದವರ (ಪರಿಶುದ್ಧವಾದ ಗುಣಗಳುಳ್ಳವರ), ತಕವುಡೈಯೀರ್ = ದಯೆಯುಳ್ಳವರೇ, ಇದು!

ಇವಳು ಹಗಲೂ ರಾತ್ರಿಯೂ ಬಾಯಿಂದ ಬಡಬಡಿಸುತ್ತಾ ಕನ್ನೈದಿಲೆಯಂತಿರುವ ಕಣ್ಣುಗಳಲ್ಲಿ ನೀರನ್ನು ತುಂಬಿಕೊಳ್ಳುತ್ತಾಳೆ. ದುಂಬಿಗಳು ಮುತ್ತುವ ತಂಪಾದ ಕೇಳುತ್ತಿದ್ದ ತುಳಸಿಯ ದಾರವನ್ನು ನೀವು ನಿರಾಕರಿಸಿದಿರಿ. ಬಿಳಿಯ ಬಣ್ಣದವರ (ಪರಿಶುದ್ಧವಾದ ಗುಣಗಳುಳ್ಳವರ) ದಯೆಯೇ ಇದು ಎಂದಳು!

ಭಕ್ತನು ಹಗಲು ರಾತ್ರಿ ಎನ್ನದೆ, ಎಡೆಬಿಡದೆ ಪಠಿಸುತ್ತಿರುವುದು ಭಗವನ್ನಾಮವನ್ನು. ಭಗವದ್ಗುಣ ಸ್ವಭಾವಗಳನ್ನು ಹೇಳುತ್ತಲೇ ಇರುತ್ತಾನೆ. ಆಗ ಅವನಿಗೆ ಉದ್ವೇಗವುಂಟಾಗುತ್ತದೆ. ಕೆಲವಾಗ ಕಣ್ಣುಗಳಲ್ಲಿ ನೀರು ತುಂಬುತ್ತದೆ. ಸ್ವಾಮಿಯನ್ನು ತಾನು ಹೀಗೆ ಕೇಳುವುದು ಸಾಧ್ಯವಾಗಲಿಲ್ಲವಲ್ಲ ಎಂದು ಸಂಕಟವಾಗುತ್ತದೆ. ಹೀಗಾಗಿ ಕಣ್ಣುಗಳಲ್ಲಿ ನೀರು ತುಂಬುತ್ತದೆ.

ಪರಿಶುದ್ಧವಾದ ಗುಣಗಳು ಎಂಬುದನ್ನು ಸಾಟಿಯಿಲ್ಲದ ಗುಣಗಳು. ಎಂದರ್ಥ ಮಾಡಬಹುದು. ಇಂಥ ಗುಣಗಳುಳ್ಳವರ ನಡತೆ ಹೇಗಿರಬೇಕು? ಅವರಲ್ಲಿ ಯಾವ ಕೊರತೆಯೂ ಕಾಣಬಾರದು. ಇದಕ್ಕೆ ಬದಲಾಗಿ, ಭಗವಂತನ ಔದಾರ್ಯಕ್ಕೆ ಮಿತಿಯೇ ಇಲ್ಲ. ಇದಕ್ಕೆ ಹರಕೆ, ಭಕ್ತರ ಕೋರಿಕೆಗಳನ್ನು ಸ್ವಾಮಿಯು ಸಲ್ಲಿಸಬೇಕಲ್ಲವೇ? ಕಷ್ಟಪಡುವವರ ಕೋರಿಕೆಗಳನ್ನು ಆಗಲೇ ಆ ಗುಣ ತೋರಿಸುವುದು! ಅವನು ಮುಡಿದ ತುಳಸಿಯ ದಾರವನ್ನು ನೀಡೆಂದು ಬೇಡಿದರೆ, ಅದನ್ನು ನೀಡಬೇಡವೇ? ಇಲ್ಲವೆನ್ನುವುದು ಅದೆಂಥ ಔದಾರ್ಯ! ~~ಇದು ಅವ~~ ಹೀಗೆನ್ನುವುದು ಅವನ ದಯೆಯೇ ತೋರದೇ?

ತಾಯಿ ಆಕ್ಷೇಪ ಮಾಡುತ್ತಾಳೆ: ಸ್ವಾಮೀ ಇವಳು ಹಗಲು ರಾತ್ರಿ ಎನ್ನದಂತೆ ನಿಮ್ಮನ್ನು ಕುರಿತು ಪಠಿಸುತ್ತಲೇ ಇರುತ್ತಾಳೆ. ಇವಳ ಮನಸ್ಸು ಕದಡಿ ಹೋಗುತ್ತದೆ. ಕಣ್ಣುಗಳಲ್ಲಿ ನೀರು ತುಂಬುತ್ತದೆ.

GaraniSrinivasan

ಇವಳು ಬೇಡುವುದು ಪ್ರಸಾದಗಾರವಾಗಿ ನೀವು ಮುಡಿದಿರುವ ತಂಪಾದ ಶೋಭನದ ತುಳಸಿಯ ಹಾರ! ಅದನ್ನೂ ನೀವು ನಿರಾಕರಿಸುವಿರಲ್ಲ! ಇದೇನೋ ಸಾಟಿಯಿಲ್ಲದ ಸುಗುಣಗಳುಳ್ಳವರಾದ ನಿಮ್ಮ ಹಿರಿಮೆ!

6. தகவுடையவனே! என்னும் பின்னும்
மிகவிரும்பும் பிரானென்னும், எனது
அகவுயிர்க்கு அமுதே! என்னும், உள்ளம்
உகவுருகி நின்றுள்ளுளே

ತಕವುಡೈಯವನೇ! ಎನ್ನುಮ್, ಪಿನ್ನುಮ್
ಮಿಕವಿರುಮ್ಬುಮ್ ಪಿರಾನೆನ್ನುಮ್, ಎನದು
ಅಕವುಯಿರ್ಕ್ಕು ಅಮುದೇ! ಎನ್ನುಮ್, ಉಳ್ಳಮ್
ಉಕವುರುಹಿ ನಿನ್ರುಳ್ಳುಳೇ.

ತಕವು ಉಡೈಯವನೇ தகவு உடையவனே = ಸಾಟಿಯಿಲ್ಲದ ಸುಗುಣಗಳ ಹಿರಿಮೆಯುಳ್ಳವನೇ, ಎನ್ನುಮ್ என்னும் = ಎನ್ನುತ್ತಾಳೆ, ಪಿನ್ನುಮ್ பின்னும் = ಬಳಿಕ, ಮಿಕ ವಿರುಮ್ಬುಮ್ மிக விரும்பும் = ಬಹಳ ಆಶಿಸುತ್ತಾಳೆ, ಪಿರಾನ್ ಎನ್ನುಮ್ பிரான் என்னும் = ಸ್ವಾಮೀ (ಒಡೆಯನೇ) ಎನ್ನುತ್ತಾಳೆ, ಎನದು எனது = ನನ್ನ, ಅಕಮ್ ಉಯಿರ್ಕ್ಕು அக உயிர்க்கு = ಮನಸ್ಸಿಗೂ ಆತ್ಮಕ್ಕೂ, ಅಮುದೇ அமுதே = ಅಮೃತವೇ, ಎನ್ನುಮ್ என்னும் = ಎನ್ನುತ್ತಾಳೆ, ಉಳ್ಳಮ್ உள்ளம் = ಮನಸ್ಸು (ಅಂತರಂಗವು), ಉಕ ಉರುಹಿ உக உருகி = ಬಹಳವಾಗಿ ಕರಗಿ, ಉಳ್ಳುಳೇ ನಿನ್ರು உள்ளுளே நின்று = ಕಣ್ಣೀರು ತಾನೇ (ಅವನಾಗಿ) ಒಳ್ಳೇ ನಿಂತು ಇರುತ್ತಾಳೆ.

'ಸಾಟಿಯಿಲ್ಲದ ಸದ್ಗುಣಗಳ ಹಿರಿಮೆಯುಳ್ಳವನೇ' ಎನ್ನುತ್ತಾಳೆ. ಬಳಿಕ ಬಹಳ ಆಶಿಸುತ್ತಾಳೆ 'ಒಡೆಯನೇ' ಎನ್ನುತ್ತಾಳೆ. 'ನನ್ನ ಮನಸ್ಸಿನ ಮತ್ತು ಆತ್ಮದ ಅಮೃತವೇ' ಎನ್ನುತ್ತಾಳೆ. ಇವಳ ಅಂತರಂಗವು ಬಹಳವಾಗಿ ಕರಗಿ ಹರಿಯುವುದರಿಂದ ಕಣ್ಣೀರು ತಾನೇ ಮಗ್ನವಾಗಿರುತ್ತಾಳೆ. (6)

ತಾಯಿ ಹೀಗೆ ಹೇಳುತ್ತಾಳೆ: ಸ್ವಾಮೀ, ಇವಳು ನಿಮ್ಮಲ್ಲಿ ಮಿತಿಮೀರಿ ಅನುರಕ್ತಳಾಗಿರುತ್ತಾಳೆ. ಪ್ರೇಮಭರದಿಂದ, ನನ್ನೊಡೆಯ ಸಾಟಿಯಿಲ್ಲದ ಸದ್ಗುಣಸಂಪನ್ನನೇ, ಅಮೃತದಂತೆ ನನ್ನ ಮನಸ್ಸಿಗೆ ಇಂಪು ಕೊಡುವವನೇ, ನನ್ನ ಆತ್ಮದ ಅಮೃತವೇ' ಎಂದು ಮುಂತಾಗಿ ನಿಮ್ಮನ್ನು ಕೊಂಡಾಡುತ್ತಾ ಕರಗಿ ಕರೆಯುತ್ತಾಳೆ. ಇವಳ ಅಂತರಂಗವು ಪೂರ್ತಿಯಾಗಿ ಕರಗಿ ಹೋಗುತ್ತದೆ. ಆದ್ದರಿಂದ ಇವಳು ಅಂತರ್ಮುಖಿಯಾಗಿ, ಕಣ್ಣೀರು

ತಾನು ಮಗ್ನಳಾಗುತ್ತಾಳೆ.

'ತಕವು தகவு' - ಎಂಬುದಕ್ಕೆ "ಯೋಗ್ಯತೆ, ಗುಣ ಹಿರಿಮೆ, ನ್ಯಾಯ, ನೀತಿ, ಧರ್ಮ, ಸರ್ವಸಮತ್ವ, ಬಲ, ಸಾಮರ್ಥ್ಯ, ಅರಿವು, ಸಾತ್ವಿಕ" ಎಂದು ಮುಂತಾಗಿ ಅರ್ಥವಾಗುತ್ತದೆ.

Garani Srinivasan

7. உள்ளாவி உலர்ந்துலர்ந்து, என
வள்ளலே! கண்ணனே! என்னும், பின்னும்
வெள்ளநீர்க் கிடந்தாயென்னும், என
கள்வி தான் பட்ட வஞ்சனையே

ಉಳ್ಳಾವಿ ಉಲರ್ನ್ದುಲರ್ನ್ದು, ಎನ
ವಳ್ಳಲೇ! ಕಣ್ಣನೇ! ಎನ್ನುಮ್, ಪಿನ್ನುಮ್
ವೆಳ್ಳ ನೀರ್ಕ್ಕಿಡನ್ದಾಯೆನ್ನುಮ್, ಎನ
ಕಳ್ವಿ ತಾನ್ ಪಟ್ಟ ವಂಚನೈಯೇ.

ಉಳ್ಳಾಳ್ ಆವಿ உள்ளன் ஆவி = ಒಳಗೊಳಗಿನ ಜೀವನು ಉಲರ್ನ್ದು ಉಲರ್ನ್ದು உலர்ந்து உலர்ந்து = ಒಣಗಿ ಒಣಗಿ (ಒಣಗಿ ಒಣಗಿ) ಹೋಯಿತೋ ಎನ என = ಎಂಬಂತೆ ವಳ್ಳಲೇ வள்ளலே = ಉದಾರಿಯೇ, ಕಣ್ಣನೇ கண்ணனே = ಆಕರ್ಷಕನೇ (ಕೃಷ್ಣನೇ), ಎನ್ನುಮ್ என்னும் = ಎನ್ನುತ್ತಾಳೆ, ಪಿನ್ನುಮ್ பின்னும் = ಆ ಕೂಡಲೇ, ವೆಳ್ಳಮ್ ನೀರ್ ಕಿಡನ್ದಾಯ್ வெள்ளம் நீர் கிடந்தாய் = ಕಡಲಿನ ನೀರಿನಲ್ಲಿ ಪವಡಿಸಿರುವವನೇ, ಎನ್ನುಮ್ என்னும் = ಎನ್ನುತ್ತಾಳೆ, ಎನ என = ಎಂದದಾಗಿ, ಕಳ್ವಿ கள்வி = ವಂಚಕನಾದವನ (ಕಪಟಿಯು), ತಾನ್ ಪಟ್ಟ தான் பட்ட = ತಾನು ಅನುಭವಿಸಿದ, ವಂಜನೈಯೇ வஞ்சனையே = ವಂಚನೆಯನ್ನೇ.

ಒಳಗೊಳಗೆ ಜೀವವು ಒಣಗಿ ಒಣಗಿ ಹೋಯಿತೋ ಎಂಬಂತೆ 'ಉದಾರಿಯೇ, ಆಕರ್ಷಕನೇ (ಕೃಷ್ಣನೇ)' ಎನ್ನುತ್ತಾಳೆ. ಆ ಕೂಡಲೇ 'ಕಡಲಿನ ನೀರಿನಲ್ಲಿ ಪವಡಿಸಿರುವವನೇ' ಎನ್ನುತ್ತಾಳೆ. ತಾನು ಪಟ್ಟ ವಂಚನೆಯನ್ನೇ ಆ ವಂಚಕನೆಂದದಾಗೆ (ಆ ವಂಚನೆಯೆಂದದಾಗೆ). (7)

ತಾಯಿ ಅರಿಕೆ ಮಾಡುತ್ತಾಳೆ: ಸ್ವಾಮೀ, ಇವಳು ನಿಮ್ಮಲ್ಲಿ ಅತಿಗಾಢವಾಗಿ ಅನುರಕ್ತಳಾಗಿದ್ದಾಳೆ. ನಿಮ್ಮ ಔದಾರ್ಯವನ್ನೂ ಆಕರ್ಷಕವಾದ ಗುಣಗಳನ್ನೂ ನಿತ್ಯ ಯೌವನ ಸೌಂದರ್ಯವನ್ನೂ ತಿಳಿದು, ನಿಮ್ಮನ್ನು ಸೇರಬೇಕೆಂದು ಬಯಸಿದ್ದಾಳೆ. ನಿಮ್ಮ ಸನ್ನಿಧಿ ಇವಳಿಗೆ ಒದಗಿ ಬರಲ್ಲವೆಂದು ಕೊರಗಿ, ಕೊರಗಿ ಬಡವಾಗಿದ್ದಾಳೆ. ಆದರೂ ದೃಢ ಅತಿಶಯವಾದ ಪ್ರೇಮದಿಂದ ನಿಮ್ಮ ಕಲ್ಯಾಣ ಗುಣಗಳನ್ನು ಬಗೆಬಗೆಯಾಗಿ ವರ್ಣಿಸುತ್ತಾ, ನಿಮ್ಮನ್ನು ಕೂಗಿ ಕರೆಯುತ್ತಾಳೆ. ಇವಳ ಜೀವವೇ ನಂದಿಹೋಗುವುದೋ, ಅದು ಒಳಗೊಳಗೇ ಕೊರಗಿನಿಂದ ಒಣಗಿ ಹೋಗಿದೆಯೋ ಎನ್ನುವಂತೆ 'ಉದಾರಿಯೇ' 'ಆಕರ್ಷಕನೇ' ಎಂದು ಕೂಗುತ್ತಾಳೆ. ಇವಳ ಇಂಥ ಪರಿಸ್ಥಿತಿಯಲ್ಲೂ ನೀವು ಹೀಗೆ ನಿರ್ಲಕ್ಷ್ಯರಾಗಿರಬಹುದೇ? ತಾನು ವಂಚಕನೆಂತೆ ಇವಳು ಭಾವಿಸಿಕೊಳ್ಳುವುದೂ, ಆ ವಂಚನೆಯ ಬಗೆಯನ್ನೇ

Garani Srinivasan

ನೀವಾಗಿದ್ದೀರೆನ್ನುವುದು ಪಾತ್ರವಾಗಿಬಿಟ್ಟಿದೆ? ಸ್ವಾಮೀ, ನೀವು ಪರಮ ಉದಾರಿಗಳು, ಉಪಕಾರಿಗಳು ಆಶ್ರಿತರಿಗೆ ಸುಲಭರಾದವರು ನಮ್ಮ ಹುಡುಗಿಯನ್ನು ತಿರಸ್ಕರಿಸಿ. ಅವಳನ್ನು ಸ್ವೀಕರಿಸದೆ ಆದರೂ.

8. வஞ்சனே! என்னும் கைதொழும், தன
நெஞ்சம் வேவ நெடிதுயிர்க்கும், விறல்
கஞ்சனை வஞ்சனை செய்தீர், உம்மைத்
தஞ்சமென்று இவள் பட்டனவே

ವಂಜನೇ! ಎನ್ನುಮ್ ಕೈತೊಳುಮ್, ತನ
ನೆಂಜಮ್ ವೇವ ನೆಡಿದುಯಿರ್ಕ್ಕುಮ್, ವಿಱಲ್
ಕಂಜನೈ ವಂಜನೈ ಶೆಯ್ದೀರ್, ಉಮ್ಮೈತ್
ತ್ತಂಜಮೆನ್ಱು ಇವಳ್ ಪಟ್ಟನವೇ

ವಂಜನೇ வஞ்சனே = ವಂಚಕನೇ, ಎನ್ನುಮ್ என்னும் = ಎನ್ನುತ್ತಾಳೆ, ಕೈತೊಳುಮ್ கைதொழும் = ಕೈಮುಗಿಯುತ್ತಾಳೆ. ತನ ನೆಂಜಮ್ தன நெஞ்சம் = ತನ್ನ ಮನಸ್ಸು, ವೇವ வேவ = ಬೇಯುತ್ತಿರಲು, ನೆಡಿದು நெடிது = ದೀರ್ಘವಾಗಿ, ಉಯಿರ್ಕ್ಕುಮ್ உயிர்க்கும் = ಉಸಿರು ಬಿಡುತ್ತಾಳೆ, ವಿಱಲ್ விறல் = ಬಲಿಷ್ಠನಾದ, ಕಂಜನೈ கஞ்சனை = ಕಂಸನನ್ನು, ವಂಜನೈ ಶೆಯ್ದೀರ್ வஞ்சனை செய்தீர் = ವಂಚಿಸಿದಿರಿ, ಉಮ್ಮೈತ್ உம்மை = ನಿಮ್ಮನ್ನು, ತಂಜಮ್ தஞ்சம் = ಆಶ್ರಯದಾತರು, ಎನ್ಱು என்று = ಎಂದು, ಇವಳ್ இவள் = ಇವಳು, ಪಟ್ಟನವೇ பட்டனவே = ಪಟ್ಟ ಅನುಭವವೇ (ಪಾಡೇ).

ವಂಚಕನೇ ಎನ್ನುತ್ತಾಳೆ. ಕೈಮುಗಿಯುತ್ತಾಳೆ. ತನ್ನ ಮನಸ್ಸು ಬೇಯುತ್ತಿರಲು, ದೀರ್ಘವಾಗಿ ಉಸಿರುಬಿಡುತ್ತಾಳೆ. ಬಲಿಷ್ಠನಾದ ಕಂಸನನ್ನು ವಂಚಿಸಿದಿರಿ. ನಿಮ್ಮನ್ನು ಆಶ್ರಯದಾತರು ಎಂದು ಇವಳು ಪಟ್ಟ ಪಾಡೇ!

ತಾಯಿ ಅರಿಕೆಮಾಡುತ್ತಾಳೆ: ಸ್ವಾಮೀ ಈ ಹೆಣ್ಣು ನಿಮ್ಮನ್ನು ಅನನ್ಯಾ ಆಶ್ರಯಿಸಿದ್ದಾಳೆ ನೀವು ಆಶ್ರಯದಾತರಾಗುವಿರಿ ಎಂದು ಭಾವಿಸಿ ನಂಬಿದ್ದಾ. ಆದರೆ ನೀವು ಮಾಡಿದ್ದಾದರೂ ಏನು? ಇವಳಿಗೆ ಅರಿವಿಲ್ಲದಂತೆಯೇ ನೀವು ಇವಳ ಅಂತರಂಗವನ್ನು ಪ್ರವೇಶಿಸಿದಿರಿ. ಮನಸ್ಸನ್ನು ಕಲಕಿದಿರಿ. ನಿಮ್ಮಬಗೆಗೆ ಇವಳಿಗೆ ಅತೀವ ಪ್ರೇಮವುಂಟಾಗುವಂತೆ ಮಾಡಿದಿರಿ. ಅನಂತರ ಇವಳಿಗೆ ನೀವು ಒದಗಿಬರದಂತೆ ನೀವು ಅಲ್ಲಿಂದ ಮರಳಿ ಹೋಗಿಬಿಟ್ಟಿದ್ದೀರಿ. ಇದನ್ನೆಲ್ಲಾ ಯೋಚಿಸುತ್ತಾ ಇವಳು ನಿಮ್ಮನ್ನು 'ವಂಚಕನೇ' ಎಂದು ಕೂಗಿ ಕರೆಯುತ್ತಾಳೆ. ಆ ಮರುಕ್ಷಣದಲ್ಲಿಯೇ ತಾನು ಮಾಡಿದ್ದು ತಪ್ಪೆಂದು ತಿಳಿದು ತನ್ನನ್ನು ಕ್ಷಮಿಸೆಂದು ನಿಮಗೆ ಕೈಜೋಡಿಸಿ ಬೇಡಿಕೊಳ್ಳುತ್ತಾಳೆ. ನಿಮ್ಮೊಡನೆ ಕೂಡಿಕೊಳ್ಳಲು ಆಗಲಿಲ್ಲವಲ್ಲ ಎಂದು ಬಳಲು

GaraniSrinivasan

ಬಹಳ ಸಂಕಟ ಪಡುತ್ತಾಳೆ. ಮನಸ್ಸು ವಿರಹತಾಪದಿಂದ ಬೇಯುತ್ತದೆ. ಆದ್ದರಿಂದ ಆಗಾಗ ನಿಟ್ಟುಸಿರು ಬಿಡುತ್ತಾಳೆ. ನೀವು ವಂಚಕರೆಂಬುದಕ್ಕೆ ಮತ್ತೊಂದು ನಿದರ್ಶನವಿದೆ. ಮಹಾಬಲಿಷ್ಠನಾದ ಕಂಸನು ನಿಮ್ಮನ್ನು ಕೊಂದೇ ಬಿಡುವೆನೆಂದು ನಾನಾರೀತಿಯ ಸಂಚಿಕೆಲಸಗಳನ್ನು ನಡೆಸಿದನಷ್ಟೆ. ಅವನ ಒಂದೊಂದು ಸಂಚಿಕೆಯನ್ನೂ ಛಿನ್ನಗೊಳಿಸುವುದಕ್ಕೆ ನೀವು ನಡೆಸಿದ್ದು ಅವನ ಮೇಲಣ ಬಲವಾದ್ದ ವಂಚನೆಯೇ ಅಲ್ಲವೇ? ಸ್ವಾಮೀ, ನಿಮ್ಮನ್ನು ಸಂಪೂರ್ಣವಾಗಿ ಆಶ್ರಯಿಸಿದ ಇವಳಲ್ಲಿ ನೀವು ಕನಿಕರಿಸಲೇ ಬೇಕು.

9. பட்டபோது எழுபோது அறியாள், விரை
மட்டலர் தண்டுழாயென்னும், சுடர்
வட்டவாய் நுதிநேமியீர்!, நும
திட்டமென்கொல் இவ்வேழைக்கே

ಪಟ್ಟಪೋದು ಎಳುಪೋದರಿಯಾಳ್, ವಿರೈ
ಮಟ್ಟಲರ್ ತಣ್ಡುೞಾಯೆನ್ನುಮ್, ಶುಡರ್
ವಟ್ಟವಾಯ್ ನುದಿನೇಮಿಯೀರ್!, ನುಮ
ದಿಟ್ಟಮೆನ್ ಕೊಲ್ ಇವ್ವೇೞೈಕ್ಕೇ.

ಪಟ್ಟಪೋದು பட்ட போது = ಮಲಗುವ ಕಾಲವನ್ನು, ಎಳುಪೋದು எழு போது = ಏಳುವ ಕಾಲವನ್ನು, ಅರಿಯಾಳ್ அறியாள் = (ಇವಳು) ಅರಿಯಳು, ವಿರೈ விரை = ಪರಿಮಳದಿಂದಲೂ, ಮಟ್ಟು மட்டு = ಜೇನಿನಿಂದಲೂ (ಮಧುವಿನಿಂದಲೂ), ಅಲರ್ அலர் = ಅರಳಿರುವ, ತಣ್ ತುೞಾಯ್ தண் துழாய் = ತಂಪಾದ ತುಲಸಿ, ಎನ್ನುಮ್ என்னும் = ಎನ್ನುತ್ತಾಳೆ, ಶುಡರ್ சுடர் = ತೇಜಸ್ಸಿನಿಂದಲೂ, ವಟ್ಟಮ್ வட்டம் = ದುಂಡಗಿರುವ, ನುದಿ நுதி = ಮೊನಚಾದ, ವಾಯ್ வாய் = ಬಾಯುಳ್ಳ, ನೇಮಿಯೀರ್ நேமியீர் = ಚಕ್ರಾಯುಧವುಳ್ಳವರೇ, ನುಮದು நுமது = ನಿಮ್ಮ, ಇಟ್ಟಮ್ ಎನ್ ಕೊಲ್ இட்டம் என்கொல் = ಇಷ್ಟವೇನಿದೆಯೋ? ಇವ್ವೇೞೈಕ್ಕೇ இவ்வேழைக்கே = ಈ ಬಡವಳ (ದೀನಳ) ವಿಷಯದಲ್ಲಿಯೋ!

ಮಲಗುವ ಹೊತ್ತನ್ನು ಏಳುವ ಹೊತ್ತನ್ನು (ಇವಳು) ಅರಿಯಳು. ಪರಿಮಳದಿಂದಲೂ ಮಧುವಿನಿಂದಲೂ (ತುಂಬಿ) ಅರಳಿರುವ ತಂಪಾದ ತುಲಸಿ ಎನ್ನುತ್ತಾಳೆ. ತೇಜಸ್ಸಿನಿಂದ ಕೂಡಿ ದುಂಡಗಿನ ಮೊನಚಾದ ಬಾಯುಳ್ಳ ಚಕ್ರಾಯುಧವುಳ್ಳವರೇ, ಈ ದೀನಳ ವಿಷ

ಯದಲ್ಲಿ ನಿಮ್ಮ ಇಷ್ಟವೇನಿದೆಯೋ?

ತಾಯಿ ಅಂತೆ ಮಾಡುತ್ತಾಳೆ: ಸ್ವಾಮೀ, ಇವಳು ಮಾಡುವ ಪಾಡ-ನ್ನು ಇನ್ನು ಸ್ವಲ್ಪ ಅಂತೆ ಮಾಡುತ್ತೇನೆ ಇವಳಿಗೆ ನಿದ್ದೆ ಮಾಡುವ ಸಮಯ ಯಾವುದು. ನಿದ್ದೆಯಿಂದ ಎಚ್ಚರಗೊಳ್ಳುವ ಸಮಯ ಯಾವುದು ಎಂಬುದೇ ಮರೆತುಹೋಗಿದೆ. ಆ ಕಾಲಗಳನ್ನು ಇವಳು ಅರಿಯಳು. ಸದಾ ಎಚ್ಚೆತ್ತೇ ಇರುತ್ತಾಳೆ ಇವಳ ಗಮನವೆಲ್ಲಾ ನೀವು ಮುಡಿದಿರುವ ವಿರಿಮಲರನ್ನು ಮಧುವನ್ನು ಸೋರಿಸುವ ಸವಿ ತಂಪಾದ ತುಲಸಿಯ ಮಾಲೆಯಲ್ಲೇ! ಅದನ್ನೇ ಕುರಿತು ಇವಳು ಹಂಬಲಿಸುತ್ತಿರುತ್ತಾಳೆ. ಸ್ವಾಮೀ ಪ್ರಜ್ವಲಿಸುವ ಮುತ್ತು ದುಂಡಗೆ ಹರಿತವಾದ ಬಾಯುಳ್ಳ ಚಕ್ರಾಯುಧವನ್ನು ಹಿಡಿದಿರುವವರು ನೀವು! ಈ ದೀನಳನ್ನು ಅದರಿಂದ ನೀವು ಕಡಿದುಹಾಕುವಿರೋ? ಇಲ್ಲವೇ, ಅದನ್ನು ಬಿಡಾಳು. ಇವಳು ನಿಮ್ಮ ಕೃಪೆಗೆ ಯೋಗ್ಯಳಾದವಳೆಂದು ತಿಳಿದು ಅನುಗ್ರಹಿಸುವಿರೋ? ನಿಮ್ಮ ಇಷ್ಟವೇನಿದೆಯೋ?

ಭಕ್ತನು ಅನನ್ಯಾರ್ಹ ಭಗವಂತನಲ್ಲಿ ಶರಣು ಹೊಂದಿದ ಬಳಿಕ ಅವನ ಬೇಡಿಕೆ ಎಂಬುದು ಯಾವುದೂ ಇಲ್ಲ. ಎಲ್ಲವೂ ಭಗವಂತನಿಗೇ ಬಿಟ್ಟದ್ದು. ಎಲ್ಲವೂ ಅವನ ಇಚ್ಛೆಯಂತೆಯೇ ನಡೆಯುತ್ತದೆ.

10. ஏழை பேதை இராப்பகல், தன
கேழில் ஒண் கண்ண நீர் கொண்டாள், கிளர்
வாழ்வை வேவ இலங்கை செற்றீர், இவள்
மாழை நோக்கு ஒன்றும் வாட்டேன் மினே.

ಏೞೈ ಪೇದೈ ಇರಾಪ್ಪಗಲ್, ತನ
ಕೇೞಿಲ್ ಒಣ್ ಕಣ್ಣ ನೀರ್ ಕೊಣ್ಡಾಳ್, ಕಿಳರ್
ವಾೞ್ವೈ ವೇವ ಇಲಙ್ಗೈ ಸೆಟ್ರೀರ್, ಇವಳ್
ಮಾೞೈ ನೋಕ್ಕು ಒನ್ರುಮ್ ವಾಟ್ಟೇನ್ ಮಿನೇ.

ಏೞೈ ஏழை = , ದೀನಳು (ಬಡವಳು), ಪೇದೈ பேதை = ಅಜ್ಞಾನಿಯೂ (ಅರಿ ಇವಳು), ಇರಾಪ್ಪಗಲ್ இராப்பகல் = ರಾತ್ರಿ ಹಗಲೂ, ತನ தன = ತನ್ನ, ಕೇೞ್ ಇಲ್ கேழ்இல் = ಸಾಟಿ ಇಲ್ಲದಂಥ, ಒಣ್ ஒண் = ಸುಂದರವಾದ, ಕಣ್ಣ கண்ண = ಕಣ್ಣುಗಳಲ್ಲಿ ನೀರ್ ಕೊಣ್ಡಾಳ್ நீர் கொண்டாள் = ನೀರನ್ನು ತುಂಬಿಕೊಂಡವಳು (ತುಂಬಿಕೊಂಡಿದ್ದಾಳೆ), ಕಿಳರ್ கிளர் = ಉನ್ನತವಾದ, (ಶ್ರೇಷ್ಠ) ವಾೞ್ವೈ வாழ்வை = ಜೀವನವು, ವೇವ வேவ = ನಾಶವಾಗುವ

Garani Srinivasan

ಇಲಙ್ಕೈತ್ತ ತಿಲಙ್ಕುಮಾಕ = ಲಂಕೆಯನ್ನು, ಕೆಟ್ಟೀರ್ ಾಕ್ಕಿರ್ರ - ನಾಶ ಪಡಿಸಿದರು (ಪಡಿಸಿದವಳೇ), ಇವಳ್ ತಿಯ್ವಣ್ = ಇವಳ, ಮೂಲ್ಕೈನೀಲ ಶ್ಯ ಮಾಣಾಟ್ಟ ಕ್ರೋಕ(ಕ) = ಯೌವನದ ನೋಟವನ್ನು, ಪಾಟ್ಟೀನ್ ಮಿ ನ್ ವಾಟ್ಟಟಣ್ ಮಿಣ್ = ಬಾಡಿಸಬೇಡಿರಿ.

ದೀನಳೂ ಅಜ್ಞಾನಿಯೂ ಆದ ಇವಳು ರಾತ್ರಿ ಹಗಲೂ ಕನ್ನ ಕಂಡುಕೊಳ್ಳುತ್ತಾಳೆ. ಪಾಟಿಯಿಲ್ಲದ ಸುಂದರವಾದ ಕಣ್ಣುಗಳಲ್ಲಿ ನೀರನ್ನು ಕಂಡುಕೊಳ್ಳುತ್ತಾಳೆ. ನಾಶ ಅತ್ಯುನ್ನತ (ಶ್ರೇಷ್ಠ) ಜೀವನವು ನಾಶವಾಗು ವಂತೆ ಲಂಕೆಯನ್ನು ನಾಶ ಪಡಿಸಿದವಳೇ, ಇವಳ ಯೌವನದ ನೋಟವನ್ನು ಬಾಡಿಸಬೇಡಿರಿ. (10)

ತಾಯಿ ಅರಿಕೆ ಮಾಡುತ್ತಾಳೆ: ಸ್ವಾಮೀ, ಇವಳು ಏನೂ ಅರಿಯದ ವಳು, ಅಜ್ಞಾನಿ. ನಿಮ್ಮನ್ನು ಏಕೆ ದುಃಖ ಬೇಕೆಂಬ ಮದತ್ತರಾದ ಅಭಿಲಾಷೆ ಕೃಪಾದರ ಇವಳು ನೋಡದ್ದಾಳೆ. ನಿಮ್ಮನ್ನು ಇದಕ್ಕಾಗಿ ಬಗೆಬಗೆಯಾಗಿ ಬೇಡಿ ದೀನಳಾಗಿದ್ದಾಳೆ. ಪಾಟಿಯಿಲ್ಲದ [illegible] ಕ್ಕೆಂದ ಯರ್ದಿಂದ ಮೆರೆಯುವ ಇವಳ ಕಣ್ಣುಗಳಲ್ಲಿ ಎಡೆಬಿಡದೆ, ರಾತ್ರಿ ಹಗಲು ಎನ್ನದಂತೆ, ನೀರು ಕಂಬನಿ ಸುರಿಸುತ್ತದೆ. ನೀವಾದರೋ, ಒಬ್ಬ ಸುಂದರಿಯು ವಶಕ್ಕಾಗಿ, ಅವಳ ದುಃಖವನ್ನು ನಿವಾರಿಸುವುದಕ್ಕಾಗಿ, ಮದ ಕ್ರೌರ್ಯದಿಂದ ಕೂಡಿದ ಜೀವನವನ್ನು ನಡೆಸುತ್ತಿದ್ದ ರಾವಣಾಸುರನ ಲಂಕೆಯನ್ನೇ ನಾಶಮಾಡಿಬಿಟ್ಟವರು. ಇವಳು ಯೌವನವತಿ ಸುಂದರಿ. ಈ ಹೆಣ್ಣಿನ ಆಸೆಯಿಂದ ಕಂಬನಿ ನೋಟವನ್ನು ನಿಮ್ಮನಾದ ದರಿ. ಈ ಹೆಣ್ಣಿನ ಆಸೆಯಿಂದ ಕಂಬನಿ ನೋಟವನ್ನು ನಿಮ್ಮ ಕೃಪಾಪೂರ್ಣವಾದ ಇಂಗಿತದಿಂ ದನೋಯಿಂದ ಬಾಡಿಸಬೇಡಿರಿ. ನಿಮ್ಮ ಕೃಪಾಪೂರ್ಣವಾದ ಇಂಗಿತದಿಂ ದ ಅದನ್ನು ತಣಿಸಿ.

11\. வாட்டமில் புகழ் வாமனனை, இசை
கூட்டி வண்சட கோபன் சொல், அமை
பாட்டோராயிரத் திப்பத்தால், அடி
கூட்டலாகும் அந்தாமமே.

ವಾಟ್ಟಮಿಲ್ ಪುಗೞ್ ವಾಮನನ್ನೈ, ಇಶೈ
ಕೂಟ್ಟಿ ವಣ್ ಶಠಕೋಪನ್ ಶೊಲ್, ಅಮೈ
ಪಾಟ್ಟೋರಾಯಿರತ್ತಿಪ್ಪತ್ತಾಲ್, ಅಡಿ
ಕೂಟ್ಟಲಾಗುಮ್ ಅನ್ದಾಮಮೇ.

ವಾಟ್ಟಮ್ ಇಲ್ ವಾಟ್ಟಮ್ ಇಲ್ = ಬಾಡುವಿಕೆಯಿಲ್ಲದ, ಪುಗೞ್ ಪುಗೞ್ = ಕೀರ್ತಿಯುಳ್ಳ, ವಾಮನನ್ನೈ ವಾಮನನೈ = ವಾಮನ ರೂಪಿಯಾದ ಭಗವಂತನನ್ನು ಕುರಿತು ಇಶೈ ಕೂಟ್ಟಿ ಇಶೈ ಕೂ ಟ್ಟಿ = ಯುಕ್ತವಾದ ಸ್ವರಗಳನ್ನು ಕೂಡಿಸಿ, ವಣ್ ವಣ್ = ಔದಾ

ಶಠಕೋಪನ್ ಶೊಲ್ சடகோபன் சொல் = ಶಠಗೋಪನ ವಾಕು
ಗಳು, ಅಮೈ ವಾಯ ಅமை பாட்டு = ಶಕ್ತ (ಹೊಂದಿರುವ) ಹಾಡು
ಗಳು ಓರ್ ಆಯಿರತ್ತುಳ್ ஆயிரத்து = ಒಂದು ಸಾವಿರದಲ್ಲಿ,
ಇ. ಪ್ಪತ್ತಾಲ್ இப்பத்தால் = ಈ ಹತ್ತರಿಂದಲೇ, ಅಡಿ அடி
ತಿರುವಡಿಗಳನ್ನು, ಶೂಟ್ಟಲ್ ಆಗುಮ್ சூட்டல் ஆகும் = ಸೂಡಿಸು
ವುದಕ್ಕೆ ಆಗುವುದು, ಅಮ್ அம் = ಸೊಗಸಾದ, ದಾಮಮೇ தாம
ಮೇ = (ಆ) ಹೂಗಳೇ (ಪುಷ್ಪಮಾಲಿಕೆಯೇ).

ಬಾಡದ ಕೀರ್ತಿಯುಳ್ಳ ವಾಮನರೂಪಿಯಾದ ಭಗವಂತನನ್ನು
ಕೂಡಿ ಯುಕ್ತವಾದ ಮಾತುಗಳನ್ನು ಜೋಡಿಸಿದ ಚತುರನಾದ ಶಠ-
ಗೋಪನ ಮಾತುಗಳ ಹೊಂದಿಕೆಯ ಹಾಡುಗಳು ಒಂದು ಸಾವಿರದಲ್ಲಿ
ಈ ಹತ್ತರಿಂದಲೇ ಸೊಗಸಾದ ಹೂಗಳಿಂದ (ಪುಷ್ಪಮಾಲಿಕೆಯಿಂದ) (11)
ತಿರುವಡಿಗಳನ್ನು ಸೂಡುವುದಕ್ಕೆ ಆಗುವುದು

ಭಗವಂತನ ಕೀರ್ತಿ ಬಾಡುವಂಥದ್ದಲ್ಲ. ಅದಕ್ಕೆ ಚ್ಯುತಿ ಎಂಬುದಿಲ್ಲ.
ಎಷ್ಟೆಷ್ಟು ಕಾಲ, ಎಷ್ಟೆಷ್ಟು ಲೋಕಗಳಲ್ಲಿ ಭಗವಂತನ ಕಲ್ಯಾಣಗುಣ
ಗಳನ್ನು ಕವಿಗಳು ಭಗವಂತನ ಕೀರ್ತಿಯನ್ನು ಹೊಗಳುತ್ತ,
ವರ್ಣಿಸುತ್ತ; ಗಾನ ಮಾಡುತ್ತ ಹೋದರೂ ಸಹ, ಅವು ಒಂದೊಂದು
ಸಲವೂ ಹೊಸದಾಗಿಯೇ ತೋರುವುವು. "ಇನ್ನು ಸಾಕು ಇದೆಲ್ಲ
ಹಳೆಯದೇ. ಹೇಳಿದ್ದನ್ನೇ ಹೇಳಬೇಕು" ಎಂಬ ಅನಾಸ್ಥೆಯ ಮಾತಿಗೆ
ಇಲ್ಲಿ ಎಡೆಯೇ ಇರುವುದಿಲ್ಲ.

ಭಗವಂತನು ವಾಮನ ವಟುವಾಗಿ ಅವತರಿಸಿ ನಡೆಸಿದ
ಮಹತ್ಕಾರ್ಯ ಇದಕ್ಕೆ ಒಂದು ನಿದರ್ಶನವಿದ್ದಂತೆ. ದಿವ್ಯಸುಂದರನಾ
ಪರಮ ತೇಜಸ್ವಿಯಾಗಿ, ಪರಿಶುದ್ಧನಾದ ಬ್ರಾಹ್ಮಣ ವಟುವಾಗಿ,
ಬಂದು, ಬಲಿಚಕ್ರವರ್ತಿಯನ್ನು ಆಕರ್ಷಿಸಿ, ಅವನಿಂದ ಮೂರಡಿ
ನೆಲವನ್ನು ಮಾತ್ರವೇ ದಾನವಾಗಿ ಯಾಚಿಸಿ, ಅದನ್ನೇ ನೆಪಮಾಡಿಕೊಂ
ಡು ಬಲಿಯ ಮಹದೈಶ್ವರ್ಯಕ್ಕೆ ತಕ್ಕ [illegible]
ಅವನನ್ನು ಅನುಗ್ರಹಿಸಿದ ಮಹತ್ಕೀರ್ತಿ ವಾಮನರೂಪಿಯಾದ
ಭಗವಂತನದು. ಅವನ ಎಣೆಯಿಲ್ಲದ, ಲೆಕ್ಕವಿಲ್ಲದ ಕಲ್ಯಾಣ
ಗುಣಗಳಲ್ಲಿ ಆಸಕ್ತಿ ಯುಕ್ತವಾಗಿ ಹೇಳಿರುವುದು ಈ ಹತ್ತು
ಪಾಶುರಗಳಲ್ಲಿ.

ಶಠಗೋಪನು ತನ್ನ ಬುದ್ಧಿ ಚಾತುರ್ಯದಿಂದಲೂ, ಭಗವ

ಜ್ಞಾನಾನುಭವದಿಂದಲೂ ಭಗವಂತನ ಸಾಕ್ಷಾತ್ಕಾರವನ್ನು ಪಡೆದ ಆಳ್ವಾರುಗಳಿಂದ ಹಾಡಿನ ರೂಪದಲ್ಲಿ ಹೊರಬಿದ್ದ ಹಾಡಿರುವುದು ಒಂದು ಸಾವಿರ ಪಾಶುರಗಳು. ಅವುಗಳಲ್ಲಿ ಈ ಮೂವತ್ತು ಪಾಶುರಗಳು ಬಹಳ ಯೋಗ್ಯವಾದವು. ಈ ಮೂವತ್ತು ಪಾಶುರಗಳನ್ನು ಭಗವಂತನ ತಿರುವಡಿಗಳನ್ನು ಪೂಜಿಸುವ ಸುಗಂಧವಾದ ವಿಮಲ ಪುಷ್ಪಗಳನ್ನಾಗಿ ಮಾಡಿಕೊಂಡು, ಭಕ್ತಿಯಿಂದ ಪೂಜಿಸಿ, ಆ ತಿರುವಡಿಗಳನ್ನು ಪಡೆದುಕೊಳ್ಳಬಹುದು. ಇದೇ ಈ ತಿರುಪ್ಪಾವೈಯ ಫಲಶ್ರುತಿ

— o —

14.2.80

ತಿರುವಾಯ್ಮೊೞಿ - ಎರಡನೆಯ ದಶಕ - ಐದನೆಯ ತಿರುವಾಯ್ಮೊೞಿ.

திருவாய்மொழி - இரண்டாம்பத்து - ஐந்தாந்திருவாய்மொழி

5. ಅನ್ದಾಮತ್ತನ್ಬು - அந்தாமத்தன்பு

1. அந்தாமத்தன்பு செய்து என்னாவி சேரம்மானுக்கு,
அந்தாமவாண்முடி சங்கு ஆழி நூலாரமுள,
செந்தாமரைத்தடங்கண் செங்கனிவாய் செங்கமலம்,
செந்தாமரையடிக்கள் செம்பொன் திருவுடம்பே

ಅನ್ದಾಮತ್ತನ್ಬು ಶೆಯ್ದು ಎನ್ನಾವಿ ಶೇರಮ್ಮಾನುಕ್ಕು,
ಅನ್ದಾಮವಾಣ್ಮುಡಿ ಶಙ್ಗು ಆೞಿ ನೂಲಾರಮುಳ,
ಶೆನ್ದಾಮರೈತ್ತಡಙ್ಗಣ್ ಶೆಙ್ಗನಿವಾಯ್ ಶೆಙ್ಗಮಲಮ್,
ಶೆನ್ದಾಮರೈಯಡಿಕ್ಕಳ್ ಶೆಮ್ಬೊನ್ ತಿರುವುಡಮ್ಬೇ.

ಅಮ್ ದಾಮತ್ತು அம் தாமத்து = ಸುಂದರವಾದ ಲೋಕದ, ಅನ್ಬು அன்பு = ಆಶೆಯನ್ನ, ಶೆಯ್ದು செய்து = ಉಂಟುಮಾಡಿ, ಎನ್ ಆವಿ என் ஆவி = ನನ್ನ ಆತ್ಮದಲ್ಲಿ, ಶೇರ್ சேர் = ಕೂಡಿಕೊಂಡಿರುವ, ಅಮ್ಮಾನುಕ್ಕು அம்மானுக்கு = ಸ್ವಾಮಿಗೆ, ಅಮ್ அம் = ಶೋಭನ, ದಾಮಮ್ தாமம் = ಹೂವಿನ ಮಾಲೆಯು, ವಾಳ್ வாள் = ಹೊಳೆಯುವ, ಮುಡಿ முடி = ಕಲೆಯು, ಶಙ್ಗು சங்கு = ಶಂಖ, ಆೞಿ ஆழி = ಚಕ್ರ, ನೂಲ್ நூல் = ಜನಿವಾರ, ಆರಮ್ ஆரம் = ಹಾರವೂ, ಉಳ உள = ಇವೆ, ಶೆಮ್ ತಾಮರೈ செம் தாமரை = ಕೆಂದಾವರೆಯಂತೆ, ತಡ ಕಣ್ தட கண் = ವಿಶಾಲವಾದ ಕಣ್, ಶೆಮ್ ಕನಿ ವಾಯ್ செம் கனி வாய் = ಕೆಂಪಗೆ ಹಣ್ಣಿನಂತೆ ಬಾಯಿ (ತುಟಿ), ಶೆಮ್ ಕಮಲಮ್ செம் கமலம் = ಕೆಂದಾವರೆಯಾಗಿಯೇ ಇವೆ, ಶೆಮ್ ತಾಮರೈ ಅಡಿಕ್ಕಳ್ செம் தாமரை அடிக்கள் = ಕೆಂದಾವರೆಯಂತೆ ಪಾದಗಳು, ಶೆಮ್ ಪೊನ್ செம்பொன் = ಕೆಂಪನೆಯ ಚಿನ್ನದಂತೆ, ತಿರು திரு = ಪವಿತ್ರವಾದ, ಉಡಮ್ಬೇ உடம்பே = ಮೈಯೇ.

ಸುಂದರವಾದ ಲೋಕದ ಆಶೆಯನ್ನುಂಟುಮಾಡಿ, ನನ್ನ ಆತ್ಮದಲ್ಲಿ ಕೂಡಿಕೊಂಡಿರುವ ಸ್ವಾಮಿಗೆ ಶೋಭನ ಹೂವಿನ ಮಾಲೆಯು ಹೊಳೆಯುವ ಕಲೆಯು, ಶಂಖ, ಚಕ್ರ, ಜನಿವಾರ, ಹಾರಗಳೂ ಇವೆ. ಕೆಂದಾವರೆಯಂತೆ ವಿಶಾಲವಾದ ಕಣ್ಣು, ಕೆಂಪಗೆ ಹಣ್ಣಿನಂತೆ ಬಾಯಿ (ತುಟಿ), ಕೆಂದಾವರೆಯೇ ಆಗಿವೆ. ಕೆಂದಾವರೆಯಂತೆ ಪಾದಗಳು. ಕೆಂಪು ಚಿನ್ನದಂತೆ (1)
ಪವಿತ್ರವಾದ ದೇಹ ಇವೆ

ಭಕ್ತನು ಭಗವಂತನಲ್ಲಿ ನಡೆಸುವ ಪೂರ್ಣ ಶರಣಾಗತಿಯ ಬಗ್ಗೆ-

ಯನ್ನು ಹಿಂದಿನ ತಿರುಪ್ಪಾಣ್ ಪಾಟಿಯಲ್ಲಿ ನೋಡಲಾಯಿತು. ಈ ತಿರುಪ್ಪಾಣ್ ಪಾಟು ಭಗವಂತನ ದಿವ್ಯಸುಂದರ ಮಂಗಳ ವಿಗ್ರಹ ವರ್ಣನೆಯಿಂದಲೇ ಪ್ರಾರಂಭವಾಗುತ್ತದೆ.

'ಸುಂದರವಾದ ಬೆಳಕು' ಎಂದರೆ ಪರಮಪದವೇ. ಅಲ್ಲಿರುವವರಿಗೆ ಯಾವ ಬಗೆಯ ಕೀಳು ಆಸೆಗಳೂ ಆತಂಕಗಳೂ ಇಲ್ಲ. ಶಾಶ್ವತವಾಗಿ ಪರಮಾನಂದವನ್ನು ಸೂರೆಗೊಳ್ಳುತ್ತಾ ಬಾಳುವುದೊಂದೇ ಕೆಲಸ. ಜಗತ್ತಿನ, ಭಗವಂತನ ನಿತ್ಯ ಸೇವೆಯಲ್ಲಿ ತೊಡಗಿರುವುದು

ಅಮರತ್ವವನ್ನು ಪಡೆದು ಪರಮಪದದಲ್ಲಿ ಬಾಳುವುದಕ್ಕೆ ಭಗವಂತನ ಕೃಪಾಕಟಾಕ್ಷ ದೊರಕಬೇಕು. ಇದಕ್ಕೆ ಪುರುಷಕಾರಳಾದ ಶ್ರೀದೇವಿಯ ಅನುಗ್ರಹವೂ ಬೇಕು. ಭಕ್ತನ ಪರವಾಗಿ ಆಕೆಯ ಪುರುಷಕಾರವೂ ಆಗಬೇಕು. ಇವೆಲ್ಲವೂ ಭಕ್ತನು ಬಯಸಬಹುದಾದ ಆಸೆಯೇ!

ಈ ಬಗೆಯ ಬಯಕೆಯೂ ಸುಲಭವಾಗಿ ಉಂಟಾಗದು. ಭಗವಂತನ ವಶೀಕರಣೆಯ ಹೊರತು ಅದು ಸಾಧ್ಯವಿಲ್ಲ. ಎಂದರೆ, ಭಗವಂತನು ಸಾಮಾನ್ಯವಾಗಿ ಅವನು ತನ್ನನ್ನು ನೋಡಿಕೊಳ್ಳಬೇಕೆಂಬ ಆಸೆಯುಂಟಾದ ಬಳಿಕ, ಭಕ್ತಿಯನ್ನು ಹುಟ್ಟಿಸಬೇಕು. ಈ ಬಗೆಯ ಆಸೆಯುಂಟಾದ ಬಳಿಕ, ಜ್ಞಾನಿಯು ಅವನ ದರ್ಶನ ಕೊಡುವುದಕ್ಕಾಗಿಯೇ, ಜ್ಞಾನಿಯು ಅವನಿಗೆ ಅಂತರಂಗವನ್ನು ಪ್ರವೇಶಿಸಿ, ಅವನನ್ನು ಪ್ರೋತ್ಸಾಹಿಸುತ್ತಾ ಅವನಿಗೆ ಮಾರ್ಗದರ್ಶನವಾಗಿ, ಅವನ ಸಮರ್ಥನೆಯಾಗಿರುವುದು ಭಗವಂತನ ಅಪಾರ ಕೃಪೆಯೇ!

ಆಳ್ವಾರರು ಹೇಳುತ್ತಾರೆ: ನನಗೆ ಪರಮಪದದ ಬಾಳ್ವೆಯ ಆಸೆಯನ್ನುಂಟುಮಾಡಿ, ನನ್ನ ಆತ್ಮದಲ್ಲಿ ಸೇರಿಕೊಂಡು, ನನಗೆ ಮಾರ್ಗದರ್ಶಕನಾಗಿರುವವನು ಭಗವಂತನೇ! (ನನ್ನ ಜ್ಞಾನವಲ್ಲ!) ಅವನ ತಿರುಮುಡಿಯಲ್ಲಿ ಸುಂದರವಾದ ತುಲಸಿಯ ಮಾಲೆಯಿದೆ. ಕೈಗಳಲ್ಲಿ ಶಂಖ ಚಕ್ರಗಳಿವೆ. ಎದೆಯಲ್ಲಿ ಜನಿವಾರವೂ ಹಾರವೂ ಇವೆ. ಅವನ ಕಣ್ಣುಗಳು ಕೆಂದಾವರೆಯ ಎಸಳಿನಂತೆ ವಿಶಾಲವಾಗಿ ಸೊಬಗಿನಿಂದ ಕೂಡಿವೆ. ಕೆಂಪಾದ ವಿಕಸಿತ ತೊಂಡೆಯ ಹಣ್ಣಿನಂತೆ ಮಾರ್ದವಯುತ ಪೂರ್ಣವಾದ ತುಟಿಗಳಿವೆ. ಕೆಂದಾವರೆಯಂತೆ ಬಾಯಿ ಮಧುವನ್ನು ಉಕ್ಕಿಸುತ್ತದೆ. ತಿರುವಡಿಗಳು ಕೆಂದಾವರೆಯಂತೆಯೇ ಅಂದವಾಗಿ, ಕೋಮಲವಾಗಿ ಮೃದುವಾಗಿವೆ. ದೇಹವು ಕೆಂಪು ಚಿನ್ನದಂತೆ ಹೊಳೆ ಹೊಳೆಯುತ್ತಾ ಅತ್ಯಾಕರ್ಷಕವಾಗಿದೆ.

2. திருவுடம்பு வான்சுடர் செந்தாமரை கண் கை கமலம்,
திருவிடமே மார்வம் அயனிடமே கொப்பூழ்,
ஒருவிடமும் எந்தை பெருமாற்கு அரணேயோ,
ஒருவிடமொன்றின்றி என்னுள் கலந்தானுக்கே.

ತಿರುವುಡಮ್ಬು ವಾನ ಶುಡರ್ ಶೆನ್ದಾಮರೈ ಕಣ್ ಕೈ ಕಮಲಮ್,
ತಿರುವಿಡಮೇ ಮಾರ್ವಮ್ ಅಯನಿಡಮೇ ಕೊಪ್ಪೂಳ್,
ತಿರುವಿಡಮುಮ್ ಎನ್ದೈ ಪೆರುಮಾರ್ಕು ಅರನೇಯೋ,
ಒರುವಿಡಮೊನ್ರಿನ್ರಿ ಎನ್ನುಳ್ ಕಲನ್ದಾನುಕ್ಕೇ

ತಿರು ಉಡಮ್ಬು திருஉடம்பு = ಪವಿತ್ರವಾದ ದೇಹವು. ವಾನ್ வான் = ಪರಮ ಸುಂದರವಾದ, ಶುಡರ್ சுடர் = ತೇಜಸ್ಸು, ಶೆನ್ದಾಮರೈ ಕಣ್ செந்தாமரை கண் = ಕೆಂದಾವರೆಯಂತೆ ಕಣ್ಣು ಕೈ ಕಮಲಮ್ கை கமலம் = ಕೈಗಳು ಕಮಲದ ಹೂವಿನಂತೆ, ತಿರು திரு = ಶ್ರೀದೇವಿಯ, ಇಡಮೇ இடமே = ಸ್ಥಳವೆಂಬುದೇ (ವಾಸಸ್ಥಳವೆಂಬುದೇ), ಮಾರ್ವಮ್ மார்வம் = ಎದೆ, ಅಯನ್ அயன் = ಅಜನ (ಬ್ರಹ್ಮನ), ಇಡಮೇ இடமே = ವಾಸಸ್ಥಳವೇ, ಕೊಪ್ಪೂಳ್ கொப்பூழ் = ಹೊಕ್ಕಳು, ತಿರು ಇಡಮುಮ್ திருஇடமும் = ಪವಿತ್ರವಾದ ಎಡಭಾಗವು, ಎನ್ದೈ ಪೆರುಮಾರ್ಕು எந்தை பெருமாற்கு = ನನ್ನ ಸ್ವಾಮಿಗೆ, ಅರನೇಯೋ அரனேயோ = ಹರನೇ ಅಲ್ಲವೇ?, ಒರುವು ஒருவு = ನೀಗಬಹುದಾದ, ಇಡಮ್ இடம் = ಸ್ಥಳವು, ಒನ್ರು ಇನ್ರಿ ஒன்று இன்றி = ಒಂದೂ ಇಲ್ಲದೆ (ಇಲ್ಲದಹಾಗೆ), ಎನ್ ಉಳ್ ಕಲನ್ದಾನುಕ್ಕೇ என் உள் கலந்தானுக்கே = ನನ್ನ ಅಂತರಂಗದಲ್ಲಿ ಕೂಡಿಕೊಂಡವನಿಗೇ

ಬಿಟ್ಟುಹೋಗಬಹುದಾದ ಸ್ಥಳವೊಂದೂ ಇಲ್ಲದಹಾಗೆ ನನ್ನ ಅಂತರಂಗದಲ್ಲಿ ಕೂಡಿಕೊಂಡಿರುವವನಿಗೆ ಪವಿತ್ರದೇಹವು ಪರಮ ಸುಂದರವಾದ ತೇಜಸ್ಸು. ಕಣ್ಣು ಕೆಂದಾವರೆ. ಕೈ ಕಮಲ. ಎದೆಯೇ ಶ್ರೀದೇವಿಯ ವಾಸಸ್ಥಳ. ಹೊಕ್ಕಳು ಅಜನ (ಬ್ರಹ್ಮನ) ವಾಸಸ್ಥಳ. ಪವಿತ್ರವಾದ ಎಡಭಾಗವು ನನ್ನ ಸ್ವಾಮಿಗೆ ಹರನು ಅಲ್ಲವೇ?

ಆಳ್ವಾರರು ಹೇಳುತ್ತಾರೆ: ನನ್ನ ಸ್ವಾಮಿಯು ಯಾವುದೊಂದು ಸ್ಥಳವೂ ಇಲ್ಲದಹಾಗೆ, ಯಾವ ಸ್ಥಳವನ್ನೂ ಬಿಟ್ಟುಹೋಗದಹಾಗೆ, ಎಲ್ಲೆಲ್ಲೂ ತುಂಬಿಕೊಂಡಿದ್ದಾನೆ. ಪವಿತ್ರವಾದ ಅವನ ದೇಹವು ಪರಮ ಸುಂದರವಾದ ತೇಜಸ್ಸಿನಿಂದ ಪ್ರಕಾಶಿಸುತ್ತದೆ. ಕೆಂದಾವರೆಯಂತೆ ಅವನ ಕಣ್ಣುಗಳು ವಿಶಾಲವಾ ಆಕರ್ಷಕವಾಗಿವೆ. ಕಮಲದಹಾಗೆಯೇ ಕೋಮಲವಾಗಿ, ಮೃದುವಾಗಿ, ಸುಂದರವಾಗಿ, ಕೆಂಪಗೆ ಅವನ ಕೈಗಳಿವೆ. ದಯಾಸ್ವರೂಪಿಯೇ ಆಗಿರುವ ಶ್ರೀದೇವಿಯನ್ನು ಅವನ ವಕ್ಷಸ್ಥಲದಲ್ಲಿರಿಸಿಕೊಂಡಿದ್ದಾನೆ. ಅವನ ನಾಭಿಯಲ್ಲಿ ಚತುರ್ಮುಖನಾದ ಬ್ರಹ್ಮನು ವಾಸಮಾಡುತ್ತಾನೆ. ಪವಿತ್ರವಾದ ಅವನ ಎಡಭಾಗವನ್ನೇ ಹರನಿಗೆ ಕೊಟ್ಟುಬಿಟ್ಟಿದ್ದಾನೆ. ಹೀಗೆ ಸೃಷ್ಟಿಲಯಕರ್ತರನ್ನೂ ಸಕಲೈಶ್ವರ್ಯಪ್ರದೆಯಾದ ದಯಾಸ್ವರೂಪಿಯನ್ನೂ ಕೂಡಿಕೊಂಡು ಸ್ವಾಮಿಯು ನನ್ನ ಅಂತರಂಗದಲ್ಲಿ ನೆಲೆಗೊಂಡಿದ್ದಾನೆ! ಅದಲ್ಲವೇ ನನ್ನ ಎಂಥ ಭಾಗ್ಯ!

GaraniSrinivasan

3. என்னுள் கலந்தவன் செங்கனி வாய் செங்கமலம்,
மின்னும் சுடர் மலைக்குக் கண் பாதம் கை கமலம்,
மன்னு முழு வேழுலகும் வயிற்றினுள,
தன்னுள் கலவாதது எப்பொருளும் தானிலையே.

ಎನ್ನುಳ್ ಕಲನ್ದವನ ಶೆಙ್ಗನಿ ವಾಯ್ ಶೆಙ್ಗಮಲಮ್,
ಮಿನ್ನುಮ್ ಶುಡರ್ ಮಲೈಕ್ಕು ಕ್ಕಣ್ ಪಾದಮ್ ಕೈ ಕಮಲಮ್,
ಮನ್ನು ಮುಳು ವೇಳುಲಗುಮ್ ವಯಿಟ್ರಿನುಳ,
ತನ್ನುಳ್ ಕಲವಾದದು ಎಪ್ಪೊರುಳುಮ್ ತಾನಿಲ್ಲೈಯೇ.

ಎನ್ನುಳ್ என்னுள் = ನನ್ನ ಅಂತರಂಗದಲ್ಲಿ, ಕಲನ್ದವನ கலந்தவன் = ಕಲೆತುಕೊಂಡವನ, ಶೆಮ್ ಕನಿ ವಾಯ್ செம் கனி வாய் = ಕೆಂಪಗೆ ಹಣ್ಣಿನಂತೆ ಬಾಯಿ (ತುಟಿಗಳು), ಶೆಮ್ ಕಮಲಮ್ செம் கமலம் = ಕೆಂದಾವರೆಯಂತೆ (ಅರಳಿರುವುದು), ಮಿನ್ನುಮ್ மின்னும் = ಪ್ರಕಾಶಿಸುವ (ಮಿಂಚುವ), ಶುಡರ್ சுடர் = ತೇಜಸ್ಸಿನ, ಮಲೈಕ್ಕು மலைக்கு = ಬೆಟ್ಟಕ್ಕೆ, ಕಣ್ ಪಾದಮ್, ಕೈ, ಕಮಲಮ್ கண், பாதம், கை, கமலம் = ಕಣ್ಣುಗಳು, ಪಾದಗಳು, ಕೈಗಳು, ಕಮಲದಂತೆ, ಮನ್ನು மன்னு = ಸ್ಥಿರವಾದ (ಶಾಶ್ವತವಾದ), ಮುಳು முழு = ಪೂರ್ಣವಾದ, ಏಳು ಉಲಗುಮ್ ஏழ் உலகும் = ಏಳು ಲೋಕಗಳನ್ನು, ವಯಿಟ್ರಿನ್ வயிற்றின் = ಹೊಟ್ಟೆಯಲ್ಲಿ, ಉಳ உள = ಉಳ್ಳವನಾದ, ತನ್ನುಳ್ தன்னுள் ಅವನಲ್ಲಿ, ಕಲವಾದದ கலவாதது = ಸೇರದ್ದು, ಎಪ್ಪೊರುಳುಮ್ எப்பொருளும் = ಯಾವುದೊಂದು ವಸ್ತುವೂ, ತಾನ್ ಇಲ್ಲೈಯೇ தான் இல்லையே = ಇಲ್ಲವೇ ಇಲ್ಲ.

ನನ್ನ ಅಂತರಂಗದಲ್ಲಿ ಕಲೆತುಕೊಂಡಿರುವವನ ಬಾಯಿ (ತುಟಿಗಳು) ಕೆಂಪಗೆ ಹಣ್ಣಿನಂತೆ ಇವೆ. ಕೆಂದಾವರೆಯಂತೆ ಅರಳಿರುವುದು. ಮಿಂಚುವ (ಹೊಳೆಯುವ) ತೇಜಸ್ಸಿನ ಬೆಟ್ಟಕ್ಕೆ ಕಣ್ಣುಗಳು, ಪಾದಗಳು, ಕೈಗಳು ಕಮಲದಂತೆ ಇವೆ. ಸ್ಥಿರವಾದ ಏಳು ಲೋಕಗಳನ್ನು ಪೂರ್ತಿಯಾಗಿ ತನ್ನ ಹೊಟ್ಟೆಯಲ್ಲಿಟ್ಟುಕೊಂಡ ಅವನಲ್ಲಿ ಕೂಡಿಕೊಂಡಿರದ (ಸೇರದಿರುವ) ವಸ್ತು ಎಂಬುದು ಇಲ್ಲವೇ ಇಲ್ಲ. (3)

ಆಳ್ವಾರರು ಹೇಳುತ್ತಾರೆ ತಾನು ಸೃಷ್ಟಿಸಿರುವ ಒಂದೊಂದು ವಸ್ತುವಿನಲ್ಲೂ ಭಗವಂತನು ನೆಲಸಿದ್ದಾನೆ. ಸಕಲ ವಸ್ತುಗಳೂ ಅವನಲ್ಲಿ ಸೇರಿಕೊಂಡಿವೆ. ಅವನಲ್ಲಿ ಕಲೆತುಕೊಂಡಿರದ ವಸ್ತು ಇಲ್ಲವೇ ಇಲ್ಲ. ಅವನ ಹಿರಿಮೆಯನ್ನೇನೆನ್ನೋಣ! ಸಕಲ ಸೌಭಾಗ್ಯಗಳ ಒಡತಿಯಾದ ಶ್ರೀದೇವಿಗೂ, ಸಕಲವಸ್ತುಗಳುಂಟು ಮಾಡುವ ಬ್ರಹ್ಮನಿಗೂ ತನ್ನ ದೇಹದಲ್ಲಿ ಎಡೆಕೊಟ್ಟಿದ್ದಾನೆ. ಏಳು ಲೋಕಗಳನ್ನೂ ಅವನು ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡಿದ್ದಾನೆ. ಅವನ ಸೌಂದರ್ಯಕ್ಕೆ

Garani Srinivasan

ಸಾಟಿಯಿಲ್ಲದ್ದು! ಕಳಿತ ತೊಂಡೆಯ ಹಣ್ಣಿನಂತೆ ಕೆಂಪಗೆ ಮೃದುವಾದ
ತುಂಬಿ ಮೆರೆಯುವ ತುಟಿಗಳು ಮುಗುಳ್ನಗೆಯಿಂದ ತುಂಬಿದ ಬಾಯಿ
ಕೆಂದಾವರೆಯಂತೆ ಅರಳಿ ಶೋಭಿಸುತ್ತದೆ. ಮಿಂಚಿನಿಂದ ಹೊಳೆಯುವ
ಬೆಟ್ಟದಂತೆ ದೇಹ. ಕಮಲದಂತೆ [illegible] ವಿಶಾಲವೂ ಸುಂದರವೂ ಆದ
ಕಣ್ಣುಗಳು. ಕೈಗಳೂ ಪಾದಗಳೂ ಕಮಲದಂತೆಯೇ ಕೋಮಲವಾಗಿಯೂ
ಸೊಬಗಿನಿಂದ ಆಕರ್ಷಕವಾಗಿಯೂ ಇವೆ.

4. எப்பொருளும் தானாய் மரகதக்குன்றமொக்கும்,
அப்பொழுதைத்தாமரைப்பூ கண்பாதம் கைகமலம்,
எப்பொழுதும் நாள்திங்கள் ஆண்டூழியூழிதொறும்
அப்பொழுதைக்கப்பொழுது என்னாராவமுதமே.

ಎಪ್ಪೊರುಳುಮ್ ತಾನಾಯ್ ಮರಕತಕ್ಕುನ್ರಮೊಕ್ಕುಮ್,
ಅಪ್ಪೊಳುದೈತ್ತಾಮರೈಪ್ಪೂ ಕಣ್ ಪಾದಮ್ ಕೈಕಮಲಮ್,
ಎಪ್ಪೊಳುದುಮ್ ನಾಳ್ತಿಙ್ಗಳ್ ಆಣ್ಡೂಳಿಯೂಳಿತೊಱುಮ್
ಅಪ್ಪೊಳುದೈಕ್ಕಪ್ಪೊಳುದು ಎನ್ನಾರಾವಮುದಮೇ.

ಎಪ್ಪೊರುಳುಮ್ எப்பொருளும் = ಎಲ್ಲಾ ವಸ್ತುಗಳೂ, ತಾನ್ ಆಯ್ தான் ஆய் = ತಾನೇ ಆಗಿದ್ದಾನೆ, ಮರಕತಮ್ ಕುನ್ರಮ್ மரகதம் குன்றம் = ಮರಕತ ರತ್ನದ ಬೆಟ್ಟವನ್ನು, ಒಕ್ಕುಮ್ ஒக்கும் = ಹೋಲುತ್ತಾನೆ, ಅಪ್ಪೊಳುದೈ அப்பொழுதை = ಆಗತಾನೇ ಅರಳಿರುವ, ತಾಮರೈಪ್ಪೂ தாமரைப்பூ = ತಾವರೆಹೂವಿನಂತೆ, ಕಣ್ கண் = ಕಣ್ಣುಗಳು, ಪಾದಮ್ பாதம் = ಪಾದಗಳು, ಕಮಲಮ್ கமலம் = ಕಮಲದಂತೆ (ಕೋಮಲವಾಗಿ) ಇವೆ, ಎಪ್ಪೊಳುದುಮ್ எப்பொழுதும் = ಎಲ್ಲಾ ಕಾಲಗಳಲ್ಲಿಯೂ, ನಾಳ್ நாள் = ದಿನಗಳಲ್ಲಿಯೂ, ತಿಙ್ಗಳ್ திங்கள் = ತಿಂಗಳುಗಳಲ್ಲಿಯೂ, ಆಣ್ಡು ஆண்டு = ವರ್ಷಗಳಲ್ಲಿಯೂ, ಊಳಿ ಊಳಿ ತೊಱುಮ್ ஊழி ஊழி தொறும் = ಯುಗಯುಗಗಳಲ್ಲಿಯೂ, ಅಪ್ಪೊಳುದೈಕ್ಕು அப்பொழுதைக்கு ಅಪ್ಪೊಳುದು அப்பொழுது = ಆಯಾ ಕಾಲಕ್ಕೆಲ್ಲವೂ, ಎನ್ = ನನ್ನ, ಆರಾ ಅಮುದೇ ஆரா அமுதே = ತೃಪ್ತಿಯಾಗದ ~~...~~ ಅಮೃತವೇ.

~~ನನ್ನ ತೃಪ್ತಿಯಾಗದ ಅಮೃತವೇ ಆಗಿರುವನು~~ ಎಲ್ಲಾ ವಸ್ತುಗಳೂ ತಾನೇ ಆಗಿದ್ದಾನೆ. ಮರಕತ ರತ್ನದ ಬೆಟ್ಟವನ್ನು ಹೋಲುತ್ತಾನೆ. ಆಗತಾನೇ ಅರಳಿರುವ ತಾವರೆಯ ಹೂವಿನಂತೆ ಅವನ ಕಣ್ಣುಗಳಿವೆ. ಪಾದಗಳು

GaraniSrinivasan

ಕಮಲದಂತೆ ಕೋಮಲವಾಗಿವೆ. ಎಲ್ಲಾ ಕ್ಷಣಗಳಲ್ಲಿಯೂ, ದಿನಗಳಲ್ಲಿಯೂ ತಿಂಗಳುಗಳಲ್ಲಿಯೂ, ವರ್ಷಗಳಲ್ಲಿಯೂ, ಯುಗ ಯುಗಗಳಲ್ಲಿಯೂ (ಯುಗ ಕಲ್ಪಗಳಲ್ಲಿಯೂ) ಆ ಎಲ್ಲ ಕಾಲಕ್ಕೂ ನನಗೆ ತೃಪ್ತಿಕಾರದ ಅಮೃತವೇ ಆಗಿದ್ದಾನೆ (4)

ಆಳ್ವಾರರು ಹೇಳುತ್ತಾರೆ ಭಗವಂತನು ಎಲ್ಲಾ ವಸ್ತುಗಳಲ್ಲಿಯೂ ನೆಲೆಸಿರುವದಾಗಲೂ, ತಾನೇ ಎಲ್ಲಾ ವಸ್ತುಗಳೂ ಆಗಿ ಶೋಭಿಸುತ್ತಾನೆ. ಚೇತನರೆಲ್ಲರಿಗೂ ಅಗ್ರಾಹ್ಯವಾದ ಅನರ್ಘ್ಯ ರತ್ನದ ಬೆಳಕಿನ ಹಾಗೆ ಪ್ರಕಾಶಿಸುತ್ತಾ ಆಕರ್ಷಕನಾಗಿದ್ದಾನೆ. ಆಗ ತಾನೇ ಅರಳುತ್ತಿರುವ ಕೆಂದಾವರೆಯಂತೆ ದೊಡ್ಡವಾಗಿ, ವಿಶಾಲವಾಗಿ, ಸುಂದರವಾಗಿ ಅವನ ಕಣ್ಣುಗಳಿವೆ. ಅವನ ಪಾದಗಳು ಕಮಲದಂತೆ ಕೋಮಲವಾಗಿ ಕ್ಷಣಗಳು, ಘಳಿಗೆ, ದಿನ, ತಿಂಗಳು, ವರ್ಷ, ಯುಗ, ಕಲ್ಪಗಳಲ್ಲದಂತೆ ಎಲ್ಲ ಕಾಲಕ್ಕೂ ಅವನು ಶಾಶ್ವತವಾಗಿ ರಕ್ಷಕನು ಎಷ್ಟೆಷ್ಟು ರೀತಿಯಲ್ಲಿ ನಾನು ಸವಿದು ಅನುಭವಿಸಿದರೂ ಸಾಲದ ನನಗೆ ತೃಪ್ತಿಯಾಗದಂಥ ಅಮೃತವೇ ಅವನಾಗಿದ್ದಾನೆ.

5. ஆராவமுதமாய் அல்லாவியுள் கலந்த
காராக்கருமுகில் போல் என்னம்மான் கண்ணணுக்கு,
நேராவாய் செம்பவளம் கண் பாதம் கைகமலம்,
பேராரநீள் முடிநாண் பின்னும் இழை பலவே.

ಆರಾವಮುದಮಾಯ್ ಅಲ್ಲಾವಿಯುಳ್ ಕಲನ್ದ,
ಕಾರಾರ್ಕರುಮುಗಿಲ್ ಪೋಲ್ ಎನ್ನಮ್ಮಾನ್ ಕಣ್ಣನುಕ್ಕು,
ನೇರಾವಾಯ್ ಶೆಮ್ಬವಳಮ್ ಕಣ್ ಪಾದಮ್ ಕೈ ಕಮಲಮ್,
ಪೇರಾರ ನೀಳ್ ಮುಡಿ ನಾಣ್ ಪಿನ್ನುಮ್ ಇೞೈ ಪಲವೇ.

ಆರಾ ஆரா = ತೃಪ್ತಿಕಾರದ (ಕೊಡದಂಥ), ಅಮುದಮ್ ಆಯ್ அமுதம் ஆய் = ಅಮೃತವಾಗಿ, ಅಲ್ அல் = ಕತ್ತಲೆಯ. ಆವಿ ஆவி = ಆತ್ಮದ, ಉಳ್ உள் = ಒಳಗೆ ಕಲನ್ದ கலந்த = ಕೂಡಿಕೊಂಡ, ಕಾರ್ கார் = ಮಳೆ (ನೀರಿನ), ಆರ್ ஆர் = ತುಂಬಿರುವ, ಕರು ಮುಗಿಲ್ (ಪೋಲ್) கரு முகில் போல் = ಕಪ್ಪು ಮೋಡದ ಹಾಗೆ, ಇರುವ ಎನ್ ಅಮ್ಮಾನ್ என் அம் மான் = ನನ್ನ ಸ್ವಾಮಿಯಾದ, ಕಣ್ಣನುಕ್ಕು கண்ணணுக்கு = ಆಕರ್ಷಕನಿಗೆ (ಕೃಷ್ಣನಿಗೆ), ಶೆಮ್ ಪವಳಮ್ செம்பவளம் = ಕೆಂಪನೆಯ ಹವಳವು, ವಾಯ್ வாய் = ತುಟಿಗಳಿಗೆ, ನೇರಾ நேரா

ಸಾಟಿಯಾಗಲಾರವು; ಕಮಲಮ್ கமலம் = ಕಮಲದ ಹೂವು,
ಕಣ್, ಪಾದಮ್, ಕೈ கண், பாதம் கை = ಕಣ್ಣು ಪಾದ ಕೈ
ಗಳಿಗೆ (ನೇರಾ நேரா = ಸಾಟಿಯಾಗದು), ಪೇರ್ ಆರಮ್ பேர்
ஆரம் = ದೊಡ್ಡ ಹಾರವೂ ನೀಳ್ ಮುಡಿ நீள் முடி = ಉನ್ನತ
ವಾದ ಕಿರೀಟವೂ, ನಾಣ್ நாண் = ಉಡಿದಾರವೂ, ಪಿನ್ನುಮ್
பின்னும் ಅಲ್ಲದೆ, ಇಳೈ இழை = ಆಭರಣಗಳೂ,
ಪಲವೇ பலவே = ಅನೇಕವೇ (ಹೇರಳವೇ) ಆಗಿವೆ

ಕಣ್ಣಿಯಂಥ ಅಮಲನಾ, ಕತ್ತಲೆಯ ಆತ್ಮದ ಒಳಗೆ ಹೊಕ್ಕಿಕೊಂಡವನಾ, ಮಳೆ (ನೀರಾವಿ) ತುಂಬಿರುವ ಕಪ್ಪು ಮೋಡದ ಹಾಗಿರುವ ನನ್ನ ಸ್ವಾಮಿಯಾದ ಅತ್ಯಾಶ್ಚರ್ಯಕರನ (ಶ್ರೀಕೃಷ್ಣನ) ತುಟಿಗಳಿಗೆ ಕೆಂಪನೆಯ ಹವಳವು ಸಾಟಿಯಲ್ಲ. ಕೈ, ಪಾದ, ಕಣ್ಣುಗಳಿಗೆ ಕಮಲವು ಸಾಟಿಯಲ್ಲ. ಅಲ್ಲದೆ, ದೊಡ್ಡ ಹಾರವೂ, ಎತ್ತರವಾದ ಕಿರೀಟವೂ, ಉಡಿದಾರವೂ, ಇನ್ನೂ ಆಭರಣಗಳೂ ಹೇರಳವಾಗಿಯೇ ಇವೆ. (5)

ಆಳ್ವಾರರು ಹೇಳುತ್ತಾರೆ: ನನ್ನ ಒಡೆಯನಾಗಿರುವ ಭಗವಂತನ ಬಾಯಿ (ತುಟಿಗಳು) ಕೆಂಪು ತೊಂಡೇಹಣ್ಣಿನಂತಿದೆ, ಎಲ್ಲಾ ಕಣ್ಣು, ಕೈ, ಪಾದಗಳು ಕಮಲದಂತಿದೆ ಎಂದು ಮುಂಚೆ ನಾ ಹೇಳಿದೆನಲ್ಲವೇ? ಸೃಷ್ಟಿಯ ಯಾವ ವಸ್ತುವಿನಿಂದಲೂ ನನ್ನ ಸ್ವಾಮಿಯ ಅವಯವಗಳಿಗೆ ಹೋಲಿಸಿ ಅಂದು ಹೇಳಲು ಸಾಧ್ಯವೇ ಇಲ್ಲ. ಬಲು ಉತ್ಕೃಷ್ಟವಾದ ಕೆಂಪು ಹವಳಕ್ಕೆ ಅವನ ತುಟಿಗಳನ್ನು ಹೋಲಿಸಲಾದೀತೇ? ಕೈ, ಪಾದ, ಕಣ್ಣುಗಳು ಕಮಲಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಸುಂದರ! ಇಷ್ಟೇ ಅಲ್ಲದೆ, ಸ್ವಾಮಿಯು ದೊಡ್ಡದಾದ ಹಾರದಿಂದಲೂ, ಎತ್ತರವಾದ ಕಿರೀಟದಿಂದಲೂ, ಸೊಗಸಾದ ಉಡಿದಾರದಿಂದಲೂ, ಇನ್ನೂ ನಾನಾ ದಿವ್ಯಾಭರಣಗಳಿಂದಲೂ ಅಲಂಕರಿಸಿಕೊಂಡಿದ್ದಾನೆ. ಇಂಥ ಅಪಾರ ಸುಂದರನಾದ ಶ್ಯಾಮಲವರ್ಣನೂ ಪರಮ ಉದಾರಿಯಾಗಿ ಇರುವ ಸ್ವಾಮಿಯು ಅಜ್ಞಾನವೆಂಬ ಕತ್ತಲೆಯಿಂದ ತುಂಬಿದ ನನ್ನ ಆತ್ಮದ ಒಳಗೆ ಹೊಕ್ಕಿಕೊಂಡು, ಅದರಲ್ಲಿ ಜ್ಞಾನವನ್ನು ತುಂಬಿ ಬೆಳಗಿಸುತ್ತಿರುವನಲ್ಲ! ಅವನ ಉಪಕಾರವನ್ನು ಏನೆಂದು ವರ್ಣಿಸಲಿ?

6. பலபலவேயாபரணம் பேரும் பலபலவே,
பலபலவே சோதி வடிவு பண்பெண்ணில்,

Garani Srinivasan

பல்பல கண்டுண்டு கேட்டுற்று மோந்தின்பம்,
பலபலவே ஞானமும் பாம்பணைமேலாற்கேயோ

ಪಲಪಲವೇ ಯಾಭರಣಮ್ ಪೇರುಮ್ ಪಲಪಲವೇ,
ಪಲಪಲವೇ ಶೋದಿ ವಡಿವು ಪಣ್ಬೆಣ್ಣಿಲ್,
ಪಲಪಲ ಕಣ್ಡುಣ್ಡು ಕೇಟ್ಟುಱ್ಱು ಮೋನ್ದಿನ್ಬಮ್,
ಪಲಪಲವೇ ಞಾನಮುಮ್ ಪಾಮ್ಬಣೈ ಮೇಲಾಱ್ಕೇಯೋ!

ಪಲಪಲವೇ பலபலவே = ಹಲವಾರು ಬಗೆಯ, ಆಭರಣಮ್ ஆபரணம் = ಆಭರಣಗಳು, ಪೇರುಮ್ பேரும் = ಹೆಸರುಗಳು, ಪಲಪಲವೇ பலபலவே = ನಾನಾ ಬಗೆಯವೇ, ಪಲಪಲವೇ பலபலவே = ನಾನಾ ವಿಧವಾದ, ಶೋದಿ சோதி = ಪ್ರಕಾಶವುಳ್ಳ, ವಡಿವು வடிவு = ರೂಪಗಳೂ, ಪಣ್ಬು பண்பு = ಗುಣಗಳು (ಸ್ವಭಾವಗಳು), ಎಣ್ಣಿಲ್ எண்ணில் = ಯೋಚಿಸಿದರೆ (ಎಣಿಕೆ ಮಾಡಿದರೆ) ಪಲಪಲ பலபல = ಅನೇಕ ವಿಧವಾಗಿ, ಕಣ್ಡು கண்டு ನೋಡಿ, ಉಣ್ಡು உண்டு = ರುಚಿನೋಡಿ (ಅನುಭವಿಸಿ), ಕೇಟ್ಟು கேட்டு = ಕೇಳಿ, ಉಱ್ಱು உற்று = ನಡೆಸಿ, ಮೋನ್ದು மோந்து = ಮೂಸಿನೋಡಿ, ಇನ್ಬಮ್ இன்பம் ಸುಖವನ್ನು, ಪಲಪಲವೇ பலபலவே = ಅನೇಕ (ವಿವಿಧ) ರೀತಿಯಲ್ಲಿ ಞಾನಮುಮ್ ஞானமும் = ಜ್ಞಾನವನ್ನೂ (ಉಂಟುಮಾಡುವ), ಪಾಮ್ಬು ಅಣೈ ಮೇಲಾಱ್ಕೇ பாம்பு அணை மேலாற்கே ಹಾವಿನ ಹಾಸಿಗೆಯ ಮೇಲಿರುವವನಿಗೇ.

ಹಾವಿನ ಹಾಸಿಗೆಯ ಮೇಲಿರುವವನಿಗೆ ವಿಧವಿಧವಾದ ಆಭರಣಗಳೂ, ಹೆಸರುಗಳಿವೆ; ವಿಧವಿಧವಾದ ಪ್ರಕಾಶಗಳಿಂದ ಕೂಡಿದ ರೂಪಗಳೂ ಗುಣ ಸ್ವಭಾವಗಳೂ ಇವೆ. ಯೋಚಿಸಿ ಎಣಿಸಿ ನೋಡಿದರೆ, ವಿವಿಧ ರೀತಿಯಲ್ಲಿ ನೋಡಿ, ರುಚಿನೋಡಿ (ಅನುಭವಿಸಿ), ಕೇಳಿ, ಮಾಡಿ (ನಡೆಸಿ), ಮೂಸಿ ನೋಡಿ ಸುಖವನ್ನು, ಜ್ಞಾನವನ್ನು ಪಡೆಯುವಂತಾದ್ದು ಆಗಿದೆ. (6)

ಆಳ್ವಾರರು ಹೇಳುತ್ತಾರೆ: ನನ್ನೊಡನೆ ಕೂಡಿಕೊಂಡಿರುವ ಸ್ವಾಮಿಗೆ ಎಷ್ಟು ವಿಧವಾದ ಆಭರಣಗಳ ಅಲಂಕಾರ! ಅವನ ರೂಪಗಳೋ ಅದೆಷ್ಟು ವಿಧ! ಹಾಗೆಯೇ ಅವನ ಗುಣ ಸ್ವಭಾವಗಳು ಇಷ್ಟೆಂದು ಎಣಿಕೆ ಮಾಡಿ ತಿಳಿಯಲು ಸಾಧ್ಯವಿದೆಯೇ? ಅವನು ಶೋಭಿಸುವ ಆಕಾರವು ಚಿತ್ರವಿಚಿತ್ರವು ಆದ ದಿವ್ಯಪ್ರಕಾಶವು ಅದೆಷ್ಟು ಬಗೆಯೋ! ಇಂಥ ದಿವ್ಯಾಕರ್ಷಣನಾದ ಸ್ವಾಮಿಯು ಶೇಷನನ್ನ ಹಾಸಿಗೆಯಾಗಿ ಮಾಡಿಕೊಂಡಿದ್ದಾನೆ ಆ ಸರ್ವೇಶ್ವರನೇ ನನ್ನೊಡನೆ ಎಲ್ಲ ವಿಧದಲ್ಲೂ ಕೂಡಿಕೊಂಡಿದ್ದಾನಲ್ಲ! ಅವನ ವಿವಿಧ ರೂಪಗಳನ್ನೂ, ಗುಣ ಸ್ವಭಾವಗಳನ್ನೂ, ನಾನಾ ಬಗೆಯ ಆಶ್ಚರ್ಯಕರ ಕಾರ್ಯಗಳನ್ನೂ ನನ್ನ ಪಂಚೇಂದ್ರಿಯಗಳ ಮೂಲಕ ನಾನು ಅನುಭವಿಸುತ್ತಿದ್ದೇನೆ. ಎಲ್ಲ ರೀತಿಯಲ್ಲೂ ಸುಖ ಸಂತೋಷಗಳನ್ನು ಪಡೆದು ಆನಂದಿಸುತ್ತಿದ್ದೇನೆ. ಭಗವದ್ವಿಷಯದಲ್ಲಿ ನನಗೆ

ಜ್ಞಾನವೂ ಉಂಟಾಗದೆ. ಇದಷ್ಟೂ ಭಗವತ್ಕೃಪೆಯೇ ಅಲ್ಲವೇ?

7. பாம்பணை மேல் பாற்கடலுள் பள்ளியமர்ந்ததுவும்,
காம்பணைதோள் பின்னைக்காய் ஏறுடனேழ் செற்றதுவும்,
தேம்பணைய சோலை மராமரமேழெய்ததுவும்,
பூம்பிணைய தண்டுழாய்ப் பொன்முடியம் போரேறே.

ಪಾಮ್ಬಣೈ ಮೇಲ್ ಪಾಱ್ಕಡಲುಳ್ ಪಳ್ಳಿಯಮರ್ನ್ದದುವುಮ್,
ಕಾಮ್ಬಣೈತ್ತೋಳ್ ಪಿನ್ನೈಕ್ಕಾಯ್ ಏಱುಡನೇೞ್ ಶೆಱ್ಱದುವುಮ್,
ತೇಮ್ಬಣೈಯ ಶೋಲೈ ಮರಾಮರಮೇೞೆಯ್ದದುವುಮ್,
ಪೂಮ್ಬಿಣೈಯ ತಣ್ಡುೞಾಯ್ ಪ್ಪೊನ್ ಮುಡಿಯುಮ್ ಪೋರೇಱೇ.

ಪಾಮ್ಬು ಅಣೈ ಮೇಲ್ பாம்பு அணை மேல் . ಸರ್ಪದ ಹಾಸಿಗೆಯ ಮೇಲೆ, ಪಾಲ್ ಕಡಲುಳ್ பால் கடலுள் ಹಾಲ್ಗಡಲಲ್ಲಿ, ಪಳ್ಳಿ ಅಮರ್ನ್ದದುವುಮ್ பள்ளி அமர்ந்ததுவும் ಪವಡಿಸಿರುವುದೂ, ಕಾಮ್ಬು ಅಣೈ ತೋಳ್ காம்பு அணை தோள் = ಬಿದಿರ ಹಾಗಿರುವ ತೋಳಿನ, ಪಿನ್ನೈಕ್ಕು ಆಯ್ பின்னைக்கு ஆய் = ನಪ್ಪಿನ್ನೈ ದೇವಿಗಾಗಿ, ಏೞ್ ಏಱು ஏழ் ஏறு = ಏಳು ವೃಷಭಗಳನ್ನು, ಉಡನ್ உடன் = ಒಟ್ಟಿಗೆ, ಶೆಱ್ಱದುವುಮ್ செற்றதுவும் = ಕೊಂದು ಹಾಕಿದ್ದೂ, ತೇನ್ தேன் = ಜೇನು ತುಂಬಿದ, ಪಣೈಯ பணைய ದಪ್ಪವಾದ, ಶೋಲೈ சோலை = ತೋಪಿನ ಮರಾಮರಮ್ ಏೞ್ மராமரம் = ಏಳು ಸಾಲೆಯ ಮರಗಳನ್ನು, ಎಯ್ದದುವುಮ್ எய்ததுவும் = ಬಾಣ ಪ್ರಯೋಗ ಮಾಡಿದ್ದೂ (ಹೊಡೆದದ್ದೂ), ಪೂ ಪಿಣೈಯ பூபிணைய = ಹೂ ತುಂಬಿರುವ (ಸೊಬಗು ತುಂಬಿರುವ), ತಣ್ தண் = ತಂಪಾದ, ತುೞಾಯ್ துழாய் = ತುಲಸಿಯ, ಪೊನ್ ಮುಡಿ பொன் முடி ಸಿರಿಮುಡಿಯ, ಅಮ್ அம் = ಸುಂದರವಾದ, ಪೋರ್ ಏಱೇ போர் ஏறே = (ಪರಮ) ಸಮರ್ಥನಾದ (ಹೋರಾಡಬಲ್ಲ) ವೃಷಭನೇ

ಸರ್ಪದ ಹಾಸಿಗೆಯ ಮೇಲೆ, ಹಾಲ್ಗಡಲಲ್ಲಿ ಪವಡಿಸಿರುವುದೂ, ಬಿದಿರದ ಹಾಗಿರುವ ತೋಳಿನ ನಪ್ಪಿನ್ನೈ ದೇವಿಗಾಗಿ ಏಳು ಗೂಳಿಗಳನ್ನು ಒಟ್ಟಿಗೆ ಸಾಯಿಸಿದ್ದೂ, ಜೇನು ತುಂಬಿದ ದಪ್ಪವಾದ ತೋಪಿನ ಏಳು ಸಾಲೆಯ ಮರಗಳನ್ನು ಹೊಡೆದದ್ದೂ, ಸೊಬಗು ತುಂಬಿರುವ ತಂಪಾದ ತುಲಸಿಯ ಸಿರಿಮುಡಿಯ ಸುಂದರವಾದ ಪರಮ ಸಮರ್ಥನಾದ ವೃಷಭನೇ (7)

ಏಱುಡನೇೞ್ ಶೆಱ್ಱದುವುಮ್ — ಶ್ರೀಕೃಷ್ಣಾವತಾರದ ಒಂದು ಪ್ರಸಂಗ ಇದು: ಯಶೋದೆಗೆ ತಮ್ಮನೊಬ್ಬ - ಕುಂಭನೆಂಬವನು ಅವನಿಗೆ ಮಗಳೊಬ್ಬಳು - ನಪ್ಪಿನ್ನೈ ದೇವಿ ಎಂಬವಳು ನೀಳಾದೇವಿಯ ಅಂಶದಿಂದ ಹುಟ್ಟಿದವಳು. ಕುಂಭನು ಅವಳಿಗಾಗಿ ಒಂದು ಸ್ಪರ್ಧೆ ಹೂಡಿದನು. ಅವನು

Garani Srinivasan

ಗಾಳಿ ತಪ್ಪಿಸಿದ್ದ ಏಳು ಗೂಳಿಗಳನ್ನು ಯಾರೊಬ್ಬರ ಸಹಾಯವೂ ಇಲ್ಲದಂತೆ, ಒಂಟಿಯಾಗಿ ಅಡಿದು ಪಳಗಿಸುವವನಿಗೆ ತನ್ನ ಮಗಳಾದ ನಪ್ಪಿನ್ನೈ ದೇವಿಯನ್ನು ಕೊಟ್ಟು ಮದುವೆ ಮಾಡಿ ಕೊಡುವೆನೆಂಬುದೇ ಆ ಪಣ! ಶ್ರೀಕೃಷ್ಣನು ಈ ಕೆಲಸವನ್ನು ಸಾಧಿಸಿ, ನಪ್ಪಿನ್ನೈ ದೇವಿಯ ಕೈ ಹಿಡಿದನು. ಇದು ಇಲ್ಲಿಯ ಕಥೆ.

"ಮರಾಮರಮೆಯ್ದದುಮ್" — ಇದು ಶ್ರೀರಾಮನ ಕಾಲದ ಒಂದು ಪ್ರಸಂಗ. ಸೀತಾದೇವಿಯನ್ನು ಕಳೆದುಕೊಂಡು, ಕಿಷ್ಕಿಂಧೆಗೆ ಬಂದಾಗ, ಹನುಮಂತನ ಸಹಾಯದಿಂದ ಸುಗ್ರೀವನ ಸಖ್ಯವನ್ನು ಗಳಿಸಿದಾಗ, ಶ್ರೀರಾಮನು ನಡೆಸಿದ ಒಂದು ಸಾಹಸ ಇದು. ಕಾಡಿನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಏಳು ತಾಳೆಯ ಮರಗಳು ಬೆಳೆದಿದ್ದವು. ಶ್ರೀರಾಮನು ಒಂದೇ ಬಾಣವನ್ನು ಪ್ರಯೋಗಿಸಿ, ಆ ಏಳು ತಾಳೆಯ ಮರಗಳನ್ನು ರಂಧ್ರಗೊಳಿಸಿದನು.

ಆಳ್ವಾರರು ಹೇಳುತ್ತಾರೆ: ಹಾಲ್ಗಡಲಲ್ಲಿ ಶೇಷಶಯನನಾಗಿ ಪವಡಿಸಿರುವವನೂ ಸರ್ವೇಶ್ವರನಾದ ಭಗವಂತನೇ. ಶ್ರೀಕೃಷ್ಣನಾಗಿ ಅವತರಿಸಿ, ನಪ್ಪಿನ್ನೈ ದೇವಿಯ ಕೈಹಿಡಿಯುವುದಕ್ಕಾಗಿ, ಕೊಬ್ಬಿದ ಏಳು ಗೂಳಿಗಳನ್ನು ತಾನೊಬ್ಬನೇ ಅಡಿದು ಪಳಗಿಸಿದವನೂ ಅವನೇ. ದಟ್ಟವಾದ ಕಾಡಿನದಾಗಿ ಬೆಳೆದ ಏಳು ತಾಳೆಯ ಮರಗಳನ್ನು ಒಂದೇ ಅಂಬಿನಿಂದ ಛಿದ್ರಮಾಡಿದ ಶ್ರೀರಾಮನೂ ಅವನೇ. ದುಷ್ಟರಾದ ಎದುರಾಳಿಗಳು ಎಷ್ಟೇ ಬಲಿಷ್ಠರಾದರೂ ಅವರೊಂದಿಗೆ ದಿಟ್ಟವಾಗಿ ಹೋರಾಡಬಲ್ಲ ಪರಮಸಮರ್ಥನೂ, ಸ್ವಭಾವಸಿದ್ಧ ತಂಪಾದ ಪರಿಮಳ ತುಂಬಿದ ತುಳಸಿಯ ಹಾರವನ್ನು (ದಂಡೆಯನ್ನು) ತಲೆಯಲ್ಲಿ ಮುಡಿದಿರುವ ದಿವ್ಯಸುಂದರ ಮೂರ್ತಿಯಾಗಿರುವವನೂ ಆ ಸ್ವಾಮಿಯೇ.

8. பொன்முடியம் போரேற்றை எம்மானை நால்தடந்தோள்,
தன்முடிவொன்றில்லாத தண்துழாய் மாலையனை,
என்முடிவு காணாதே என்னுள் கலந்தானை,
சொல்முடிவு காணேன்நான் சொல்லுவதென் சொல்லீரே.

ಪೊನ್ ಮುಡಿಯಮ್ ಪೋರೇಟ್ರೈ ಎಮ್ಮಾನೈ ನಾಲ್ ತಡನ್ದೋಳ್,
ತನ್ ಮುಡಿವೊನ್ಱಿಲ್ಲಾದ ತಣ್ಡುೞಾಯ್ ಮಾಲೈಯನೈ,
ಎನ್ ಮುಡಿವು ಕಾಣಾದೇ ಎನ್ನುಳ್ ಕಲನ್ದಾನೈ,
ಶೊಲ್ ಮುಡಿವು ಕಾಣೇನ್ ನಾನ್ ಶೊಲ್ಲುವದೆನ್ ಶೊಲ್ಲೀರೇ.

ಪೊನ್ ಮುಡಿ பொன் முடி = ರತ್ನಮಯ ಕಿರೀಟವನ್ನು ಧರಿಸಿರುವ, அம் = ದಿವ್ಯಸುಂದರನಾದ, ಪೋರ್ ಏಟ್ರೈ போர் ஏற்றை = ಸಮ

Garani Srinivasan

ರ್ಥನಾದ ವೃಷಭದಂಥವನನ್ನು, ಎಮ್ಮಾನ್ನೈ நம்மானை = ನನ್ನ ಸ್ವಾಮಿ
ಯನ್ನು, ನಾಲ್ ತಡ ತೋಳ್ நால் தட தோளை = ನಾಲ್ಕು ದೀರ್ಘ
ವಾದ ತೋಳುಗಳುಳ್ಳವನನ್ನು, ತನ್ ಮುಡಿವು ಒನ್ಱು ಇಲ್ಲಾದ ತನ್
முடிவு ஒன்று இல்லாத = ತನಗೆ ಯಾವ ಬಗೆಯಲ್ಲೂ ಮಿತಿಯಿಲ್ಲ
ದವನನ್ನು. ತಣ್ ತುಳಾಯ್ ಮಾಲೈಯನ್ನೈ தண் துழாய் மாலைய
னை ತಂಪಾದ ತುಳಸಿಯ ಹಾರವನ್ನು ಧರಿಸಿರುವವನನ್ನು, ಎನ್ ನಣ್
ನನ್ನು, ಮುಡಿವು முடிவு = ಪೂರ್ಣತೆಯನ್ನು (ಕೊರತೆಯನ್ನು), ~~[illegible]~~ ಕಾಣಾ
ದೇ காணாதே = ಲಕ್ಷಿಸದೆ, ಎನ್ನುಳ್ ನಣ್ಣುವನ್ = ನನ್ನ ಅಂತರಂಗ
ದಲ್ಲಿ, ಕಲನ್ದಾನೈ கலந்தானை = ಕಲೆತುಕೊಂಡವನನ್ನು, ಕೂರು,
ಸೊಲ್ சொல் ಹೇಳಲು, (ಮಾತುಗಳು), ಮುಡಿವು முடிவு = ಕೊನೆ
ಯನ್ನು, ಕಾಣೇನ ನಾನ್ காணேன் நான் = ನಾನು ಕಾಣೆನಲ್ಲ,
ಸೊಲ್ಲುವದು ಎನ சொல்லுவது என் = ಹೇಳುವುದು ಏನನ್ನು?
ಸೊಲ್ಲೀರೇ சொல்லீரே = ನೀವು ಹೇಳಿರಿ!

ರತ್ನಮಯವಾದ ಕಿರೀಟವನ್ನು ಧರಿಸಿರುವ ದಿವ್ಯಸುಂದರನಾದ ಸಮರ್ಥ ವೃಷಭದಂಥವನನ್ನು, ನನ್ನ ಒಡೆಯನನ್ನು. ದೀರ್ಘವಾದ ನಾಲ್ಕು ತೋಳುಗಳುಳ್ಳವನನ್ನು, ತನಗೆ ಯಾವ ಬಗೆಯ ಮಿತಿಯೂ ಇಲ್ಲದವನನ್ನು, ತಂಪಾದ ತುಳಸಿಯ ಹಾರವನ್ನು ಧರಿಸಿರುವವನನ್ನು. ನನ್ನ ಪೂರ್ಣತೆಯನ್ನು (ಕೊರತೆಗಳನ್ನು) ಗಮನಿಸದಂತೆ ನನ್ನ ಅಂತರಂಗದಲ್ಲಿ ಕಲೆತುಕೊಂಡವನನ್ನು, ಕೂರು ಹೇಳಲು (ಮಾತುಗಳು) ಕೊನೆಯನ್ನೇ ನಾನು (8)
ಕಾಣೆನಲ್ಲ! ಹೇಳುವುದು ಏನನ್ನು? ನೀವು ಹೇಳಿರಿ!

ಆಳ್ವಾರರು ಹೇಳುತ್ತಾರೆ: ನನ್ನ ಸ್ವಾಮಿಯಾದ ಭಗವಂತನ ದಿವ್ಯ ಸೌಂದರ್ಯವನ್ನು ಅದ್ವಿತೀಯ ಸಾಮರ್ಥ್ಯವನ್ನು, ~~[illegible]~~ ವಿರಹೋದಾರ ವನ್ನು ವರ್ಣಿಸುವುದು ಹೇಗೆ? ಸುವರ್ಣಮಯವಾದ ಹೊಳೆಯುವ ಕಿರೀಟವನ್ನು ಅವನು ಧರಿಸಿದ್ದಾನೆ. ಎಂದೆಂದೂ ಬಾಡದೆ ಇರುವ ವಿಮಲ ಪೂರ್ಣವಾದ ತುಳಸಿಯ ಹಾರವನ್ನು ~~[illegible]~~ ಮುಡಿದಿದ್ದಾನೆ. ದೀರ್ಘವಾದ ಮತ್ತು ಸಮರ್ಥವಾದ ನಾಲ್ಕು ತೋಳುಗಳನ್ನುಳ್ಳವನಾಗಿದ್ದಾನೆ. ಹೊರಾಶಕ್ತಿ ಉರತಾರಕ್ಕೆ ~~[illegible]~~ ಅವು ಬಲ್ಲವಲ್ಲದಧವಾಗಿವೆ. ತನ್ನ ಒಡೆತನಕ್ಕೆ ಯಾವ ಬಗೆಯಲ್ಲೂ ಮಿತಿಯಿಲ್ಲದವನಾಗಿದ್ದಾನೆ. ಹೀಗೆ, ಎಲ್ಲ ಬಗೆಯಲ್ಲೂ ಪರಮ ಶ್ರೇಷ್ಠನೆನಿಸಿಕೊಂಡ ಸರ್ವೇಶ್ವರನು ಕೊರತೆಗಳಿಂದ ತುಂಬಿರುವ ಕಡುಪಾಪಿಯಾದ ನನ್ನ ಅಂತರಂಗವನ್ನು ಪ್ರವೇಶಿಸಿ, ನನ್ನನ್ನು ಉದ್ಧರಿಸಲು ನನ್ನಲ್ಲಿ ಕಲೆತುಕೊಂಡಿದ್ದಾನಲ್ಲ! ಅವನ ಸ್ವರೂಪ ಸ್ವಭಾವಗಳನ್ನು ಕೂರು ಹೇಳಲು ನನಗೆ

Garani Srinivasan

ಕೊಟ್ಟದಂತಾಗದೆಯಲ್ಲ! ಹೇಳಲು ಕೇಳಿದವರು ಇನ್ನು ಏನನ್ನು ಹೇಳ
ಬೇಕೋ (ಅದನ್ನೆಲ್ಲಾ) ಹೇಳಬಲ್ಲಿರೋ?

ತನ್ ಮಯಿಪ್ಪು ಒನ್ಱಿಲ್ಲಾದ ಎಂಬುದನ್ನು ತಣ್ ತುಳಾಯ್ ಎಂಬುದಕ್ಕೇ ಕೂಡಿಸಿ, ಅನ್ವಯ ಮಾಡಿಕೊಂಡು ಹೇಳಬಹುದೆನಿಸುತ್ತದೆ. ಆಗ, ಭಗವಂತನು ಧರಿಸಿರುವ ತುಲಸಿಯ ಹಾರ ಎಂದರೆದಾ ಹಾಡದಂತೆ, ನಿತ್ಯನೂತನವಾಗಿಯೂ, ಬಿಡಿಮಲ್ಲಿ ಪೂರ್ಣವಾಗಿಯೂ ಇರುತ್ತದೆ ಎಂದು ಅರ್ಥಮಾಡಬಹುದೆನಿಸುತ್ತದೆ

9 சொல்லீரென்னம்மானை என்னாவியாவிதனை,
எல்லையில் சீர் என் கருமாணிக்கச்சுடரை
நல்லவமுதம் பெறற்கரிய வீடுமாய்,
அல்லிமலர் விரையொத்து ஆணல்லன் பெண்ணல்லனே.

ಸೊಲ್ಲೀರೆನ್ನಮ್ಮಾನೈ ಎನ್ನಾವಿಯಾವಿದನೈ,
ಎಲ್ಲೈಯಿಲ್ ಶೀರ್ ಎನ್ ಕರುಮಾಣಿಕ್ಕಚ್ಚುಡರೈ,
ನಲ್ಲವಮುದಮ್ ಪೆಱಱ್ಕರಿಯ ವೀಡುಮಾಯ್,
ಅಲ್ಲಿಮಲರ್ ವಿರೈಯೊತ್ತು ಆಣಲ್ಲನ್ ಪೆಣ್ಣಲ್ಲನೇ

ಸೊಲ್ಲೀರ್ சொல்லீர் = ಹೇಳಿರಿ, ಎನ್ ಅಮ್ಮಾನೈ என் அம்மானை = ನನ್ನ ಸ್ವಾಮಿಯನ್ನು, ಎನ್ ಆವಿ ಆವಿದನೈ என் ஆவி ஆவிதனை = ನನ್ನ ಆತ್ಮಕ್ಕೆ ಆತ್ಮನಾದವನನ್ನು, ಎಲ್ಲೈ ಇಲ್ எல்லை இல் = ಮಿತಿಯಿಲ್ಲದ, ಶೀರ್ சீர் = ಗುಣಾತಿಶಯಗಳನ್ನುಳ್ಳವನನ್ನು, ಎನ್ ಕರು ಮಾಣಿಕ್ಕ ಚುಡರೈ என் கருமாணிக்க சுடரை = ನನ್ನ ಇಂದ್ರನೀಲರತ್ನದಂತೆ ಪ್ರಕಾಶವುಳ್ಳವನನ್ನು, ನಲ್ಲ ಅಮುದಮ್ நல்ல அமுதம் = ಶ್ರೇಷ್ಠವಾದ ಅಮೃತದಂತಿರುವವನನ್ನು, ಪೆಱಱ್ಕು பெறற்கு = ಪಡೆದುಕೊಳ್ಳುವುದಕ್ಕೆ, ಅರಿಯ அரிய = ಅಸಾಧ್ಯವಾದ (ಸುಲಭ ಸಾಧ್ಯವಲ್ಲದ), ವೀಡುಮ್ ಆಯ್ வீடும் ஆய் = ಸ್ಥಾನವಾಗಿರುವವನನ್ನು, ಅಲ್ಲಿ ಮಲರ್ அல்லிமலர் = ತಾವರೆಹೂವಿನ, ವಿರೈ ಒತ್ತು ವಿರೈ ஒத்து = ಪರಿಮಳದ ಹಾಗೆ ಇರುವವನನ್ನು, ಆಣ್ ಅಲ್ಲನ್ ஆண் அல்லன் = ಗಂಡಾಗಿರದವನನ್ನು, ಪೆಣ್ ಅಲ್ಲನ್ பெண் அல்லன் ಹೆಣ್ಣಾಗಿರದವನನ್ನು (ತೋರಿಸು).

ನನ್ನ ಸ್ವಾಮಿಯನ್ನು, ನನ್ನ ಆತ್ಮನ ಆತ್ಮನನ್ನು, ಮಿತಿಯಿಲ್ಲದ

ಗುಣಾಕೀರ್ತನಗಳುಳ್ಳವನನ್ನು, ಇಂದ್ರನೀಲಮಣಿಯಂತೆ ಪ್ರಕಾಶವುಳ್ಳವನನ್ನು, ಅತ್ಯಂತ ಶ್ರೇಷ್ಠವಾದ ಅಮೃತದಂಥವನನ್ನು, ಪಡೆದುಕೊಳ್ಳುವುದಕ್ಕೆ ಸುಲಭಸಾಧ್ಯವೆನಿಸದ ಜ್ಞಾನವಾಗಿರುವವನನ್ನು, ತಾವರೆಹೂವಿನ ಪರಿಮಳದ ಹಾಗೆ ಇರುವವನನ್ನು, ಗಂಡು ಅಲ್ಲದವನನ್ನು, ಹೆಣ್ಣು ಅಲ್ಲದವನನ್ನು ಕುರಿತು ಹೇಳಿರಿ. (೯)

ಹಿಂದಿನ ಪಾಶುರದಲ್ಲಿ ಆಳ್ವಾರರು ಇತರರನ್ನು ಸಂಬೋಧಿಸಿದರು ನನಗೆ ಭಗವಂತನ ಅನಂತವಾದ ಗುಣಸ್ವಭಾವಗಳನ್ನು ಕುರಿತು ಹೇಳಲು ಸಾಧ್ಯವಿಲ್ಲ. ನೀವಾದರೂ ಹೇಳಬಹುದಾದದ್ದನ್ನು ಹೇಳಿರಿ ಎಂದು ಕರೆಕೊಟ್ಟರು. ಈ ಪಾಶುರದಲ್ಲಿ ಆ ಇತರರು ಹೇಳಬೇಕಾದದ್ದೇನು ಎಂಬುದನ್ನು ಕುರಿತು ಹೇಳಲಿದ್ದಾರೆ.

ಆಳ್ವಾರರು ಹೇಳುತ್ತಾರೆ: ಲೋಕದ ಜನರೇ, ನೀವು ಭಗವಂತನನ್ನು ಕುರಿತು ಸ್ತೋತ್ರಗಳ ಹಾಡಿರಿ. ವಿಶಿಷ್ಟವಾದ ಅವನ ಗುಣಸ್ವಭಾವಗಳನ್ನು ಕೀರ್ತಿಸಿ ತಿಳಿಯಿರಿ. ಭಗವಂತನೇ ನನ್ನ ಸ್ವಾಮಿ, ನನ್ನ ನಿರ್ವಾಹಕ. ಅವನೇ ನನ್ನ ಆತ್ಮದ ಆತ್ಮ. ಅವನ ಕಲ್ಯಾಣಗುಣಗಳಿಗೂ ಕೀರ್ತಿಗೂ ಕೊನೆಯೇ ಇಲ್ಲ. ಅವುಗಳನ್ನೆಲ್ಲ ಕಿವಿಯಿಂದ ಕೇಳಿ ಆನಂದಿಸಿ. ಅವುಗಳನ್ನು ನಾಲಗೆಯಿಂದ ಉಚ್ಚರಿಸುತ್ತಾ ಆನಂದಿಸಿ. ಇಂದ್ರನೀಲಮಣಿಯ ಹಾಗೆ ಕಣ್ಣಿಗೆ ಇಂಪಾಗಿ ಆಕರ್ಷಕವಾಗಿರುವ ಅವನ ದಿವ್ಯಪ್ರಕಾಶವನ್ನು ಕಣ್ಣಾರ ಕಂಡು ಆನಂದಿಸಿ. ಪರಮಭೋಗ್ಯವೂ ಅತ್ಯಂತ ರುಚಿಕರವೂ ಆದ ದಿವ್ಯಾಮೃತದಂತೆ ಇರುವ ಅವನ ನಾಮಸ್ಮರಣೆಯಲ್ಲಿ ತೊಡಗಿ, ಅವನ ರುಚಿಯನ್ನು ಅನುಭವಿಸಿ ಆನಂದಿಸಿ. ಪಡೆದುಕೊಳ್ಳಲೇಬೇಕಾದ, ಅಂತಿಮಗುರಿಯಾದ ಪಡೆದುಕೊಳ್ಳಲು ಸುಲಭಸಾಧ್ಯವಲ್ಲದ ಜ್ಞಾನವಾದ ಪರಮಪದವೇ ಆಗಿರುವ ಅವನನ್ನು ಸಾಧಿಸಿ ಪಡೆದುಕೊಳ್ಳಿ. ತಾವರೆಯ ಹೂವಿನ ಪರಿಮಳದಂತೆ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವವನನ್ನು ಅನುಭವಿಸಿ ಆನಂದಿಸಿ. ಅವನನ್ನು ಪ್ರೀತಿ ಮಾಡುವವರು ಗಂಡಾಗಲಿ, ಹೆಣ್ಣಾಗಲಿ, - ಅವರೆಲ್ಲರೂ ಆಕರ್ಷಕನಾ ಪಡೆದುಕೊಳ್ಳಲೇಬೇಕಾಗಿರುವ ಸರ್ವೇಶ್ವರನನ್ನು ಮನಸ್ಸು ಇಂದ್ರಿಯಗಳ ಮೂಲಕ ಅನುಭವಿಸುತ್ತಾ ಭಕ್ತಿ ಮಾಡುತ್ತಾ, ಪಡೆದುಕೊಳ್ಳ

10. ஆணல்லன் பெண்ணல்லன் அல்லாவலியுமல்லன்,
காணலுமாகான் உளனல்லனில்லையல்லன்,
பேணுங்கால் பேணும் உருவாகு மல்லனுமாம்,
கோணை பெரிதுடைத்து எம்பெருமானைக் கூறுதலே.

Garani Srinivasan

ಆಣಲ್ಲನ್ ಪೆಣ್ಣಲ್ಲನ್ ಅಲ್ಲಾ ಅಲಿಯುಮಲ್ಲನ್,
ಕಾಣಲುಮಾಗಾನ್ ಉಳನಲ್ಲನಿಲ್ಲೈಯಲ್ಲನ್,
ಪೇಣುಙ್ಗಾಲ್ ಪೇಣುಮ್ ಉರುವಾಗುಮಲ್ಲನುಮಾಮ್,
ಕೋಣೈ ಪೆರಿದುಡೈತ್ತು ಎಮ್ಬೆರುಮಾನೈಕ್ಕೂರುದಲೇ

ಆಣ್ ಅಲ್ಲನ್ ஆண் அல்லன் (ಭಗವಂತನು) ಗಂಡೂ ಅಲ್ಲ, ಪೆಣ್ ಅಲ್ಲನ್ பெண் அல்லன் ಹೆಣ್ಣೂ ಅಲ್ಲ, ಅಲ್ಲಾ அல்லா = ಇವೆರಡೂ ಅಲ್ಲದ, ಅಲಿಯುಮ್ ಅಲ್ಲನ್ அலியும் அல்லன் = ನಪುಂಸಕನೂ ಅಲ್ಲ, ಕಾಣಲುಮ್ ಆಗಾನ್ காணலும் ஆகான் = ನೋಡುವುದಕ್ಕೆ ಆಗುವುದಿಲ್ಲ (ಅವನು ಕಾಣಿಸುವವನೂ ಅಲ್ಲ), ಉಳನ್ ಅಲ್ಲನ್ உளன் அல்லன் = ಇರುವವನೂ ಅಲ್ಲ (ಉಂಟಾದವನೂ ಅಲ್ಲ), ಇಲ್ಲೈ ಅಲ್ಲನ್ இல்லை அல்லன் = ಇಲ್ಲದವನೂ ಅಲ್ಲ (ಇಲ್ಲದೆಯೂ ಇಲ್ಲ), ಪೇಣುಙ್ಗಾಲ್ பேணுங்கால் = ಆಶಿಸಿದರೆ (ಪೂಜಿಸಿದರೆ), ಪೇಣುಮ್ பேணும் = ಆಶಿಸುವ (ಪೂಜಿಸುವ), ಉರು ಆಗುಮ್ உரு ஆகும் = ರೂಪವುಳ್ಳವನಾಗುತ್ತಾನೆ, ಅಲ್ಲನುಮ್ ಆಮ್ அல்லனும் ஆம் ಹಾಗಲ್ಲದವನೂ ಆಗುತ್ತಾನೆ, ಕೋಣೈ ಪೆರಿದು ಉಡೈತ್ತು கோணை பெரிது உடைத்து = ಬಲವನ್ನು ಬಹಳವಾಗಿ ಪ್ರಯೋಗಿಸಿ (ಕೋಣನ್ನು ದೊಡ್ಡದಾಗಿ ಒಡೆದು), ಎಮ್ಬೆರುಮಾನೈ எம்பெருமானை = ಭಗವಂತನನ್ನು (ಕುರಿತು), ಕೂರುದಲೇ கூறுதலே = ಹೇಳುವುದೆಂಬುದೇ.

ಭಗವಂತನು ಗಂಡೂ ಅಲ್ಲ, ಹೆಣ್ಣೂ ಅಲ್ಲ. ಅವೆರಡೂ ಅಲ್ಲದ ನಪುಂಸಕನೂ ಅಲ್ಲ. ಅವನು ಕಣ್ಣಿಗೆ ಕಾಣಿಸುವವನೂ ಅಲ್ಲ. ಇರುವವನೂ ಅಲ್ಲ. ಇಲ್ಲದವನೂ ಅಲ್ಲ. ಆಶಿಸಿದರೆ (ಪೂಜಿಸಿದರೆ), ಆಶಿಸುವ (ಪೂಜಿಸುವ) ರೂಪವುಳ್ಳವನಾಗುತ್ತಾನೆ. ಹಾಗಲ್ಲದೆಯೂ ಇರುತ್ತಾನೆ. ಭಗವಂತನನ್ನು ಹೇಳುವುದೆಂಬುದೇ ಕೋಣನ್ನು ದೊಡ್ಡದಾಗಿ ಒಡೆದು ಹೇಳಬೇಕಾದದ್ದು! (10)

ಹಿಂದಿನ ಪಾಶುರದಲ್ಲಿ ಆಳ್ವಾರರು ಭಗವಂತನನ್ನು ಕುರಿತು ಹೇಳಿದಾಗ, ಅವನು 'ಗಂಡೂ ಅಲ್ಲ ಹೆಣ್ಣೂ ಅಲ್ಲ' ಎಂದರು.. ಸಾಮಾನ್ಯರಿಗೆ ಸಾಮಾನ್ಯರೀತಿಯಲ್ಲಿ ಇದರಿಂದ ಸಂಶಯವುಂಟಾಗಬಹುದೆಂದು ಊಹಿಸಿ, ಅದನ್ನು ಇಲ್ಲಿ ಇನ್ನಷ್ಟು ವಿಶದಪಡಿಸುತ್ತಿದ್ದಾರೆ.

ವೇದಗಳಲ್ಲಿ ಭಗವಂತನನ್ನು ಪ್ರತಿಪಾದಿಸಿದ ಜಾಡನ್ನೇ ಇದರಲ್ಲಿ ಹಿಡಿಯಲಾಗಿದೆ. ಸಾಮಾನ್ಯರೀತಿಯ ಲಿಂಗ ರೂಪಗಳಿಂದ ಭಗವಂತನನ್ನು ಪರಿಗಣಿಸಲಾಗದು! ತಾನೇ ಸೃಷ್ಟಿಸಿದ ಎಲ್ಲಾ ವಸ್ತುಗಳ ಅಂಶಗಳೂ ಅವನು ಭಿನ್ನನಾಗಿ, ಅವುಗಳಿಂದ ಅತೀತನಾಗಿ ವಿಶಿಷ್ಟನಾಗಿ, ಅವುಗಳ ಅಂಶಯೊಳ ಮಿಳಿತನಾಗಿಯೂ ಇದ್ದಾನೆ. "ಅದಲ್ಲ, 'ಅದಲ್ಲ', 'ಅದಲ್ಲ" ಎಂದೇ ಶ್ರುತಿಯು

Garani Srinivasan

ಎಲ್ಲಾ ವಸ್ತುಗಳಲ್ಲಿಯೂ ಬಿಡಿಸಿ, ಬಿಡಿಸಿ, ಬೇರ್ಪಡಿಸಿ, ಭಗವಂತನನ್ನು ಅರಿಯತಕ್ಕ
ಶ್ರಮ ಯುಕ್ತಿಬೇಕಾಗಿದೆ. ಇದರಿಂದ, ಭಗವಂತನನ್ನು ವರ್ಣಿಸಿ ವಿವರಿಸುವುದ
ಕು ನಿಜಕ್ಕೂ ಕಷ್ಟಸಾಧ್ಯವೇ!

ಆಳ್ವಾರರು ಹೇಳುತ್ತಾರೆ 'ಭಗವಂತನು ಗಂಡೂ ಅಲ್ಲ, ಹೆಣ್ಣೂ ಅಲ್ಲ
ಎಂದೆನಷ್ಟೇ. ಅವನು ಗಂಡೂ ಹೆಣ್ಣೂ ಅಲ್ಲದ ಬೇರೆ, ಅವನು ನಪುಂಸಕನೇನು?
ಎಂದು ಕೇಳಿದರೆ, ಅವನು ನಪುಂಸಕನೂ ಅಲ್ಲ. ಕಣ್ಣಿಗೆ ಕಾಣಿಸುವವನೂ ಅಲ್ಲ.
ಒಂದೆಡೆಯಲ್ಲಿ, ಗೊತ್ತಾದ ಕಡೆಯಲ್ಲಿ ಇರುವವನೂ ಅಲ್ಲ ಇಲ್ಲದವನೂ ಅಲ್ಲ.
ಅವನ ಇರುವಿಕೆಯನ್ನು ನಂಬುವವರಿಗೆ ಅವನಿದ್ದಾನೆ. ನಂಬದವರಿಗೆ ಅವನು
ಇಲ್ಲವೆಂತಲೇ. ಅವನು ಎಲ್ಲೆಡೆಯಲ್ಲೂ ಇದ್ದಾನೆ. ರೂಪವಿಲ್ಲದವನೂ, ಅಗೋ
ಚರನಾಗಿ ಇದ್ದಾನೆ. ಅವನು ಯಾವರೂಪದಲ್ಲಾದರೂ ಕಾಣಿಸಿಕೊಳ್ಳಬಹುದು
ಆಕಾರದಲ್ಲಿ ಇಲ್ಲದೆಯೂ ~~ಹೋಗ~~ ಇರಬಹುದು. ಕಾಣದೆಯೂ ಇರಬಹುದು.
ಅವನನ್ನು ಆರಿಸಿ, ~~ಯಾವಾಗಲೂ~~ ಯಾವ ರೂಪವನ್ನು ಗುರಿಯಾಗಿಟ್ಟುಕೊಂಡು
ಅವನನ್ನು ಪೂಜಿಸುವರೋ, ಧ್ಯಾನಿಸುವರೋ, ಆ ರೂಪದಲ್ಲೇ ಅವರಿಗೆ ಕಾಣಿಸಿಕೊ
ಳ್ಳ-ಬಹುದು. ಹಾಗೆ ಕಾಣಿಸಿಕೊಳ್ಳದೆ ಆಕಾರದಲ್ಲಿ ಇಲ್ಲದೆಯೂ ಹೋಗ
ಬಹುದು. ಭಗವಂತನ ರೀತಿಯೇ ಅತಿ ವಿಚಿತ್ರ!. ಆಶ್ಚರ್ಯಕರ!
ಇಂಥ ಅವನನ್ನು ಕುರಿತು ಹೇಳುವುದು ತಾನೇ ಸುಲಭವಾದೀತೇ? ದೊಡ್ಡ
ದಾಗಿ ಗೋಳನ್ನು ಮುಂದೆ ಹೇಳಬೇಕಾದೀತು ಬಹು ಪ್ರಯಾಸವೇ
ಆದೀತು!

11. கூறுதலொன்றாராக் குடக்கூத்தவம்மானை,
கூறுதலே மேவிக் குருகூர்ச்சடகோபன்,
கூறின் வந்தாதி ஓராயிரத்துளிப்பத்தும்,
கூறுதல் வல்லாருளரேல் கூடுவர் வைகுந்தமே.

ಕೂಱುದಲೊನ್ಱಾರಾಕ್ಕುಡಕ್ಕೂತ್ತವಮ್ಮಾನೈ,
ಕೂಱುದಲೇ ಮೇವಿಕ್ಕುರುಕೂರ್ಚ್ಚಡಕೋಪನ್,
ಕೂಱಿನವನ್ದಾದಿ ಓರಾಯಿರತ್ತುಳಿಪ್ಪತ್ತುಮ್,
ಕೂಱುದಲ್ ವಲ್ಲಾರುಳರೇಲ್ ಕೂಡುವರ್ ವೈಕುನ್ದಮೇ.

ಕೂಱುದಲ್ கூறுதல் = ಹೇಳುವುದಕ್ಕೆ, ಒನ್ಱು ஒன்று
= ಸ್ವಲ್ಪವೂ, ಆರಾ ஆரா ಸಾಧ್ಯವಾಗದಂಥ, ಕುಡಕ್ಕೂತ್ತ குடக்
கூத்த ಕೊಡದ ಕುಣಿತದಲ್ಲಿ ನಿಪುಣನಾದ, ಅಮ್ಮಾನೈ அம்மானை
= ಸ್ವಾಮಿಯನ್ನು, ಕೂಱುದಲೇ கூறுதலே = ಹೇಳುವುದರಲ್ಲಿಯೇ,
(ಹೇಳುವುದನ್ನೇ)

ಮೇವಿ மேவி, ಅರಸಿ, ಕುರುಗೂರ್ ಶಠಕೋಪನ್ குருகூர் சட
கோபன் = ತಿರುಕ್ಕುರುಗೂರಿನ ಶಠಕೋಪನು, ಕೂಱಿನ கூறி
ன = ಹೇಳಿದ ಅನ್ದಾದಿ அந்தாதி ಅಂತಾದಿರಚನೆಯ ಓರ್
ಆಯಿರತ್ತುಳ್ ஓர் ஆயிரத்துள் = ಒಂದು ಸಾವಿರದಲ್ಲಿ (ಪಾಶುರ
ಗಳಲ್ಲಿ) ಇ-ಪತ್ತುಮ್ (இ) பத்தும் = ಈ ಹತ್ತನ್ನು (ಪಾಶುರಗಳ
ನ್ನು), ಕೂಱುದಲ್ கூறுதல் = ಹೇಳುವುದನ್ನು, ವಲ್ಲಾರ್ வல
லார் = ಬಲ್ಲವರು, ಉಳರೇಲ್ உளார் ஏல் = ಇರುವರಾದರೆ,
(ಅವರು), ಕೂಡುವರ್ கூடுவர் = ಸೇರುವರು, ವೈಕುನ್ದಮೇ வை
குந்தமே = ವೈಕುಂಠವನ್ನೇ.

ಹೇಳುವುದಕ್ಕೆ ಸ್ವಲ್ಪವೂ ಸಾಧ್ಯವಾಗದಂಥ ಶ್ರೀಧರ ಪಣಿಕತದಲ್ಲಿ ನಿರ್ವಾಣನಿಸಿದ ಸ್ವಾಮಿಯನ್ನು ಕುರಿತು ಹೇಳುವುದನ್ನೇ ಆರಿಸಿ, ತಿರುಕ್ಕುರುಗೂರಿನ ಶಠಕೋಪನು ಹೇಳಿದ ಅಂತಾದಿರಚನೆಯ ಒಂದು ಸಾವಿರ (ಪಾಶುರ)ದಲ್ಲಿ ಈ ಹತ್ತನ್ನು ಹೇಳುವುದನ್ನು ಬಲ್ಲವರು ಇರುವರಾದರೆ, (11)
(ಅವರು) ವೈಕುಂಠವನ್ನೇ ಸೇರುವರು

ಭಗವಂತನನ್ನು ಕುರಿತು, ಅವನ ಗುಣ ಸ್ವಭಾವಗಳನ್ನು ಕುರಿತು ವಿವರಿಸಿ ಹೊಗಳುವುದು ಕಷ್ಟಕರವಾದ ವಿಷಯವೆಂದು ತಿಳಿಸುವುದು ಈ ಐದನೆಯ ತಿರುವಾಯ್ಮೊಳಿಯ ಸೂಚನೆ. ಜ್ಞಾನಗಮ್ಯನಾ, ಭಕ್ತಿಗಮ್ಯನಾಗಿರುವವನು ಭಗವಂತ. ಯಾವ ಮಾರ್ಗದಿಂದಲೂ ಅವನನ್ನು ಅರಿತುಕೊಳ್ಳಲು ಬಹಳ ಪ್ರಯಾಸವೇ ಆಗುತ್ತದೆ. ಅರಿವಿಗೆ ಸುಲಭವಾಗಿ ನಿಲುಕದ ಭಗವಂತನನ್ನೇ ಆರಿಸಿ, ಅವನ ಸ್ವರೂಪ ಸ್ವಭಾವಗಳನ್ನು ಕುರಿತು ಹೊಗಳಿ ಹೇಳುವುದರಲ್ಲಿಯೇ ಮಗ್ನರಾಗಿ ಆನಂದಿಸುವವರು ಅತಿ ವಿರಳ. ಅಂಥ ಅಪರೂಪ ಸ್ವಭಾವ ತಿರುಕ್ಕುರುಗೂರಿನ ಶಠಕೋಪನದು. ಭಗವಂತನನ್ನು ಕುರಿತು ಹೇಳುವುದರಲ್ಲಿಯೇ ನಿರತನಾಗಿ, ಒಂದು ಸಾವಿರ ಪಾಶುರಗಳನ್ನು ಇದಕ್ಕಾಗಿಯೇ ಮೀಸಲಾಗಿಸಿ, ಅವುಗಳನ್ನು 'ಅಂತಾದಿ' ಎಂಬ ವಿಶಿಷ್ಟ ರೀತಿಯಲ್ಲಿ ರಚಿಸಿ, ತಿರುವಾಯ್ಮೊಳಿ ಎಂಬ ಗಾನದಲ್ಲಿ ಹಾಡಿದ ಹೆಗ್ಗಳಿಕೆ ಅವನದು!

ಈ ಐದನೆಯ ತಿರುವಾಯ್ಮೊಳಿಯ ಹತ್ತು ಪಾಶುರಗಳು ಆ ಸಾವಿರದಲ್ಲಿ ಒಂದು ಅಲ್ಪಭಾಗ ಮಾತ್ರ! ಇದರಲ್ಲಿ ಹೇಳಿರುವಷ್ಟು ವಿಷಯವನ್ನಾದರೂ ಚೆನ್ನಾಗಿ ಅರಿತುಕೊಂಡು ಎಡೆಬಿಡದೆ ಹೇಳುತ್ತಾ ಬರುವುದರಿಂದ ಒದಗುವ ಫಲ ಅಪಾರವಾದದ್ದು! ಶಾಶ್ವತವೂ, ಮಹೋ

Garani Srinivasan

ಶ್ವತವೂ ಆದ ವೈಕುಂಠವನ್ನೇ ಇದು ದೊರಕಿಸಿ ಕೊಡಬಲ್ಲದು. ಹೀಗಿದೆ ಈ ತಿರುವಾಯ್ಮೊಳಿಯ ಫಲಶ್ರುತಿ.

ಕೊಡದ ಕುಣಿತದಲ್ಲಿ ನಿಪುಣನೆನಿಸಿದವನು ಶ್ರೀಕೃಷ್ಣ ರೂಪಿಯಾದ ಭಗವಂತ ಬಾಲಕೃಷ್ಣನಾಗಿ ನಂದಗೋಕುಲದಲ್ಲಿ ಬೆಳೆಯುತ್ತಿರುವಾಗ ಸ್ವಾಮಿಯು ಆ ಎಳೆಯ ವಯಸ್ಸಿನಲ್ಲಿಯೇ, ಗೋವಳರಲ್ಲಿ ಕಷ್ಟಕರವೆನಿಸಿದ ಈ ಕೊಡದ ಕುಣಿತವನ್ನು ಅತಿಚಮತ್ಕಾರಪೂರ್ವಕವಾಗಿ ನಡೆಸಿ ಅತ್ಯಂತ ಸುಲಭವಾಗಿ ಎಲ್ಲರನ್ನೂ ಬೆರಗುಗೊಳಿಸಿದನು ಆದ್ದರಿಂದ ಕುಡಕ್ಕೂತ್ತನ್" ಎಂಬ ಪ್ರಿಯವಾದ ಹೆಸರು!

'ಅಂತಾದಿ':– ಒಂದು ಪಾಶುರದ ಕಡೆಯ ಪದವನ್ನು ಅದರ ಮುಂದಿನ ಪಾಶುರದ ಮೊದಲನೆಯ ಪದವನ್ನಾಗಿ ಮಾಡಿಕೊಂಡು, ಚಮತ್ಕಾರದಿಂದ ಜೋಡಿಸಿ, ಹೆಣೆದು ಹೇಳುವಂಥ ಕಷ್ಟಕರವಾದ ಕಾವ್ಯರಚನೆ.

26.3.80

ತಿರುವಾಯ್‌ಮೊೞಿ - ಎರಡನೆಯ ದಶಕ - ಆರನೆಯ ತಿರುವಾಯ್‌ಮೊೞಿ.

திருவாய்மொழி - இரண்டாம்பத்து - ஆறாந்திருவாய்மொழி.

6. ವೈಕುನ್ದಾ, ಮಣಿವಣ್ಣನೇ வைகுந்தா மணிவண்ணனே

1. வைகுந்தா மணிவண்ணனே
என் பொல்லாத்திருக்குறளா என்னுள் மன்னி,
வைகும் வைகல்தோறும் அமுதாய வானேறே,
செய்குந்தா வருந்தீமை யுன்னடியார்க்குத் தீர்த்து அசுரர்க்குத் தீமைகள்
செய்குந்தா, உன்னை நான் பிடித்தேன் கொள் சிக்கெனவே.

ವೈಕುನ್ದಾ ಮಣಿವಣ್ಣನೇ ಎನ್ ಪೊಲ್ಲಾತ್ತಿರುಕ್ಕುಱಳಾ ಎನ್ನುಳ್ ಮನ್ನಿ,
ವೈಗುಮ್ ವೈಗಲ್ ತೋಱುಮ್ ಅಮುದಾಯ ವಾನೇಱೇ,
ಶೆಯ್‌ಕುನ್ದಾ ವರುನ್ದೀಮೈ ಯುನ್ನಡಿಯಾರ್ಕ್ಕುತ್ತೀರ್ತ್ತು ಅಸುರರ್ಕ್ಕುತ್ತೀಮೈಗಳ್
ಶೆಯ್‌ಕುನ್ದಾ, ಉನ್ನೈನಾನ್ ಪಿಡಿತ್ತೇನ್ ಕೊಳ್ ಶಿಕ್ಕೆನವೇ

ವೈಕುನ್ದಾ வைகுந்தா = ವೈಕುಂಠ ಪತಿಯೇ, ಮಣಿವಣ್ಣನೇ. மணி
வண்ணனே = ಇಂದ್ರನೀಲ ಮಣಿಯಂತೆ ಪ್ರಕಾಶಿಸುವವನೇ, ಎನ್ என் =
ನನ್ನ (ನನಗೆ ಅನುಭವಿಸಲು ಯೋಗ್ಯವಾದ), ಪೊಲ್ಲಾ பொல்லா = ವಿಲಕ್ಷಣವಾದ
(ಕೆಡುಕಾಣದ), ತಿರುಕುಱಳಾ திருக்குறளா = ಶ್ರೀವಾಮನನೇ, ಎನ್ ಉಳ್
என் உள் = ನನ್ನ ಅಂತರಂಗದಲ್ಲಿ, ವೈಗುಮ್ வைகும் = ನೆಲಸಿರುವವ
ನೇ, ವೈಗಲ್ ತೋಱುಮ್ வைகல் தோறும் = ಎಲ್ಲಾ ಕ್ಷಣಗಳಲ್ಲೂ,
ಅಮುದಾಯ அமுதாய = ಅಮೃತಸ್ವರೂಪನಾಗಿರುವ, ವಾನ್ ಏಱೇ
வான் ஏறே = ನಿತ್ಯಸೂರಿಗಳ ಒಡೆಯನೇ, ಶೆಯ್ செய் = ಮಾಡಿದ,
ಕುನ್ದಾ குந்த = ಕುಂದದೆ ಇರುವ, ಅರುತೀಮೈ அருந்தீமை = ಭರಿಸಲ
ಸಾಧ್ಯವಾದ ಪಾಪಗಳನ್ನು (ಮಹಾಪಾಪಗಳನ್ನು), ಉನ್ ಅಡಿಯಾರ್ಕ್ಕು உன்
அடியார்க்கு = ನಿನ್ನ ಪಾದಸೇವಕರಿಗೆ (ಭಕ್ತರಿಗೆ), ತೀರ್ತ್ತು தீர்த்து
= ತೀರಿಸಿ, (ಹೋಗಿಸಿ), ಅಸುರರ್ಕ್ಕು அசுரர்க்கு = ಅಸುರರಿಗೆ (ಆಸುರ
ಸ್ವಭಾವದವರಿಗೆ), ತೀಮೈಗಳ್ தீமைகள் = ಕೆಡುಕುಗಳನ್ನು, ಶೆಯ್
செய் = ಮಾಡುವವನೇ, ಕುನ್ದಾ குந்தா = ಪವಿತ್ರನೇ, ಉನ್ನೈ உன்
னை = ನಿನ್ನನ್ನು, ನಾನ್ நான் = ನಾನು, ಪಿಡಿತ್ತೇನ್ பிடித்தேன் = ಹಿಡಿ
ದ್ದೇನೆ, ಶಿಕ್ಕೆನವೇ சிக்கெனவே = ಭದ್ರವಾಗಿಯೇ, ಕೊಳ್ கொள்
= ಸ್ವೀಕರಿಸು.

ವೈಕುಂಠವಾಸಿಯೇ, ಇಂದ್ರನೀಲ ಮಣಿಯಂತೆ ಪ್ರಕಾಶಿಸುವವನೇ, ನನ್ನ
(ನಾನು ಅನುಭವಿಸಲಿಕ್ಕೆ) ಪರಿಶುದ್ಧನಾದ ಶ್ರೀವಾಮನನೇ, ನನ್ನ ಅಂತರಂಗದಲ್ಲಿ
ನೆಲೆಸಿರುವವನೇ ಎಲ್ಲಾ ಕಾಲದಲ್ಲೂ ಅಮೃತಸ್ವರೂಪನಾಗಿರುವ/ಸರ್ವಸ್ವಾಮಿ
ಗಳ ಒಡೆಯನೇ, ನಿನ್ನ ಭಕ್ತರ ಭಯಗಳನ್ನು ಮಹಾಪಾಪಗಳನ್ನು ಕಳೆಯುವ/
ಅಸುರೀ ಪ್ರಕೃತಿಯುಳ್ಳವರಿಗೆ ತೊಂದರೆಗಳನ್ನು ಮಾಡುವವನೇ, ಪವಿತ್ರನೇ, (1)
ನಿನ್ನನ್ನು ನಾನು ದೃಢವಾಗಿಯೇ ಹಿಡಿದಿದ್ದೇನೆ. ಸ್ವೀಕರಿಸು

ಸೃಷ್ಟಿಯಿಂದ ಆಚೆಗೆ, ಶಾಶ್ವತವಾಗಿ, ಇರತಕ್ಕದ್ದು ಪರಮಪದ - ವೈಕುಂಠ
ಎಲ್ಲ ಚೇತನರೂ ಅಂತಿಮವಾಗಿ ಸೇರಲೇಬೇಕಾದ ಗುರಿ ಅದು ಆ ಪರಮ
ಪದಕ್ಕೆ ಒಡೆಯನಾಗಿ, ಎಂದರೆ, ಅಲ್ಲಿ ನೆಲೆಸಿರುವ ನಿತ್ಯಸೂರಿಗಳ ಒಡೆಯ
ನಾಗಿ, ಅವರ ನಿರ್ವಾಹಕನಾಗಿರುವವನು ಭಗವಂತ.

ದಿವ್ಯವಾಗಿ, ಆಕರ್ಷಕವಾಗಿ, ಹೊಳೆಯತಕ್ಕದ್ದು ಇಂದ್ರನೀಲಮಣಿ. ಹಾಗೆ
ಯೇ, ಭಗವಂತನೂ ಅತ್ಯಾಕರ್ಷಕವಾದ ತೇಜಸ್ಸಿನಿಂದ ಹೊಳೆಯುವವನು.
ಎಲ್ಲಾ ವಿಧದಲ್ಲೂ (ಎಂದರೆ, ಕಾಯಾ, ವಾಚಾ, ಕರ್ಮಣಾ) ಪರಿಶುದ್ಧ
ನಾಗಿ, ಪರಿಪೂರ್ಣ ವರ್ಚಸ್ವಿಯಾಗಿ, ವಾಮನವಟುವಾಗಿ ಶೋಭಿಸಿ
ದವನು ಭಗವಂತ. [illegible] ಬಲಿಚಕ್ರವರ್ತಿಯ ಔದಾರ್ಯವನ್ನು ಪರೀ
ಕ್ಷಿಸಲು ಅವತರಿಸಿದನಷ್ಟೇ. ಇಲ್ಲಿ ಆಳ್ವಾರರ ಕಾರ್ಪಣ್ಯವನ್ನು ತಿಳಿ
ದು ಸದಾ ಅವರನ್ನು ರಕ್ಷಿಸಲು ಬದ್ಧ ಸಿದ್ಧನಾದವನು, ಭಗವಂತ.

ಎಲ್ಲಾ ವಸ್ತುಗಳ ಅಂತರ್ಯಾಮಿಯಾಗಿರುವ ಹಾಗೆಯೇ ಭಗವಂ
ತನು ಆಳ್ವಾರರ ಅಂತರಂಗದಲ್ಲಿ, ಅವರ ಆತ್ಮನ ಆತ್ಮನಾಗಿ, ನೆಲೆಸಿದ್ದಾನೆ.
[illegible] ಭಗವಂತನ ನಾಮವೆಂಬ ಜೇನು ಸವಿದರೆ, ಅತಿ ಮಧುರ
ವಾದ ಅಮೃತವನ್ನು ಸವಿದಂತೆಯೇ. ಆ ಅಮೃತ ಸೇವನೆಯಿಂದ ತೃಪ್ತಿ
ಯೇ ಇಲ್ಲವಾದುದರಿಂದ ಅವನನ್ನು "ಆರಾವಮುದು" ಎನ್ನುತ್ತಾರೆ.

ಭಗವಂತನನ್ನು ಆಶ್ರಯಿಸುವ ಭಕ್ತರು ಮಹಾಪಾಪಿಗಳಾಗಿ
ದ್ದರೂ. ಭಗವಂತನು ಅವರ ಜನ್ಮಜನ್ಮಗಳ ಪಾಪರಾಶಿಯನ್ನು
ಕಳೆದು, ಅವರಿಗೆ ಅಮರತ್ವವನ್ನುಂಟುಮಾಡುವವನು.

ಸಜ್ಜನರನ್ನು ಭಗವಂತನು ಹೇಗೆ ರಕ್ಷಿಸುವನೋ ಹಾಗೆಯೇ
ದುಷ್ಟಪ್ರಕೃತಿಯುಳ್ಳವರನ್ನು ಅವನು ಶಿಕ್ಷಿಸುತ್ತಾನೆ

ಆಳ್ವಾರರು ಹೇಳುತ್ತಾರೆ ಭಗವಂತ, ನೀನು ವೈಕುಂಠವಾಸಿ.
ನಿತ್ಯಸೂರಿಗಳ ನಿರ್ವಾಹಕ. ಪವಿತ್ರ, ಪರಿಶುದ್ಧ. ಬಲಿಚಕ್ರವರ್ತಿ
ಯ ಕೋರಿಕೆಯನ್ನು ಶ್ರೀವಾಮನನಾಗಿ ಮೆಚ್ಚಿ. ಅವನನ್ನು ಉದ್ಧರಿಸಿದೆ.
ನಿನ್ನನ್ನಾಶ್ರಯಿಸಿದವರೆಲ್ಲರೂ ಎಷ್ಟೇ ಪಾಪಿಗಳಾಗಿದ್ದರೂ, ಎಷ್ಟೇ
ಕೃಪಣಸ್ವಭಾವದವರಾಗಿದ್ದರೂ, ಅವರನ್ನು ಬಿಡದೆ ಉದ್ಧರಿಸುವೆ.
ದುಷ್ಟಶಿಕ್ಷಣ, ಶಿಷ್ಟರಕ್ಷಣವೇ ನಿನ್ನ ಕೆಲಸವಲ್ಲವೇ? ನಾನು ಎಲ್ಲ

Garani Srinivasan

ಬಗೆಯಲ್ಲೂ ಕೃಪಣ, ಕಡುಪಾಪಿ (91) ನಾನೂ ನಿನ್ನನ್ನು ಆಶ್ರಯಿಸಿದ್ದೇನೆ. ನನ್ನ ಕೈ ಬಿಡದಂತೆ ನನ್ನನ್ನುದ್ಧರಿಸು.

2 சிக்கெனச்சிறிதோரிடமும்
புறப்படாத்தன்னுள்ளே, உலகுகள்
ஒக்கவே விழுங்கிப் புகுந்தான் புகுந்ததற்பின்,
மிக்கஞானவெள்ளச் சுடர் விளக்காய்த்
துளக்கற்றமுதமாய், எங்கும்
பக்கநோக்கறியான் என் பைந்தாமரைக்கண்ணனே

ಚಿಕ್ಕೆನಚ್ಚಿಱಿದೋರಿಡಮುಮ್ ಪುಱಪ್ಪಡಾತ್ತನ್ನುಳ್ಳೇ, ಉಲಗುಗಳ್
ಒಕ್ಕವೇ ವಿೞುಙ್ಗಿಪ್ಪುಗುನ್ದಾನ್ ಪುಗುನ್ದದಱ್ಪಿನ್
ಮಿಕ್ಕ ಞಾನ ವೆಳ್ಳಚ್ಚುಡರ್ ವಿಳಕ್ಕಾಯ್ ತ್ತುಳಕ್ಕಱ್ಱಮುದಮಾಯ್, ಎಙ್ಗುಮ್
ಪಕ್ಕನೋಕ್ಕಱಿಯಾನ್ ಎನ್ ಪೈನ್ದಾಮರೈಕ್ಕಣ್ಣನೇ

ಚಿಕ್ಕೆನ சிக்கென = ಭದ್ರವಾಗಿ, ಚಿಱಿದು சிறிது = ಅತ್ಯಲ್ಪವಾದ, ಓರ್ ಇಡಮುಮ್ ஓர் இடமும் ಒಂದು ಅವಕಾಶವೂ, (ಸ್ಥಳವೂ), ಪುಱಪ್ಪಡಾ புறப்படா = ಹೊರಕ್ಕೆ ಬರದಂತೆ (ಹೊರಬೀಳದಂತೆ), ತನ್ ಉಳ್ಳೇ தன் உள்ளே = ತನ್ನ ಒಳಗೇ, ಉಲಗುಗಳ್ உலகுகள் : ಲೋಕಗಳನ್ನು, ಒಕ್ಕವೇ ஒக்கவே = ಒಂದೇ ಸಮನಾಗಿ, ವಿೞುಙ್ಗಿ விழுங்கி: ನುಂಗಿಹಾಕಿ, ಪುಗುನ್ದಾನ್ புகுந்தான் = (ನನ್ನಲ್ಲಿ) ಪ್ರವೇಶಿಸಿದನು, ಪುಗುನ್ದದಱ್ಪಿನ್ புகுந்ததற்பின் = ಪ್ರವೇಶಿಸಿದ ಬಳಿಕ, ಮಿಕ್ಕ மிக்க = ಬಲು ಹೆಚ್ಚಾದ (ಅತಿಶಯವಾದ), ಞಾನವೆಳ್ಳಮ್ ஞானம் வெள்ளம் = ಜ್ಞಾನದ ಪ್ರವಾಹವಾದ, ಚುಡರ್ சுடர் = ತೇಜಸ್ಸಿನ, ವಿಳಕ್ಕಾಯ್ விளக்காய் = ದೀಪವಾಗಿ, (ಜ್ಯೋತಿಯಾಗಿ, ಸಾಧನವಾಗಿ), ತುಳಕ್ಕು துளக்கு = ಸಂಶಯವು, ಅಱ್ಱು அற்று = ಇಲ್ಲದಂತೆ, ಅಮುದಮ್ ಆಯ್ அமுதம் ஆய் = ಅಮೃತವಾಗಿ, ಎಙ್ಗುಮ್ எங்கும் ಎಲ್ಲೆಲ್ಲಿಯೂ, ಪಕ್ಕಮ್ பக்கம் = ಮಗ್ಗುಲನ್ನು, ನೋಕ್ಕ நோக்க = ನೋಡುವುದನ್ನು (ತಿರುಗಿ ನೋಡುವುದನ್ನು), ಅಱಿಯಾನ್ அறியான் = ಅರಿಯನು, ಎನ್ என் = ನನ್ನ, ಪೈ பை = ಸೊಬಗಿನ ತಾಮರೈ தாமரை = ತಾವರೆಯಂತೆ, ಕಣ್ಣನೇ கண்ணனே = ಕಣ್ಣುಳ್ಳವನೇ.

ನನ್ನ ಸೊಬಗಿನ ತಾವರೆಯಂತೆ ಕಣ್ಣುಳ್ಳವನು, ಅತ್ಯಲ್ಪವಾದ ಅವಕಾಶವೂ (ಸ್ಥಳವೂ) ಹೊರಬೀಳದ ಹಾಗೆ ಎಲ್ಲಾ ಲೋಕಗಳನ್ನು ಒಂದೇ ಸಮನಾಗಿ, ಭದ್ರವಾಗಿ, ನುಂಗಿಹಾಕಿ, ನನ್ನಲ್ಲಿ ಪ್ರವೇಶಿಸಿದನು. ಪ್ರವೇಶಿಸಿದ

ಬೆಳಕೆ, ಬಲು ಹೆಚ್ಚಾದ (ವಿಸ್ತೀರ್ಣವಾದ, ಅತಿಶಯವಾದ) ಜ್ಞಾನದ ಪ್ರಸಾದವಾ
ತೇಜಸ್ಸಿನ ದೀಪವಾಗಿ (ಸಾಧನವಾಗಿ), ಸಂದೇಹವಿಲ್ಲದಂಥ ಅಮೃತವಾಗಿ, (2)
ಎತ್ತ ಕಡೆಯೂ ತಿರುಗಿ ನೋಡದವನ್ನು ಉಂಟುಮಾಡುವಂತೆ ಇದ್ದಾನೆ.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನಾದ ಭಗವಂತನು ತಾನು ಸೃಷ್ಟಿಸಿದ ಲೋಕಗಳೆಲ್ಲವನ್ನೂ, ಅವುಗಳಲ್ಲಿ ಅಡಗಿರುವ ಎಲ್ಲ ಚೇತನಾಚೇತನ ವಸ್ತುಗಳನ್ನು ಹೊಟ್ಟೆಗೆ ನುಂಗಿದಾಗ, ತನ್ನ ಹೊಟ್ಟೆಯಲ್ಲಿ ಎಲ್ಲವೂ ಸುಭದ್ರವಾಗಿ ಅಡಕವಾಗಿ ಇರುವಂತೆ ಇಟ್ಟುಕೊಂಡಿದ್ದಾನೆ. ಮಹಾಮಹಿಮನಾದ ಅವನು, ಅನಂತರ ನನಗೆ ಒಲಿದು, ನನ್ನ ಅಂತರಂಗವನ್ನು ಪ್ರವೇಶಿಸಿ, ಅಲ್ಲಿಯೇ ದೃಢವಾಗಿ ನೆಲಸಿದ್ದಾನೆ. ಮತ್ತು, ತನ್ನನ್ನು ಚೆನ್ನಾಗಿ ಅರಿತುಕೊಳ್ಳುವಂಥ ಬಲು ಶ್ರೇಷ್ಠವಾದ ಜ್ಞಾನಪ್ರವಾಹವನ್ನು ಹರಿಸಿ ಬೆಳಗಿಸುವಂಥ ಅತಿಶಯವಾದ ತೇಜಸ್ಸಿನ ಸಾಧನವಾಗಿ ಅಲ್ಲಿ ಬೆಳಗುತ್ತಿದ್ದಾನೆ. ಅಲ್ಲದೆ, ತನ್ನನ್ನು ನಾನು ಎಡೆಬಿಡದೆ ಅನುಭವಿಸುವಂತೆ ಅಮೃತಸ್ವರೂಪನೂ ಆಗಿದ್ದಾನೆ. ನನ್ನ ಹೊರತು ಎತ್ತಲೂ ತಿರುಗಿ ನೋಡದನು ನನ್ನ ಮೇಲೆಯೇ ತನ್ನ ಕೃಪಾಕಟಾಕ್ಷವನ್ನು ಬೀರುತ್ತ ಶಾಶ್ವತವಾಗಿ ಅಲ್ಲಿ ನೆಲಸಿದ್ದಾನೆ. ಇಡೀ ಸೃಷ್ಟಿಯನ್ನೇ ರಕ್ಷಿಸುವ ಹೊಣೆ ಹೊತ್ತಿರುವ ಭಗವಂತನು ಅತ್ಯಲ್ಪನಾದ ನನ್ನನ್ನೂ ರಕ್ಷಿಸುವ ಭಾರವನ್ನು ಅಷ್ಟೇ ಆದರದಿಂದ ಹೊತ್ತಿದ್ದಾನಲ್ಲ! ಭಗವಂತನ ಕೃಪೆ ನನ್ನ ಮೇಲೆ ಎಷ್ಟು ಅಪಾರ!

3. தாமரைக்கண்ணனை விண்ணோர் பரவும் தலைமகனை, துழாய் விரைப்
பூமருவு கண்ணி யெம்பிரானைப் பொன்மலையை,
நாமருவி நன்கேத்தியுள்ளி வணங்கி நாம் மகிழ்ந்தாட, நாவலர்
பாமருவி நிற்கத்தந்த பான்மையே வள்ளலே.

ತಾಮರೈಕ್ಕಣ್ಣನೈ ವಿಣ್ಣೋರ್ ಪರವುಮ್ ತಲೈಮಹನೈ, ತುೞಾಯ್ ವಿರೈ
ಪ್ಪೂಮರುವುಕಣ್ಣಿ ಯೆಂಬಿರಾನೈಪ್ಪೊನ್ ಮಲೈಯೈ,
ನಾಮರುವಿ ನನ್ ಕೇತ್ತಿಯುಳ್ಳಿ ವಣಂಗಿ ನಾಮ್ಮಹಿೞ್ನ್ದಾಡ, ನಾವಲರ್
ಪಾಮರುವಿ ನಿಱ್ಕತ್ತನ್ದ ಪಾನ್ಮೈಯೇ ವಳ್ಳಲೇ

ತಾಮರೈ ಕ್ಕಣ್ಣನೈ தாமரை கண்ணனை = ತಾವರೆಯಂತೆ ಕಣ್ಣುಳ್ಳವನನ್ನು, ವಿಣ್ಣೋರ್ விண்ணோர் = ನಿತ್ಯಸೂರಿಗಳು, ಪರವುಮ್ பரவும் = ಸ್ತುತಿಸುವ, ತಲೈಮಹನೈ தலைமகனை = ಒಡೆಯನನ್ನು, ತುೞಾಯ್ துழாய் = ತುಲಸಿಯ, ವಿರೈ விரை = ಪರಿಮಳ ತುಂಬಿದ,

Garani Srinivasan

ಪೂ ಮರುವು பூ மருவு = ಹೂವನ್ನು ~~ಧರಿಸಿರುವ~~ ಕೂಡಿಸಿರುವ, ಕಣ್ಣಿಯೈ கண்
ணியை = ಹಾರವನ್ನು ಧರಿಸಿರುವವನನ್ನು, ಎಮ್ ಪಿರಾನೈ எம்பிரா
னை = ನನ್ನ ಸ್ವಾಮಿಯನ್ನು, ಪೊನ್ ಮಲೈಯೈ பொன் மலையை =
ಚಿನ್ನದ ಬೆಟ್ಟದಂಥವನನ್ನು, ನಾ ಮರುವಿ நா மருவி = ನಾಲಗೆಯಲ್ಲಿ
ಇರಿಸಿಕೊಂಡು (ಸೇರಿಸಿಕೊಂಡು), ನನ್ಕು நன்கு = ಚೆನ್ನಾಗಿ, ಏತ್ತಿ
ஏத்தி = ಸ್ತುತಿಸಿ, ಉಳ್ಳಿ உள்ளி = ಚಿಂತಿಸಿ, ವಣಙ್ಗಿ வணங்
கி = ನಮಸ್ಕರಿಸಿ, ನಾಮ್ நாம் = ನಾವು, ಮಕಿೞ್ನ್ದು மகிழ்ந்து =
ಆನಂದದಿಂದ, ಆಡ ஆட = ಕುಣಿದಾಡಲು, ನಾ நா = ನಾಲಗೆಯಲ್ಲಿ, ಅಲರ್
அலர் = ಅರಳುವ, ಪಾ பா = ಹಾಡು, ಮರುವಿ மருவி = ಸ್ಥಿರವಾಗಿ, ನಿಱ್
ಕ நிற்க = ನಿಲ್ಲುವಂತೆ, ತನ್ದ தந்த = ಉಂಟುಮಾಡಿದ, ಪಾನ್ಮೈಯೇ
பான்மையே = ಸದ್ಗುಣವೇ, ವಳ್ಳಲೇ வள்ளலே = ಔದಾರ್ಯ
ವೇ! (ಅಲ್ಲವೇ!).

ತಾವರೆಯಂತೆ ಕಣ್ಣುಳ್ಳವನನ್ನು, ನಿತ್ಯಸೂರಿಗಳು ಸ್ತುತಿಸುವ ಸ್ವಾಮಿಯನ್ನು, ಪರಿಮಳ ತುಂಬಿದ ತುಲಸಿಯನ್ನೂ ಹೂವನ್ನೂ ಕೂಡಿಸಿರುವ ಹಾರವನ್ನು ಧರಿಸಿರುವವನನ್ನು, ನನ್ನ ಸ್ವಾಮಿಯನ್ನು, ಚಿನ್ನದ ಬೆಟ್ಟದಂಥವನನ್ನು, ನಾಲಗೆಯಲ್ಲಿ ಇರಿಸಿಕೊಂಡು, ಚೆನ್ನಾಗಿ ಸ್ತುತಿಸಿ, ಚಿಂತಿಸಿ, ನಮಸ್ಕರಿಸಿ ನಾವು ಆನಂದದಿಂದ ಕುಣಿದಾಡುತ್ತಿರಲು (ಕುಣಿದಾಡಲು), ನಾಲಗೆಯಲ್ಲಿ ಅರಳುವ ಹಾಡು ಸ್ಥಿರವಾಗಿ ನಿಲ್ಲುವಂತೆ ಉಂಟುಮಾಡಿದ ಸದ್ಗುಣವೇ ಔದಾರ್ಯವೇ ಅಲ್ಲವೇ! (3)

ಆಳ್ವಾರರು ಹೇಳುತ್ತಾರೆ: ಅರಳಿದ ತಾವರೆಯ ಹೂವಿನಂತೆ ವಿಶಾಲವೂ ಆಕರ್ಷಕವೂ ಆದ ಕಣ್ಣುಗಳುಳ್ಳ ದಿವ್ಯಸುಂದರ ಮೂರ್ತಿಯನ್ನು, ನಿತ್ಯಸೂರಿಗಳ ಒಡೆಯನಾಗಿ ಅವರಿಂದ ಎಡೆಬಿಡದೆ ಸ್ತುತಿಸಲ್ಪಡುತ್ತಿರುವವನನ್ನು, ಪರಿಮಳಭರಿತವಾದ ತುಲಸಿಯನ್ನೂ ಹೂವನ್ನೂ ಹಾರವಾಗಿ ಕೂಡಿಸಿ ಧರಿಸಿರುವವನನ್ನು, ಬೆಲೆಕಟ್ಟಲಾಗದ ಚಿನ್ನದ ಬೆಟ್ಟದಂತೆ ಮಾಸದ ಪ್ರಕಾಶದಿಂದ ಬೆಳಗುವ ದಿವ್ಯಜ್ಯೋತಿಸ್ವರೂಪನನ್ನು, ನಾನು ನನ್ನ ನಾಲಗೆಯಲ್ಲಿ ಸೇರಿಸಿಟ್ಟುಕೊಂಡೆ. ಅವನ ನಾಮಗಳನ್ನು ಹೇಳತೊಡಗಿದೆ. ಅವನ ಸ್ವರೂಪಸ್ವಭಾವಗಳನ್ನು ಕುರಿತು ಹೊಗಳತೊಡಗಿದೆ ಅವನನ್ನು ಕುರಿತು ಚಿಂತಿಸತೊಡಗಿದೆ. ನನ್ನಲ್ಲಿ ಉಕ್ಕಿಬರುವ ಭಾವನೆಗಳಿಂದ ಅವನಿಗೆ ಎರಗತೊಡಗಿದೆ. ನನ್ನಲ್ಲಿ ಆನಂದ ಉಮ್ಮಳಿಸತೊಡಗಿತು. ನನ್ನನ್ನು ಉನ್ಮತ್ತನನ್ನಾಗಿ ಮಾಡಿತು. ಅದು ನನ್ನನ್ನು ಕುಣಿಕುಣಿದಾಡುವಂತೆ ಮಾಡಿತು. ಈ ಎಲ್ಲ ಚರ್ಯೆಗಳಿಂದ ನನಗಾದ ಫಲವೇನು ಕಂಡಿರಾ? ಅಲ್ಪನೂ ಅಜ್ಞಾನಿಯೂ ಆದ ನನ್ನಲ್ಲಿ ಸ್ವಾಮಿಯು ಕೃಪೆದೋ

ಅದನು. ಆ ಸ್ವಾಮಿಯು ತನ್ನ ಗುಣಗಳನ್ನು ಹೊಗಳಿ ಹಾಡುವಂತೆಯೂ, ಆನಂದವನ್ನು ಉಕ್ಕಿಸುವಂತೆಯೂ ಮಾಡುವಂಥ ಹಾಡುಗಳನ್ನು ನನ್ನ ನಾಲಗೆಯಲ್ಲಿ ಅರಳಿಸಿ, ಅವು (ಅವನ್ನು) ಶಾಶ್ವತವಾಗಿರುವಂತೆಯೂ, ನಾನು ರಚಿಸುವಂತೆ ಮಾಡಿದನು ಇದಲ್ಲವೇ ಆ ಪರಮೇಶ್ವರನ ಔದಾರ್ಯ!

4. வள்ளாலே, மதுசூதனா, என் மரகதமலையே,
உனை நினைந்து
எள்கல் தந்தவெந்தாய், உன்னை எங்ஙனம்
விடுகேன்?
வெள்ளமே புரை நின் புகழ் குடைந்தாடிப் பாடிக்
களித்துகந்துகந்து,
உள்ள நோய்களைல்லாந் துரந்து
உய்ந்துபோந்திருந்தே

ವಳ್ಳಲೇ ಮದುಶೂದನಾ ಎನ್ ಮರಕದಮಲೈಯೇ, ಉನ್ನೈ ನಿನೈನ್ದು-
ಎಳ್ಗಲ್ ತನ್ದ ವೆನ್ದಾಯ್ ಉನ್ನೈ ಯೆಙ್ಙನಮ್ ವಿಡುಹೇನ್?
ವೆಳ್ಳಮೇ ಪುರೈ ನಿನ್ ಪುಗಳ್ ಕುಡೈನ್ದಾಡಿ ಪ್ಪಾಡಿಕ್ಕಳಿತ್ತುಗನ್ದುಗನ್ದು,
ಉಳ್ಳನೋಯ್‌ಗಳೆಲ್ಲಾನ್ದುರನ್ದು ಉಯ್‌ನ್ದು ಪೋನ್ದಿರುನ್ದೇ.

ವಳ್ಳಲೇ வள்ளாலே = ಉದಾರಿಯೇ, ಮದುಶೂದನಾ மதுசூதனா = ಮಧುಸೂದನನೇ, ಎನ್ என் = ನನ್ನ, ಮರಕದ ಮಲೈಯೇ மரகதமலையே = ಮರಕತದ ಬೆಟ್ಟವೇ, ಉನ್ನೈ உனை = ನಿನ್ನನ್ನು, ನಿನೈನ್ದು நினைந்து = ನೆನೆದು (ಚಿಂತಿಸಿ), ಎಳ್ಗಲ್ எள்கல் = (ಅದರಲ್ಲಿಯೇ) ಮಗ್ನನಾಗುವುದನ್ನು, ತನ್ದ தந்த = ಉಂಟುಮಾಡಿದ, ಎನ್ದಾಯ್ எந்தாய் ನನ್ನ ಸ್ವಾಮಿಯೇ (ನನ್ನ ತಾಯಿಯೇ), ಉನ್ನೈ உன்னை = ನಿನ್ನನ್ನು, ಎಙ್ಙನಮ್ எங்ஙனம் = ಹೇಗೆ, ವಿಡುಹೇನ್ விடுகேன் = ಬಿಟ್ಟಿರಲಿ (ಇಡುವ), ವೆಳ್ಳಮೇ ಪುರೈ வெள்ளமே புரை = ಕಡಲಿನ ಹಾಗೆ, ನಿನ್ நின் = ನಿನ್ನ, ಪುಗಳ್ புகழ் = ಕೀರ್ತಿಯನ್ನು (ಲ್ಲಿ), ಕುಡೈನ್ದು குடைந்து = ಮುಳುಗಿ, ಆಡಿ ಪಾಡಿ ஆடி பாடி = ಆಟವಾಡಿ, (ಹೊಗಳಿ) ಹಾಡಿ, ಕಳಿತ್ತು களித்து = ಉನ್ಮತ್ತನಾಗಿ, ಉಗನ್ದು ಉಗನ್ದು உகந்து உகந்து = ಮಿತಿಮೀರಿ ಆನಂದಿಸಿ, ಉಳ್ಳ உள்ள = ನನ್ನಲ್ಲಿನ, ನೋಯ್‌ಗಳೆಲ್ಲಾಮ್ நோய்களைல்லாம் ದುಃಖ, ಸಂಕಟಗಳನ್ನೆಲ್ಲಾ, ತುರನ್ದು துரந்து = ತೊರೆದು, ಉಯ್‌ನ್ದು உய்ந்து = ಉಜ್ಜೀವನಗೊಂಡು, ಪೋನ್ದು போந்து = ತೃಪ್ತನಾಗಿ, ಇರುನ್ದೇನೇ இருந்தேனே = ಇರುವೆನಲ್ಲ!

ಉದಾರಿಯೇ, ಮಧುಸೂದನನೇ, ನನ್ನ ಮರಕತ (ರತ್ನದ) ಬೆಟ್ಟವೇ, ~~ನನ್ನ ತಾಯಿಯೇ (ನನ್ನ ಸ್ವಾಮಿಯೇ)~~, ನನ್ನನ್ನು ಸೂರೆಸು ಚಿಂತಿಸುವುದರ-

ನಿಯೇ ಮನ್ನನಾಡುವುದನ್ನು ಉಂಟುಮಾಡದ ನನ್ನ ಕಾಯುವಿಲೇ, ನಿನ್ನ ಜೋಡಿ ಬಿಟ್ಟರಲ? ಕಡಲಿಗೆ ಸಮಾನವಾದ ನಿನ್ನ ಕೀರ್ತಿಯನ್ನು ಮುಳುಗಿ ಆಟವಾಡಿ, ಹಾಡಿ, ಉನ್ಮತ್ತನಾಗಿ, ಮಿತಿಯಿಲ್ಲದ ಆನಂದಿಸಿ, ನನ್ನಲ್ಲಿನ ಎಲ್ಲ ದುಃಖ ಸಂಕಟಗಳನ್ನೂ ತೊರೆದು, ಉಜ್ಜೀವನ ಹೊಂದು, ಶಕ್ತನ (4) ನಾಗುವೆನಲ್ಲ!

ಹಿಂದಿನ ಪಾಶುರದಲ್ಲಿ ಆಳ್ವಾರರು ಭಗವಂತನ ಔದಾರ್ಯವನ್ನು ಕುರಿತು ಹೊಗಳಿದರಷ್ಟೆ. ಭಗವಂತನನ್ನು ಸ್ತುತಿಸಿ ಸಂತಸಪಡುವುದರ ಫಲವಾಗಿ ಅವರಿಗೆ ಅಮಿತಾನಂದದ ಅನುಭವವುಂಟಾಯಿತು, ಸ್ವಾಮಿಯ ಕಲ್ಯಾಣ ಗುಣಗಳನ್ನು ಅವರು ಹೊಗಳಿ ಹಾಡುವುದಕ್ಕೆ ಅನುಕೂಲವಾಗುವಂತೆ ಮನಸ್ಸನ್ನು ಆಳ್ವಾರರಲ್ಲಿ ದಯಗೊಳಿಸಿ ಕೊಟ್ಟದ್ದು ಸ್ವಾಮಿಯ ಔದಾರ್ಯ! ಈ ವಿಷಯವನ್ನೇ ಕೃತಜ್ಞತೆಯಿಂದ ಇಲ್ಲಿ ಸ್ಮರಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಭಗವಂತ, ನಿನ್ನನ್ನು ಕುರಿತು ಬಗೆಬಗೆಯಾಗಿ ಚಿಂತಿಸುವುದನ್ನು ನನಗೆ ಕಲಿಸಿಕೊಟ್ಟವನು ನೀನು. ನಿನ್ನ ವಿಷಯದಲ್ಲಿ ನನಗೆ ತತ್ವಜ್ಞಾನವನ್ನಿತ್ತೆ. ಇದರಿಂದ ನಾನು ~~ನಿನ್ನ~~ ಕಡಲಿನಷ್ಟು ಅಪಾರವಾದ ನಿನ್ನ ಸದ್ಗುಣಗಳನ್ನು, ~~[illegible]~~ ಅಷ್ಟೇ ಅಪಾರವಾದ ಕೀರ್ತಿಯನ್ನೂ ಹೊಗಳಿ ಹಾಡುವಂತೆ ಆಯಿತು. ನೀನಿತ್ತ ಜ್ಞಾನ, ನನ್ನ ನಾಲಗೆಯಲ್ಲಿ ಅರಳಿ, ನಿನ್ನ ಗುಣಸ್ವಭಾವಗಳನ್ನೂ, ನಿನ್ನ ಕೀರ್ತಿಯನ್ನೂ ಚೆನ್ನಾಗಿ ಅನುಭವಿಸುವಂತೆ ಆಯಿತು. ನಿನ್ನ ಕೀರ್ತಿಯ ಪ್ರವಾಹದಲ್ಲಿ ನಾನು ಸಮೃದ್ಧಿಯಾಗಿ (ತೃಪ್ತಿಯಾಗಿ) ಮುಳುಗಿ ಮಿಂದೆ. ಚೆನ್ನಾಗಿ ಆಡಿ ನಲಿದೆ. ಉನ್ಮತ್ತನಾದೆ. ಉಂಟಾದ ಮಿತಿಯಿಲ್ಲದ ಆನಂದದಿಂದ ನನ್ನ ಇಹಜೀವನದ ಎಲ್ಲ ಬಗೆಯ ದುಃಖಗಳೂ ಸಂಕಟಗಳೂ ತೊಲಗಿದವು. ನನ್ನನ್ನು ಉಜ್ಜೀವನಗೊಳಿಸಿ, ನಿನ್ನೊಡನೆ ಕಲೆಸಿಕೊಂಡು, ನಿನ್ನ ನಿತ್ಯಸೇವೆಯಲ್ಲಿ ತೊಡಗುವುದಕ್ಕೆ ಶಕ್ತನನ್ನಾಗಿ ಮಾಡಿರುವ ನಿನಗೆ ನನ್ನ ಕೃತಜ್ಞತೆಯನ್ನು ಯಾವ ಬಗೆಯಲ್ಲಿ ತೀರಿಸಲಿ?

5. உய்ந்து போந்தென் னுலப்பிலாத
வெந்தீவினைகளை நாசஞ்செய்து, உந்து
அந்தமிலடிமை யடைந்தேன் விடுவேனோ?
ஐந்து பைந்தலையாடரவணை மேவிப்
பாற்கடல் யோகநித்திரை
சிந்தை செய்த வெந்தாய்
உன்னைச் சிந்தை செய்து செய்தே,

Garani Srinivasan

ಉಯ್ನ್ದು ಪ್ಪೋನ್ದೆನ್ನುಲಪ್ಪಿಲಾದ ವೆನ್ದೀವಿನೈಗಳೈ ನಾಶಂಶೆಯ್ದು ಉನದು
ಅನ್ದಮಿಲಡಿಮೈಯಡೈನ್ದೇನ್ ವಿಡುವೇನೋ?
ಐನ್ದು ಪೈನ್ದಲೈಯಾಡರವಣೈ ಮೇವಿಪ್ಪಾಱ್ಕಡಲ್ ಯೋಗನಿದ್ದಿರೈ,
ಶಿನ್ದೈ ಶೆಯ್ದವೆನ್ದಾಯ್! ಉನ್ನೈಚ್ಚಿನ್ದೈ ಶೆಯ್ದು ಶೆಯ್ದೇ.

ಉಯ್ನ್ದು ಪ್ಪೋನ್ದು உய்ந்து போந்து = ಉಜ್ಜೀವನಗೊಂಡು, ಎನ್ என் = ನನ್ನ, ಉಲಪ್ಪು ಇಲಾದ உலப்பு இலாத = ಕೊನೆಯಿಲ್ಲದ, ವೆಮ್ வெம் = ಕ್ರೂರವಾದ, ತೀವಿನೈಗಳೈ தீவினைகளை = ಪಾಪಗಳನ್ನು, ನಾಶಂ ಶೆಯ್ದು நாசம் செய்து = ನಾಶಪಡಿಸಿ, ಉನದು உனது = ನಿನ್ನ, ಅನ್ದಮ್ ಇಲ್ அந்தம் இல் = ಅಂತ್ಯವಿಲ್ಲದ (ಕೊನೆಯಿಲ್ಲದ), ಅಡಿಮೈ அடிமை ಪಾದಸೇವೆಯನ್ನು (ಕೈಂಕರ್ಯವನ್ನು, ಸೇವೆಯನ್ನು), ಅಡೈನ್ದೇನ್ அடைந்தேன் = ಪಡೆದಿದ್ದೇನೆ, ವಿಡುವೇನೋ விடுவேனோ = (ಅದನ್ನು) ಬಿಟ್ಟು ಬಿಡುವೆನೇ?, ಐನ್ದು ಪೈನ್ದಲೈ ஐந்து பைந்தலை = ಐದು ಹೆಡೆಗಳ ತಲೆಗಳನ್ನು, ಆಡು ஆடு = ಆಡಿಸುತ್ತಿರುವ, ಅರವು அரவு = ಸರ್ಪದ, ಅಣೈ அணை = ಹಾಸಿಗೆಯನ್ನು, ಮೇವಿ மேவி = ಸೇರಿ, ಪಾಱ್ ಕಡಲ್ பால் கடல் = ಹಾಲ್ಗಡಲಲ್ಲಿ ಯೋಗನಿದ್ದಿರೈ யோக நித்திரை = ಯೋಗನಿದ್ರೆಯಲ್ಲಿ, ಶಿನ್ದೈ ಶೆಯ್ದ சிந்தை செய்த = (ಚಿಂತಿಸುತ್ತಿದ್ದ) ಚಿಂತಿಸುತ್ತಿರುವ, ಎನ್ದಾಯ್ என் தாய் = ನನ್ನ ಸ್ವಾಮಿಯೇ, ಉನ್ನೈ உன்னை = ನಿನ್ನನ್ನು, ಶಿನ್ದೈ ಶೆಯ್ದು ಶೆಯ್ದೇ சிந்தை செய்து செய்தே = ನಿನ್ನನ್ನು ಬಿಡದೆ ಚಿಂತಿಸಿದ್ದರಿಂದಲೇ.

ಹಾಲ್ಗಡಲಲ್ಲಿ, ಐದು ಹೆಡೆಗಳ, ತಲೆಯಾಡಿಸುತ್ತಿರುವ ಸರ್ಪದ ಹಾಸಿಗೆಯನ್ನು ಸೇರಿ, ಯೋಗನಿದ್ರೆಯಲ್ಲಿ ಚಿಂತಿಸುತ್ತಿದ್ದ ನನ್ನ ಸ್ವಾಮಿಯೇ, ನಿನ್ನನ್ನು ಬಿಡದೆ ಚಿಂತಿಸಿದ್ದರಿಂದಲೇ, ಉಜ್ಜೀವನಗೊಂಡು ನನ್ನ ಕ್ರೂರವಾದ ಪಾಪಗಳನ್ನು ನಾಶಪಡಿಸಿ, ಅಂತ್ಯವಿಲ್ಲದ ಸೇವೆಯನ್ನು ಪಡೆದಿದ್ದೇನೆ. (ಅದನ್ನು) ಬಿಟ್ಟು ಬಿಡುವೆನೋ? (5)

ಆಳ್ವಾರರು ಹೇಳುತ್ತಾರೆ: ಭಗವಂತ, ಪ್ರಳಯ ಕಾಲದ ನಿನ್ನ ಅದ್ಭುತಶಕ್ತಿಯ ಕಾರಕ ಸಾಮರ್ಥ್ಯವನ್ನು, ಜಗದ್ರಕ್ಷಣೆಯ ವೈಖರಿಯನ್ನು, ನಿರ್ವೃತ್ತಿಯಿಂದ ಹಾಲ್ಗಡಲಲ್ಲಿ ಶೇಷಶಯನನಾಗಿ ಪವಡಿಸಿ ~~ಚಿಂತಿಸುವ~~ ಯೋಗನಿದ್ರೆಯಲ್ಲಿ ಚಿಂತಿಸುವ ಪರಿಯನ್ನು ನಾನು ಚಿಂತಿಸ ತೊಡಗಿದೆ. ಅದ್ದರಿಂದಲೇ ನಾನು ಉಜ್ಜೀವನಗೊಂಡೆ. ನನ್ನ ಚಿಂತನೆಯ ಫಲವಾಗಿ ನನ್ನ ಕ್ರೂರವಾದ ಪಾಪಗಳೆಲ್ಲವೂ ನಾಶವಾದವು. ಎಂದೆಂದಿಗೂ ಕಡೆಗಾಣದಂಥ

Garani Srinivasan

ನಿನ್ನ ನಿತ್ಯಸೇವೆಯನ್ನು ಪಡೆದುಕೊಂಡೆ. ಅಖಂಡವಾದ ಈ ಸೌಭಾಗ್ಯವನ್ನು ನಾನು ಬಿಟ್ಟುಕೊಡಲೇ? ಎಂದೆಂದಿಗೂ ಬಿಟ್ಟುಕೊಡಲಾರೆ.

6. உன்னைச் சிந்தை செய்து உன் நெடுமா மொழி
இசை பாடியாடி, என்
முன்னைத் தீவினைகள் முழுவேரரிந்தனன் யான்,
உன்னைச் சிந்தையினால் இகழ்ந்த இரணியனகல்
மார்வங்கீண்ட, என்
முன்னைக் கோளரியே முடியாததென்னெனக்கே?

ಉನ್ನೈಚ್ಚಿನ್ದೈ ಶೆಯ್ದು ಉನ್ ನೆಡುಮಾ ಮೊೞಿಯಿಶೈಪಾಡಿಯಾಡಿ, ಎನ್
ಮುನ್ನೈತ್ತೀವಿನೈಗಳ್ ಮುೞುವೇರರಿನ್ದನನ್ ಯಾನ್,
ಉನ್ನೈಚ್ಚಿನ್ದೈಯಿನಾಲ್ ಇಗೞ್ನ್ದ ಇರಣಿಯನಗಲ್ ಮಾರ್ವಙ್ಕೀಣ್ಡ, ಎನ್
ಮುನ್ನೈಕ್ಕೋಳರಿಯೇ ಮುಡಿಯಾದದೆನ್ನೆನಕ್ಕೇ?

ಉನ್ನೈ உன்னை = ನಿನ್ನನ್ನು ಕುರಿತು, ಶಿನ್ದೈ ಶೆಯ್ದು ಶೆಯ್ದು சிந்தை செய்து செய்து = ಚಿಂತನೆಯನ್ನು ಎಡೆಬಿಡದೆ ಮಾಡಿ, ಉನ್ உன் = ನಿನ್ನ, ನೆಡು நெடு = ವಿಸ್ತಾರವಾದ, ಮಾ மா = ಪರಮ ಪವಿತ್ರವಾದ, ಮೊೞಿ மொழி = ಶಾಸ್ತ್ರವನ್ನು (ಭಾಷೆಯನ್ನು), ಇಶೈ இசை = ಗಾನರೂಪದಲ್ಲಿ, ಪಾಡಿ பாடி = ಹಾಡಿ, ಆಡಿ ~~ஆடி~~ ஆடி = ನಲಿದಾಡಿ, ಎನ್ என் = ನನ್ನ, ಮುನ್ನೈ முன்னை = ಬಹುಕಾಲದಿಂದ ಕೂಡಿಬಂದ, ತೀವಿನೈಗಳ್ தீவினைகள் = ಕ್ರೂರವಾದ ಪಾಪಗಳು, ಮುೞು ವೇರ್ முழுவேர் = ಬೇರುಸಮೇತವಾಗಿ, ಅರಿನ್ದನನ್ ~~ಯಾನ್~~ அரிந்தனன் ~~யான்~~ = ಕಿತ್ತು ಹಾಕಿದ್ದೇನೆ, ಯಾನ್ யான் = ನಾನು, ಉನ್ನೈ உன்னை = ನಿನ್ನನ್ನು, ಶಿನ್ದೈಯಿನಾಲ್ சிந்தையினால் = ~~[illegible]~~ ಚಿಂತನೆಯಲ್ಲಿಯೇ, ಇಗೞ್ನ್ದ இகழ்ந்த = ಅಲಕ್ಷಿಸಿದ, ಇರಣಿಯನ್ இரணியன் = ಹಿರಣ್ಯಕಶಿಪುವಿನ, ಅಗಲ್ அகல் = ವಿಸ್ತಾರವಾದ, ಮಾರ್ವಮ್ மார்வம் = ಎದೆಯನ್ನು, ಕೀಣ್ಡ கீண்ட = ಸೀಳಿದ, ಕೋಳ್ கோள் = ಬಲಿಷ್ಠನಾದ, ಅರಿಯೇ அரியே = ನರಸಿಂಹಸ್ವಾಮಿಯೇ, ಎನಕ್ಕೇ எனக்கே = ನನಗಂತೂ, ಮುಡಿಯಾದದು முடியாதது = ಸಾಧ್ಯವಾಗದ್ದು. ಎನ್ என் = ಏನಿದೆ?

ನಿನ್ನನ್ನು ಕುರಿತು ನಾನು ಎಡೆಬಿಡದೆ ಚಿಂತನೆಯನ್ನು ಮಾಡಿ, ನಿನ್ನ ವಿಸ್ತಾರವಾದ ಪರಮ ಪವಿತ್ರವಾದ ಶಾಸ್ತ್ರವನ್ನು ಗಾನರೂಪದಲ್ಲಿ

ಹಾಡಿ, ನಲಿದಾಡಿ ಸ್ವಾಮೀ, ನನ್ನ ಹಿಂದಿನ ಕ್ರೂರ ಪಾಪಗಳೆಲ್ಲವೂ ಬೇರು ಸಹಿತವಾಗಿ ಕಿತ್ತು ಹೋದವು. ನಿನ್ನ ಚಿಂತನೆಯನ್ನೇ ಅಲಕ್ಷಿಸಿದ ಹಿರಣ್ಯ ಕಶಿಪುವಿನ ಅಸಹನೀಯ ಎದೆಯನ್ನು ಸೀಳಿದ ಬಲಿಷ್ಠನಾದ ನರಸಿಂಹನೇ, ನನಗೆ ದಾಸ್ಯವಾಗದ್ದು ಏನಿದೆ? (6)

ಭಗವಚ್ಚಿಂತನೆಯೂ, ಅವನ ನಾಮಸ್ಮರಣೆಯೂ, ಅವನ ದಿವ್ಯ ಕಲ್ಯಾಣಗುಣ ಸ್ವಭಾವಗಳ ಸ್ತುತಿಯ ಫಲವೇನು ಎಂಬುದನ್ನು ಇಲ್ಲಿ ಇನ್ನಷ್ಟು ವಿಶದೀಕರಿಸಲಾಗಿದೆ. ಭಗವಂತನನ್ನು ಕುರಿತು ಚಿಂತಿಸದೆ ಅದಕ್ಕೆ ಬದಲಾಗಿ ಭಗವಂತನನ್ನು ಅನಾದರಿಸಿ, ದ್ವೇಷಿಸಿ, ದ್ವೇಷಿಸಿ ಕಾಲ ಕಳೆಯುವವರ ಗತಿಯೇನು ಎಂಬುದನ್ನು ಇಲ್ಲಿ ಸೂಚಿಸಲಾಗಿದೆ. ಅದು ಹಿರಣ್ಯಕಶಿಪುವಿನ ನಿದರ್ಶನ.

ಆಳ್ವಾರರು ಆಳವಾಗಿ ಭಗವದನುಭವ ಮಾಡಿ, ಅವನನ್ನು ಕುರಿತು ತಿರುವಾಯ್ಮೊಳಿಯನ್ನೇ ರಚಿಸಿದರು. ಹಿಂದಿನ ಪಾಪ ಪಾಶಗಳನ್ನು ಭಗವತ್ಸ್ತುತಿಯಾಗಿ ಹಾಡಿ ನಲಿದರು. ಈ ವಿಷಯವನ್ನು ಇಲ್ಲಿ ಸೂಚಿಸುತ್ತಿದ್ದಾರೆ ಎನ್ನಬಹುದು.

ಭಗವಂತನನ್ನು ಎಡೆಬಿಡದೆ ಚಿಂತಿಸುವವನ, ಸ್ವಾಮಿಯ ಗುಣಗಾನದಲ್ಲಿಯೇ ನಿರತನಾದವನ ಜನ್ಮ ಜನ್ಮಾಂತರಗಳ ಕಡು ಪಾಪಗಳೆಲ್ಲವೂ ಕಳೆದು ಹೋಗುವುವು. ಭಗವತ್ಸಾನ್ನಿಧ್ಯವೇ ಲಭಿಸುವುದು. ಚೇತನನು ಪಡೆದುಕೊಳ್ಳಬಹುದಾದ, ಇದಕ್ಕಿಂತಲೂ ಹೆಚ್ಚಿನದು ಬೇರೇನೂ ಇಲ್ಲ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನಿನ್ನನ್ನು ಕುರಿತು ಎಡೆಬಿಡದೆ ಚಿಂತಿಸುತ್ತಾ ಬಂದೆ. ನಿನ್ನನ್ನು ಕುರಿತ ಅಪಾರವಾದ ದಾಸ್ಯವನ್ನು ಪಡೆ ಅನುಭವಿಸಿದೆ. ಅವುಗಳನ್ನು ಗಾನರೂಪದಲ್ಲಿ ಹಾಡಿದೆ. ಆನಂದಪರವಶನಾದೆ. ಉನ್ಮತ್ತನಾಗಿ ಕುಣಿದೆ. ಇದರ ಫಲವಾಗಿ ಜನ್ಮಜನ್ಮಾಂತರಗಳಿಂದಲೂ ನನ್ನನ್ನು ಬಿಡದೆ ಕಾಡುತ್ತಿದ್ದ ನನ್ನ ಕಡುಕ್ರೂರ ಪಾಪಗಳೆಲ್ಲವೂ ಬೇರುಸಹಿತ ಕಿತ್ತು ಹೋದವು. ನಾನಿನ್ನು ಪಡೆದುಕೊಳ್ಳಬೇಕಾದದ್ದೇನಿದೆ? ನಿನ್ನನ್ನೇ ನಾನು ಪಡೆದುಕೊಂಡಿದ್ದೇನೆ. ನಿನ್ನ ದಿವ್ಯ ಸಾನ್ನಿಧ್ಯದ ಸೇವೆಯ ಭಾಗ್ಯವೇ ನನಗೆ ಲಭಿಸಿದೆಯಲ್ಲ! ನನಗೆ ಬೇರೇನೂ ಬೇಡ.

7. முடியாததென்னைக்கேலினி

முடிவேழுலகுமுண்டான், உகந்து வந்து

Garani Srinivasan

அடியேனுள் புகுந்தான் அகல்வானுமல்லனினி,
செடியார் நோய்களெல்லாந் துரந்து
எமர்கீழ் மேலெழுபிறப்பும்,
விடியாவெந்நரகத்து என்றும்
சேர்தல் மாறினரே

ಮುಡಿಯಾದದೆನ್ನೆನಕ್ಕೇಲಿನಿ ಮುೞುವೇೞುಲಗುಮುಣ್ಡಾನ್, ಉಗನ್ದುವನ್ದು
ಅಡಿಯೇನುಳ್ ಪುಗುನ್ದಾನ್ ಅಗಲ್ವಾನುಮಲ್ಲನಿನಿ,
ಶೆಡಿಯಾರ್ ನೋಯ್ಗಳೆಲ್ಲಾನ್ದುರನ್ದು ಎಮರ್ಕೀೞ್ ಮೇಲೆೞು ಪಿಱಪ್ಪುಮ್,
ವಿಡಿಯಾವೆನ್ನರಗತ್ತು ಎನ್ಱುಮ್ ಶೇರ್ದಲ್ ಮಾಱಿನರೇ.

ಮುಡಿಯಾದದು முடியாதது = ಸಾಧ್ಯವಿಲ್ಲದ್ದು, ಎನ್ என் = ಏನಿದೆ, ಎನಕ್ಕು எனக்கு = ನನಗೆ, ಏಲ್ ஏல் = ಬೇಡುವುದಕ್ಕೆ ಇನಿ இனி = ಇನ್ನು, ಮುೞು ಏೞ್ ಉಲಗುಮ್ முழு ஏழ் உலகும் = ಪೂರ್ತಿಯಾಗಿ ಏಳು ಲೋಕಗಳನ್ನು, ಉಣ್ಡಾನ್ உண்டான் = ಉಂಡವನು, ಉಗನ್ದು உகந்து = ಆಶೆಪಟ್ಟು, ವನ್ದು வந்து = ಬಂದು, ಅಡಿಯೇನ್ அடியேன் = ದಾಸನಾದ ನನ್ನ, ಉಳ್ உள் = ಅಂತರಂಗವನ್ನು, ಪುಗುನ್ದಾನ್ புகுந்தான் = ಪ್ರವೇಶಿಸಿದ್ದಾನೆ (ಪ್ರವೇಶಿಸಿದನು), ಅಗಲ್ವಾನುಮ್ ಅಲನ್ ಇನಿ அகல்வானும் அல்லன் இனி = ಇನ್ನುಮೇಲೆ ಅಗಲುವವನೂ ಅಲ್ಲದವನಾಗಿದ್ದಾನೆ, ಶೆಡಿ ಆರ್ செடி ஆர் = ಪಾಪಗಳು ತುಂಬಿರುವ, ನೋಯ್ಗಳ್ ಎಲ್ಲಾಮ್ நோய்கள் எல்லாம் = ಸಂಕಟಗಳು ಎಲ್ಲವನ್ನೂ, ತುರನ್ದು துரந்து = ತೊರೆದವರಾಗಿ, ಎಮರ್ எமர் = ನಮ್ಮವರು, ಕೀೞ್ ಮೇಲ್ கீழ் மேல் = ಹಿಂದಿನ ಮತ್ತು ಮುಂದಿನ, ಎೞು ಪಿಱಪ್ಪುಮ್ எழுபிறப்பும் = ಏಳು ಜನ್ಮಗಳಲ್ಲಿ ಪೀಳಿಗೆ ಹುಟ್ಟನ್ನೂ, ವಿಡಿಯಾ விடியா = ಕೊನೆಗಾಣದಂತ, ವೆಮ್ ನರಗತ್ತು வெம் நரகத்து = ಕ್ರೂರವಾದ ನರಕದಲ್ಲಿ, ಎನ್ಱುಮ್ என்றும் = ಎಂದಿಗೂ, ಶೇರ್ದಲ್ சேர்தல் = ಸೇರುವುದನ್ನು, ಮಾಱಿನರೇ மாறினரே = ತಪ್ಪಿಸಿಕೊಂಡರಲ್ಲಾ! (ಬದಲಾಯಿಸಿಕೊಂಡರಲ್ಲಾ!)

ನನಗೆ ಸಾಧ್ಯವಿಲ್ಲದ್ದು ಏನಿದೆ? ಇನ್ನು ನಾನು ಬೇಡುವುದಾದರೂ ಏನಿದೆ? ಏಳು ಲೋಕಗಳನ್ನು ಪೂರ್ತಿಯಾಗಿ ಉಂಡವನು ಆಶೆಪಟ್ಟು ಬಂದು

Garani Srinivasan

ಪಾದನಾದ ನನ್ನ (ಪಾದಸೇವಕನಾದ ನನ್ನ) ಅಂತರಂಗವನ್ನು ಪ್ರವೇಶಿಸಿದ್ದಾನೆ (ಅಲ್ಲಿಂದ) ಇನ್ನು ಮೇಲೆ ಅಗಲುವವನೂ ಅಲ್ಲ. ತುಂಬಿರುವ ಪಾಪಗಳನ್ನೂ, ದುಃಖಸಂಕಟಗಳನ್ನೂ ಎಲ್ಲವನ್ನೂ ನಮ್ಮವರು ಹಿಂದಿನ ಮತ್ತು ಮುಂದಿನ ಹಿಳೆಯ ಜನ್ಮಗಳನ್ನೂ, ಕೊನೆಗಾಣದಂಥ ಕಡುಕ್ರೂರ ಪಾಪ ನರಕದಲ್ಲಿ ಬೀಳುವುದನ್ನು ಎಂದೆಂದಿಗೂ ತಪ್ಪಿಸಿಕೊಂಡರಲ್ಲ! (7)

ನನಗೆ ಸಾಧ್ಯವಿಲ್ಲದ್ದು ಏನಿದೆ? — ನಾನು ಭಗವಂತನನ್ನು ದೃಢವಾಗಿ ನಂಬಿ, ಆಶ್ರಯಿಸಿದೆ. ಅದರ ಫಲವಾಗಿ ನಾನು ಎಲ್ಲ ಬಗೆಯಲ್ಲೂ ಉಜ್ಜೀವನಹೊಂದಿದೆ. ಜನ್ಮಜನ್ಮಾಂತರಗಳಿಂದಲೂ ನಾನು ಗಳಿಸಿಕೊಂಡು ಬಂದಿದ್ದ ಪಾಪರಾಶಿಯೆಲ್ಲವೂ ಪರಿಪೂರ್ಣವಾಗಿ ಕಡಿದು ಹೋಯಿತು. ಭಗವಂತನೇ ನನಗೆ ಒಲಿದನು. ಅವನು ತಾನಾಗಿಯೇ ಬಂದು ನನ್ನ ಅಂತರಂಗವನ್ನು ಪ್ರವೇಶಿಸಿದನು. ಅಲ್ಲಿಯೇ ಸ್ಥಿರವಾಗಿ ನೆಲೆಗೊಂಡಿದ್ದಾನೆ. ಇದನ್ನರಿತುಕೊಂಡಿರುವ ನನಗೆ ಸಾಧ್ಯವಿಲ್ಲದು, ನನ್ನ ಕೈಲಾಗದ್ದು, ಬೇರೆ ಏನಿದೆ? ಏನೇನೂ ಇಲ್ಲ. ಭಗವತ್ಕೃಪೆಯಿಂದ ನನಗೆ ಎಲ್ಲವೂ ಸುಸೂತ್ರವಾಗಿ ಜರುಗುತ್ತದೆ.

ಇನ್ನು ನಾನು ಬೇಡುವುದಾದರೂ ಏನಿದೆ?" — ಶಾಶ್ವತಾನಂದವನ್ನು ಕರೆಯುವುದನ್ನು ಪಡೆದುಕೊಳ್ಳುವುದಕ್ಕಾಗಿ, ಮನುಷ್ಯನು ಕೊಳಲು ಕೊಂಡರೆ ಪಡಬೇಕಾ. ಅದನ್ನೇ ಪಡೆದುಕೊಂಡ ಬಳಿಕ ಅವನು ಕೋರುವುದಾದರೂ ಬೇರೆ ಏನಿದೆ? ಇತರ ವಿಷಯದಲ್ಲಿಯಾದರೆ, ಅವರು ಎಲ್ಲವನ್ನೂ- ಶಾಶ್ವತಾನಂದವನ್ನು- ನೀಡುವ ಭಗವಂತನನ್ನೇ ~~ಅವರ~~ ಪಡೆದುಕೊಂಡರು. 'ಸ್ವಾಮಿಯೇ ನನಗೆ ಲಭ್ಯವಾದ ಬಳಿಕ, ನಾನು ಪಡೆದುಕೊಳ್ಳುವುದಾಗಿ ಏನಿದೆ? ಬೇರೆ ಏನನ್ನಾದರೂ ಬೇಡುವುದಿದೆಯೇ?' ಎಂದು ಅವರು ಉದ್ಗರಿಸುವುದು ಸಹಜವಾಗಿಯೇ ಇದೆ.

ಆಳ್ವಾರರು ಹೇಳುತ್ತಾರೆ: ಭಗವಂತನೇನು ಸಾಮಾನ್ಯನೇ? ಏಳು ಲೋಕಗಳನ್ನೂ ಉಂಡವನು. ಇಡಿಯ ಬ್ರಹ್ಮಾಂಡವನ್ನೇ ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಮರುಸೃಷ್ಟಿಯವರೆಗೆ ಎಲ್ಲವನ್ನೂ ಸಂರಕ್ಷಿಸಿದವನು. ಪರಮಪದಮೂರ್ಧನೂ ಸರ್ವರಕ್ಷಕನೂ ಆದ ಸ್ವಾಮಿಯು ನನ್ನಲ್ಲಿ ಕೃಪೆಮಾಡಿದನಲ್ಲ! ತಾನೇ ಆಸೆಪಟ್ಟು ಬಂದು ನನ್ನ ಅಂತರಂಗವನ್ನು ಪ್ರವೇಶಿಸಿದನು! ಅಲ್ಲಿಂದ ಇನ್ನು ಕದಲಿ ಹೋಗದಂತೆಯೂ, ನನ್ನನಗಲದಂತೆಯೂ ಅಲ್ಲಿಯೇ ನೆಲೆಗೊಂಡಿದ್ದಾನೆ! ಇದರ ಪರಿಣಾಮ ಏನಾಯಿತು ಕಂಡಿರಾ? ~~ನನ್ನ~~ ನಾನು ಮಾತ್ರವಲ್ಲ; ನನ್ನ ವಂಶವೇ ಉದ್ಧಾರ-

Garani Srinivasan

ಕೊಂಡಿತು. ನಮ್ಮೆಲ್ಲರ ಏಳೇಳು ಜನ್ಮಗಳ ಪಾಪರಾಶಿಯೆಲ್ಲವೂ ನಿಂ
ಪೂರ್ಣವಾಗಿ ಕೊಚ್ಚಿಹೋಯಿತು ನಮ್ಮ ಸಂಸಾರದ (ಜನನ. ಮರಣ
ವೆನ್ನುವ) ದುಃಖ ಸಂಕಟಗಳೆಲ್ಲವೂ [illegible] ತೊಲಗಿದವು [illegible]
ನರಕದ ನರಳಿಕೆ ತಪ್ಪಿತು. ಎಲ್ಲ ಬಗೆಯಲ್ಲೂ ನಾವು ಮುಕ್ತರಾದೆವು.
ಸ್ವಾಮಿಯು ಕರುಣೆಯನ್ನು ಮಹೋಪಕಾರವನ್ನು ನಾನು ಮರೆಯು
ವುದಾದರೂ ಹೇಗೆ? ನಾನಿನ್ನು ಬೇಡುವುದಾದರೂ ಏನಿದೆ?

8. மாறி மாறிப் பல பிறப்பும் பிறந்து
அடியை யடைந்துள்ளம் தேறி,
ஈறிலின்பத் திருவெள்ளம் யான் மூழ்கினன்,
பாறிப்பாறி யசுரர் தம் பல்குழாங்கள் நீறெழ,
பாய்பறவையொன்
றேறி வீற்றிருந்தாய்! உன்னை யென்னுள்
நீக்கேலெந்தாய்.

ಮಾಱಿ ಮಾಱಿಪ್ಪಲ ಪಿಱಪ್ಪುಮ್ ಪಿಱನ್ದು ಅಡಿಯೈಯಡೈನ್ದುಳ್ಳಮ್ ತೇಱಿ,
ಈಱಿಲಿನ್ ಬತ್ತಿರುವೆಳ್ಳಮ್ ಯಾನ್ ಮೂೞ್ಗಿನನ್,
ಪಾಱಿಪ್ಪಾಱಿ ಯಶುರರ್ ತಮ್ ಪಲ್ ಕುೞಾಙ್ಗಳ್ ನೀಱೆೞ,
ಪಾಯ್ ಪಱವೈಯೊನ್
ಱೇಱಿ ವೀಟ್ರಿರುನ್ದಾಯ್! ಉನ್ನೈಯೆನ್ನುಳ್ ನೀಕ್ಕೇಲೆನ್ದಾಯ್.

ಮಾಱಿ ಮಾಱಿ மாறி மாறி = ಮೇಲಿಂದ ಮೇಲೆ ಬದಲಾ
ಯಿಸುವ, ಪಲ பல = ಹಲವಾರು, ಪಿಱಪ್ಪುಮ್ பிறப்பும் =
ಜನ್ಮಗಳನ್ನು, ಪಿಱನ್ದು பிறந்து = ಹುಟ್ಟಿ, ಅಡಿಯೈ அடியை
= (ನಿನ್ನ) ತಿರುವಡಿಗಳನ್ನು; ಅಡೈನ್ದು அடைந்து = ಸೇರಿ (ಪಡೆದು),
ಉಳ್ಳಮ್ உள்ளம் = ನನ್ನ ಅಂತರಂಗವು, ತೇಱಿ
தேறி = ತಿಳಿಗೊಂಡು, ಈಱು ಇಲ್ ஈறு இல் = ಕೊನೆಯಿ
ಲ್ಲದ, ಇನ್‌ಬತ್ತು இன்பத்து = ಆನಂದದ, ಇರುವೆಳ್ಳಮ್
திருவெள்ளம் = ಅಗಾಧವಾದ ಪ್ರವಾಹದಲ್ಲಿ (ಕಡಲಲ್ಲಿ), ಯಾನ್
யான் = ನಾನು; ಮೂೞ್ಗಿನನ್ மூழ்கினன் = ಮುಳುಗಿದ್ದೇನೆ
ಅಶುರರ್ ತಮ್ அசுரர் தம் = ಅಸುರರ, ಪಲ್ ಕುೞಾಙ್ಗಳ್
பல் குழாங்கள் = ಅನೇಕ ಗುಂಪುಗಳು, ಪಾಱಿ ಪಾಱಿ பாறி
பாறி = ಸಂಪೂರ್ಣವಾಗಿ ನಾಶಗೊಂಡು, ನೀಱು ಎೞ நீறுஎழ
= ಧೂಳಾಗಿ ಹೋಗುವಂತೆ, ಪಾಯ್ பாய் = ವೇಗವಾಗಿ ಸಂಚರಿಸುವ,

Garani Srinivasan

ಮಱಪ್ಪೈ ಬಿನ್ಱು ಪಱಾವು ಕಾಣ್ಱು = ನಾಟಿಯಿಲ್ಲದ ವಿಷಯವನ್ನು, ವಿಟ್ಟ್ ಏಱ್ = ರತ್ತಿ ಮೇಟ್ರಿಯುನ್ದಾಯ್ ವೆಱ್ಱು ಎನ್ದಾಯ್ = ಸುಳಿದು ಹೋಗುವವನಲ್ಲ ಉನ್ನೈ ಉಣರ್ = ನಿನ್ನನ್ನು, ಎನ್ನುಳ್ ನಣ್ಣುಣ್ = ನನ್ನಿಂದ (ನನ್ನ ಅಂತರಂಗ ~~...~~ ವನ್ನು), ನೀಕ್ಕೇಲ್ ನೀಕ್ಕೇಲ್ = ನೀಗಬೇಡ (ತೊರೆದು ಹೋಗಬೇಡ), ಎನ್ದಾಯ್ ಎನ್ದಾಯ್ = ನನ್ನ ತಂದೆಯೇ!

ಮೇಲಿಂದ ಮೇಲೆ ಬದಲಾಯಿಸುವ ಹಲವಾರು ಜನ್ಮಗಳಲ್ಲಿ ಹುಟ್ಟಿ, ತೊಳಲಿ (ನಿನ್ನ) ತಿರುವಡಿಗಳನ್ನು ಬಿಡದು (ಬಿಟ್ಟೆ), ನನ್ನ ಅಂತರಂಗವು ತಿಳಿಗೊಂ ಡು, ಕೊನೆಯಿಲ್ಲದ ಆನಂದದ ಅಪಾರವಾದ ಕಡಲಲ್ಲಿ (ಪ್ರವಾಹದಲ್ಲಿ) ನಾನು ಮುಳುಗಿದ್ದೇನೆ. ಅಸುರರ ಅನೇಕ ಕೂಟಗಳು ಸಂಪೂರ್ಣವಾಗಿ ನಾಶಗೊಂಡು ಧೂಳಾಗಿ ಹೋಗುವಂತೆ ವೇಗವಾಗಿ ಸಂಚರಿಸುವ ಸುಳಿದು ಹೋಗುವವನೇ, ನಿನ್ನನ್ನು ನಾಟಿಯಿಲ್ಲದ ವಿಷಯನ್ನೇರಿ ಸುಳಿದು ಹೋಗುವವನೇ, ನಿನ್ನನ್ನು ನನ್ನ ಅಂತರಂಗದಿಂದ ನೀಗಬೇಡ (ತೊರೆದು ಹೋಗಬೇಡ), ನನ್ನ ತಂದೆ ಯೇ! (8)

ಆಳ್ವಾರರು ಹೇಳುತ್ತಾರೆ: ಭಗವಂತ, ನಿನ್ನನ್ನು, ನಿನ್ನ ಕೃಪೆಯನ್ನು ಮರೆತು ಹೋಗುವವನಾಗಿ, ಸಂಸಾರಸಾಗರದಲ್ಲಿ ಬಿದ್ದು ಕೊಳ್ಳುತ್ತಾ ನಾನಾ ತಂದು ಕೊಳ್ಳುವವನಾಗಿ, ಸಂಸಾರಸಾಗರದಲ್ಲಿ ಬಿದ್ದು ಕೊಳ್ಳುತ್ತಾ ನಾನಾ ಜನ್ಮಗಳ ದುಃಖ ಸಂಕಟಗಳನ್ನು ಅನುಭವಿಸಿದೆ. ನಿನ್ನನ್ನು ಕುರಿತು ಬಿಡದೆ ಚಿಂತಿಸಿ, ಸ್ತುತಿಸಿ, ನುತಿಸಿದ್ದರ ಫಲವಾಗಿ ನಿನ್ನ ಕೃಪೆ ಗೆ ನಾನು ಪಾತ್ರನಾದೆ. ನಿನ್ನ ತಿರುವಡಿಗಳನ್ನು ನಾನು ಬಿಡದು ಕೊಳ್ಳುವಂ ತಾಯಿತು. ಮಹಾಮಹಿಮನೂ ಪರಮಪುರುಷನೂ ಆದ ನೀನು ಇಷ್ಟ ಪಟ್ಟು ನನ್ನ ಅಂತರಂಗವನ್ನು ಪ್ರವೇಶಿಸಿದೆ. ನನ್ನಲ್ಲಿಯೇ ಶಾಶ್ವತವಾಗಿ ನೆಲಸಿದೆ ಎಂದು ನನ್ನ ನಂಬಿಕೆ ~~...~~ ಯುಂಟಾಯಿತು. ಇದರಿಂದ, ನನ್ನ ಮನಸ್ಸು ತಿಳಿ ಗೊಂಡಿತು. ನನ್ನ ಆನಂದಕ್ಕೆ ಮಿತಿಯೇ ಇಲ್ಲದಂತಾಗಿದೆ. ಆನಂದಸಾಗ ರದಲ್ಲಿ ನಾನು ಮುಳುಗಿದ್ದೇನೆ. ಭಗವಂತ, ನೀನು ನಿನ್ನ ಭಕ್ತರ ರಕ್ಷಣೆಯಲ್ಲಿ ತುಂಬ ದುಷ್ಟರ, ಎಂದರೆ, ಅಸುರರ ಕೂಟಗಳನ್ನೆಲ್ಲಾ ನಿರ್ಮೂಲಗೊಳಿಸುವುದಕ್ಕಾಗಿ ಗರುಡವಾಹನನಾಗಿ ಸದಾ ಸಿದ್ಧನಾಗಿ ರುವೆಯಲ್ಲ! ಆದರೆ, ನನ್ನ ತಂದೆಯಾಗಿ, ನನ್ನ ಅಂತರಂಗವನ್ನು ತೊರೆದು ಹೋಗದಂತೆ ನನ್ನಲ್ಲಿ ಕರುಣಿಸಿ, ಕಾಪಾಡು

9. எந்தாய்! தண் திருவேங்கடத்துள் நின்றாய்!

இலங்கை செற்றாய்!, மராமரம்

பைந்தாள் ஏழுருவ ஒருவாளி கோத்த வில்லா!,

கொந்தார் தண்ணந்துழாயினாயமுதே!, உன்னையென்னுள்ளேகுழைத்தவெம்
மைந்தா!, வானேறே! இனியெங்கும் போகின்றதே.

ಎನ್ದಾಯ್! ತಣ್ ತಿರುವೇಙ್ಗಡತ್ತುಳ್ ನಿನ್ಱಾಯ್! ಇಲಙ್ಗೈ ಶೆಱ್ಱಾಯ್!, ಮರಾಮರಮ್
ಪೈದ್ದ ಏಳುರುವ ಒರುವಾಳಿ ತೊಟ್ಟ ವಿಲ್ಲಾ!,
ಕೊನ್ದಾರ್ ತಣ್ಣನ್ದುೞಾಯಿನಾಯ್ ಅಮುದೇ!, ಉನ್ನೈಯೆನ್ನುಳ್ಳೇ ಕುೞೈತ್ತವೆಮ್
ಮೈನ್ದಾ!, ವಾನೇಱೇ! ಇನಿಯೆಙ್ಗುಮ್ ಪೋಗಿನ್ಱದೇ.

ಎನ್ದಾಯ್ எந்தாய் = ನನ್ನ ಸ್ವಾಮಿಯೇ, ತಣ್ தண் = ತಂಪಾದ, ತಿರುವೇಙ್ಗಡತ್ತುಳ್ ನಿನ್ಱಾಯ್ திருவேங்கடத்து ... ನಿನ್ಱಾಯ್ = ತಿರುವೇಂಕಟಾದ್ರಿಯಲ್ಲಿ ನೆಲಸಿರುವವನೇ, ಇಲಙ್ಗೈ ಶೆಱ್ಱಾಯ್ இலங்கை செற்றாய் = ಲಂಕೆಯನ್ನು ನಾಶಪಡಿಸಿದವನೇ, ಮರಾಮರಮ್ மராமரம் = ಸಾಲ್ವೃಕ್ಷಗಳು, ಪೈದ್ದ ... ಏೞುಂ ತಾನ್ ... = ಏಳು ಬಲಿಷ್ಠ ... (ಬಲಿಷ್ಠವಾದ), ಸಾಲ್ ಏೞ್ ತಾನ್ ... ಒರುವಾಳಿ ... = ಶೀಘ್ರವಾಗಿ, ಒರು ವಾಳಿ ... ಉರುವ ... ತೊಟ್ಟ = ಪ್ರಯೋಗಿಸಿದ, ವಿಲ್ಲಾ ವಿ... = ಒಂದೇ ಅಂಬನ್ನು, ತೊಟ್ಟ ... ಕೊನ್ದಾರ್ = ... ಬಿಲ್ಲುಗಾರನೇ, ತೊನ್ದ ... ಕೊನ್ದು ಆರ್ = ... ಅವು ಅಂ = ... ಬಗಳು ತುಂಬಿರುವ, ತಣ್ ತಣ್ = ತಂಪಾದ, ಅವು ... ತುೞಾಯಿನಾಯ್ துழாயினாய் = ತುಲಸಿಯನ್ನು ಧರಿಸಿದ, ತುೞಾಯಿನಾಯ್ ಅಮುದೇ அமுதே = ಅಮೃತವನೇ (ತುಲಸಿಯ ಹಾರವನ್ನು ಧರಿಸಿದವನೇ), ಎನ್ ಉಳ್ಳೇ ... ಉನ್ ... ಶವನನೇ, ಉನ್ನೈ உன்னை = ನಿನ್ನನ್ನು, ಎನ್ ಉಳ್ಳೇ ... = ನನ್ನ ಅಂತರಂಗದಲ್ಲಿ, ಕುೞೈತ್ತ குழைத்த = ಕಲೆತು ... = ನಮ್ಮೊಡೆಯನೇ, ವಾನ್ ... ಇರುವ, ಎಮ್ ಮೈನ್ದಾ எம் மைந்தா = ನಮ್ಮೊಡೆಯನೇ, ಇನಿ இனி ... ವಾನ್ ಏಱೇ வான் ஏறே = ಪರಮಪದಕ್ಕೆ ಒಡೆಯನೇ, ಇನಿ இனி = ಇನ್ನು, ಎಙ್ಗುಮ್ எங்கும் = (ಬೇರೆ) ಎಲ್ಲಿಗೂ, ಪೋಗಿನ್ಱದೇ ...
போகின்றதே = ಹೋಗದಿರುವುದೇ!

ನನ್ನ ಸ್ವಾಮಿಯೇ, ತಂಪಾದ ತಿರುವೇಂಕಟಗಿರಿಯಲ್ಲಿ ನೆಲಸಿರುವವನೇ, ಲಂಕೆಯನ್ನು ನಾಶಪಡಿಸಿದವನೇ, ಏಳು ಸಾಲ್ವೃಕ್ಷಗಳ ದಪ್ಪಮಾದ ಬಡಗಳನ್ನು ಶೀಘ್ರವಾಗಿ ಒಂದೇ ಅಂಬನ್ನು ಪ್ರಯೋಗಿಸಿದ ಬಿಲ್ಲುಗಾ

ಗೊಂಚಲುಗಳು ತುಂಬಿರುವ ತಂಪಾದ ಸೊಬಗಿನ ತುಲಸಿಯ ಹಾರವನ್ನು ಳ್ಳುವನೇ, ಅಮೃತಪಾನನೇ, ನನ್ನ ಅಂತರಂಗದಲ್ಲಿ ಕಲೆತುಹೋಗಿರುವ ನಮ್ಮೊಡೆಯನೇ, ಇನ್ನು ಬೇರೆ ಎಲ್ಲಿಗೂ ಹೋಗದಿರುವುದೇ (9)
(ನಿನ್ನ ಕೆಲಸವಲ್ಲವೇ?)

ಭೂಲೋಕವಾಸಿಗಳಾದ ಭಕ್ತರು ತಮ್ಮ ಇದೇ ಜೀವನದಲ್ಲಿಯೇ ಭಗವಂತನ ಪಾದಸೇವೆಯನ್ನು ಮತ್ತು ದರ್ಶನಲಾಭವನ್ನು ಪಡೆದು ಕೊಳ್ಳುವುದಕ್ಕಾಗಿ ಭಗವಂತನು ಅರ್ಚಾವತಾರಿಯಾಗಿ ದಿವ್ಯಸುಂದರಮೂರ್ತಿಯಾಗಿ, ಭೂಲೋಕದಲ್ಲಿ ನಾನಾ ದಿವ್ಯಕ್ಷೇತ್ರಗಳಲ್ಲಿ ಶಾಶ್ವತವಾಗಿ ನೆಲೆಗೊಂಡಿದ್ದಾನೆ ಎನ್ನುತ್ತಾರೆ. ತಿರುವೇಂಕಟಗಿರಿ ಇದಕ್ಕೆ ಒಂದು ನಿದರ್ಶನ.

ಭಗವಂತನು ದುಷ್ಟಶಿಕ್ಷಣ, ಶಿಷ್ಟರಕ್ಷಣ ಮಾಡುವುದಕ್ಕಾಗಿ, ಭೂಭಾರವನ್ನಿಳಿಸುವುದಕ್ಕಾಗಿ, ಬೇರೆ ಬೇರೆ ವಿಭವಾವತಾರಗಳನ್ನೆತ್ತಿದನಷ್ಟೆ! ಶ್ರೀರಾಮಾವತಾರವೂ ಅಂಥಾದ್ದೊಂದು. ದುರಹಂಕಾರಿಯೂ, ಮದಬಲಿಷ್ಠನೂ ಆದ ರಾವಣಾಸುರನನ್ನು ಅವನ ರಾಕ್ಷಸಕುಲವನ್ನು ನಿರ್ನಾಮಗೊಳಿಸುವುದಕ್ಕಾಗಿ ಭಗವಂತನು ಸಾಮಾನ್ಯ ಮಾನವನಾಗಿ ಅವತರಿಸಿ, ಲಂಕೆಯನ್ನು ನಿರ್ನಾಮಗೊಳಿಸಿದನು. ಹಾಗೆಯೇ, ರಾಕ್ಷಸಕುಲವನ್ನೇ ನಿರ್ನಾಮಗೊಳಿಸಿದನು.

ಶ್ರೀರಾಮಾವತಾರದ ಮತ್ತೊಂದು ನಿದರ್ಶನ ಹೇಳಿದರೆ ಕಿಷ್ಕಿಂಧೆಯಲ್ಲಿ ಬೆಳೆದಿದ್ದ ಏಳು ತಾಳೆಯ ಮರಗಳನ್ನು ಒಂದೇ ಅಂಬಿನಿಂದ ಭೇದಿಸಿದ್ದು ಇದು ಶ್ರೀರಾಮನ ಅದ್ಭುತ ಬಿಲ್ಲುಗಾರಿಕೆಯನ್ನು ತೋರಿಸುತ್ತದೆ.

ಭಗವಂತನಿಗೆ ತಂಪಾಗಿ, ಸೊಬಗಿನಿಂದ ತುಂಬಿ, ಗೊಂಚಲುಗಳಿಂ ಬಲಾಗಿ ಒತ್ತಾಗಿ ಕಟ್ಟಿರುವ ಪರಿಮಳಿಸುವ ತುಲಸಿಯ ಹಾರ, ಎಂದರೆ, ವನಮಾಲೆಯನ್ನು ಧರಿಸುವುದು ಇಷ್ಟವಂತೆ। ಅದು [illegible]ವಾದ ವನಮಾಲೆಗಾಗಿಯೋ, ತುಲಸಿಗಾಗಿಯೋ ಹೇಗೋ!

ಭಗವಂತನನ್ನು ಆಶ್ರಯಿಸಿದವರಿಗೆ ಅಮರತ್ವವು ತಪ್ಪದೆ ದೊರೆಯುವುದು. ಅಮೃತಪಾನ ಮಾಡಿದ ದೇವತೆಗಳಿಗೆ ದೊರೆತಹಾಗೆ.

ಆಳ್ವಾರರು ಹೇಳುತ್ತಾರೆ: ನಮ್ಮೊಡೆಯಾ, ಸ್ವಾಮೀ, ನನ್ನ ಇದೇ ಜನ್ಮದ ಸೇವೆಯನ್ನು ಸ್ವೀಕರಿಸುವುದಕ್ಕಾಗಿ ನೀನು ತಂಪಾದ ತಿರುವೇಂಕಟಗಿರಿಯಲ್ಲಿ ನೆಲಸಿ ಕೃಪೆ ಮಾಡಿದ್ದೀ. ದಿವ್ಯಸುಂದರಮೂರ್ತಿಯಾಗಿ ವನಮಾಲೆಯನ್ನು ಧರಿಸಿ ತೋರುತ್ತಿದ್ದೀ. ಪರಮಪದನಾಥ

ನಾದ ರಕ್ಷಕನಾಗಿ ನನ್ನ ಅಂತರಂಗದಲ್ಲಿ ಕೇಳಿ, ಅಮರತ್ವವನ್ನು ನೀಡು
ವವನಾಗಿದ್ದೀ. ಇನ್ನು ನೀನು ನನ್ನ ಅಂತರಂಗದಿಂದ ಬೇರೆ ಎಲ್ಲಿಗೆ ಹೋಗು
ವುದಕ್ಕಾಗಬಲ್ಲೆ?

10. போகின்றகாலங்கள் போயகாலங்கள்
போகுகாலங்கள், தாய் தந்தையுயி
ராகின்றாய்! உன்னை நானடைந்தேன் விடுவேனோ
பாகின்ற தொல்புகழ் மூவுலகுக்கும் நாதனே!
பரமா!, தண்வேங்கட
மேகின்றாய்! தண்டுழாய் விரைநாறு
கண்ணியனே.

ಪೋಹಿನ್ರ ಕಾಲಙ್ಗಳ್ ಪೋಯ ಕಾಲಙ್ಗಳ್ ಪೋಹು ಕಾಲಙ್ಗಳ್ ತಾಯ್ ತನ್ದೈಯುಯಿ
ರಾಹಿನ್ರಾಯ್! ಉನ್ನೈ ನಾನಡೈನ್ದೇನ್ ವಿಡುವೇನೋ,
ಪಾಹಿನ್ರ ತೊಲ್ ಪುಹಳ್ ಮೂವುಲಹುಕ್ಕುಮ್ ನಾದನೇ ಪರಮಾ, ತಣ್ ವೇಙ್ಗಡ
ಮೇಹಿನ್ರಾಯ್ ತಣ್ದುಳಾಯ್ ವಿರೈನಾಱು ಕಣ್ಣಿಯನೇ.

ಪೋಹಿನ್ರ ಕಾಲಙ್ಗಳ್ போகின்ற காலங்கள் = ನಡೆಯು
ತ್ತಿರುವ ಕಾಲಗಳಲ್ಲಿಯೂ, ಪೋಯ ಕಾಲಙ್ಗಳ್ போய காலங்கள்
= ಕಳೆದು ಹೋದ ಕಾಲಗಳಲ್ಲಿಯೂ, ಪೋಹು ಕಾಲಙ್ಗಳ್ போகு காலங்
கள் = ಮುಂದೆ ಬರುವ ಕಾಲಗಳಲ್ಲಿಯೂ, ತಾಯ್ ತನ್ದೈ ಉಯಿರ್ ಆಹಿ
ನ್ರಾಯ್ தாய் தந்தை உயிர் ஆகின்றாய் = ತಾಯಿ
ಯೂ, ತಂದೆಯೂ, ಪ್ರಾಣವೂ ಆಗಿರುವವನೇ, ಉನ್ನೈ உன்னை = ನಿನ್ನನ್ನು
ನಾನ್ நான் = ನಾನು, ಅಡೈನ್ದೇನ್ அடைந்தேன் = ಶರಣು ಹೊಂದಿದ್ದೇ
ನೆ, ವಿಡುವೇನೋ விடுவேனோ = ಬಿಟ್ಟುಬಿಡುವೆನೇ?, ಪಾಹಿನ್ರ பா
கின்ற = (ಹರಡುತ್ತಿರುವ) ತೊಲ್ தொல் = ಪುರಾತನ, ಪುಹಳ್ புகழ் =
ಕೀರ್ತಿಯುಳ್ಳವನಾಗಿ, ಮೂವುಲಹುಕ್ಕುಮ್ மூ உலகுக்கும் =
ಮೂರು ಲೋಕಗಳಿಗೂ, ನಾದನೇ நாதனே = ಒಡೆಯನೇ, ಪರಮಾ
பரமா = ಸರ್ವೋತ್ತಮನೇ, ತಣ್ ವೇಙ್ಗಡಮ್ தண் வேங்க
டம் = ತಂಪಾದ ತಿರುವೇಂಕಟಗಿರಿಯಲ್ಲಿ, ಮೇಹಿನ್ರಾಯ್ மேகி
ன்றாய் = ನೆಲಸಿರುವವನೇ, ತಣ್ದುಳಾಯ್ தண் துழாய் =
ತಂಪಾದ ತುಲಸಿಯ, ವಿರೈ விரை = ಪರಿಮಳವನ್ನು, ನಾಱು நாறு =
ಬೀರುತ್ತಿರುವ, (ಹರಡುತ್ತಿರುವ), ಕಣ್ಣಿಯನೇ கண்ணியனே =
ಹಾರವನ್ನು ಧರಿಸಿರುವವನೇ

ಹಿಂದೆ, ಈಗ, ಮುಂದೆ ಎಂಬ ಮೂರು ಕಾಲಗಳಲ್ಲಿಯೂ ತಾಯಿ,

Garani Srinivasan

ತಂದೆ ಮತ್ತು ಪ್ರಾಣವೇ ಆಗಿರುವವನೇ, ನಿನ್ನನ್ನು ನಾನು ಶರಣು ಹೊಕ್ಕಿದ್ದೇ
ನೆ. ನಿನ್ನನ್ನು ಬಿಟ್ಟು ಬಿಡುವೆನೋ? ಪುರಾತನನಾಗಿ ಧರಿಸಿ ಹೊಗಳಲ್ಪಡುವ
ಕೀರ್ತಿಯುಳ್ಳವನಾಗಿ ಮೂರು ಲೋಕಗಳಿಗೂ ಒಡೆಯನಾಗಿರುವವನೇ,
ಸರ್ವಶಕ್ತಮನೇ, ತಂಪಾದ ತಿರುವೆಂಕಟಗಿರಿಯಲ್ಲಿ ನೆಲಸಿರುವವನೇ, ತಂಪಾದ ತುಲಸಿಯ ಹಾರವನ್ನು ಧರಿಸಿರು
ಚಕ್ರಮುಳ್ಳವನ್ನು ಧರಿಸುತ್ತಿರುವ ತಂಪಾದ ತುಲಸಿಯ ಹಾರವನ್ನು ಧರಿಸಿರು (10)
ವವನೇ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ಎಲ್ಲ ಕಾಲಗಳಲ್ಲಿಯೂ ಮೂರು ಲೋಕಗಳ ನಿರ್ವಾಹಕನೆಂದೂ, ಸರ್ವಶಕ್ತಮನೆಂದೂ, ಸರ್ವರಕ್ಷಕನೆಂದೂ ಕೀರ್ತಿಗೊಂಡಿರುವವನೇ, ಚಕ್ರಮುಳ್ಳವನ್ನು ಧರಿಸುತ್ತಿರುವ ~~ತಂ~~ ವನಮಾಲೆಯಿಂದ ಅಲಂಕೃತನಾದವನೇ, ನನಗೆ ತಂದೆಯೂ, ತಾಯಿಯೂ, ಪ್ರಾಣವೂ ಆಗಿರುವವನೇ, ನಾನು ನಿನ್ನನ್ನು ಶರಣು ಹೊಕ್ಕಿದ್ದೇನೆ. ನಿನ್ನನ್ನು ಎಂದೆಂದಿಗೂ ಬಿಟ್ಟು ಹೋಗುವುದಿಲ್ಲ.

11. கண்ணித் தண்ணந் துழாய் முடிக் கமலத் தடம்
பெருங் கண்ணனைப், புகழ்
நண்ணித் தென் குருகூர்ச் சடகோபன் மாறன்
சொன்ன,
எண்ணில் சோர்விலந்தாதி ஆயிரத்துள்ளி
வையு மோர் பத்திசை யொடும்,
பண்ணிற் பாட வல்லாரவர் கேசவன் தமரே.

ಕಣ್ಣಿತ್ತಣ್ಣನ್ತುೞಾಯ್ ಮುಡಿಕ್ಕಮಲತ್ತಡಮ್ ಪೆರುಙ್ಗಣ್ಣನೈ, ಪುಗೞ್
ನಣ್ಣಿತ್ತೆನ್ ಕುರುಗೂರ್ ಚ್ಚಡಕೋಪನ್ ಮಾಱನ್ ಸೊನ್ನ,
ಎಣ್ಣಿಲ್ ಸೋರ್ವಿಲನ್ದಾದಿ ಆಯಿರತ್ತುಳ್ಳಿವೈಯುಮೋರ್ ಪತ್ತಿಸೈ ಯೊಡುಮ್,
ಪಣ್ಣಿಲ್ ಪಾಡವಲ್ಲಾರವರ್ ಕೇಶವನ್ ತಮರೇ.

~~[illegible]~~ ಕಣ್ಣಿ கண்ணி = ಹಾರದ ರೂಪದಲ್ಲಿರುವ, ತಣ್ தண் = ತಂಪಾದ, ಅಮ್ அம் = ಅಂದವಾದ, ತುೞಾಯ್ துழாய் = ತುಲಸಿಯ, ಮುಡಿ முடி = ಕಿರೀಟವನ್ನುಳ್ಳ, ಕಮಲಮ್ கமலம் = ಕಮಲದಂತೆ, ತಡಮ್ தடம் = ವಿಶಾಲವಾದ, ಪೆರು பெரு = ದೊಡ್ಡ ಕಣ್ಣನೈ கண்ணனை = ಕಣ್ಣುಳ್ಳವನನ್ನು, ಪುಗೞ್ புகழ் = ಕೀರ್ತಿಯ ಮೂಲಕ, ನಣ್ಣಿ நண்ணி = ಆಶ್ರಯಿಸಿ, ತೆನ್ ಕುರುಗೂರ್ ಶಠಕೋಪನ್ தென் குருகூர் சடகோபன் = ತೆಂಬಗಿನ ತಿರುಕ್ಕುರುಗೂರಿನ ಶಠಕೋಪನೆಂಬ, ಮಾಱನ್

Galani Srinivasan

மாறன் = ಮಾರನು, ಶೆನ್ನ சொன்ன = ಹೇಳಿದ, (ಹಾಡಿದ), ಎಣ್ಣಿಲ್ எண்ணில் = ಎಂಣಿಕೆಯಿಲ್ಲ (ಎಣಿಕೆಯಿಲ್ಲ), ಶೋರ್ವು ಇಲ್ சோர்வில் = ಅಡೆತಡೆಯಿಲ್ಲದ ಅನ್ದಾದಿ அந்தாதி ಅಂತಾದಿಯ, ಆಯಿರತ್ತುಳ್ ஆயிரத்துள் = ಒಂದು ಸಾವಿರದಲ್ಲಿ, ಇವೈಯುಮ್ ಓರ್ ಪತ್ತು இவையும் ஓர் பத்து = ಈ ಅಪರೂಪವಾದ ಹತ್ತು ಪಾಶುರಗಳನ್ನು, ಇಶೈಯೊಡುಮ್ இசையொடும் = ಗಾನ (ರಾಗ) ದೊಡನೆ, ಪಣ್ಣಿಲ್ பண்ணில் = ಚಕ್ಕಂತೆ (ಉತ್ತಮ ರೀತಿಯಲ್ಲಿ), ಪಾಡವಲ್ಲಾರ್ ಅವರ್ பாடவல்லார் அவர் = ಹಾಡಬಲ್ಲವರು ಕೇಶವನ್ ತಮರೇ கேசவன் தமரே = ಕೇಶವನ ಪಾದಸೇವಕರೇ

ತಂಪಾಗಿ ಅಂದವಾಗಿ ದುಂಡಗೆ ಹಾರದಂತಿರುವ ತುಲಸಿಯ ಹಾರವನ್ನು ಕೊರಳಲ್ಲಿ ಉಳ್ಳ, ಕಮಲದಂತೆ ವಿಶಾಲವಾಗಿ ದೊಡ್ಡದಾಗಿರುವ ಕಣ್ಣುಗಳುಳ್ಳವನನ್ನು ಕೀರ್ತಿಸುವುದರ ಮೂಲಕ ಆಶ್ರಯಿಸಿ, ಸೊಬಗಿನ ತಿರುಕ್ಕುರುಗೂರಿನ ಶಠಗೋಪನೆಂಬ ಮಾರನು ಹಾಡಿ ಹೇಳಿದ, ಎಂಣಿಕೆಯಿಲ್ಲ ಎಣಿಕೆಯಿಲ್ಲ ಅಡೆತಡೆಯಿಲ್ಲದ ಅಂತಾದಿಯ ಒಂದು ಸಾವಿರ ಪಾಶುರಗಳಲ್ಲಿ ಅಪರೂಪವಾದ ಈ ಹತ್ತನ್ನು ರಾಗವಾಗಿ ಚಕ್ಕಂತೆ (ಉತ್ತಮ ರೀತಿಯಲ್ಲಿ) ಹಾಡಬಲ್ಲವರು ಕೇಶವನ ಪಾದಸೇವಕರೇ ಆಗುತ್ತಾರೆ. (11)

ಇದು ಈ ತಿರುವಾಯ್ಮೊಳಿಯ ಕಡೆಯ ಪಾಶುರ. ತಂಪಾಗಿ, ಹಿತಕರವಾಗಿ, ಸೊಬಗಿನಿಂದ ಕೂಡಿ, ಪರಿಮಳಿಸುವ ತುಲಸಿಯಾ ದಂಡೆಯನ್ನು ಕೊರಳಲ್ಲಿ ಮುಡಿದಿರುವವನೂ, ಕಮಲದಂತೆ ವಿಶಾಲವಾದ ಆಕರ್ಷಕ ಸುಂದರವಾದ ಕಣ್ಣುಗಳುಳ್ಳವನೂ, ಎಣೆಯಿಲ್ಲದ ಅಸಂಖ್ಯಾತ ಕಲ್ಯಾಣಗುಣ ಪರಿಪೂರ್ಣನೂ ಆಗಿರುವವನು ಭಗವಂತ— ಶ್ರೀಮನ್ನಾರಾಯಣ. ಅವನ ಗುಣಸ್ವಭಾವಗಳನ್ನು ಕುರಿತು ಕೀರ್ತಿಸಿದವನೂ, ಆ ಮೂಲಕ ಅವನ ತಿರುವಡಿಗಳನ್ನು ಆಶ್ರಯಿಸಿದವನೂ, ಸೊಬಗಿನ ತಿರುಕ್ಕುರುಗೂರಿನ ಶಠಗೋಪನು. ಭಗವದ್ಗುಣಸ್ವಭಾವಗಳನ್ನು ಎಡೆಬಿಡದಂತೆ ಅನುಸಂಧಾನ ಮಾಡಿ, ಅಂತಾದಿಯ ರಚನೆಯನ್ನು ಅಳವಡಿಸಿಕೊಂಡು, ~~ಅವನು~~ ಶಠಗೋಪನು ಒಂದು ಸಾವಿರ ಪಾಶುರಗಳನ್ನು ರಚಿಸಿ ಭಗವದ್ಗುಣಗಾನ ಮಾಡಿದ್ದಾನೆ. ಭಗವಚ್ಚಿಂತನೆಗಾ, ಎಣಿಕೆಗಾ ಚಕ್ಕಂತೆ, ಶ್ರದ್ಧಾಪೂರ್ಣವಾಗಿ ರಚಿಸಿರುವ ಅವುಗಳ ಪೈಕಿ ಈ ಹತ್ತು ಪಾಶುರಗಳೂ ಅಪರೂಪವಾದವು. ಭಗವಂತನನ್ನು ಅನನ್ಯ

Garani Srinivasan

ಆಶ್ರಯಿಸಿ ಭಜಿಸುವ ಭಕ್ತನು ಅವನ ಆಶ್ರಯವನ್ನು ಎಂದೆಂದಿಗೂ ಬಿಟ್ಟುಕೊಡಲಾರ ಮತ್ತು ಅವನ ಸೇವೆಯಲ್ಲಿಯೇ ಜೀವನವನ್ನು ಕಳೆಯುವನು ಎಂಬುದೇ ಇಲ್ಲಿನ ಅಭಿಪ್ರಾಯ ವಿಷಯ.

ಈ ಪತ್ತು ಪಾಶುರಗಳನ್ನು ಚೆನ್ನಾಗಿ ಕಲಿತು, ಅರಿತುಕೊಂಡು ತಕ್ಕಂತೆ ರಾಗವನ್ನು ಜೋಡಿಸಿಕೊಂಡು, ಹಾಡಿ ಹರ್ಷಿಸಬಲ್ಲವರು ಭಗವದ್ಭಕ್ತರೆ ಆಗುತ್ತಾರೆ. ಭಗವಂತನಿಗೆ ಪ್ರಿಯರಾಗಿ ಆಗುತ್ತಾರೆ ಹೀಗಿದೆ ಇದರ ಫಲಶ್ರುತಿ

— o —

9.5.80

ತಿರುವಾಯ್‌ಮೊೞಿ – ಎರಡನೆಯ ದಶಕ – ಏಳನೆಯ ತಿರುವಾಯ್‌ಮೊೞಿ.

திருவாய்மொழி - இரண்டாம் பத்து - ஏழாந்திருவாய்மொழி.

7. ಕೇಶವನ್ ತಮರ್ கேசவன் தமர்

1. கேசவன் தமர் கீழ்மேலெமரேழெழு பிறப்பும், மாசதிரிது பெற்று நம்முடை வாழ்வுவாய்க்கின்றவா, ஈசனென் கருமாணிக்கமென் செங்கோலக்கண்ணன் விண்ணோர் நாயகன், எம்பிரானெம்மான் நாராயணனாலே.

ಕೇಶವನ್ ತಮರ್ ಕೀೞ್ ಮೇಲ್ ಎಮರ್ ಏೞೆೞು ಪಿಱಪ್ಪುಮ್,
ಮಾಶದಿರಿದು ಪೆಱ್ಱು ನಮ್ಮುಡೈ ವಾೞ್ವು ವಾಯ್ಕಿನ್ಱವಾ,
ಈಶನೆನ್ ಕರುಮಾಣಿಕ್ಕಮೆನ್ ಶೆಙ್ಗೋಲಕ್ಕಣ್ಣನ್ ವಿಣ್ಣೋರ್
ನಾಯಗನ್, ಎಮ್ಬಿರಾನೆಮ್ಮಾನ್ ನಾರಾಯಣನಾಲೇ. ಎಂದು,

ಕೇಶವನ್ ತಮರ್ கேசவன் தமர் = ಕೇಶವನ ಭಕ್ತರು, ಕೀೞ್ ಮೇಲ್ கீழ் மேல் = ಹಿಂದಿನ ಮುಂದಿನ, ಎಮರ್ எமர் = ನಮ್ಮ, ಏೞೆೞು ஏழ் ஏழு = ಏಳೇಳು, ಪಿಱಪ್ಪುಮ್ பிறப்பும் = ಜನ್ಮಗಳನ್ನು, ಮಾ மா = ಬಲುದೊಡ್ಡ, ಶದಿರ್ சதிர் = ಹಿರಿಮೆಯಾದ, ಇದು ಪೆಱ್ಱು இது பெற்று = ಇದನ್ನು ಪಡೆದು, ನಮ್ಮುಡೈ நம்முடை = ನಮ್ಮ, ವಾೞ್ವು வாழ்வு = ಬಾಳ್ವೆಯನ್ನು, ವಾಯ್ಕಿನ್ಱವಾ வாய்க்கின்றவா = ಶ್ರೇಷ್ಠವಾಗಿ ಬೆಳಗುತ್ತಿರುವದಾಗಿ ಅಲ್ಲವೇ?, ಈಶನ್ ஈசன் = ಸರ್ವೇಶ್ವರನೂ, ಎನ್ ಕರುಮಾಣಿಕ್ಕಮ್ என் கருமாணிக்கம் = (ನಾನು ಅನುಭವಿಸಿ ಆನಂದಿಸಲಿಕ್ಕೆ) ನನ್ನ ಕರಿಯ ಮಾಣಿಕ್ಯದಂತಿರುವನೂ, ಎನ್ ಎನ್ = ನನ್ನ, ಶೆಙ್ಗೋಲಮ್ செம் கோலம் = ಕೆಂಪಗೆ ಸುಂದರವಾಗಿರುವ, ಕಣ್ಣನ್ கண்ணன் = ಕಣ್ಣುಗಳುಳ್ಳವನೂ, ವಿಣ್ಣೋರ್ ನಾಯಗನ್ விண்ணோர் நாயகன் = ಪರಮಪದವಾಸಿಗಳ ಒಡೆಯನೂ, ಎಮ್ಬಿರಾನ್ எம்பிரான் = ನಮ್ಮ ಉಪಕಾರಿಯೂ, ಎಮ್ಮಾನ್ எம்மான் = ನಮ್ಮ ಸ್ವಾಮಿಯೂ ಆದ, ನಾರಾಯಣನಾಲೇ நாராயணனாலே = ನಾರಾಯಣನಿಂದಲೇ.

ನಮ್ಮ ಹಿಂದಿನ ಮುಂದಿನ ಏಳೇಳು ಜನ್ಮಗಳನ್ನು ಕೇಶವನ ಭಕ್ತರು ಎಂಬ ಬಲುದೊಡ್ಡ ಹಿರಿಮೆಯಾದ ಇದನ್ನು ಪಡೆದು ನಮ್ಮ ಬಾಳ್ವೆಯನ್ನು ಶ್ರೇಷ್ಠವಾಗಿ ಬೆಳಗುತ್ತಿರುವದಾಗಿ ಇದನ್ನು ಸರ್ವೇಶ್ವರನೂ, ನನ್ನ ಕರಿಯ

ಮೂಲಕ್ಕಾದಂಥವನೂ, ಕಾಂತಿಸೌಂದರನಾದ ಕಲ್ಯಾಣಗುಣಗಳುಳ್ಳವನೂ ಪರಮ ಪದವಾಸಿಗಳ ಒಡೆಯನೂ, ನಮ್ಮ ಉಪಕಾರಿಯೂ, ನಮ್ಮ ಸ್ವಾಮಿಯೂ (1) ಆದ ನಾರಾಯಣನಂದಲೇ ಅಲ್ಲವೇ?

ಭಗವಂತನನ್ನು ಆಶ್ರಯಿಸಿ, ಭಕ್ತಿ ಮಾಡುವುದರ ಫಲವೇನು ಎಂಬುದನ್ನು ಈ ಪಾಶುರದಲ್ಲಿ ಹೇಳಲಾಗಿದೆ. ಭಕ್ತಿ ಮಾಡುವವನೊಬ್ಬನು ಉದ್ಧಾರಗೊಳ್ಳು ವುದರ ಜೊತೆಗೆ ಆ ಭಕ್ತನ ಬಂಧು ಬಳಗದವರೆಲ್ಲರೂ ಉದ್ಧಾರಗೊಳ್ಳುತ್ತಾರೆ. ಅವನಿಂದಿನ ಏಳು ಮುಂದಿನ ಏಳು ತಲೆಮಾರಿನವರೆಲ್ಲರೂ ಉಜ್ಜೀವನ ಗೊಳ್ಳುತ್ತಾರೆ. ಇದೆಲ್ಲ ಸರ್ವೇಶ್ವರನಾದ ಶ್ರೀಮನ್ನಾರಾಯಣನ ಕೃಪೆ ಮತ್ತು ಔದಾರ್ಯದ ಪರಿಣಾಮವೇ.

"ಕೇಶವನ್ ತಮರ್" — ಎಂದರೆ, "ಕೇಶವನವರು — ಕೇಶವನಿಗೆ ಸೇರಿದ ವರು." ಕೇಶವನ ಪ್ರೀತಿಗೆ ಒಳಗಾದವರು ಅವರು. ಕೇಶವನನ್ನು ಸ್ತುತಿಸಿ, ನುತಿಸಿ, ಪೂಜಿಸಿ. ಅವನ ಕೃಪೆಗೆ ಒಳಗಾದ ಭಕ್ತರು

ಬ್ರಹ್ಮರುದ್ರಾದಿ ದೇವತೆಗಳೆಲ್ಲರೂ ಕೇಶವನ ಭಕ್ತರನ್ನು ಗುರುತಿಸು ವರು, ನಮಿಸುವರು, ಗೌರವಿಸುವರು. ಹೀಗೆ, ಕೇಶವನ ಭಕ್ತರ ಬಾಳ್ವೆ ಸರ್ವೋತ್ತಮವಾದದ್ದು.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನಾದ, ಸುಂದರನಾದ ಆಕ ರ್ಷಕವಾದ ಕಲ್ಯಾಣಗುಣಗಳುಳ್ಳವನಾದ, ಪರಮಪದದ ನಿರ್ವಾಹಕನಾದ ಶ್ರೀಮನ್ನಾರಾಯಣನ ಕೃಪೆಗೆ ನಾನೊಬ್ಬನೇ ಅಲ್ಲ, ನನಗೆ ಸಂಬಂಧಿಸಿ ದವರೆಲ್ಲರೂ, ಎಲ್ಲರೂ ಏಳೇಳು ಜನ್ಮಗಳಲ್ಲೂ ಉದ್ಧಾರಗೊಂಡೆವು. ದೇವಾದಿದೇವತೆಗಳು "ಇವರು ಕೇಶವನ ಭಕ್ತರು" ಎಂದು ನಮ್ಮನ್ನು ಗೌರವಿಸುವಂತಾಗಿದೆ. ಇದೆಂಥ ಮಹೋಪಕಾರ!

2. நாரணன் முழுவேழுலகுக்கும் நாதன் வேதமயன்,
காரணம் கிரிசை கருமமிவை முதல்வனெந்தை,
சீரணங்கமரர் பிறர்பலரும் தொழுதேத்தநின்று,
வாரணத்தை மருப்பொசித்த பிரான் என் மாதவனே.

ನಾರಣನ್ ಮುೞುವೇೞುಲಗುಕ್ಕುಮ್ ನಾದನ್ ವೇದಮಯನ್,
ಕಾರಣಮ್ ಕಿರಿಶೈ ಕರುಮಮಿವೈ ಮುದಲ್ವನೆನ್ದೈ,
ಶೀರಣಙ್ಗಮರರ್ ಪಿಱರ್ ಪಲರುಮ್ ತೊೞುದೇತ್ತನಿನ್ಱು,
ವಾರಣತ್ತೈ ಮರುಪ್ಪೊಶಿತ್ತ ಪಿರಾನ್ ಎನ್ ಮಾದವನೇ.

Garani Srinivasan

ನಾರಣನ್ நாரணன் = ನಾರಾಯಣನೂ, ಮುೞು ಏೞ್ ಉಲಗುಕ್ಕುಮ್ முழு ஏழ் உலகுக்கும் = ಏಳು ಲೋಕಗಳಿಗೆಲ್ಲ ಪ್ರಭುವಾಗಿ, ನಾದನ್ நாதன் = ಒಡೆಯನೂ, ವೇದಮಯನ್ வேதமயன் = ವೇದ ಸ್ವರೂಪನೂ, ಕಾರಣಮ್ காரணம் = ಕಾರಣವೂ, ಕಿರಿಶೈ கிரிசை = ಕ್ರಿಯೆಯೂ, ಕರುಮಮ್ கருமம் = ಅವುಗಳ ಫಲವೂ, ಇವೈ இவை = ಇವು, ಮುದಲ್ವನ್ முதல்வன் = ಆದಿಯೂ, ಎನ್ದೈ எந்தை = ನಮ್ಮ ಸ್ವಾಮಿಯೂ, ಶೀರ್ சீர் = ಸಂಪತ್ತು (ಸೌಭಾಗ್ಯವನ್ನು), ಅಣಙ್ಗು அணங்கு = ಪಡೆದಿರುವ, ಅಮರರ್ அமரர் = (ದೇವತೆ) ನಿತ್ಯಸೂರಿಗಳೂ, ಪಿಱರ್ பிறர் = ಇತರರು, ಪಲರುಮ್ பலரும் = ಅನೇಕರು, ತೊೞುದು தொழுது = ನಮಸ್ಕರಿಸಿ, ಏತ್ತ ஏத்த = ಸ್ತುತಿಸುವಂತೆ, ನಿನ್ಱು நின்று = ಇರುವವನಾ, ವಾರಣತ್ತೈ வாரணத்தை = ಆನೆಯ, ಮರುಪ್ಪು மருப்பு = ಕೋರೆಹಲ್ಲನ್ನು (ದಂತವನ್ನು) ಒಶಿತ್ತ ஒசித்த = ಮುರಿದ, ಪಿರಾನ್ பிரான் = ಸ್ವಾಮಿಯೂ, ಎನ್ ಮಾದವನೇ என் மாதவனே = ನನ್ನ ಮಾಧವನೇ.

ನಾರಾಯಣನೂ, ಏಳುಲೋಕಗಳಿಗೆಲ್ಲ ಪ್ರಭುವಾಗಿ ಒಡೆಯನೂ, ವೇದ ಸ್ವರೂಪನೂ, ಕಾರಣವೂ, ಕಾರ್ಯವೂ, ಅವುಗಳ ಫಲವೂ, ಅವುಗಳ ಆದಿಯೂ, ನಮ್ಮ ಸ್ವಾಮಿಯೂ, ಸೌಭಾಗ್ಯವನ್ನು ಪಡೆದಿರುವ ನಿತ್ಯಸೂರಿಗಳು, ಇತರರು, ಇನ್ನೂ ಅನೇಕರು ನಮಸ್ಕರಿಸಿ ಸ್ತುತಿಸುವಂತೆ ಇರುವವನೂ, ಆನೆಯ ದಂತವನ್ನು ಮುರಿದ ಸ್ವಾಮಿಯೂ, ನನ್ನ ಮಾಧವನೇ. (2)

ಹಿಂದಿನ ಪಾಶುರದಲ್ಲಿ ಶ್ರೀಮನ್ನಾರಾಯಣನನ್ನು ಆಶ್ರಯಿಸಿದ್ದರ ಫಲವೇನು ಎಂಬುದನ್ನು ಹೇಳಲಾಯಿತು. ಹಾಗೆಯೇ, ಪರಮೋಪಕಾರಿಯಾದ ಸ್ವಾಮಿಯ ಒಂದು ಪವಿತ್ರ ನಾಮವಾದ 'ಕೇಶವ' ಎಂಬುದನ್ನೂ ಕುರಿತು ತಿಳಿಸಲಾಯಿತು. ಸುಂದರವಾದ ಕೇಶರಾಶಿಯುಳ್ಳವನೂ, ಕೇಶಿ ಎಂಬ ರಾಕ್ಷಸನನ್ನು ಸಂಹರಿಸಿದವನೂ, ಶ್ರೀಕೃಷ್ಣಾವತಾರಿಯೂ ಆದ ಪರಮೇಶ್ವರನೇ 'ಕೇಶವ' ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

ಈಗ, ಭಗವಂತನ 'ಮಾಧವ' ಎಂಬ ಮತ್ತೊಂದು ಹೆಸರನ್ನು ಕುರಿತು ತಿಳಿಸಲಾಗುತ್ತದೆ. ಶ್ರೀದೇವಿಯ ಪತಿಯಾಗಿ ಸಕಲ ಸೌಭಾಗ್ಯಗಳನ್ನು ನೀಡುವವನಾಗಿರುವವನೇ 'ಮಾಧವ'

ನರಕ ಬಾಧೆಯಿಂದ ಜೀವನನ್ನು ಬಿಡಿಸಿ, ನರಕ ಬಾಧೆಯುಂಟಾಗುವುದರಿಂದ ಅವನನ್ನು ತಪ್ಪಿಸಿ, ಅವನಿಗೆ ಅಮರತ್ವವನ್ನೂ, ಸಕಲ ಸೌಭಾಗ್ಯಗಳನ್ನೆಲ್ಲ ಪರಮಪದವಾಸವನ್ನೂ ನೀಡುವವನು 'ನಾರಾಯಣ'

"ಆನೆಯ ದಂತವನ್ನು ಮುರಿದ ಸ್ವಾಮಿ" – ಇದು ಭಾಗವತದ ಶ್ರೀಕೃಷ್ಣ ವಿಶಾರದ ಬಂದ ಪ್ರಸಂಗ. ಕಡು ಶತ್ರುರಾಜ ಕಂಸನು ಕೃಷ್ಣನನ್ನು ಧನುರ್ಯಾಗದ ನೆಪದಲ್ಲಿ ಮಧುರೆಗೆ ಬರಮಾಡಿಕೊಂಡನು. ಅಲ್ಲಿ ಬಂದಲ್ಲಿ ಬಾಗಿಲಿನಲ್ಲಿ ಅವನನ್ನು ಕೊಲ್ಲಿಸಿ ಬಿಡಬೇಕೆಂದು ಅಣಿ ಮಾಡಿಕೊಂಡಿದ್ದನು. ಮಧುರೆಯ ಹೆಬ್ಬಾಗಿಲಲ್ಲೇ ಕುವಲಯಾಪೀಡವೆಂಬ ಮದ್ದಾನೆಯು ಶ್ರೀಕೃಷ್ಣನ ಎದುರು ನಿಂತುಕೊಂಡಿತು. ಅವನು ಅಲ್ಲಿಗೆ ಬಂದಕೂಡಲೇ, ಅದು ಅವನ ಮೇಲೆ ರಭಸದಿಂದ ನುಗ್ಗಿತು. ಕೂಡಲೇ ಕೃಷ್ಣನು ಅದರ ದಂತವನ್ನೇ ಮುರಿದುಕೊಂಡು, ಅದರಿಂದಲೇ ಆನೆಯನ್ನು ಕೊಂದು ಹಾಕಿದನು. ಭಗವಂತನ ಅಪ್ರತಿಮ ಪರಾಕ್ರಮಕ್ಕೆ ಇದು ನಿದರ್ಶನ.

ಆಳ್ವಾರರು ಹೇಳುತ್ತಾರೆ: ನರಕದಿಂದ ಉದ್ಧರಿಸುವ ಸ್ವಾಮಿಯಾಗಿ, ಏಳು ಲೋಕಗಳಾಗಿ, ಅವುಗಳಲ್ಲಿರುವ ಎಲ್ಲಾ ಚರಾಚರ ವಸ್ತುಗಳಾಗಿ ಇರುವನಾಗಿ, ಎಲ್ಲಾ ವಸ್ತುಗಳಿಗೆ ಕಾರಣ, ಕಾರ್ಯ, ಮತ್ತು ಅದರ ಫಲವೂ ಆಗಿ, ಅವುಗಳಿಗೆ ಆಧಾರನೂ ಆಗಿ, ವೇದಕ್ಕೆ ಗೋಚರನಾಗಿ, ನಿತ್ಯಸೂರಿಗಳು ದೇವಾದಿದೇವತೆಗಳು ಇನ್ನಿತರರು ಎರಗಿ, ಸ್ತುತಿಸುವವನಾಗಿ, ಸಾಟಿಯಿಲ್ಲದ ಪರಾಕ್ರಮಿಯಾಗಿ, ಇರುವ 'ಮಾಧವ' ಎಂಬ ತಿರುನಾಮದ ನಮ್ಮ ದೇವೇಶ್ವರನೇ.

3. மாதவனென்றதே கொண்டு என்னையினியிப்பால் பட்டது,
யாதவங்களும் சேர்கொடேனென்று என்னுள் புகுந்திருந்து,
தீதவம் கெடுக்குமமுதம் செந்தாமரைக்கட் குன்றம்,
கோதவமிலென் கன்னற்கட்டி யெம்மானென் கோவிந்தனே.

ಮಾದವನೆನ್ಱದೇ ಕೊಣ್ಡು ಎನ್ನೈಯಿನಿಯಿಪ್ಪಾಲ್ ಪಟ್ಟದು,
ಯಾದವಙ್ಗಳುಮ್ ಶೇರ್ ಕೊಡೇನೆನ್ಱು ಎನ್ನುಳ್ ಪುಗುನ್ದಿರುನ್ದು,
ತೀದವಮ್ ಕೆಡುಕ್ಕುಮಮುದಮ್ ಶೆನ್ದಾಮರೈಕ್ಕಣ್ ಕುನ್ಱಮ್,
ಕೋದವಮಿಲೆನ್ ಕನ್ನಱ್ಕಟ್ಟಿ ಯೆಮ್ಮಾನೆನ್ ಕೋವಿನ್ದನೇ.

ಮಾದವನ್ ಎನ್ಱದೇ ಕೊಣ್ಡು மாதவன் என்றதே கொண்டு = 'ಮಾಧವಾ' ಎಂಬುದನ್ನು(ನ್ನೇ) ಮುಖ್ಯವಾಗಿಟ್ಟುಕೊಂಡು, ಎನ್ನೈ என்னை = ನನ್ನನ್ನು, ಇನಿ இனி = ಇನ್ನು ಮೇಲೆ, ಇಪ್ಪಾಲ್ ಪಟ್ಟದು இப்பால் பட்டது

ಇದ ಲೋಕಕ್ಕೆ (ಇದ ಜೀವನಕ್ಕೆ) ಸಂಬಂಧಿಸಿದ ಯಾದು யாது = ಯಾವು
ದೊಂದು, அவைகளும் அவைகள் = ಕೆಡಕುಗಳೂ, ಕೇಶಕ್ಕೆ
ಕೇಶ சேர்ந்த கோடேன் = ಕೇಶ ಹೊದೆನು, ಎನ್ ಉಳ் நான்று
= ಎಂದು, [redacted] ಎನ್ ಉಳ್ಳ ಪ್ರಸ್ತು நான் உன புகுந்து = ನನ್ನ
ಒಳಹೊಕ್ಕು, ಇರುನ್ದು இருந்து = ಅಲ್ಲಿಯೇ ಇದ್ದುಕೊಂಡು, ಕೀಕ್ರೋ = ಕ್ರೂ
ರವಾದ, ಶವಮಾ ಕಾಯಂ = ದೇಹಕ್ಲೇಶವನ್ನು, ಕೆಡುಕ್ಕುಮಾ கெடுக்கும்
= ನಾಶಪಡಿಸುವ, ಅಮುದಮಾ ಅಮುதம் = ಅಮೃತಸಮಾನನೂ,
ಶೆಮಾ ಕಾಮರ್ಕ್ಕೆ ಕಣ್ ಶೆಂ தாமரை கண் = ಕೆಂದಾವರೆಯಂತೆ
ಕೆ ಕಣ್ಣುಳ್ಳವನೂ, ಕುನ್ಲಾಮಾ குன்றம் = ಬೆಟ್ಟದಂತೆ ದೃಢವಾ
ದವನೂ, ಕೋದು ಅವಮಾ ಇಲ್ கோது அவம் இல் = ಒಪ್ಪೆ
ಯೂ (ಕಶ್ಮಲವೂ) ಕೆಟ್ಟದ್ದೂ (ನಿರುಪಯೋಗವಾದದ್ದೂ) ಇಲ್ಲದ, ಕನ್ನಲ್
ಆದವನುದ
ಕಟ್ಟಿ கன்னல் கட்டி = ಕಲ್ಲುಸಕ್ಕರೆಯೇ, ಎಮ್ಮಾನ್ எம்மான்
ಣ = ನಮ್ಮ ಸ್ವಾಮಿಯಾದ, ಎನ್ ಕೋವಿನ್ದನೇ ஏன் கோவிந்த
ಹಣೇ = ನನ್ನ ಗೋವಿಂದನೇ

'ಮಾಧವ' ಎಂದದ್ದನ್ನೇ ಮುಖ್ಯವಾಗಿಟ್ಟುಕೊಂಡು, ನನ್ನನ್ನು
ಇನ್ನು ಮೇಲೆ ಇದ ಜೀವನಕ್ಕೆ ಸಂಬಂಧಿಸಿದ ಯಾವುದೊಂದು
ಕೆಡಕೂ ಸೇರದಿ ಎಂದು, ನನ್ನ ಒಳಹೊಕ್ಕು ಅಲ್ಲಿಯೇ
ಇದ್ದುಕೊಂಡು, ಕ್ರೂರವಾದ ದೇಹಕ್ಲೇಶವನ್ನು ನಾಶಪಡಿಸುವ ಅಮೃತ
ಸ್ವಾಭವನಾ, ಕೆಂದಾವರೆಯಂತೆ ಕಣ್ಣುಳ್ಳವನಾ, ಬೆಟ್ಟದಂತೆ
ದೃಢವಾಗಿ, ಕಶ್ಮಲವೂ ನಿರುಪಯೋಗವೂ ಇಲ್ಲದ ಕಲ್ಲುಸಕ್ಕರೆಯಂತ
ವನು ನನ್ನ ಸ್ವಾಮಿಯಾದ ಗೋವಿಂದನೇ. (3)

ಭಗವಂತನ ಒಂದು ನಾಮವನ್ನೇ ಆದರಾ ಒಮ್ಮನದಿಂದ
ಸ್ಮರಿಸುವುದರಲ್ಲಿ ಫಲವ್ಯಂಟೇ? ಎಂಬುದಕ್ಕೆ ಒಂದು ವಿವರಣೆ
ಇದ್ದಂತೆ ಈ [illegible] ಎನ್ನಬಹುದು

ಆಳ್ವಾರರು ಹೇಳುತ್ತಾರೆ: ನಾನು 'ಮಾಧವಾ' ಎಂದು
ಭಗವಂತನನ್ನು ಕರೆದೆ. ಅದನ್ನೇ ಸ್ವಾಮಿಯು ಪ್ರಧಾನವನ್ನಾಗಿ
ಮಾಡಿಕೊಂಡನಲ್ಲ! ಅದರಿಂದ ನನಗೆ ಆದದ್ದನ್ನು ಕಂಡಿರಾ! ಇನ್ನು
ಮುಂದೆ ನನ್ನ ಇದ ಜೀವನದಲ್ಲಿ ಯಾವ ಬಗೆಯ ದುಃಖ ಸಂಕಟ

ಗಳನ್ನೂ ಪಾಪಕಾರ್ಯಗಳನ್ನೂ ಎಣಿಕೆಗೆ ತರಬಾರದೆಂದೇ ಉದ್ದೇಶಿಸಿ
ಕೃಪಾಸಿಂಧುವಾದ ಭಗವಂತನು ನನ್ನ ಅಂತರಂಗವನ್ನು ಪ್ರವೇಶಿಸಿದನು
ಅಲ್ಲಿಂದ ಕದಲದಂತೆ, ನನ್ನನ್ನಗಲದಂತೆ, ಅಲ್ಲಿಯೇ ಶಾಶ್ವತವಾಗಿ
ತಂಗಿದನು. ಇಹಜೀವನದ ಎಲ್ಲ ಬಗೆಯ ಕ್ಲೇಶಗಳನ್ನೂ ಅವನೇ
ಮದ್ದು! ಅವುಗಳನ್ನೆಲ್ಲಾ ನಾಶಪಡಿಸಿ ಬಿಡುವುದಲ್ಲದೆ, ನನಗೆ
ಅಮರತ್ವವನ್ನು ಪರಮಪದವಾಸವನ್ನು ನೀಡುವ ಅಮೃತವೇ
ಅವನಾಗಿದ್ದಾನೆ! ಅವನಿಗೆ ಕೆಂದಾವರೆಯಂತೆ ಹೊಳಪಿನ ಕಣ್ಣುಗಳು
ಬೆಟ್ಟದಂತೆ ದೃಢವಾದ ಬಲವಾದ ಮೈ ಕಲ್ಲುಬಂಡೆಯಂತೆ, ಕಪ್ಪಾಲ
ವೂ ನಿರವಧಿಯುಕ್ತವೂ ಇಲ್ಲದೆ, ಪರಿಶುದ್ಧನೂ ಮಧುರನೂ ಭೋಗ್ಯ
ನೂ ಅವನು ಆನನ್ದಸ್ವಾಮಿಯೂ ಮತ್ತೊಂದು ಹೆಸರು ನಾಮವೆಂದ
ರೆ 'ಗೋವಿಂದ' ಎಂಬುದೇ.

4. கோவிந்தன் குடக்கூத்தன் கோவலனென்றென்றே குனித்து,
தேவும் தன்னையும் பாடியாடத் திருத்தி, என்னைக் கொண்டென்
பாவந்தன்னையும் பாறக்கைத்து எமரேழேழ் பிறப்பும்,
மேவும் தன்மையமாக்கினான் வல்லனெம்பிரான் விட்டுவே.

ಕೋವಿನ್ದನ್ ಕುಡಕ್ಕೂತ್ತನ್ ಕೋವಲನೆನ್ಱೆನ್ಱೇ ಕುನಿತ್ತು,
ತೇವುಮ್ ತನ್ನೈಯುಮ್ ಪಾಡಿಯಾಡತ್ತಿರುತ್ತಿ, ಎನ್ನೈಕ್ಕೊಣ್ಡೆನ್
ಪಾವನ್ದನ್ನೈಯುಮ್ ಪಾಱಕ್ಕೈತ್ತು ಎಮರೇೞೇೞ್ ಪಿಱಪ್ಪುಮ್,
ಮೇವುಮ್ ತನ್ಮೈಯಮಾಕ್ಕಿನಾನ್ ವಲ್ಲನೆಮ್ಬಿರಾನ್ ವಿಟ್ಟುವೇ.

ಕೋವಿನ್ದನ್ கோவிந்தன் = ಗೋವಿಂದ, ಕುಡಕ್ಕೂತ್ತನ್ குடக்கூ
த்தன் = ಕೊಡದ ಕುಣಿತವಾಡುವವನು, ಕೋವಲನ್ கோவலன் = ಗೋ
ವಳನು, ಎನ್ಱು ಎನ್ಱೇ என்று என்றே = ಎಂದೆಂದೇ, ಕುನಿತ್ತು
குனித்து = ತಗ್ಗಿ ನಡೆಯುತ್ತಾ (ನಮ್ರನಾಗಿಯೇ), ತೇವುಮ್ தேவு
ம் = ದೇವತ್ವವನ್ನು, ತನ್ನೈಯುಮ್ தன்னையும் = ತನ್ನ (ಸೌಲಭ್ಯ)
ಗುಣವನ್ನೂ (ಸರಳತೆಯನ್ನು), ಪಾಡಿ பாடி = ಹಾಡಿ (ಕೊಂಡಾಡಿ),
ಆಡ ஆட = ಕುಣಿದಾಡುವಂತೆ, ತಿರುತ್ತಿ திருத்தி = ತಿದ್ದಿ, ಎನ್ನೈ
என்னை = ನನ್ನನ್ನು, ಕೊಣ್ಡು கொண்டு = ಸ್ವೀಕರಿಸಿ, ಎನ್ என் =

ನನ್ನ, ಪಾವಮ್ ತನ್ನೈಯುಮ್ ಪಾವಮುಂ, ತುಣೆಯುಂ = ಪಾಪಗಳನ್ನ
ಪಾಪಿಷ್ಟರು ಪಾರಕ್ಕೈತ್ತು = (ನನ್ನನ್ನು) ಬಿಟ್ಟೋಡುವಂತೆ ಮಾಡಿ,
ಎಮರ್ ಏಮರ್ = ನಮ್ಮವರ, ಏಲ್ಲೋಲು ಏಳ್(ಳು) = ಏಳೇಳು, ಪಿಲ
ಪ್ಪುಮ್ ಪಿರಪ್ಪುಂ = ಜನ್ಮಗಳನ್ನು, ಮೇವುಮ್ ಮೇವುಂ = (ತನ್ನನ್ನು
ಹೊಂದಿಕೊಂಡಿರುವ, ತನ್ಮೈಯುಮ್ ತನ್ಮೈಯುಂ = ಸ್ವಭಾವವುಳ್ಳ
ವರನ್ನಾಗಿ, ಆಕ್ಕಿನಾನ್ ಆಕ್ಕಿ(ನ)ಣ್ = ಉಂಟುಮಾಡಿದವನು, ವಲ್ಲನ್
ವಲ್ಲಣ್ = ಸಮರ್ಥನು, ಎಮ್ಮಾ ಪಿರಾನ್ ಎಂಪಿರಾಣ್ = ನಮ್ಮ
ಸ್ವಾಮಿಯೂ ಆದ, ವಿಷ್ಣುವೇ ವಿಟ್ಟು(ಣು)ವೇ = ವಿಷ್ಣುವೇ.

ಗೋವಿಂದನು, ಕೆಡದ ಕೀರ್ತಿಯವನು, ಗೋವಳನು, ಎಂದೆಂದೂ
ನಮ್ಮನ್ನಾಳುವ ದೇವತ್ವವನ್ನು ತನ್ನ ಸೌಲಭ್ಯ (ಸರಳ) ಗುಣವನ್ನು
ಹಾನಿ, ತೊಂದರೆ ಕೊಡದಂತೆ ತಿದ್ದಿ, ನನ್ನನ್ನು ಸ್ವೀಕರಿಸಿ, ನನ್ನ
ಪಾಪಗಳನ್ನೆಲ್ಲ ಬಿಟ್ಟೋಡುವಂತೆ ಮಾಡಿ, ನಮ್ಮವರ ಏಳೇಳು ಜನ್ಮಗಳ
ಲ್ಲೂ ತನ್ನನ್ನು ಹೊಂದಿಕೊಂಡಿರುವ ಸ್ವಭಾವವುಳ್ಳವರನ್ನಾಗಿ ಮಾಡಿದವನು
ಸಮರ್ಥನೂ ನಮ್ಮ ಸ್ವಾಮಿಯೂ ಆದ ವಿಷ್ಣುವೇ. (4)

"ಗೋವಿಂದ' – ನಂದಗೋಕುಲದ ಗೊಲ್ಲರು ವರ್ಷವರ್ಷವೂ ಮಾ
ಡುತ್ತಿದ್ದ ದೇವೇಂದ್ರ ಪೂಜೆಗೆ ಬದಲಾಗಿ ಗೋವರ್ಧನಗಿರಿಯನ್ನೇ ಪೂಜಿಸು
ದ್ದರಿಂದ ದೇವೇಂದ್ರನಿಗೆ ಕಡುಕೋಪ ಬಂದು, ನಂದಗೋಕುಲವನ್ನೆಲ್ಲಾ
ನಾಶ ಮಾಡಿಬಿಡುವುದಾಗಿ [illegible] ಏಳು ದಿನಗಳ ಕಾಲ ವಿಪರೀತ
ಬಿರುಗಾಳಿ ಮಳೆಯನ್ನು ನಂದಗೋಕುಲದ ಮೇಲೆ ಸುರಿಸಿದನು. ಅವರ
ನಡುವೆ ಶ್ರೀಕೃಷ್ಣನಾಗಿ ಬೆಳೆಯುತ್ತಿದ್ದ ಭಗವಂತನು ಗೋವ
ರ್ಧನಗಿರಿಯನ್ನೇ ಎತ್ತಿ, ಕೊಡೆಯಂತೆ ಹಿಡಿದು, ಅದರಡಿಯಲ್ಲಿ ಗೋವು
ಗಳನ್ನು ಗೋವಳರನ್ನು ಸುಖವಾಗಿ ಸಂರಕ್ಷಿಸಿದನು. ಹೀಗೆ, ಮುಖಭಂ
ಗಗೊಂಡು ನಾಚಿದ ದೇವೇಂದ್ರನು ಧರೆಗಿಳಿದು ಬಂದು, ಬಾಲಕೃಷ್ಣನನ್ನು
ಪೂಜಿಸಿ, 'ಗೋವಿಂದ'ನೆಂದು ಪಟ್ಟಾಭಿಷೇಕ ಮಾಡಿದನು. ಶ್ರೀಕೃಷ್ಣನಿಗೆ
'ಗೋವಿಂದ'ನೆಂದು ಹೆಸರಾದದ್ದು ಹೀಗೆ.

'ಗೋವಳ' – ಗೋವುಗಳನ್ನು ಮೇಯಿಸಿ, ಅಕ್ಕರೆಯಿಂದ ನೋ
ಡಿಕೊಳ್ಳುವವನು. ಸಾಮಾನ್ಯವಾಗಿ ಇವರನ್ನು ಗೊಲ್ಲರು ಎನ್ನುತ್ತಾರೆ.
ನಂದಗೋಕುಲದಲ್ಲಿ ಗೋವಳರ ನಡುವೆ ಬೆಳೆಯುತ್ತಿದ್ದ ಬಾಲಕೃಷ್ಣನಾ
ದರೂ ಇತರ ಗೋವಳ ಬಾಲಕರೊಡನೆ ದನಕರುಗಳ ಹಿಂದೆ ಕಾಡಿಗೆ ಹೋಗಿ
ಅವುಗಳನ್ನು ಮೇಯಿಸಿಕೊಂಡು, ಸುರಕ್ಷಿತವಾಗಿ ಸಂಜೆ ಮನೆಗೆ ತರುತ್ತಿದ್ದನು
ಆದ್ದರಿಂದ 'ಗೋವಳ'–'ಗೋಪಾಲ' ಎಂದು, ಕೃಷ್ಣನಿಗೆ ಹೆಸರಾಯಿತು

'ಕುಡಕ್ಕೂತ್ತು' - ಗೋವಳ್ಳರಲ್ಲಿ ಇದು ಎಂದರೆ 'ಕೊಡದ ಕುಣಿತ'! ಎಂಬುದು ಒಂದು ಬಲು ಸ್ವಾರಸ್ಯವಾದ ಇಷ್ಟವಾದ ಆಟ. ಶುದ್ಧವಾಗಿ ತೊಳೆದು ನೀರು ತುಂಬಿದ ಬಿಂದಿಗೆಗಳನ್ನು ಒಂದರ ಮೇಲೊಂದನ್ನು ಕ್ರಮಕ್ರಮವಾಗಿ ತಲೆಯ ಮೇಲಕ್ಕೆ ಏರಿಸಿ, ನಾನಾ ನಾಟ್ಯಭಂಗಿಗಳನ್ನು ಪ್ರದರ್ಶಿಸುತ್ತಾ ಕುಣಿದಾಡುವ ಅತಿ ಚಮತ್ಕಾರವಾದ ಆಟ ಇದು. ಬಾಲಕೃಷ್ಣನು ಗೋವಳ್ಳರೆಲ್ಲಾ ಕೊಡದ ಕುಣಿತದಲ್ಲಿ ಅತ್ಯಂತ ನಿಪುಣನಾದದ್ದರಿಂದ ಅವನಿಗೆ 'ಕುಡಕ್ಕೂತ್ತನ್ - ಕೊಡದ ಕುಣಿತದವನು' ಎಂದು ಹೆಸರಾಯಿತು.

ಭಗವಂತನು ದೇವಕ್ಕಿ ಎಂದರೆ ಪರತ್ವಗುಣವನ್ನು, ಸೌಲಭ್ಯಗುಣವನ್ನು ಏಕಕಾಲದಲ್ಲೇ ತೋರಿಸಿ ಕೊಟ್ಟದ್ದು, ಜನರನ್ನು ಬೆರಗುಗೊಳಿಸಿದ್ದು, ಮತ್ತು ಅವರನ್ನು ಆಕರ್ಷಿಸಿದ್ದು ಶ್ರೀಕೃಷ್ಣಾವತಾರದಲ್ಲಾಗಿ. ಸೌಲಭ್ಯಗುಣ ಪರತ್ವಗುಣಕ್ಕೆ ಪರಿಪೂರ್ಣವಾಗಿ ವಿರುದ್ಧ. ಗೋವಳನದುವೆ ಗೋವಳ ಬಾಲಕನಂತೆಯೇ ಬೆಳೆಯುವುದು ಎಲ್ಲ ಗೊಲ್ಲರ ಮನೆಗಳಲ್ಲಿ ನಾನಾ ಬಗೆಯ ಚೇಷ್ಟೆಗಳಲ್ಲಿ ತೊಡಗುವುದು, ಗೋವಳಬಾಲಕರ ಜೊತೆಯಲ್ಲಿ ದನಕರುಗಳ ಹಿಂದೆ ಕಾಡಿಗೆ, ಅವುಗಳನ್ನು ಮೇಯಿಸಲು ಹೋಗುವುದು, ಅವರೊಡನೆ ಕಲೆತು ಆಟವಾಡುವುದು ಇತ್ಯಾದಿಯಾಗಿ ನಾನಾ ರೀತಿಯಲ್ಲಿ ಸಾಮಾನ್ಯನರಲ್ಲಿ ಮಾನವಕುಲದವನಂತೆ, ~~ಎಲ್ಲಾ~~ ~~[illegible]~~ ಎಲ್ಲರಿಗೂ ಸುಲಭಸಾಧ್ಯನಾಗಿ, ಎಲ್ಲರೊಡನೆ ಕಲೆತು ಮಲೆತು ಜೀವಿಸುವುದು ಶ್ರೀಕೃಷ್ಣನಾಗಿಯಾದ ಭಗವಂತನು ತೋರಿಸಿದ ಸೌಲಭ್ಯಗುಣ.

ಆಳ್ವಾರರು ಹೇಳುತ್ತಾರೆ: ಭಗವಂತನು 'ಪರ'ನೆನಿಸಿಕೊಂಡವನಾದರೂ, ಅತ್ಯಂತ ಸುಲಭನಾಗಿ, ಎಲ್ಲರೊಡನೆ ಬೆರೆತು ಚೇಷ್ಟೆಗಳನ್ನು ಮಾಡಿ, ನಕ್ಕು, ನಗಿಸಿ, ಅವರನ್ನಾಕರ್ಷಿಸಿ, 'ಗೋವಿಂದ,' 'ಗೋಪಾಲ' ಎಂದು ಮುಂತಾದ ಸಾಮಾನ್ಯವಾದ ಹೆಸರುಗಳಿಂದ ಕರೆಸಿಕೊಂಡು ಕೀರ್ತಿಗೊಂಡವನಲ್ಲವೇ! ಆ ಸ್ವಾಮಿಯು ಸಹಜವಾದ ಸೌಲಭ್ಯಗುಣಗಳನ್ನು ಸ್ಮರಿಸಿ, ಕೊಂಡಾಡಿ, ಮತ್ತೆ ಮರೆತು ಕುಣಿದಾಡಿ, ಆನಂದಿಸುವಂತೆ ನನ್ನ ಜೀವನ ಸ್ವಾತಂತ್ರ್ಯವನ್ನು ತಿದ್ದಿ, ನನ್ನನ್ನು ತನ್ನ ಕಡೆಗೆ ಆಕರ್ಷಿಸಿ ಕೊಂಡನಲ್ಲ! ನನ್ನನ್ನು ತನ್ನ ಪಾದ ಸೇವಕನನ್ನಾಗಿ ಸ್ವೀಕರಿಸಿದನಲ್ಲ! ನನ್ನ ಪಾಪಗಳನ್ನೆಲ್ಲ ತೊಲಗಿಸಿ, ನನ್ನನ್ನು ಪರಿಶುದ್ಧನನ್ನಾಗಿಸಿದನಲ್ಲ! ನನ್ನನ್ನು ಮಾತ್ರವಲ್ಲದೆ, ~~ನನ್ನ~~ ನನಗೆ ಸಂಬಂಧಿಸಿದವರೆಲ್ಲರೂ, ಅವರ ಏಳೇಳು ಜನ್ಮಗಳಲ್ಲೂ ಭಗವಂತನನ್ನು ಆಶ್ರಯಿಸುವಂತೆಯೂ, ಅವನ ಸೇವೆಯಲ್ಲಿ ತೊಡಗಿರುವಂತೆಯೂ ಮಾಡಿದನು! ಇಂಥ ಮಹದುಪಕಾರ ಮಾಡಿದ ನನ್ನ ಸ್ವಾಮಿಗೆ 'ವಿಷ್ಣು' ಎಂದೇ ತಿರುನಾಮ.

Garani Srinivasan

5. விட்டிலங்கு செஞ்சோதித் தாமரை பாதம் கைகள் கண்கள்,
விட்டிலங்கு கருஞ்சுடர் மலையே திருவுடம்பு,
விட்டிலங்கு மதியம்சீர் சங்கு சக்கரம் பரிதி,
விட்டிலங்கு முடியம்மான் மதுசூதனன் தனக்கே.

ವಿಟ್ಟಿಲಙ್ಗು ~~ಶೆಂಜೋದಿ~~ ತ್ತಾಮರೈ ಪಾದಮ್ ಕೈದಳ್ ಕಣ್ಗಳ್
ವಿಟ್ಟಿಲಙ್ಗು ಕರುಂಜುಡರ್ ಮಲೈಯೇ ತಿರುವುಡಮ್ಬು,
ವಿಟ್ಟಿಲಙ್ಗು ಮದಿಯಮ್ ಶೀರ್ ಶಙ್ಗು ಚಕ್ಕರಮ್ ಪರಿದಿ,
ವಿಟ್ಟಿಲಙ್ಗು ಮುಡಿಯಮ್ಮಾನ್ ಮದುಶೂದನನ್ ತನಕ್ಕೇ

ವಿಟ್ಟು விட்டு ಅರಳಿ, ಇಲಙ್ಗು இலங்கு = ಬೆಳಗುವ, ಶೆಮ್ ಶೋದಿ செம் சோதி = (~~ಸುಂದರವಾದ~~) ಕೆಂಪು ಬೆಳಕಿನ (ಕೆಂಪ ಬೆಳಗುವ), ತಾಮರೈ தாமரை = ತಾವರೆ ಹೂವಿನಂತೆ, (ಸುಂದರ ವ್ಯಾಕೋಚವಾದ), ಪಾದಮ್ பாதம் = ಪಾದಗಳು, ಕೈದಳ್ கைகள் = ಕೈಗಳು, ಕಣ್ಗಳ್ கண்கள் = ಕಣ್ಣುಗಳು, ವಿಟ್ಟು விட்டு = ಚಿಮ್ಮುವ, ಇಲಙ್ಗು இலங்கு = ಬೆಳಗುವ, ಮಲೈಯೇ ಕರುಂಜುಡರ್ கருஞ்சுடர் = ನೀಲಿಯ ತೇಜಸ್ಸಿನ, ತಿರುವುಡಮ್ಬು திருவுடம்பு = ಪವಿತ್ರ ಮಲೈಯೇ = ಬೆಟ್ಟವೇ, ವಿಟ್ಟು விட்டு = ಹೊರಚೆಲ್ಲಿ, ಇಲಙ್ಗು இலங்கு = ಹೊಳೆಯುವ, ಮದಿ மதி = ಪೂರ್ಣಚಂದ್ರನ, ಅಮ್ அம் = ಸುಂದರವಾದ, ಶೀರ್ சீர் = ಶ್ರೇಷ್ಠವಾದ, ಶಙ್ಗು சங்கு = ಶಂಖ, ಚಕ್ಕರಮ್ சக்கரம் = ಚಕ್ರಾಯುಧ, ಪರಿದಿ பரிதி = ಸೂರ್ಯನಂತೆ, ವಿಟ್ಟು விட்டு = (ತೇಜಸ್ಸನ್ನು) ಉಕ್ಕಿಸಿ, ಇಲಙ್ಗು இலங்கு = ಬೆಳಗುವ, ಮುಡಿ முடி = ಕಿರೀಟವುಳ್ಳ, ಅಮ್ಮಾನ್ அம்மான் = ಸ್ವಾಮಿಯಾದ, ಮದುಶೂದನನ್ ತನಕ್ಕೇ மதுசூதனன் தனக்கே = ಮಧುಸೂದನನಿಗೇ

ಸ್ವಾಮಿಯಾದ ಮಧುಸೂದನನಿಗೆ ಅರಳಿ ಬೆಳಗುವ ಕೆಂದಾವರೆಯಂತೆ ಪಾದಗಳು, ಕೈಗಳು, ಕಣ್ಣುಗಳು, ~~ಚಿ~~. ಚಿಮ್ಮುವ ನೀಲಿಯ ತೇಜಸ್ಸಿನ ಬೆಟ್ಟವೇ ಎಂಬಂತೆ ಪವಿತ್ರದೇಹ, ನೀಲಿಯ ತೇಜಸ್ಸಿನ ಕಾಂತಿಯನ್ನು ಹೊರಚೆಲ್ಲುವ ಹೊಳೆಯುವ ಚಂದ್ರನಂತೆ ಶ್ರೇಷ್ಠವಾದ ಶಂಖ ಮತ್ತು ಬೆಳಗುವ ಸೂರ್ಯನಂತೆ ಚಕ್ರಾಯುಧ, ಬೆಳಕನ್ನು ಉಕ್ಕಿಸುವ ಬೆಳಗುವ ಕಿರೀಟವು – ಇವೆ.

GaraniSrinivasan

ಆಲ್ವಾರರು ಹೇಳುತ್ತಾರೆ: ಸರ್ವವ್ಯಾಪಿಯಾದ ವಿಷ್ಣುವು ಅದ್ವಿತೀಯ
ವಾದ ದಿವ್ಯತೇಜಸ್ಸಿನಿಂದ ಶೋಭಿಸುವ ದಿವ್ಯಸೌಂದರ್ಯಮೂರ್ತಿ. ಆತ
ನ ಅರಳಿ ಬೆಳಗಾದ ಕೆಂದಾವರೆಯಂತೆ ಸುಂದರವಾ ಕೋಮಲವಾ
ಆಗಿವೆ ಸ್ವಾಮಿಯ ತಿರುವಡಿಗಳು, ಕೈಗಳು ಮತ್ತು ಕಣ್ಣುಗಳು.
ಅಚ್ಚ ನೀಲಿಯ ಪ್ರಭೆಯನ್ನು ಹೊರಚೆಲ್ಲುತ್ತಿರುವ ಇಂದ್ರನೀಲಮಣಿಯ
ಬೆಟ್ಟವೆಂಬಂತೆ ಆಕರ್ಷಕವಾದ ಸ್ವಾಮಿಯ ಮೈ. ಸ್ವಾಮಿಯ
ಕೈಯಲ್ಲಿ ದಿವ್ಯವಾದ ಶಂಖಚಕ್ರಗಳಿವೆ. ಪೂರ್ಣಚಂದ್ರನಂತೆ
ಶುಭ್ರ ತೇಜಸ್ಸಿನಿಂದ ಕೂಡಿ ಮೆರೆಯುವುದು ಪವಿತ್ರವಾದ ಧವಳ
ಶಂಖ. ಮತ್ತು ಸೂರ್ಯನ ಪ್ರಜ್ವಲಿಸುವ ಬಿಂಬದಂತೆ ಹೊಳೆಯು
ತ್ತಿರುವುದು ದಿವ್ಯಚಕ್ರಾಯುಧ. ಸಾಟಿಯಿಲ್ಲದ ಪ್ರಕಾಶದಿಂದ
ಹೊಳೆಹೊಳೆಯುತ್ತಿರುವುದು ಸ್ವಾಮಿಯ ತಲೆಯ ಮೇಲಣ ರತ್ನಕಿರೀಟ.
ಈ ಬಗೆಯ ದೇಹಸೌಂದರ್ಯದಿಂದಲೂ ಶುದ್ಧಿಯಿಂದಲೂ ಕೂಡಿ
ಶೋಭಿಸುತನು 'ಮಧುಸೂದನ' ಎಂಬ ತಿರುನಾಮವುಳ್ಳ
ನಮ್ಮ ಸ್ವಾಮಿಯೇ!

ಮಧು ಎಂಬ ರಾಕ್ಷಸನನ್ನು ಕೊಂದವನಾದ್ದರಿಂದ ಶ್ರೀಕೃಷ್ಣ
ನಿಗೆ 'ಮಧುಸೂದನ' ಎಂಬ ಹೆಸರಾಯಿತು.

6. மதுசூதனை யன்றி மற்றிலேனென்று எத்தாலும் கருமமின்றி,
துதிசூழ்ந்த பாடல்கள் பாடியாட நின்றூழி யூழிதொறும்,
எதிர்சூழல் புக்கெனைத்தோர் பிறப்பும் எனக்கேயருள்கள் செய்ய,
விதிசூழ்ந்ததாலெனக்கேலம்மான் திரிவிக்கிரமனையே.

ಮದುಶೂದನ್ನೈಯನ್ರಿ ಮಟ್ರಿಲೇನೆನ್ರು ಎತ್ತಾಲುಮ್ ಕರುಮಮಿನ್ರಿ,
ತುದಿಶೂಳ್ನ್ದ ಪಾಡಲ್‌ಗಳ್ ಪಾಡಿಯಾಡ ನಿನ್ರೂಳಿಯೂಳಿದೊರುಮ್,
ಎದಿರ್ಶೂಳಲ್ ಪುಕ್ಕೆನೈತ್ತೋರ್ ಪಿರಪ್ಪುಮ್ ಎನಕ್ಕೇಯರುಳ್‌ಗಳ್ ಶೆಯ್ಯ,
ವಿದಿಶೂಳ್ನ್ದದಾಲೆನಕ್ಕೇಲಮ್ಮಾನ್ ತಿರಿವಿಕ್ಕಿರಮನ್ನೈಯೇ.

ಮದುಶೂದನ್ನೈ அன்றி மதுசூதனை அன்றி = ಮಧುಸೂ
ದನನನ್ನಲ್ಲದೆ, ಮಟ್ರು ಇಲೇನ್ மற்று இலேன் = ಬೇರೆಯಾರ
ನ್ನೂ

ಆಶ್ರಯಿಸುವುದಿಲ್ಲ, ಎನ್ಱು ನಾಣ್ಣು = ಎಂದು, ಮತ್ತಾಲುಮ್ ನಾಕ್ಕಾ
ತ್ತುಮ್ = ಬೇರೆಯಾವುದರಿಂದಲೂ, ಕರುಮಮ್ ಕರುಮಂ = ಕಾರ್ಯ
(ಪ್ರಯೋಜನ), ಇನ್ಱಿ ಇಣ್ಣಿ = ಇಲ್ಲದಂತೆ, ಶದಿ ಶೋಲ್
ಸ್ತುತ್ತಿ ಶ್ರೇಷ್ಠ = ಸ್ತುತಿಗಳಿಂದ ಚಿತ್ರೀಕರಿಸಿದ, ಪಾದಲ್‌ಗಳ್ ಪಾಡಲ್
ಕಳ್ = ಪಾದುಗಳನ್ನು (ಪಾಶುರಗಳನ್ನು), ಪಾಡಿ ಪಾಡಿ = ಪಾಡಿ, ಆಡಿ
= ಕುಣಿದಾಡುವಂತೆ. ನಿನ್ಱು ನಿಣ್ಣು = ಇರುತ್ತಾ, ಊಳಿ ಊಳಿ ತೋ
ಮ್ ಊಳಿ ಊಳಿ ತ್ತಾಱುಂ = ಯುಗಯುಗಗಳಲ್ಲಿಯೂ
(ಎಲ್ಲಕಾಲಗಳಲ್ಲಿಯೂ), ಎದಿರ್ ನಾಶಿರ್ ಪ್ರತ್ಯಕ್ಷವಾಗ (ನನ್ನೆದುರಲ್ಲಿ),
ಕೋಯಿಲ್ ಪುಕ್ಕು ಶ್ರೇಷ್ಠ ಪುಕ = ಅವತಾರಗಳನ್ನು ಪ್ರವೇಶಿಸಿ, ಎನ್ನೈಯು
ನಾಟ್ಟು = ನನ್ನ, ಓರ್ ಪಿಱಪ್ಪಿಲುಮ್ ಓರ್ ಪಿಱಪ್ಪುಮ್ = ಒಂದೊಂ
ದು ಜನ್ಮದಲ್ಲೂ, ಎನಕ್ಕೇ ನಾಣಕ್ಕೇ = ನನಗೇ ಯೇ, ಅರುಳ್‌ಗಳ್
ಶೆಯ್ಯ ಅರುಳ್ ಕಳ್ ತಶಯ್ಯ = ಕೃಪೆಮಾಡಲು, ವಿದಿ ವಿಶ್ರೀ =
ಅದೃಷ್ಟವು (ವಿಧಿಯು), ತೋಱನ್ದಾಲ್ ಶ್ರೇಷ್ಠ ತಾಲ್ ಒಬ್ಬೂಗಾ
ಇದ್ದರಿಂದ (ಒಳ್ಳೆದಂತುಮನದ ಸಿದ್ಧರಿಂದ), ಎನಕ್ಕೇಲ್ ನಾಣಕ್ಕೇಸ =
ನನಗೋಸ್ಕರವೇ, ಅಮ್ಮಾನ್ ಅಮ್ಮಾಣ್ = ಸ್ವಾಮಿಯಾದ, ತಿರಿವಿಕ್ಕಿರ
ಮನ್ನೆಯೇ ಶ್ರೀರಿವಿಕ್ಕಿರಮಣಾಯೇ = ತ್ರಿವಿಕ್ರಮನನ್ನೇ,

ಮಧುರದಿ ನನ್ನನಲ್ಲದೆ ಬೇರೆ ಯಾರನ್ನೂ ಆಶ್ರಯಿಸುವುದಿಲ್ಲವೆಂದೂ, ಬೇರೆ ಯಾವ ವಸ್ತುವಿನಿಂದಲೂ ಕೆಲಸ (ಪ್ರಯೋಜನ) ವಿಲ್ಲವೆಂದೂ ಸ್ತುತಿಗಳಿಂದ ಚಿತ್ರೀಕರಿಸಿದ ಪಾದುಗಳನ್ನು (ಪಾಶುರಗಳನ್ನು) ಪಾಡಿ, ನಿಂತು, ಕುಣಿದಾಡುವಂತೆ ಯುಗ ಯುಗಗಳಲ್ಲಿಯೂ (ಎಲ್ಲಕಾಲಗಳಲ್ಲಿಯೂ) ನನ್ನ ಕಣ್ಣೆದುರಲ್ಲಿ ಅವತಾರಗಳಲ್ಲಿ ಪ್ರವೇಶಿಸಿ, ನನ್ನ ಒಂದೊಂದು ಜನ್ಮದಲ್ಲೂ ನನಗೆ ಕೃಪೆಮಾಡಲೆಂದು ಅದೃಷ್ಟವು (ವಿಧಿಯು) ಒಬ್ಬೂಗಾಡ (ಒಳ್ಳೆದಂತುಮನದಿಂದ) ದ್ದರಿಂದ, ನನಗೋಸ್ಕರವೇ ಸ್ವಾಮಿಯಾದ ತ್ರಿವಿಕ್ರಮನನ್ನೇ ನನಗೆ ಒದಗಿಸಿತು.

(6)

ಈ ಪಾಶುರದಲ್ಲಿ ಚೇತನನ ಉದ್ಧಾರವಾಗುವುದು ಹೇಗೆ ಎಂಬುದನ್ನು ಹೇಳಲಾಗಿದೆ ಎನ್ನಬಹುದು: ಚೇತನನಿಗೆ ಲೆಕ್ಕವಿಲ್ಲದಷ್ಟು ಜನ್ಮಗಳು ಬರುವುದುಂಟು. ಜನನ ಮರಣಗಳ ನಡುವೆ ಸಿಕ್ಕಿಬಿದ್ದು ಕೀಳಲು ವ್ಯಥೆ ಬರುವುದಷ್ಟೇ. ಜನನ ಮರಣ ಗಳ ನಡುವೆ ಸಿಕ್ಕಿ ಬಿದ್ದು ಒಂದು ಜನ್ಮದಲ್ಲಿ ಚೇತನನಿಗೆ ಅವನಿಗೆ ವಿಧಿಯುದ್ದಂತೆ. ಯಾವುದೋ ಒಂದು ಜನ್ಮದಲ್ಲಿ ಚೇತನನಿಗೆ ಭಗವಂತನನ್ನು ಆಶ್ರಯಿಸಬೇಕೆಂದೂ ಅದರಿಂದಲೇ ತನಗೆ ಬಿಡುಗಡೆ ಯೆಂದೂ ತಿಳಿವಳಿಕೆಯುಂಟಾಗುತ್ತದೆ. ಈ ತಿಳಿವಳಿಕೆಯನ್ನು, ಭಗವಂತನನ್ನು ಆಶ್ರಯಿಸುವುದಕ್ಕೆ ಅವಕಾಶವನ್ನು ಅನುಕೂಲವನ್ನು ಕಲ್ಪಿಸಿಕೊಡುವುದು ಭಗವತ್ಕೃಪೆಯೇ. ಅತ್ಯಲ್ಪವಾದ ಭಗವತ್ಕೃಪಾ

Garani Srinivasan

ಕಟಾಕ್ಷವು ಚೇತನನ ಮೇಲೆ ಬಿದ್ದರೆ ಸಾಕು. ಚೇತನನಿಗೆ ಭಕ್ತಿಯುಂಟಾಗುತ್ತದೆ. ಅದರಿಂದ ಅವನ ಒಂದೊಂದು ಜನ್ಮವೂ ಉತ್ತಮಗೊಳ್ಳುತ್ತ ಹೋಗುತ್ತದೆ. ಹೀಗೆ ಭಕ್ತನಾಗುತ್ತಾ ಅವನು ಪರಿಶುದ್ಧನಾಗುತ್ತಾನೆ. ಚೇತನನ ಉದ್ಧಾರಕ್ಕೆ ಅನುಕೂಲವಾಗುವಂತೆ, ಅದಕ್ಕೆ ಒತ್ತಾಸೆ ಕೊಡುವಂತೆ, ಭಗವಂತನು ಸದಾ ಅವನ ಕಣ್ಣ ಮುಂದೆಯೇ ಬೇರೆ ಬೇರೆ ಅವತಾರಗಳನ್ನೆತ್ತುತ್ತಾನೆ. ಆಯಾ ಅವತಾರಕ್ಕೆ ತಕ್ಕಂತೆ ತನ್ನ ವಿಶೇಷ ಗುಣ ಸ್ವಭಾವಗಳಿಂದ ತೋರ್ಪಡಿಸುತ್ತಾ, ಚೇತನನ ಭಕ್ತಿಯನ್ನು ಪ್ರಚೋದಿಸಿ, ಅವನನ್ನು ತನ್ನ ಕಡೆಗೆ ಬಿಟ್ಟು ಬಿಡದೆ ಆಕರ್ಷಿಸಿಕೊಳ್ಳುತ್ತಾನೆ ಇದೆಲ್ಲ ಭಕ್ತನ ಉದ್ಧಾರಕ್ಕಾಗಿ ಭಗವಂತನು ತೋರುವ ಕೃಪೆಯೇ! ಭಕ್ತನ ಉದ್ಧಾರಕ್ಕಾಗಿ ಭಗವಂತನನ್ನು ಭಕ್ತನಾದ ಚೇತನನನ್ನು ಬಿಟ್ಟಾಗದಿರುವ ಭಗವಂತನನ್ನು ... ಭಗವತ್ಕೃಪೆಯೆಂಬುದು. ಇದಕ್ಕಾಗಿಯೇ ಭಾಗ್ಯವೇ ಈ ಭಗವತ್ಕೃಪೆಯೆಂಬುದು. ಇದಕ್ಕಾಗಿಯೇ ಭಕ್ತನು ಎಡೆಬಿಡದೆ ಹಾತೊರೆಯುತ್ತಿರಬೇಕು.

ಆಳ್ವಾರರು ಹೇಳುತ್ತಾರೆ: ನನ್ನ ಒಂದೊಂದು ಜನ್ಮದಲ್ಲೂ ಮಧುರನಾದ ವಾಮನ ಭಗವಂತನನ್ನೇ ನಾನು ಆಶ್ರಯಿಸಿದೆ. ಬೇರೆಯಾರಿಂದಲೂ ಯಾವ ಫಲವಿಲ್ಲವೆಂದು ಅರಿತುಕೊಂಡೆ. ಭಗವದ್ಗುಣ ಸ್ವಭಾವ ವೈಭವಗಳಿಂದಲೂ, ಜನ್ಮಸ್ಥಳಗಳನ್ನು ಚೆನ್ನಾಗಿ ಹೊಗಳಿ, ತಿಳಿದು, ಸ್ತೋತ್ರಗಳನ್ನು ರಚಿಸಿ, ಅವುಗಳನ್ನು ನಿಂತು, ಹಾಡಿ, ಆನಂದಿಸಿ ಕುಣಿದಾಡುವುದೇ ನನಗೆ ಮುಖ್ಯವಾಯಿತು. ಇದನ್ನು ನನಗೆ ತಿಳಿವಳಿಕೆ ಕೊಡುವುದಕ್ಕಾಗಿಯೇ ಭಗವಂತನು ನನ್ನ ಒಂದೊಂದು ಜನ್ಮದಲ್ಲೂ ಅವತರಿಸಿ, ನನ್ನ ಕಣ್ಣ ಮುಂದೆ ತನ್ನ ದಿವ್ಯದರ್ಶನ ತಮ್ಮ ಸಂಪತ್ತು ಯನ್ನು ತೋರಿ ನನಗೆ ಮುದಕ್ಕೊಡುತ್ತಿದ್ದಾನೆ. ನನ್ನ ಸೌಭಾಗ್ಯ ಮುದನೊಂದು ಹಾಡಿಸಿತು. ಭಗವಂತನು ನನಗೆ ಪರಿಪೂರ್ಣವಾಗಿ ಕೃಪೆಮಾಡಿ ಲೆಂಬುದೇ ಆರಂಭ. ನನ್ನ ಈ ಸೌಭಾಗ್ಯದ ಫಲವಾಗಿ ತ್ರಿವಿಕ್ರಮಾವತಾರದ ಯಾದ ಸ್ವಾಮಿಯನ್ನು ನಾನು ನನ್ನ ಕಣ್ಣಾರ ಕಂಡು ಆನಂದಿಸುವಂತಾಗಿದೆ.

7. திரிவிக்கிரமன் செந்தாமரைக்கண் எம்மானென் செங்கனிவாய்,
உருவில் பொலிந்த வெள்ளைப் பளிங்கு நிறத்தனன், என்றென்றுள்ளிப்
பரவிப் பணிந்து பல்லூழியூழி நின் பாத பங்கயமே,
மருவித் தொழும் மனமே தந்தாய் வல்லைகாண் என் வாமனனே.

ತಿರುವಿಕ್ಕಿರಮನ್ ಶೆನ್ದಾಮರೈಕ್ಕಣ್ ಎಮ್ಮಾನೆನ್ ಶೆಙ್ಗನಿವಾಯ್,

ಉರುವಿಲ್ ಪ್ಪೊಲನ್ದ ವೆಳ್ಳೈ ಪ್ಪಿಳ್ಳೈನಿ ಅತ್ತನನ್, ಎನ್ಱೂನ್ ಉಳ್ಳಿ
ಪ್ಪರವಿ ಪ್ಪಣಿನ್ದು ಪಲ್ಲೂಳಿಯೂಳಿ ನಿನ್ ಪಾದ ಪಙ್ಗಯಮೇ,
ಮರುವಿ ತ್ತೊಳುಮ್ ಮನಮೇ ತನ್ದಾಯ್ ವಲ್ಲೈ ಕಾಣ್ಬೆನ್ ವಾಮನನೇ

ತಿರಿವಿಕ್ಕಿರಮನ್ திரிவிக்கிரமன் = ತ್ರಿವಿಕ್ರಮಾ, ತಾಮ
ತಾಮರೈ ಕಣ್ಣಾ செந்தாமரைக்கண் = ಕೆಂದಾವರೆಯಂತೆ ಕಣ್ಣು
ಳ್ಳವನೆ, ಎಮ್ಮಾನ್ எம்மான் = ಸ್ವಾಮಿ, ಎನ ಶೆಙ್ಗನಿವಾಯ್
ಕಳುಳ್ಳ, ಎನ್ ಶೆಙ್ಗನಿವಾಯ್ = ನನ್ನ ಕೆಂಪು ಹಣ್ಣಿನಂತೆ (ಮಧುರವಾದ) (ಸೌಂದರ್ಯವಾದ)
ಬಾಯುಳ್ಳವನು, ಉರುವಿಲ್ ಉருவில் = ರೂಪದಲ್ಲಿ ಪೊಲನ್ದ
ವೆಳ್ಳೈ ಪ್ಪಣಿ ಪೊಲಿನ್ದ = ಶೋಭಿಸುವ, ವೆಳ್ಳೈ ಪಣಿಙ್ಗು ವೆಳ್ಳೈ ಪಣಿ
ಙ್ಗು = ಬಿಳಿಯ ಸ್ಫಟಿಕದ, ಅತ್ತನನ್ நிறத்தனன் = ಬಣ್ಣ
ದವನು, ಎನ್ಱು ಎನ್ಱು என்று என்று = ಎಂದು ಬಗೆಬಗೆ
ಯಾಗಿ ಉಳ್ಳಿ உள்ளி = ಚಿಂತಿಸಿ, ಪರವಿ பரவி = ಸ್ತುತಿಸಿ,
ಪಣಿನ್ದು பணிந்து = ನಮಸ್ಕರಿಸಿ, ಪಲ್ ಊಳಿ ಊಳಿ ಪಲ
ಊழி ಊழி = ಅನೇಕಯುಗಗಳು, ನಿನ್ நின் = ನಿನ್ನ, ಪಾದಪಙ್ಗ
ಯಮೇ பாதபங்கயமே = ಪಾದಪಂಕಜವನ್ನೇ, ಮರುವಿ மருவி
= ಆಶ್ರಯಿಸಿ, ತೊಳುಮ್ தொழும் = ಸೇವೆ ಮಾಡುವ,
ಮನಮೇ மனமே = ಮನಸ್ಸನ್ನೇ, ತನ್ದಾಯ್ தந்தாய் = ಉಂಟು
ಮಾಡಿದವನೇ (ಕೊಡುತ್ತಿರುವನೇ), ವಲ್ಲೈ ಕಾಣ್ ವல்லைகாண்
= ಸಮರ್ಥನು ಕಂಡೆಯಾ, ಎನ್ ವಾಮನನೇ என் வாமனனே
= ನನ್ನ ವಾಮನನೇ.

ತ್ರಿವಿಕ್ರಮಾ, ಕೆಂದಾವರೆಯಂತೆ ಕಣ್ಣುಳ್ಳ ನನ್ನ ಸ್ವಾಮೀ, ಕೆಂಪು ಹಣ್ಣಿನಂತೆ (ಆಕರ್ಷಕವಾದ) ಬಾಯುಳ್ಳವನೇ, ರೂಪದಲ್ಲಿ ಶೋಭಿಸುವ ಬಿಳಿಯ ಸ್ಫಟಿಕದ ಬಣ್ಣದವನೇ, ಎಂದು ನಿಂದ ಶೋಭಿಸುವ ಬಿಳಿಯ ಸ್ಫಟಿಕದ ಬಣ್ಣದವನೇ, ಎಂದು ಬಗೆಬಗೆಯಾಗಿ ಚಿಂತಿಸಿ, ಸ್ತುತಿಸಿ, ನಮಸ್ಕರಿಸಿ, ಅನೇಕ ಯುಗಗಳು ನಿನ್ನ ಪಾದ ಪಂಕಜವನ್ನೇ ಆಶ್ರಯಿಸಿ ಸೇವೆ ಮಾಡುವ ಮನಸ್ಸನ್ನುಂಟು ಮಾಡಿದವನೇ, ನನ್ನ ವಾಮನನೇ ನೀನು ಸಮರ್ಥನು ಕಂಡೆಯಾ! (7)

ಹಿಂದಿನ ಪಾಶುರದ ವಿಷಯವೇ ಇಲ್ಲಿಯೂ ಮುಂದುವರಿಯುತ್ತಿದೆ. ಭಗವಂತನ ದಿವ್ಯ ನಾಮಗಳನ್ನು ಅನುಸಂಧಾನ ಮಾಡುವಂತೆಯೂ, ಆ ತಿರುನಾಮಗಳ ವೈಶಿಷ್ಟ್ಯವನ್ನು ಕುರಿತು ಚಿಂತಿಸುವಂತೆಯೂ, ಭಗವದ್ಗುಣ ಸ್ವಭಾವಗಳನ್ನು ಸ್ತುತಿಸುವಂತೆಯೂ ಭಗವಂತನ

Gorani Srinivasan

ತಿರುವಡಿಗಳಿಗೆ ಎರಗಿ ಆಶ್ರಯ ಬೇಡುವಂತೆಯೂ ಮನಸ್ಸುಂಟಾಗು
ವುದು ಭಾಗವತತ್ವದಲ್ಲಿಯುಂಟಲ್ಲವೇ! ಆಳ್ವಾರರು ಈ ವಿಷಯವನ್ನು
ಕೃತಜ್ಞತೆಯಿಂದ ಸ್ಮರಿಸಿ ಹೇಳುತ್ತಾರೆ

ನನ್ನ ವಾಮನನೇ, ನೀನು ಸಮರ್ಥನು ಕಂಡೆಯಾ" — ಎಂಟೇ
ವರ್ಷದ ವಯಸ್ಸಿನವನಾಗಿ, ಅಪ್ರತಿಮ ಮತ್ತು ಅತ್ಯಾಕರ್ಷಣ ತೇಜಿಷ್ಠ
ಯಾಗಿ, ತನ್ನ ಸೌಂದರ್ಯಲಾವಣ್ಯದಿಂದ ಕಂಡವರೆಲ್ಲರನ್ನೂ ಪ್ರಭಾವಿಸಿ
ಆಕರ್ಷಿಸುವಂತೆ, ಬಲಿಚಕ್ರವರ್ತಿಯ ಸಭೆಗೆ ಕುಳ್ಳ ಬ್ರಹ್ಮಚಾರಿಯಾ
ಗಿ ನಡೆದು ಬಂದದ್ದು "ಈ ಬ್ರಹ್ಮಚಾರಿ ಏನು ಕೇಳಿದರೂ ಕೊಡುತ್ತೇನೆ ಇನ್ನೂ
ಮೇಲೆಯೂ ಕೊಡುತ್ತೇನೆ" ಎಂಬ ಮನಸ್ಸನ್ನು ಬಲಿಚಕ್ರವರ್ತಿಯಲ್ಲಿ
ಉಂಟುಮಾಡಿದ್ದು. "ಇವನು ಸಾಕ್ಷಾತ್ ಸರ್ವೇಶ್ವರನೇ! ವಾಮನ
ವಟುವಾಗಿ ಇಲ್ಲಿ ದಯಮಾಡಿಸಿದ್ದಾನೆ" ಎಂಬ ಅರಿವನ್ನು ಶುಕ್ರಾಚಾರ್ಯ
ನಲ್ಲಿ ಉಂಟುಮಾಡಿದ್ದು. ತನ್ನ ಹೆಜ್ಜೆಯಲ್ಲಿ ಮೂರೇ ಮೂರು ಹೆಜ್ಜೆಯ
ನೆಲವನ್ನು ಮಾತ್ರವೇ ಯಾಚಿಸಿ, ತನ್ನ ಸಂತೃಪ್ತಿಯನ್ನು ತೋರಿ,
ಬಲಿಯನ್ನು ಆಶ್ಚರ್ಯಚಕಿತನನ್ನಾಗಿಸಿ, "ಕೊಟ್ಟೆ" ಎನ್ನಿಸಿಕೊಂಡದ್ದು.
ಮಾರುವೇಷದಲ್ಲೇ, ತಾನೆಂಥ ಅದ್ಭುತ ಸಮರ್ಥನೆಂದು ತೋರುವುದು
ಕ್ಷಣ, ವಿರಾಟ್ ಸ್ವರೂಪನಾಗಿ ಬೆಳೆದು ನಿಂತದ್ದು. ಎಲ್ಲ ಲೋಕಗಳನ್ನೂ
ತನ್ನ ಎರಡೇ ಹೆಜ್ಜೆಗಳಿಂದ ವ್ಯಾಪಿಸಿ, (ತುಂಬಿ) ಅಳೆದು ಬಿಟ್ಟದ್ದು.
ಆ ಬಳಿಕ ತನ್ನ (ಮೂರನೆಯ) ಹೆಜ್ಜೆಯನ್ನು, ಕೃಪಾಪೂರ್ಣನಾಗಿ ಬಲಿ
ಚಕ್ರವರ್ತಿಯ ತಲೆಯ ಮೇಲಿರಿಸಿ, ತಾನು ಸಾಟಿಯಿಲ್ಲದ
ಕೊಡುಗೈಯವನು ಎಂಬ ಹೆಮ್ಮೆಯನ್ನು ಅಳಿಸಿ, ಅವನನ್ನುದ್ಧರಿಸಿದ್ದು
ಇವೆಲ್ಲವೂ ವಾಮನನ ಸಾಮರ್ಥ್ಯವೇ ಸರಿ.

ತ್ರಿವಿಕ್ರಮ — ಭಗವಂತನ ಮೂರು ವಿಕ್ರಮಗಳು :- ತನ್ನ ಒಂದು
ಹೆಜ್ಜೆಯನ್ನು ಭೂಮಂಡಲವನ್ನೆಲ್ಲಾ ವ್ಯಾಪಿಸುವಂತೆ ಊರಿಸಿ, ಅದನ್ನು
ಅಳೆದುಕೊಂಡದ್ದು, ಒಂದು. ಎರಡನೆಯ ಹೆಜ್ಜೆಯನ್ನು ಮೇಲಣ ಎಲ್ಲೆಯ
ತನಕಾ ಪ್ರಸರಿಸಿ ಅದರಿಂದ ಎಲ್ಲವನ್ನೂ ಅಳೆದುಕೊಂಡದ್ದು ಎರಡು.
ರಾಕ್ಷಸರಾಜನಾದರೂ ಸಾಟಿಯಿಲ್ಲದ ಕೊಡುಗೈಯವನಾಗಿ, ಭಗವಂತ
ನನ್ನೇ 'ಯಾಚಕ'ನನ್ನಾಗಿ ತನ್ನ ಬಳಿಗೆ ತಂದುಕೊಂಡ ಬಲಿಚಕ್ರವರ್ತಿಗೆ
ತನ್ನ ತಿರುವಡಿಯ ಕೆಳಗೆ ಆಶ್ರಯವನ್ನಿತ್ತು ಉದ್ಧರಿಸಿದ್ದು ಮೂರು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಸಾಟಿಯಿಲ್ಲದ ನಿನ್ನ ಗುಣಗಳನ್ನು
ಸ್ಮರಿಸಿಕೊಳ್ಳುತ್ತಾ, ಅವುಗಳನ್ನೇ ಬಾಯಾರ ಹಾಡುತ್ತಾ, ನಿನ್ನ ದಿವ್ಯತಿರು
ವಡಿಗಳಿಗೆ ಎರಗಿ, ಅವುಗಳ ಸೇವೆಯಲ್ಲಿಯೇ ತೊಡಗಿರಬೇಕೆಂಬ
ಮನಸ್ಸನ್ನು ನನ್ನಲ್ಲಿ ಉಂಟುಮಾಡಿದ್ದೀಯೆ. ಈ ನಿನ್ನ ಸಾಮರ್ಥ್ಯವನ್ನು

ಎಷ್ಟೆಂದು ವರ್ಣಿಸುವುದು! 'ವಾಮನ-ತ್ರಿವಿಕ್ರಮ' ನಾಗಿ ಬಲಿಚಕ್ರವರ್ತಿ
ಯನ್ನು ಉದ್ಧರಿಸಿದ ದಾರಿಯಲ್ಲಿ ನಿನ್ನ ಕಿರುವಡಿಗಳ ಆಶ್ರಯವನ್ನು
ನನಗಿತ್ತು, ನನ್ನನ್ನುದ್ಧರಿಸು

8. வாமனனென் மரதகவண்ணன் தாமரைக்கண்ணினன்
காமனைப்பயந்தாய், என்றென்றுன் கழல் பாடி பணிந்து,
தூமனத்தனாய்ப் பிறவித்துழனிநீங்க, என்னைத்
தீமனங்கெடுத்தாய் உனக்கென் செய்கேனென் சிரீதரனே.

ವಾಮನನೆನ್ ಮರತಗವಣ್ಣನ್ ತಾಮರೈಕ್ಕಣ್ಣಿನನ್
ಕಾಮನೈಪ್ಪಯನ್ದಾಯ್, ಎನ್ರೆನ್ರುನ್ ಕೞಲ್ ಪಾಡಿಯೇ ಪಣಿನ್ದು
ತೂಮನತ್ತನನಾಯ್ ಪ್ಪಿರವಿತ್ತುೞನಿ ನೀಙ್ಗ, ಎನ್ನೈತ್
ತೀಮನಙ್ಗೆಡುತ್ತಾಯ್ ಉನಕ್ಕೆನ್ ಶೆಯ್ಗೇನೆನ್ ಶಿರೀಧರನೇ.

ವಾಮನನ್ வாமனன் = ವಾಮನನೇ ಎನ್ ಮರತಗವಣ್ಣನ್
என் மரதக வண்ணன் = ನನ್ನ ಮರಕತರತ್ನದ ಬಣ್ಣದವನೇ,
ತಾಮರೈಕ್ಕಣ್ಣಿನನ್ தாமரை கண்ணினன் = ತಾವರೆಯ ಕಣ್ಣ
ವನೇ (ಪುಂಡರೀಕಾಕ್ಷನೇ), ಕಾಮನ್ನೈಪ್ಪಯನ್ದಾಯ್ காமனை
பயந்தாய் = ಕಾಮನನ್ನು ಪಡೆದವನೇ, ಎನ್ರು ಎನ್ರು
என்று என்று = ಎಂದು ಬಗೆಬಗೆಯಾಗಿ, ಉನ್
ಕೞಲ್ உன் கழல் = ನಿನ್ನ ಕಿರುವಡಿಗಳನ್ನು, ಪಾಡಿಯೇ பாடி
யே = ಹಾಡುತ್ತಲೇ, ಪಣಿನ್ದು பணிந்து = ನಮಸ್ಕರಿಸಿ, ತೂ தூ
= ಪರಿಶುದ್ಧವಾದ, ಮನತ್ತನನ್ ಆಯ್ மனத்தனன் ஆய் =
ಮನಸ್ಸುಳ್ಳವನಾಗಿ, ಪಿರವಿ ತುೞನಿ பிற
வித்துழனி = ಹುಟ್ಟಿನ ಸಂಕಟವನ್ನು, ನೀಙ್ಗ நீங்க = ನೀಗಿಸು
ವುದಕ್ಕಾಗಿ (ನೀಗಿಸುವಂತೆ), ಎನ್ನೈ என்னை = ನನ್ನ, ತೀಮನಮ್
தீ மனம் = ಕೆಟ್ಟ ಮನಸ್ಸನ್ನು (ಕೆಟ್ಟ ಯೋಚನೆಗಳನ್ನು), ಕೆಡುತ್ತಾಯ್
கெடுத்தாய் = ಕಳೆದವನೇ (ನಾಶಮಾಡಿದವನೇ), ಉನಕ್ಕು
உனக்கு = ನಿನಗೆ, ಎನ್ ಶೆಯ್ಗೇನ್ என் செய்கேன் =
ಏನು (ಪ್ರತಿ) ಮಾಡಬಲ್ಲೆನು, ಎನ್ ಶಿರೀಧರನೇ என் சிரீதரனே
= ನನ್ನ ಶ್ರೀಧರನೇ.

ವಾಮನನೇ, ನನ್ನ ಮರಕತ ರತ್ನದ ಬಣ್ಣದವನೇ, ಪುಂಡರೀಕಾ
ಕ್ಷನೇ, ಕಾಮನನ್ನು ಪಡೆದವನೇ, ಎಂದು, ನನ್ನ ಶ್ರೀಧರನೇ, ಬಗೆ
ಬಗೆಯಾಗಿ ನಿನ್ನ ತಿರುಪತಿಗಳನ್ನು ದಾಟುತ್ತಲೇ (ದಾಟಿಯೇ)
ನಮಸ್ಕರಿಸಿ, ಪರಿಶುದ್ಧವಾದ ಮನಸ್ಸುಳ್ಳವನಾಗಿ, ಹುಟ್ಟಿನ
ಸಂಕಟವನ್ನು ನೀಗಿಸುವಂತೆ ನನ್ನ ಕೆಟ್ಟ ಯೋಚನೆಗಳನ್ನು (೮)
ನಾಶಪಡಿಸಿದವನೇ, ನಿನಗೆ ನಾನೇನು ಪ್ರತಿ ಮಾಡಬಲ್ಲೆ?

ಭಗವದ್ಗುಣಾನುಭವದಿಂದ, ಅವನ ನಾಮಸ್ಮರಣೆಯಿಂದ ಆಗುವ
ಮುಖ್ಯ ಪರಿಣಾಮಗಳನ್ನು ಇಲ್ಲಿ ಹೇಳಲಾಗಿದೆ: ಚಂಚಲವಾದ ಮನಸ್ಸಿ
ನಲ್ಲಿ ಮೂಡಿಬರುವ ನಾನಾಬಗೆಯ ಕೆಟ್ಟ ಯೋಚನೆಗಳನ್ನು ಅದು ನೀಗಿಸು
ವುದು. ಅಂಥ ಯೋಚನೆಗಳಿಗೆ ಎಡೆಯಿಲ್ಲದಂತೆ ಮನಸ್ಸನ್ನು ಪರಿಶುದ್ಧಗೊ
ಳಿಸುವುದು. ಈ ಬಗೆಯ ಎಡೆಬಿಡದ ಚಿಂತನೆಯಿಂದ ಹುಟ್ಟು-ಸಾವುಗಳ ಪುನರಾವರ್ತನೆ
ಯ ಸಂಕಟದಿಂದ ಬಿಡುಗಡೆ ಹೊಂದುವುದು. ಇವೆಲ್ಲವು ಮಹದುಪಕಾರಗಳೇ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಶ್ರೀಧರನೇ, ~~ನನ್ನ~~ ಪವಿತ್ರವಾದ
ನಿನ್ನ ತಿರುನಾಮಗಳನ್ನು ದಾಟುತ್ತ, ಅನುಭವಿಸುತ್ತಾ, ನಿನ್ನ ತಿರುಪತಿಗಳಿ
ಗೆ ಎರಗುತ್ತಾ ಬಂದದ್ದರ ಫಲವಾಗಿ ನೀನು ನನ್ನ ಮನಸ್ಸಿನಲ್ಲಿ ಮೂಡಿ
ಬರುವ ಕೆಟ್ಟ ಯೋಚನೆಗಳನ್ನೆಲ್ಲ ಕಳಚಿಸಿದೆ. ನನ್ನ ಮನಸ್ಸನ್ನು
ಪರಿಶುದ್ಧಗೊಳಿಸಿದೆ. ಅಲ್ಲದೆ, ನನ್ನನ್ನು ಪುನರ್ಜನ್ಮದ ಸಂಕಟದಿಂದ
ಪಾರುಮಾಡಿದೆ. ಇದೆಲ್ಲ ನಿನ್ನ ಮಹದುಪಕಾರವೇ. ಇದಕ್ಕೆ ಪ್ರತಿಯಾಗಿ
ನಿನಗೆ ನಾನೇನನ್ನು ಕೊಡಬಲ್ಲೆ?

ಭಗವಂತನೆಸಗಿದ ಮಹದುಪಕಾರಕ್ಕೆ ಪ್ರತಿಯಾಗಿ, ಇನ್ನಷ್ಟು
ದೀನಭಾವನೆಯಿಂದ, ನಮ್ರತೆಯಿಂದ, ಕೃತಜ್ಞತೆಯಿಂದ ಭಗವಂತನ ತಿರುಪತಿಗಳ ಸೇವೆ
ಯಲ್ಲಿ ತೊಡಗುವುದು ಮಾತ್ರವಲ್ಲದೆ, ಬೇರೇನನ್ನು ಮಾಡಲು ಸಾಧ್ಯ?

9. சிரீதரன் செய்ய தாமரைக் கண்ணன் என்றென் றிராப்பகல் வாய்
வெரீஇ, அலமந்து கண்கள் நீர்மல்கி வெவ்வுயிர்த்துயிர்த்து,
மரீஇய தீவினை மாள வின்பம்வளர வைகல் வைகல்
இரீஇ, உன்னை யென்னுள் வைத்தனை யென்னிருடீகேசனே.

ಶಿರೀದರನ್ ಶೆಯ್ಯ ತಾಮರೈಕ್ಕಣ್ಣನ್ ಎನ್ರೆನ್ರಿರಾಪ್ಪಗಲ್ ವಾಯ್
ವೆರೀಇ, ಅಲಮನ್ದು ಕಣ್‌ಗಳ್ ನೀರ್. ಮಲ್‌ಗಿ ವೆವ್ವುಯಿರ್ತ್ತುಯಿರ್ತ್ತು,

ಮರೀಇಯ ತೀವಿನೈ ಮಾಳ ಇನ್ಬಮ್ ವಳರ ವೈಗಲ್ ವೈಗಲ್
ಇರೀಇ, ಉನ್ನೈಯೆನ್ನುಳ್ ವೈತ್ತನೈಯೆನ್ನಿರುಡೀಕೇಶನೇ.

ಶಿರೀದರನ್ சிரீதரன் ಶ್ರೀಧರನೇ, ಶೆಯ್ಯ ತಾಮರೈ ಕಣ್ಣನ್ செய்ய தாமரை கண்ணண் = ಕೆಂದಾವರೆಯಂತೆ ಕಣ್ಣುಗಳುಳ್ಳವನೇ, ಎನ್ರು ಎನ್ರು என்று என்று = ಎನ್ನುತ್ತ ಎನ್ನುತ್ತಾ ಇರಾ ಪಗಲ್ இராபகல் = ರಾತ್ರಿ ಹಗಲೂ, ವಾಯ್ ವೆರೀಇ வாய் வெரீஇ = ಬಾಯಿಂದ ಒದರುತ್ತಲೇ, ಅಲಮನ್ದು அலமந்து = ವ್ಯಥೆಪಟ್ಟು, ಕಣ್ಗಳ್ ನೀರ್ ಮಲ್ಗಿ கண்கள் நீர்மல்கி = ಕಣ್ಣುಗಳಲ್ಲಿ ನೀರು ತುಂಬಿ, ವೆಮ್ ಉಯಿರ್ತ್ತು ಉಯಿರ್ತ್ತು வெம் உயிர்த்து உயிர்த்து = ಬಿಸಿ ಉಸಿರು ಬಿಡುತ್ತ, ಮರೀಇಯ மரீஇய = ಕೂಡಿಕೊಂಡಿರುವ, ತೀವಿನೈಗಳ್ ಮಾಳ தீவினைகள் மாள = ಕ್ರೂರ ಪಾಪಗಳು ನಾಶವಾಗುವಂತೆಯೂ, ಇನ್ಬಮ್ ವಳರ இன்பம் வளர = ಭಕ್ತಿಯು (ಆನಂದವು) ಬೆಳೆಯುವಂತೆಯೂ, ವೈಗಲ್ ವೈಗಲ್ வைகல் வைகல் = ಕ್ಷಣಕ್ಷಣಕ್ಕೂ, ಉನ್ನೈ உன்னை = ನಿನ್ನನ್ನು, ಎನ್ನುಳ್ என்னுள் = ನನ್ನಲ್ಲಿ, ಇರೀಇ ವೈತ್ತನೈ இரீஇ வைத்தனை = ಇಟ್ಟುಕೊಂಡವನೇ, ಎನ್ ಇರುಡೀಕೇಶನೇ என் இருடீகேசனே = ನನ್ನ ಹೃಷೀಕೇಶನೇ.

ಶ್ರೀಧರನೇ! ಕೆಂದಾವರೆಯಂತೆ ಕಣ್ಣುಳ್ಳವನೇ, ಎನ್ನುತ್ತ ಎನ್ನುತ್ತ, ರಾತ್ರಿ ಹಗಲೂ ಬಾಯಿಂದ ಒದರುತ್ತ, ವ್ಯಥೆಪಟ್ಟು (ದುಃಖಿಸುತ್ತಾ), ಕಣ್ಣುಗಳಲ್ಲಿ ನೀರು ತುಂಬಿ, ಬಿಸಿ ಉಸಿರು ಬಿಡುತ್ತ, ಕೂಡಿಕೊಂಡಿರುವ ಕ್ರೂರ ಪಾಪಗಳು ನಾಶವಾಗುವಂತೆಯೂ ಭಕ್ತಿಯು (ಆನಂದವು) ಬೆಳೆಯುವಂತೆಯೂ, ಕ್ಷಣಕ್ಷಣಕ್ಕೂ ನನ್ನಲ್ಲಿ ನಿನ್ನನ್ನು ಇಟ್ಟುಕೊಂಡವನೇ, ನನ್ನ ಹೃಷೀಕೇಶನೇ. (9)

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಹೃಷೀಕೇಶನೇ. ನಾನು ಮಾಡಿದ್ದು ಅತಿಸಾಮಾನ್ಯವಾದದ್ದೇ ಅಲ್ಲವೇ? ನಿನ್ನ ತಿರುನಾಮಗಳನ್ನು, ಶ್ರೀಧರ, ಪುಂಡರೀಕಾಕ್ಷ, ಎಂದು ವಯಂತಾ, ಎಡೆಬಿಡದೆ ಉಚ್ಚರಿಸುತ್ತಲೇ ಬಂದೆ. ನನ್ನ ಕಣ್ಣುಗಳಲ್ಲಿ ನೀರು ತುಂಬಿತು. ನಿನ್ನ ದರ್ಶನವಾಗಲಿಲ್ಲವೆಂದು ವ್ಯಥೆಪಟ್ಟಾಯಿತು. ದುಃಖಿಸುತ್ತಾ ನಿಟ್ಟುಸಿರು ಬಿಡುತ್ತಿದ್ದೆ. ಇಂಥ ಪರಿಸ್ಥಿತಿಯಲ್ಲಿ ನೀನು ನನಗೆ ಕೃಪೆತೋರಿದೆಯಲ್ಲ! ಕ್ಷಣಕ್ಷಣಕ್ಕೂ ನನ್ನಲ್ಲಿ ಭಕ್ತಿ ಬೆಳೆಯಲೆಂದು, ನನ್ನಲ್ಲಿ ಕೂಡಿಕೊಂಡು ಬಂದಿರುವ ಪಾಪರಾಶಿಯೆಲ್ಲವೂ ನಾಶವಾಗಿ ಹೋಗಲೆಂದು, ನನಗೆ ಆನಂದ ಹೆಚ್ಚಲೆಂದು, ನೀನೇ ಬಂದು ನನ್ನಲ್ಲಿ

ನೆಲಸಿದೆಯಲ್ಲ! ನಿನ್ನ ಮಹದಾಕಾರವನ್ನು ಹೇಗೆ ವರ್ಣಿಸಲಿ? ಹೇಗೆ ಸ್ತುತಿ ಮಾಡಲಿ?

'ಹೃಷೀಕ' ಎಂದರೆ ಇಂದ್ರಿಯಗಳು. ಅವುಗಳಿಗೆ ಒಡೆಯನಾಗಿ, ನಿಯಾಮಕನಾಗಿರುವವನು ಹೃಷೀಕೇಶ - ಭಗವಂತ

10. இருடீகேசனம்பிரான் இலங்கையரக்கர்
குலம்,
முருடுதீர்த்தபிரான் எம்மானமரர்பெம்மானைன்
றென்று,
தெருடியாகில் நெஞ்சே வணங்கு திண்ண
மறியறிந்து,
மருடியேலும் விடேல் கண்டாய் நம்பி பற்ப
நாபனையே

ಇರುಡೀಕೇಶನೆಮ್ಬಿರಾನ್ ಇಲಙ್ಗೈಯರಕ್ಕರ್ ಕುಲಮ್,
ಮುರುಡು ತೀರ್ತ್ತ ಪಿರಾನ್ ಎಮ್ಮಾನಮರರ್ ಪೆಮ್ಮಾನೆನ್ಱೆನ್ಱು,
ತೆರುಡಿಯಾಗಿಲ್ ನೆಞ್ಜೇ ವಣಙ್ಗು ತಿಣ್ಣಮಱಿಯಱಿನ್ದು,
ಮರುಡಿಯೇಲುಮ್ ವಿಡೇಲ್ ಕಣ್ಡಾಯ್ ನಮ್ಬಿ ಪಱ್ಪನಾಬನೈಯೇ

ಇರುಡೀಕೇಶನ್ இருடீகேசன் = ಹೃಷೀಕೇಶಾ, ಎಮ್ಬಿರಾನ್ எம்பிரான் = ನನ್ನ ಸ್ವಾಮಿಯೇ, ಇಲಙ್ಗೈ ಅರಕ್ಕರ್ ಕುಲಮ್ இலங்கை அரக்கர் குலம் = ಲಂಕೆಯ ರಾಕ್ಷಸರ ಕುಲದ, ಮುರುಡು முருடு = ಒರಟುತನವನ್ನು (ದಬ್ಬಾಳಿಕತನವನ್ನು), ತೀರ್ತ್ತ தீர்த்த = ತೀರಿಸಿದ, ಪಿರಾನ್ பிரான் = ಸ್ವಾಮಿಯೇ, ಎಮ್ಮಾನ್ எம்மான் = ನಮ್ಮ ಒಡೆಯನೇ, ಅಮರರ್ ಪೆಮ್ಮಾನ್ அமரர்பெம்மான் = ನಿತ್ಯಸೂರಿಗಳ (ಅಮರರ) ಒಡೆಯನೇ, ಎನ್ಱು ಎನ್ಱು என்று என்று = ಎಂದು ಎಂದು, ತೆರುಡಿ ಆಗಿಲ್ தெருடி ஆகில் = ಅರಿಯುವೆಯಾದರೆ, ನೆಞ್ಜೇ நெஞ்சே = ಮನಸ್ಸೇ, ವಣಙ್ಗು வணங்கு = ನಮಸ್ಕರಿಸು, ತಿಣ್ಣಮ್ திண்ணம் = ನಿಶ್ಚಯವನ್ನು, ಅಱಿ அறி = ಅರಿತುಕೋ, ~~ಅಱಿ~~ ಅಱಿನ್ದು அறிந்து = ಅರಿತುಕೊಂಡವನಾಗಿ, ಮರುಡಿ மருடி = ಮತ್ತೆ, ಏಲುಮ್ ஏலும் = ಭಕ್ತಿ ಮಾಡುವುದನ್ನು, ವಿಡೇಲ್ ಕಣ್ಡಾಯ್ விடேல் கண்டாய் = ಬಿಡಬೇಡ ಕಂಡೆಯಾ, ನಮ್ಬಿ நம்பி = ಸರ್ವಶ್ರೇಷ್ಠನಾದ, ಪಱ್ಪನಾಬನ್ನೈಯೇ பற்பநாபனையே = ಪದ್ಮನಾಭನನ್ನೇ

ಹೃಷೀಕೇಶಾ, ನನ್ನೊಡೆಯಾ, ಲಂಕೆಯ ರಾಕ್ಷಸರ ಕುಲದ ದಬ್ಬಾ-

ಮಾಂಗಲವನ್ನು ಕಲಿಸಿದ ಸ್ವಾಮಿಯೇ ನಮ್ಮ ಸ್ವಾಮಿಯೇ, ಅಮರರ (ನಿತ್ಯಸೂರಿಗಳ) ಒಡೆಯನೇ ಎಂದು ಮುಂಚೆ ಅರಿಯುವೆಯಾದರೆ, ಮನಸ್ಸೇ, ನಮಸ್ಕರಿಸು ದಾಸ್ಯವನ್ನು (ನಿತ್ಯವನ್ನು) ಅರಿತುಕೋ. ಅರಿತುಕೊಂಡವ ನಾಗಿ, ನಮ್ಮ ಸರ್ವೇಶ್ವರನಾದ ಪದ್ಮನಾಭನನ್ನೇ ಮುಕ್ತ (ಆಶ್ರಯಿಸಿ) ಭಕ್ತಿ ಮಾಡುವುದನ್ನು ಬಿಡಬೇಡ ಕಂಡೆಯಾ. (10)

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಭಗವಂತನನ್ನು ಕುರಿತು, ಅವನ ಕೃಪೆಯನ್ನು ಔದಾರ್ಯವನ್ನು ಸಾಮರ್ಥ್ಯವನ್ನು (ಕುರಿತು) ತಿಳಿ. ಅವನ ತಿರುನಾಮಗಳನ್ನು ಅನುಸಂಧಾನ ಮಾಡುತ್ತಾ ಅವುಗಳನ್ನು ಕುರಿತು ನಿಶ್ಚಲವಾಗಿ ಅಂಟಿಕೋ. ನಮ್ಮ ಒಡೆಯನಾಗಿ, ಇಂದ್ರಿಯಗಳಿಗೆ ಒಡೆಯನಾಗಿ, ಅವುಗಳ ನಿವಾರಕನಾಗಿ, ಅಮರರಾದ ನಿತ್ಯಸೂರಿಗಳ ಒಡೆಯನಾಗಿ ಸ್ವಾಮಿ ಇದ್ದಾನೆ. ಅತ್ಯಂತ ದಟವಾಗಿಯೂ ಲಂಕೆಯ ರಾಕ್ಷಸರ ಕುಲದ ಒಡೆಯನಾದ ರಾವಣಾಸುರನನ್ನು ಕೆಡೆಬಿಡಲಿಲ್ಲವೇ? ಇಂಥ ಭಗವಂತನನ್ನು ಅರಿತುಕೊಳ್ಳುವುದರಿಂದ, ಅವನನ್ನು ಬಿಡದೆ ಆಶ್ರಯಿಸುವುದರಿಂದ, ದೃಢವಾಗಿ ಭಕ್ತಿ ಮಾಡುವುದರಿಂದ, ಸ್ವಾಮಿಯು ನಮಗೆ ಅಮರತ್ವವನ್ನು ಕೃಪೆಮಾಡುವನು. ಆದ್ದರಿಂದ ಮನಸ್ಸೇ, ಸರ್ವೇಶ್ವರನಾದ ಪದ್ಮನಾಭನಾದ ಆ ಭಗವಂತನಿಗೆ ನಮಸ್ಕರಿಸು. ಅವನನ್ನಾಶ್ರಯಿಸು. ಬಿಡದೆ ಭಕ್ತಿಮಾಡು. ನೀನು ಉದ್ಧಾರಗೊಳ್ಳುವೆ.

ಪದ್ಮನಾಭ - ಭಗವಂತನ ನಾಭಿಯಲ್ಲಿ ಕಮಲವು ಉದ್ಭವಿಸಿ, ಚತುರ್ಮುಖನನ್ನು ಪಡೆಯಿತು. ಆದ್ದರಿಂದ. (ನಾಭಿಯಲ್ಲಿ ಕಮಲವುಳ್ಳವನಾದ್ದರಿಂದ) ಅವನು ಪದ್ಮನಾಭ.

11. பற்பநாபனுயர்வறவுயரும் பெருந்திறலோன்,
எற்பரனென்னையாக்கிக்கொண்டு எனக்கே
தன்னைத்தந்த
கற்பகம், என்னமுதம் கார்முகில் போலும்
வேங்கடநல்
வெற்பன், விசும்போர் பிரான் எந்தை
தாமோதரனே.

ಪಱ್ಪನಾಬನುಯರ್ವಱವುಯರುಮ್ ಪೆರುನ್ದಿಱಲೋನ್,
ಎಱ್ಪರನೆನ್ನೈಯಾಕ್ಕಿಕ್ಕೊಣ್ಡು ಎನಕ್ಕೇ ತನ್ನೈತ್ತನ್ದ
ಕಱ್ಪಹಮ್, ಎನ್ನಮುದಮ್ ಕಾರ್ಮುಹಿಲ್ ಪೋಲುಮ್ ವೇಙ್ಗಡನಲ್
ವೆಱ್ಪನ್, ವಿಸುಮ್ಬೋರ್ ಪಿರಾನ್ ಎನ್ದೈ ದಾಮೋದರನೇ

ಪಱ್ಪನಾಬನ್ பற்பநாபன் = ಪದ್ಮನಾಭನಾಗಿ, ಉಯರ್ವು உயர்வு = ಕನಿಂತಲೂ ಹೆಚ್ಚಾಗಿ, அற = ಇಲ್ಲದಂತೆ, ಉಯರುಮ್ உயரும் = ಹಿರಿಮೆಯನ್ನು (ಔನ್ನತ್ಯವನ್ನು), ಪೆರು

Garani Srinivasan

பெரு = ಹೆಚ್ಚಿನ, ~~ತಿಱಲೋನ್~~ திறலோன் = ಸಾಮರ್ಥ್ಯವುಳ್ಳವನು,
ಎಱ್ಪರನ್ எற்பரன் = ನನ್ನ ಪರನು, (ನನ್ನ ಕಡೆಯವನು), ಎನ್ನೈ
என்னை = ನನ್ನನ್ನು, ಆಕ್ಕಿಕ್ಕೊಣ್ಡು ஆக்கிக்கொண்டு = ಅಂಗೀಕರಿ
ಎನಕ್ಕೇ எனக்கே = ನನಗೋಸ್ಕರ, ತನ್ನೈ தன்னை = ತನ್ನನ್ನು,
ತನ್ದ தந்த = ಒಪ್ಪಿಸಿಕೊಂಡ, ಕಱ್ಪಗಮ್ கற்பகம் = ಕಲ್ಪ
ವೃಕ್ಷದಂಥವನು, ಎನ್ ಅಮುದಮ್ என் அமுதம் = ನನ್ನ ಅಮೃ
ತವಾದವನು, ಕಾರ್ಮುಗಿಲ್ ಪೋಲುಮ್ கார்முகில் போலும்
= ಕಾರ್ಮುಗಿಲಿನಂಥವನು, ವೇಙ್ಕಡಮ್ ನಲ್ ವೆಱ್ಪನ್ வேங்
கடம் நல் வெற்பன் = ತಿರುವೇಂಕಟವೆಂಬ ಉತ್ತಮವಾದ ಬೆಟ್ಟ
ದಲ್ಲಿ ನೆಲಸಿರುವವನು, ವಿಶುಮ್ಬೋರ್ ಪಿರಾನ್ விசும்போர்
பிரான் = ನಿತ್ಯಸೂರಿಗಳ ಒಡೆಯನು, ಎನ್ದೈ எந்தை =
ನನ್ನ ಸ್ವಾಮಿಯೂ ಆಗಿರುವ, ತಾಮೋದರನೇ தாமோதரனே =
ದಾಮೋದರನೇ.

ಪದ್ಮನಾಭನಾಗಿ, ತನಗಿಂತಲೂ ಹೆಚ್ಚಾಗಿ ಇಲ್ಲದಂಥ ಸೌಶೀಲ್ಯವನ್ನೂ ಉಳ್ಳವನು, ಬಲು ಹೆಚ್ಚಿನ ಸಾಮರ್ಥ್ಯವುಳ್ಳವನು, ನನ್ನ ಕಡೆಯವನಾಗಿ ನನ್ನನ್ನು ಅಂಗೀಕರಿಸಿ (ತನ್ನವನನ್ನಾಗಿ ಮಾಡಿಕೊಂಡು), ತನ್ನನ್ನೇ ನನಗೆ ಒಪ್ಪಿಸಿಕೊಂಡ ಕಲ್ಪವೃಕ್ಷವಾದವನು, ನನ್ನ ಅಮೃತವಾದವನು, ಕಾರ್ಮುಗಿಲಿನಂಥವನು, ತಿರುವೇಂಕಟವೆಂಬ ಶ್ರೇಷ್ಠವಾದ ಬೆಟ್ಟದಲ್ಲಿ ನೆಲಸಿರುವವನು, ನಿತ್ಯಸೂರಿಗಳ ಒಡೆಯನು, ನನ್ನ ಸ್ವಾಮಿಯೂ ಆಗಿರುವ ದಾಮೋದರನೇ. (11)

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಭಗವಂತನ ಹಿರಿಮೆಯನ್ನು ಸರಿಯಾಗಿ ಅರಿತುಕೋ. ಸೃಷ್ಟಿಕರ್ತನಾಗಿರುವ ಚತುರ್ಮುಖ ಬ್ರಹ್ಮನನ್ನೇ ತನ್ನ ನಾಭಿಕಮಲದಲ್ಲಿ ಸ್ವಾಮಿಯು ಪಡೆದಿದ್ದಾನೆ. ಸೌಶೀಲ್ಯದಲ್ಲಿ ಅವನಿಗಿಂತಲೂ ಹೆಚ್ಚಿನವರಾಗಲಿ ಹೆಚ್ಚಿನದಾಗಲಿ ಇಲ್ಲವೇ ಇಲ್ಲ. ಅವನ ಸಾಮರ್ಥ್ಯಕ್ಕೋ ಸಾಟಿಯಿಲ್ಲದ್ದು. ಸರ್ವೇಶ್ವರನೂ ಸರ್ವಶಕ್ತನೂ ಆಗಿರುವ ಭಗವಂತನು ನನಗೆ ಕೃಪೆಮಾಡಿದ್ದಾನೆ. ನನ್ನನ್ನು ತನ್ನವನನ್ನಾಗಿ ಮಾಡಿಕೊಂಡಿದ್ದಾನೆ. ಅಲ್ಲದೆ ತನ್ನನ್ನೇ ನನಗೆ ಒಪ್ಪಿಸಿಕೊಂಡಿದ್ದಾನೆ. ಕಲ್ಪವೃಕ್ಷದ ಹಾಗೆ ನನ್ನ ಎಲ್ಲ ಕೋರಿಕೆಗಳನ್ನೂ ಈಡೇರಿಸುತ್ತಾನೆ. ನನಗೆ ಅಮರತ್ವವನ್ನು ದಯೆ ನೀಡುತ್ತಾನೆ. ಕಾರ್ಮುಗಿಲ

ಹಾಗೆ ಅತ್ಯಾಕರ್ಷಕನಾಗಿ ದಾಮೋದರನಾಗಿಯೂ ಇದ್ದಾನೆ. ತಿರುವೇಂಕಟ
ಗಿರಿಯಲ್ಲಿ ನೆಲಸಿ, ನಿತ್ಯಸೂರಿಗಳಿಗೂ, ನಮಗೂ ಒಡೆಯನಾಗಿದ್ದಾನೆ
ದಾಮೋದರನೆಂಬ ತಿರುನಾಮದಿಂದ ಶೋಭಿಸುವ ಸ್ವಾಮಿ ಅವನೇ

ದಾಮೋದರ - ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ, ಯಶೋದೆ
ಯ ಶಿಶುವಾಗಿ ನಂದಗೋಕುಲದಲ್ಲಿ ಬೆಳೆಯುತ್ತಿದ್ದಾಗ, ಅವನು
ಮನೆಮನೆಗೂ ಹಿಂಬದಿಯಿಂದ ಪ್ರವೇಶಿಸಿ, ಅಲ್ಲಿ ಕೂಡಿಟ್ಟಿದ್ದ ಹಾಲು, ಮೊ
ಸರು, ಬೆಣ್ಣೆ, ತುಪ್ಪಗಳನ್ನು ಕದ್ದು, ಚೆಲ್ಲಿ, ಗೋಪಿಕೆಯರಿಗೆ ತೊಂದರೆ
ಕೊಡುತ್ತಿದ್ದನು. ಅವನ ಚೇಷ್ಟೆಗಳನ್ನು ತಡೆಯಲಾರದೆ ಅವರು ಬಂದು
ಯಶೋದೆಯಲ್ಲಿ ದೂರುತ್ತಿದ್ದರು. ಒಂದು ದಿನ, ಕೋಪಗೊಂ
ಡ ಯಶೋದೆ ಅವನನ್ನು ಒಂದು ಹಗ್ಗದಿಂದ ಒರಳುಕಲ್ಲಿಗೆ
ಕಟ್ಟಿಹಾಕಿದಳು. ಹೊಟ್ಟೆಯನ್ನು ಹಗ್ಗದಿಂದ ಬಿಗಿಸಿಕೊಂಡವನಾದ್ದರಿಂದ
ಅವನು 'ದಾಮೋದರ'ನಾದನು.

12. தாமோதரனைத் தனிமுதல்வனை ஞாலமுண்டவனை,
ஆமோதரமறிய ஒருவர்க்கென்றே தொழுமவர்கள்,
தாமோதரனுருவாகிய சிவற்கும் திசைமுகற்கும்,
ஆமோதரமறிய எம்மானை என்னாழி வண்ணனையே

ತಾಮೋದರನೈತ್ತನಿಮುದಲ್ವನೈ ಞಾಲಮುಣ್ಡವನೈ,
ಆಮೋದರಮಱಿಯ ಒರುವರ್ಕ್ಕೆನ್ರೇ ತೊಳುಮವರ್ಗಳ್,
ತಾಮೋದರನುರುವಾಗಿಯ ಶಿವರ್ಕುಮ್ ತಿಶೈಮುಗರ್ಕುಮ್,
ಆಮೋದರಮಱಿಯ ಎಮ್ಮಾನೈ ಎನ್ನಾಳಿವಣ್ಣನೈಯೇ.

ತಾಮೋದರನೈ தாமோதரனை = ದಾಮೋದರನನ್ನು, ತನಿಮುದಲ್
ವನೈ தனிமுதல்வனை = ಜೋಡಿಯಿಲ್ಲದವನಾದ ಆದಿಕಾರಣನನ್ನು,
ಞಾಲಮ್ ಉಣ್ಡವನೈ ஞாலம் உண்டவனை = ಲೋಕಗಳನ್ನು
ಉಂಡವನನ್ನು (ನುಂಗಿ). ತರಮ್ தரம் = (ಅವನ) ಗುಣಮಟ್ಟವನ್ನು,
ಒರುವರ್ಕ್ಕು ஒருவர்க்கு = ಯಾರಾದರೂ ಅಱಿಯ அறிய =
ಅರಿತುಕೊಳ್ಳುವುದಕ್ಕೆ, ಆಮೋ ஆமோ = ಸಾಧ್ಯವಾದೀತೇ, ಎನ್ರು
ಎನ್ರೇ என்றே = ಎಂದುಕೊಂಡೇ, ತೊಳುಮವರ್ಗಳ್ தொழு
ಮವರ್ಗಳ್ தொழுமவர்கள் = (ಅವನಿಗೆ) ನಮಸ್ಕರಿಸುವವರು,
ತಾಮೋದರನ್ தாமோதரன் = ದಾಮೋದರನ, ಉರುವಾಗಿಯ உரு-

Garani Srinivasan

ಪಾಗತ್ತು = ದೇಹದ ಭಾಗದ, ಶಿವನ್ಕುಮಾ ತಿರುವರ್ಕ್ಕುಂ =
ಶಿವನಿಗಾ, ತಿಶೈಮುಖರ್ಕುಮಾ ತಿಸೈಮುಗರ್ಕ್ಕುಂ = ವಿಶ್ವಾಮು-
ಖನಿಗಾ (ಚತುರ್ಮುಖ ಬ್ರಹ್ಮನಿಗಾ) ಎಮ್ಮಾನ್ನೈ ನಾಮಮಾಗಿಲಾ = ನಮ್ಮ
ಸ್ವಾಮಿಯನ್ನೋ, ಎನ್ ಆಡಿವಣ್ಣಾನ್ನೆಯಲ್ ನಾಣ್ ಆಳ್ಳಿ ಬಣ್ಣಣ್ಣಗಳ
ಗಳ = ನನ್ನ, ಕಡಲವಣ್ಣನನ್ನೇ (ಕೃಷ್ಣ), ಕರುಮಾ ಕ್ಕರಂ = ಗುಣ
ಮಹತ್ವವನ್ನು, ಅಡಿಯ ಆವದೇ ಅಱಿಯ ಆಮೋ = ಅರಿಯಲು
ಸಾಧ್ಯವಾಗುವುದೇ?

ದಾಮೋದರನಾದ, ಸಾಟಿಯಿಲ್ಲದವನಾದ, ಆದಿಕಾರಣನಾದ, ಲೋಕ-
ಗಳನ್ನುಂಡವನಾದವನ ಗುಣ ಮಹತ್ವವನ್ನು ಯಾರಾದರೂ ಅರಿತು-
ಕೊಳ್ಳಲು ಸಾಧ್ಯವಾಗಬಹುದೆ ಎಂದುಕೊಂಡರೆ (ಎನ್ನುತ್ತಲೇ) ಅವನಿಗೆ
ನಮಸ್ಕರಿಸುವವರು ಆ ದಾಮೋದರನ ದೇಹದಲ್ಲೇ ಆಗಿರುವ ಶಿವನಿಗಾ
ನಮ್ಮ ಸ್ವಾಮಿಯಾ
ಚತುರ್ಮುಖ ಬ್ರಹ್ಮನಿಗಾ (ವಿಶ್ವಾಮುಖನಿಗಾ), ನಮ್ಮ ಸ್ವಾಮಿಯಾ
ಕಡಲವಣ್ಣನಾದವನ ಆಗಿರುವವನ ಗುಣ ಮಹತ್ವವನ್ನು ಅರಿತು ಕೊಳ್ಳಲು (12)
ಸಾಧ್ಯವಾಗುವುದೇ?

ಭಗವಂತನ ಹಿರಿಮೆ ಎಷ್ಟು? ಅವನ ಗುಣ ಮಹತ್ವವೇನು? ಈ
ಬಗೆಗೆ ಈ ಪಾಶುರ ಸ್ವಾರಸ್ಯವಾಗಿ ಅಭಿವ್ಯಕ್ತಪಡಿಸುತ್ತದೆ

ಆಳ್ವಾರರು ಹೇಳುತ್ತಾರೆ: ಭಗವಂತನು ಸಾಟಿಯಿಲ್ಲದ ಹಿರಿಮೆ
ಯುಳ್ಳವನು. ಎಲ್ಲಕ್ಕೂ ಅವನೇ ಕಾರಣನು. ಜಗತ್ಸೃಷ್ಟಿಗೆ ಕಾರಣ
ನಾಗಿ, ಅದನ್ನು ನಿರ್ವಹಿಸುವವನೂ ಅವನೇ. ಲಯಕಾಲ ಬಂದಾಗ ತಾನು
ಸೃಷ್ಟಿಸಿದ ಎಲ್ಲ ಲೋಕಗಳನ್ನು ಅವುಗಳಲ್ಲಿರುವ ಎಲ್ಲಾ ಚೇತನಾಚೇ-
ತನ ವಸ್ತುಗಳನ್ನು ಉಂಡು ಬಿಡುತ್ತಾನೆ ಮತ್ತು ತನ್ನ ಹೊಟ್ಟೆಯುಳ್ಳಾ
ಕೊಂಡು ಎಲ್ಲವನ್ನೂ ಮರು ಸೃಷ್ಟಿಯ ವರೆಗೆ ಕಾಪಾಡುತ್ತಾನೆ. ಗುಣ
ಸ್ವಭಾವಗಳಲ್ಲಿ ಅವನು ಅತ್ಯಂತ ಶ್ರೇಷ್ಠನು. ಅವನ ಗುಣ ಸ್ವಭಾವ
ಗಳನ್ನು ಅರಿತುಕೊಳ್ಳಲು ಯಾರಿಂದ ತಾನೇ ಸಾಧ್ಯವಾದೀತು? ಅವನ
ದೇಹದ ಬಲಭಾಗದಲ್ಲೇ ಆಗಿರುವ ಶಿವನಿಗಾಗಲಿ, ಅವನ ನಾಭೀಕಮ
ಲವನ್ನೇ ಮನೆ ಮಾಡಿಕೊಂಡಿರುವ ವಿಶ್ವಾಮುಖನಿಗಾಗಲಿ ಅವನ ಗುಣ
ಮಹತ್ವವನ್ನು ಅರಿತು ಕೊಳ್ಳಲು ಸಾಧ್ಯವಾಗದೆಯೇ? ಎಂದು ಮುಂ
ದಾಗ ಚಿಂತಿಸುತ್ತಾ, ಭಗವಂತನನ್ನು ಕೀರ್ತಿಸುತ್ತಾ, ಅವನ ತಿರುವಡಿ
ಗಳಿಗೆ ಎರಗುತ್ತಾ ಕಾಲಕಳೆಯುವ ಭಕ್ತರು ತಮ್ಮ ಅರಿವಿನ ಅಲ್ಪತೆ-
ಯಿಂದ ಭಗವಂತನ ಗುಣ ಸ್ವಭಾವಗಳ ಔನ್ನತ್ಯವನ್ನು, [illegible] ತಮಗುಂಟಾದ

ವಿಸ್ಮಯಾಶ್ಚರ್ಯಗಳಲ್ಲಿಯೂ ಕೃತಜ್ಞತೆಯಲ್ಲಿಯೂ ತಿಳಿಸುತ್ತಾರೆ.

13. வண்ண மாமணிச் சோதியை அமரர்த்தலைமகனை,
கண்ணனை நெடுமாலைத் தென்குருகூர்ச் சடகோபன்
பண்ணிய தமிழ் மாலை ஆயிரத்துள் இவை பன்னிரண்டும்,
பண்ணில் பன்னிரு நாமப் பாட்டு அண்ணல் தாளணைவிக்குமே

ವಣ್ಣಾಮಾಮಣಿಚ್ಚೋದಿಯೈ ಅಮರರ್ ತಲೈಮಗನೈ,
ಕಣ್ಣನೈ ನೆಡುಮಾಲೈ ತೆನ್ ಕುರುಗೂರ್ ಚ್ಚಡಗೋಪನ್,
ಪಣ್ಣಿಯ ತಮಿೞ್ ಮಾಲೈ ಆಯಿರತ್ತುಳ್ ಇವೈ ಪನ್ನಿರಣ್ಡುಮ್,
ಪಣ್ಣಿಲ್ ಪನ್ನಿರು ನಾಮ ಪ್ಪಾಟ್ಟು ಅಣ್ಣಲ್ ತಾಳಣೈವಿಕ್ಕುಮೇ.

ವಣ್ಣಾಮಾ வண்ணம் = ಶ್ರೇಷ್ಠವಾದ, ಮಾ ಮಣಿ ಶೋದಿಯೈ மா மணி சோதியை = ಅನರ್ಘ್ಯರತ್ನದ (ಉತ್ತಮವಾದ ನೀಲ ಮಣಿಯ) ಪ್ರಕಾಶವುಳ್ಳವನನ್ನು, ಅಮರರ್ ತಲೈಮಗನೈ அமரர் தலைமகனை = ನಿತ್ಯಸೂರಿಗಳ ಒಡೆಯನನ್ನು, ಕಣ್ಣನೈ கண்ணனை = ಶ್ರೀಕೃಷ್ಣಾವತಾರಿಯನ್ನು, ನೆಡುಮಾಲೈ நெடுமாலை = ಸರ್ವೇಶ್ವರನನ್ನು, ಕುರಿತು, ತೆನ್ ಕುರುಗೂರ್ ಶಡಗೋಪನ್ தென் குருகூர் சடகோபன் = ಸೊಬಗಿನ ತಿರುಕ್ಕುರುಗೂರಿನ ಶಠಗೋಪನು, ಪಣ್ಣಿಯ பண்ணிய = ರಚಿಸಿದ, ತಮಿೞ್ ಮಾಲೈ தமிழ் மாலை = ತಮಿಳಿನ ಪಾಶುರ ಮಾಲೆಯಾದ, ಆಯಿರತ್ತುಳ್ ஆயிரத்துள் = ಒಂದು ಸಾವಿರದಲ್ಲಿ, ಇವೈ ಪನ್ನಿರಣ್ಡುಮ್ இவை பன்னிரண்டும் = ಈ ಹನ್ನೆರಡು, ಪಣ್ಣಿಲ್ பண்ணில் = ರಾಗದಿಂದ ಕೂಡಿದ, ಪನ್ನಿರು ನಾಮ ಪ್ಪಾಟ್ಟು பன்னிரு நாமப்பாட்டு = ಹನ್ನೆರಡು ತಿರುನಾಮಗಳ ಹಾಡು ಅಣ್ಣಲ್ அண்ணல் = ಸರ್ವೇಶ್ವರನ, ತಾಳ್ தாள் = ತಿರುವಡಿಗಳನ್ನು, ಅಣೈವಿಕ್ಕುಮೇ அணைவிக்குமே = ಸೇರಿಸುವುದು

ಶ್ರೇಷ್ಠವಾದ ದಿವ್ಯ ನೀಲಮಣಿಯ ಪ್ರಕಾಶವುಳ್ಳವನನ್ನು, ನಿತ್ಯಸೂರಿಗಳ ಒಡೆಯನನ್ನು, ಶ್ರೀಕೃಷ್ಣಾವತಾರಿಯನ್ನು, ಸರ್ವೇಶ್ವರನನ್ನು ಕುರಿತು ಸೊಬಗಿನ ತಿರುಕ್ಕುರುಗೂರಿನ ಶಠಗೋಪನು ರಚಿಸಿದ ತಮಿಳಿನ ಪಾಶುರ ಮಾಲೆಯಾದ ಒಂದು ಸಾವಿರದಲ್ಲಿ ಈ ಹನ್ನೆರಡು ರಾಗದಿಂದ ಕೂಡಿದ ಹನ್ನೆರಡು ತಿರುನಾಮಗಳ ಹಾಡು ಸರ್ವೇಶ್ವರನ

Garani Srinivasan

ತಿರುವಡಿಗಳನ್ನು ತಪ್ಪದೆ ನೋಡುವುದು

ಇದು ಈ ತಿರುವಾಯ್ಮೊಳಿಯ ಕಡೆಯ ಪಾಶುರ. ಅತ್ಯಂತ ಶ್ರೇಷ್ಠವಾದ ಇಂದ್ರನೀಲಮಣಿಯ ದಿವ್ಯಪ್ರಕಾಶದಂತೆ ದೇಹಕಾಂತಿಯುಳ್ಳವನೂ (ಜ್ಯೋತಿಸ್ಸ್ವರೂಪನು), 'ಪರ'ದಲ್ಲಿರುವ ಪರಮಪದದಲ್ಲಿ ವಾಸಿಸುವ ನಿತ್ಯಸೂರಿಗಳಿಗೆ ಒಡೆಯನೂ, ಅವರ ನಿರ್ವಾಹಕನಾಗಿರುವವನೂ, ಇಹಲೋಕದ ವಾಸಿಗಳಿಗೆ ಅತ್ಯಂತ ಸುಲಭ-ಸಾಧ್ಯನು ಕಾಣೆಂದು ಕೇಳಿ ಕೊಡುವುದಕ್ಕಾಗಿಯೇ ಅವತರಿಸಿ, ತನ್ನ ಆಶ್ಚರ್ಯಾದ್ಭುತ ಗುಣಚೇಷ್ಟಿತಗಳಿಂದ ಮೆರೆದ ಶ್ರೀಕೃಷ್ಣಾವತಾರಯಾದವನೂ, ಸರ್ವರಕ್ಷಕನೂ, ಸರ್ವೇಶ್ವರನೂ ಆದ ಭಗವಂತನ, ಔದಾರ್ಯ, ಕಾರುಣ್ಯ, ಸಾಮರ್ಥ್ಯ ಮುಂತಾದ ಅನಂತ ಕಲ್ಯಾಣಗುಣಗಳನ್ನು ಹೊತ್ತು, ದಿವ್ಯವಾದ ಆಕೃತಿಯಲ್ಲಿ, ಅಂತಹಯನ್ನು ಅಳವಡಿಸಿಕೊಂಡು, ತಾನು ರಸಭರಿತವಾದ ಹಾಡಿಕೆಗೆ ಸುಬದ್ಧ ಒಂದು ಸಾವಿರ ಪಾಶುರಮಾಲೆಯನ್ನು ತಮಿಳಿನಲ್ಲಿ ರಚಿಸಿ, ಹಾಡಿ, ಆನಂದಿಸಿ, ಭಗವದರ್ಪಣ ಮಾಡಿರುವವನು ಶೋಭಿಸುವ ತಿರುಕ್ಕು-ರುಕೂರಿನ ಶಠಕೋಪನೆಂಬ ಪರಮಭಕ್ತನು.

ಈ ತಿರುವಾಯ್ಮೊಳಿಯ ಹನ್ನೆರಡು ಪಾಶುರಗಳು ನಿಡು-ದಾದ ತಮಿಳುಮಾಲೆಯ ಒಂದು ಭಾಗ ಮಾತ್ರ. ಭಗವಂತನ ಹನ್ನೆರಡು ತಿರುನಾಮಗಳನ್ನೂ ಒಂದೊಂದನ್ನು ಒಂದೊಂದು ಪಾಶುರದಲ್ಲಿ ಬಳಸಿಕೊಂಡು, ಆ ಮೂಲಕ ಭಗವಂತನ ಹಿರಿಮೆಯನ್ನು ಸ್ತುತಿಸಿ ಹಾಡಲಾಗಿದೆ. ಈ ಹನ್ನೆರಡು ಪಾಶುರಗಳನ್ನೇ ರಾಗದಿಂದ ಹಾಡುತ್ತಾ, ಭಗವಂತನ ಹನ್ನೆರಡು ತಿರುನಾಮಗಳನ್ನು ಅನುಸಂಧಾನ ಮಾಡುತ್ತಾ ಬರುವವರ ಫಲವಾಗಿ ಭಗವಂತನ ತಿರುವಡಿಗಳು ತಪ್ಪದೆ ಲಭ್ಯವಾಗುತ್ತವೆ. ಇದೇ ಈ ತಿರುವಾಯ್ಮೊಳಿಯ ಫಲಶ್ರುತಿ.

ತಿರುವಾಯ್ ಮೊಳಿ - ಎರಡನೆಯ ದಶಕ - ಎಂಟನೆಯ ತಿರುವಾಯ್ ಮೊಳಿ

திருவாய்மொழி - இரண்டாம் பத்து - எட்டாந்திருவாய்மொழி

8. ಅಣೈವದರವಣೈ ಮೇಲ್ - அணைவதரவணைமேல்

1. அணைவதரவணை மேல் பூம்பாவையாகம்
புணர்வது, இருவரவர் முதலும் தானே,
இணைவனாமெப்பொருட்கும் வீடுமுதலாம்,
புணைவன் பிறவிக்கடல்நீந்துவார்க்கே

ಅಣೈವದರವಣೈ ಮೇಲ್ ಪೂಮ ಪಾವೈಯಾಗಮ್
ಪುಣರ್ವದು, ಇರುವರವರ್ ಮುದಲುಮ್ ತಾನೇ,
ಇಣೈವನಾಮೆಪ್ಪೊರುಟ್ಕುಮ್ ವೀಡು ಮುದಲಾಮ್,
ಪುಣೈವನ್ ಪಿಱವಿಕ್ಕಡಲ್ ನೀನ್ದುವಾರ್ಕ್ಕೇ.

ಅಣೈವದು அணைவது = ಪವಡಿಸಿರುವುದು ಅರವು ಅಣೈಮೇಲ್ அரவு அணை மேல் = ಶೇಷನ ಹಾಸುಗೆಯ ಮೇಲೆ, ಪೂಮ ಪಾವೈ பூம்பாவை = ಲಕ್ಷ್ಮೀದೇವಿಯ, ಆಗಮ್ ஆகம் = ಹೃದಯವನ್ನು, ಪುಣರ್ವದು புணர்வது = ಕೂಡಿರುವುದು, ಇರುವರ್ ಅವರ் இருவர் அவர் ಅವರಿಬ್ಬರಿಗೆ, ಮುದಲುಮ್ ತಾನೇ/ முதலும் தானே = ಆದಿಯೂ (ಕಾರಣನೂ) ತಾನೇ, ಇಣೈವನ್ ಆಮ್ ಎಪ್ಪೊರುಟ್ಕುಮ್ இணைவன் ஆம் எப்பொருட்கும் = ಎಲ್ಲಾ ವಸ್ತುಗಳಿಗೂ ಜೊತೆಗಾರನಾಗಿದ್ದಾನೆ, ವೀಡು வீடு = ಬಿಡುಗಡೆಗೆ (ಮೋಕ್ಷಕ್ಕೆ), ಮುದಲ್ ಆಮ್ முதல் ஆம் = ಕಾರಣನಾಗಿದ್ದಾನೆ, ಪುಣೈವನ್ புணைவன் = ತೆಪ್ಪವಾಗಿದ್ದಾನೆ (ರಕ್ಷಕ), ಪಿಱವಿ ಕಡಲ್ ನೀನ್ದುವಾರ್ಕ್ಕೇ பிறவிக்கடல் நீந்துவார்க்கே = 'ಹುಟ್ಟು' ಎಂಬ ಕಡಲನ್ನು ಈಜಿ ದಾಟುವವರಿಗೇ:

ಪವಡಿಸಿರುವುದು ಶೇಷನ ಹಾಸುಗೆಯ ಮೇಲೆ. ಕೂಡಿಕೊಂಡಿರುವುದು ಲಕ್ಷ್ಮೀದೇವಿಯ ಹೃದಯವನ್ನು. ಅವರಿಬ್ಬರಿಗೆ ಆದಿಯೂ (ಕಾರಣನೂ) ತಾನೇ. ಎಲ್ಲಾ ವಸ್ತುಗಳ ಜೊತೆಗಾರನೂ ಹೌದು. ಬಿಡುಗಡೆಗೆ (ಮೋಕ್ಷಕ್ಕೆ) ಕಾರಣನೂ ಹೌದು. ಹುಟ್ಟು ಎಂಬ ಕಡಲನ್ನು ಈಜಿ ದಾಟುವವರಿಗೆ ತೆಪ್ಪ (ರಕ್ಷಕನಾಗಿ)ದ್ದಾನೆ. (1)

ಭಗವಂತನ ಚಟುವಟಿಕೆಯ ವ್ಯಾಪ್ತಿಯನ್ನು ವೈವಿಧ್ಯವನ್ನು ಇಲ್ಲಿ ಹೇಳಲಾಗುತ್ತದೆ.

"ಪವಡಿಸಿರುವುದು ಶೇಷನ ಹಾಸುಗೆಯ ಮೇಲೆ" — ಭಗವಂತನು ನಿತ್ಯವಿಭೂತಿಯಲ್ಲಿ, ಕ್ಷೀರಸಾಗರದಲ್ಲಿ ಶೇಷಶಯನನಾಗಿ ಯೋಗನಿದ್ರೆಯಲ್ಲಿರುತ್ತಾನೆ. ಇದು ಭಗವಂತನ ನಿಲವಿನ ವ್ಯಾಪ್ತಿಯೋ!

"ಕೂಡಿಕೊಂಡಿರುವುದು ಲಕ್ಷ್ಮೀದೇವಿಯ ಹೃದಯವನ್ನು" – ಸಕಲೈಶ್ವರ್ಯಪ್ರದಳು ಲಕ್ಷ್ಮೀದೇವಿ. ಆಕೆಯ ಹೃದಯವನ್ನೇ ಭಗವಂತನು ಒಲಿಸಿಕೊಂಡು ಅದರೊಂದಿಗೆ ಕೂಡಿಕೊಂಡಿದ್ದಾನೆ. [ಶ್ರೀದೇವಿಯನ್ನು ಪುರುಷಕಾರಳು ಎನ್ನುತ್ತಾರೆ. ದಯೆಯೇ ಮೂರ್ತಿವೆತ್ತ ಶ್ರೀದೇವಿ ಭಕ್ತನಲ್ಲಿ ಕರುಣೆ ತೋರಿಸಬೇಕೆಂದು ಅವನನ್ನು ಕ್ಷಮಿಸಬೇಕೆಂದು ಭಗವಂತನಲ್ಲಿ ಪುರುಷಕಾರ ನಡೆಸಿ ಅವನಿಗೆ ಭಗವತ್ಕೃಪೆಯುಂಟಾಗುವಂತೆ ಮಾಡುತ್ತಾಳೆ.]

"ಅವರಿಬ್ಬರಿಗೆ ಆದಿಯೂ ಕಾರಣನೂ ತಾನೇ" – 'ಅವರು' ಎಂದರೆ ಚತುರ್ಮುಖ ಬ್ರಹ್ಮ ಮತ್ತು ರುದ್ರರು. ಸರ್ವೇಶ್ವರನಾದ ಭಗವಂತನು ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಿಗಾಗಿ. ಎಲ್ಲಕ್ಕೂ ಆದಿಯೂ ಕಾರಣನಾಗಿ, ಸೃಷ್ಟಿಕಾರ್ಯವನ್ನು ಸಂಕಲ್ಪಮಾತ್ರದಿಂದ ತಾನು ಸೃಷ್ಟಿಸಿದ (ತನ್ನ ನಾಭಿಕಮಲದಲ್ಲಿ ಹುಟ್ಟಿದ) ಚತುರ್ಮುಖನಿಗೂ, ಲಯ ಕಾರ್ಯವನ್ನು ತನ್ನ ಮತ್ತೊಂದು ಸೃಷ್ಟಿಯಾದ ರುದ್ರನಿಗೂ ವಹಿಸಿಕೊಟ್ಟನು. ಆದ್ದರಿಂದ, ಅವರಿಬ್ಬರ ಹುಟ್ಟಿಗೂ, ಅವರ ಕಾರ್ಯಕ್ಕೂ ಭಗವಂತನೇ ಮೂಲ. ಅವನೇ ಕಾರಣ.

"ಎಲ್ಲಾ ವಸ್ತುಗಳ ಜೀವಿತಾಧಾರನೂ ಹೌದು' – ಸೃಷ್ಟಿಯಲ್ಲಿರುವ ಎಲ್ಲಾ ಚೇತನ ಅಚೇತನ ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿ ಅವುಗಳ ನಿರ್ವಾಹಕನಾಗಿ, ವ್ಯಾಪ್ತಿಯಾಗಿ ಭಗವಂತನು ಇದ್ದಾನೆ. ಆದ್ದರಿಂದ ಅವುಗಳ ಎಡೆಬಿಡದ ಜೀವಿತಾಧಾರ ಭಗವಂತ.

"ಬಿಡುಗಡೆಗೆ ಕಾರಣನೂ ಹೌದು' – ಸರ್ವೇಶ್ವರನಾದ ಭಗವಂತನ ಮೂರು ರೂಪಗಳಾದ ಬ್ರಹ್ಮ, ವಿಷ್ಣು, ಈಶ್ವರ – ಇವರು ಸೃಷ್ಟಿ, ಸ್ಥಿತಿ, ಲಯಗಳಿಗೆ ಕರ್ತರಾದರು. ಈ ಕಾರ್ಯಗಳು ನಿಲ್ಲದೆ ನಡೆಯುತ್ತಲೇ ಇರುತ್ತವೆಯಷ್ಟೆ. ಇವುಗಳಿಂದ ಆಚೆಗೆ ದಾಟಿ ಹೋಗುವುದೇ ಮೋಕ್ಷ ಅಥವಾ ಬಿಡುಗಡೆ. ಸರ್ವೇಶ್ವರನಾದ ಭಗವಂತನಲ್ಲದೆ, ಮೋಕ್ಷವನ್ನು ನೀಡುವುದಕ್ಕೆ ಬೇರೆಯಾರಿಗೂ ಸಾಧ್ಯವಿಲ್ಲ.

"ಹುಟ್ಟು ಎಂಬ ಕಡಲನ್ನು ಈಜಿ ದಾಟುವವರಿಗೆ ತೋಡಾಗಿದ್ದಾನೆ' – 'ಹುಟ್ಟು – ಸಾವು' ಎಂಬುವು ಚೇತನನನ್ನು ಬಿಡಿಸಿಕೊಳ್ಳಲಾರದ ಬಂಧನದಲ್ಲಿ ಸಿಕ್ಕಿಸಿಕೊಳ್ಳುತ್ತವೆ. 'ಹುಟ್ಟು' – ಅದರೊಂದಿಗೆ ನಡೆಯುವ ಬೆಳವಣಿಗೆ, ಕರ್ಮ, ಇತ್ಯಾದಿಗಳು 'ಸಾವಿ'ನೊಂದಿಗೆ [illegible] ಕೊನೆಗೊಂಡಂತೆ ಆದರೂ, ಮತ್ತೆ ಹುಟ್ಟು, ಮತ್ತೆ ಕರ್ಮಗಳು, ಮತ್ತೆ ಸಾವು – ಹೀಗೆ, ಕೊನೆಗಾಣದಂತೆ ನಡೆದು ಹೋಗುವ ಕಾರ್ಯ

ವನ್ನೆಲ್ಲಾ 'ಸಂಸಾರ' ಎಂದು ಒಂದು ಸಂಗ್ರಹವಾದ ಹೆಸರಿಂದ ಕರೆಯುತ್ತಾರೆ. ಸಂಸಾರವನ್ನು ದಾಟಲಸಾಧ್ಯವಾದ ಬಲುದೊಡ್ಡ ಕಡಲಿಗೆ ಹೋಲಿಸುತ್ತಾರೆ 'ಸಂಸಾರಸಾಗರ' ಎನ್ನುವುದು ಇದರಿಂದಲೇ. ಈ ಅಪಾರವಾದ, ದಾಟಲಸಾಧ್ಯವಾದ ಕಡಲನ್ನು ದಾಟಲೇ ಬೇಕೆಂದು ಮನಸ್ಸು ಮಾಡಿದವರಿಗೆ ಭಗವಂತನು ಕೃಷ್ಣನಾಗಿ (ಜೀವಿಗಳ ರಕ್ಷಕನಾಗಿ) ಅವರನ್ನು ದಾಟಿಸುತ್ತಾನೆ. ಅವರಿಗೆ ಬಿಡುಗಡೆಯನ್ನುಂಟು ಮಾಡುತ್ತಾನೆ.

ಇದು ಬಲು ಸ್ವಾರಸ್ಯವಾದ ಪಾಶುರ. ಬಳಸಿರುವ ಕೆಲವು ಪದಗಳಿಗೆ ನಾನಾರ್ಥಗಳಿವೆ. ಆ ಅರ್ಥಗಳನ್ನು ಸರಿಯಾಗಿ ಅನ್ವಯ ಮಾಡಿಕೊಳ್ಳುವುದರಿಂದ, ಪಾಶುರದ ಅರ್ಥವನ್ನು ಹೊಸಹೊಸರೀತಿಯಲ್ಲಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ, ಎನ್ನಬಹುದು. ಆ ಪದಗಳನ್ನು ಅವುಗಳ ವಿವಿಧ ಅರ್ಥಗಳನ್ನು ಇಲ್ಲಿ ಕೊಡಲಾಗಿದೆ

"ಆಗಮ- ஆகம்" — ದೇಹ, ಎದೆ, ವಕ್ಷಸ್ಥಲ, ಮನಸ್ಸು, ಹೃದಯ

"ಇಣೈ- இணை" — ಒಪ್ಪು, ಹೋಲು, ಹೊಂದಿಕೊಳ್ಳು,

"ಪುಣೈ- புணை" — ಕಟ್ಟು, ದೋಣಿ, ನಾವೆ, ಸಹಾಯ (ಒತ್ತಾಸೆ), ಈಡು (ರಕ್ಷಣೆ), ಹೊಣೆಗಾರ, ಬಂಧ,

2. நீந்தும் துயர் பிறவி உட்பட மற்றெவ்வெவையும்,
நீந்தும் துயரில்லா வீடுமுதலாம்,
பூந்தண் புனல்பொய்கை யானையிடர்கடிந்த,
பூந்தண் துழாயென் தனிநாயகன் புணர்ப்பே.

ನೀನ್ದುಮ್ ತುಯರ್ ಪಿಱವಿ ಉಟ್ಪಡ ಮಱ್ಱೆವ್ವೆವೈಯುಮ್,
ನೀನ್ದುಮ್ ತುಯರಿಲ್ಲಾ ವೀಡುಮುದಲಾಮ್,
ಪೂನ್ದಣ್ ಪುನಲ್ ಪೊಯ್ಗೈ ಯಾನೈಯಿಡರ್ ಕಡಿನ್ದ,
ಪೂನ್ದಣ್ ದುೞಾಯೆನ್ ತನಿನಾಯಗನ್ ಪುಣರ್ಪ್ಪೇ.

ನೀನ್ದುಮ್ நீந்தும் = ಈಜಿ ದಾಟುವ, ತುಯರ್ துயர் = ದುಃಖ ಸಂಕಟವಾದ, ಪಿಱವಿ பிறவி = ಹುಟ್ಟು, ಉಟ್ಪಡ உட்பட = ಒಳಪಟ್ಟ,

ಮಟ್ರು ಎವ್ವೆವೈಯುಮ್ மற்று எவ்வெவையும் = ಬೇರೆ ಯಾವಯಾವುದೋ ಅವೆಲ್ಲವನ್ನೂ, ನೀನ್ದುಮ್ நீந்தும் = ಈಜಿ ದಾಟುವ ತುಯರ್ ಇಲ್ಲಾ துயர் இல்லா = ದುಃಖಸಂಕಟಗಳು ಇಲ್ಲದ, ವೀಡು வீடு = ಬಿಡುಗಡೆಗೆ, ಮುದಲ್ ಆಮ್ முதல் ஆம் = ಕಾರಣವಾಗುತ್ತದೆ, ಪೂವು = ಹೂವಿನ, ಕಣ್ கண் = ಕಂಪಾದ ಪುನಲ್ புனல் = ನೀರಿನ, ಪೊಯ್‌ಗೈ பொய்கை = ಸರೋವರದಲ್ಲಿ, ಯಾನೈ யானை = ಆನೆಯ, ಇಡರ್ இடர் = ಸಂಕಟವನ್ನು, ಕಡಿನ್ದ கடிந்த = ಹೋಗಲಾಡಿಸಿದ(ವನಾದ) ಪೂವು = ಸುಂದರವಾದ, ಕಣ್ கண் = ಕಂಪಾದ, ತುಳಾಯ್ துழாய் = ತುಳಸಿಯ ಹಾರದವನಾದ, (ಎನ್‌ಕಣ್ = ನನ್ನ) ಕನಿ கனி = ಸಾಟಿಯಿಲ್ಲದವನಾದ (ಪರಿಪೂರ್ಣನಾದ), ನಾಯಕನ್ நாயகன் = ನಾಯಕನ, ಪುಣರ್ಪ್ಪೇ புணர்ப்பே = ಕೂಡುವಿಕೆಯೇ.

ಹೂವಿನ ಕಂಪಾದ ನೀರಿನ ಸರೋವರದಲ್ಲಿ ಆನೆಯ ಸಂಕಟವನ್ನು ನೀಗಿಸಿದವನೂ, ಸುಂದರವಾದ ಕಂಪಾದ ತುಳಸಿಯ ಹಾರವನ್ನು ಮುಡಿದವನೂ ಆದ, ನನ್ನ ಸಾಟಿಯಿಲ್ಲದ (ಪರಿಪೂರ್ಣನಾದ) ನಾಯಕನೊಡನೆ ಕೂಡುವಿಕೆಯೇ ಈಜಿ ದಾಟುವ ದುಃಖ ಸಂಕಟವಾದ ಹುಟ್ಟಿಗೆ ಒಳಪಟ್ಟ ಬೇರೆ ಯಾವಯಾವುದು ಇದೆಯೋ ಅದೆಲ್ಲವನ್ನೂ ಈಜಿ ದಾಟುವ ಸಂಕಟವಿಲ್ಲದಂತೆ ಮಾಡುವ ಬಿಡುಗಡೆಗೆ ಕಾರಣವಾಗುತ್ತದೆ. (2)

'ಬಿಡುಗಡೆಗೆ ಭಗವಂತನೇ ಕಾರಣನೆಂದು ಹಿಂದಿನ ಪಾಶುರದಲ್ಲಿ ಹೇಳಲಾಯಿತು. ಇಲ್ಲಿ ಅದರ ವಿವರಣೆ ಸ್ವಲ್ಪ ಬರುತ್ತದೆ.

'ಆನೆಯ ಸಂಕಟವನ್ನು ನೀಗಿಸಿದವನು" — ಇದು ಗಜೇಂದ್ರ ಮೋಕ್ಷದ ವಿಷಯ. ಎಲ್ಲೋ ಕಾಡಿನ ನಡುವೆ, ಕಂಪಾದ ನೀರಿನ ಸರೋವರದಲ್ಲಿ, ಮೊಸಳೆಯ ಬಾಯಿಗೆ ಸಿಕ್ಕಿಬಿದ್ದು, ಬಿಡುಗಡೆ ಹೊಂದಲಾರದೆ ಸಂಕಟಪಡುತ್ತಿದ್ದ ಆನೆಯೊಂದು 'ಗತ್ಯಂತರವಿಲ್ಲದೆ 'ಭಗವಂತ, ನೀನೇ ಗತಿ, ಕಾಪಾಡು' ಎಂದು ದೀನವಾಗಿ ಕೂಗಿ ಕರೆದ ಕೂಡಲೇ, ಕೃಪಾವಿಷ್ಟನಾಗಿ ಭಗವಂತನು ಅದರ ಬಳಿಗೆ ಧಾವಿಸಿ ಬಂದು, ಅದನ್ನು ಸಂಕಟದಿಂದ ಬಿಡುಗಡೆ ಮಾಡಿದನು ಎಂಬುದು ಕಥೆ.

ಆನೆಯ 'ಬಿಡುಗಡೆ' ಮೊಸಳೆಯ ಹಿಡಿತದಿಂದ ಪಾರಾಗುವಿಕೆ ಮತ್ತು ಎಂದಿನಂತೆ ಸ್ವೇಚ್ಛೆಯಾಗಿ ಬದುಕಿ ಬಾಳುವಿಕೆ ಮಾತ್ರವೇ.

Garani Srinivasan

ಪಾಶುರದ 'ಬದುಕದೆ' ಎಂಬುದು 'ಹುಟ್ಟು' ಮತ್ತು ಅದಕ್ಕೆ ಸಂಬಂಧಪಟ್ಟ ವ್ಯಾಧಿಗಳ ಬಡಿತದಿಂದ ಪ್ರಾರ್ಥಿಯಾಗಿ ಪಾರಾಗುವಿಕೆ. ಭಗವತ್ಕೃಪೆಯೊಂದೇ ಇದಕ್ಕೆ ಕಾರಣ. ಇದೇ ಅಗತ್ಯ.

"ಹುಟ್ಟಿಗೆ ಬಳ್ಳಿಬಿಟ್ಟ ಜೇತೆಯಾವಯಾವುದು ಇದೆಯೋ"

ಹುಟ್ಟು ಮತ್ತು ಅದರೊಂದಿಗೆ ಅಂಟಿ ಬರುವ ರೋಗ, ಮುಪ್ಪು, ಸಾವು - ಇವುಗಳೆಲ್ಲವೂ ದುಃಖವನ್ನು ತರುವವೇ! ಹುಟ್ಟಿನೊಡನೆ 'ಭಯ'ವೂ ಕೂಡಿಕೊಳ್ಳುತ್ತದೆ. ಈ ಭಯವು ಹುಟ್ಟಿನ ಸಂಬಂಧಗಳಾದ ಬಂಧೊಂದರ ಜೊತೆಯಲ್ಲೂ ಕೂಡಿಕೊಂಡು ಚೇತನನನ್ನು ಅತಿಯಾಗಿ ಕಾಡುತ್ತದೆ

ಭಗವತ್ಕೃಪೆಯುಂಟಾಯಿತೆಂದರೆ, ಮೊದಲು ಭಯದ ನಿವಾರಣೆಯುಂಟಾಗುವ, ಮತ್ತು ಸಂಕಟದಿಂದ ಪಾರಾಗುವ 'ಅಭಯ' ಲಭಿಸುವುದು ನೆಮ್ಮದಿ ದೊರೆಯುವುದು ಭಗವತ್ಸಂಬಂಧ ಕಡಿದುಹೋಗದಂತೆ ಅನುಕೂಲವುಂಟಾಗುವುದು ಹುಟ್ಟಿನ ಸಂಬಂಧವಾದ ಎಲ್ಲ ಬಗೆಯ ಸಂಕಟಗಳೂ ಕಳಚಿ, ಭಗವತ್ಸನ್ನಿಧ್ಯವೇ ಲಭಿಸುವುದು

ಆಳ್ವಾರರು ಹೇಳುತ್ತಾರೆ ಶ್ರೀರಾಮಪ್ರಾರ್ಥನೂ, ಬಾದರ ಸುಂದರನಾದ ತುಲಸಿಯ ಹಾರವನ್ನು ಧರಿಸಿರುವವನೂ ಆದ ಭಗವಂತನೇ ಹುಟ್ಟಿನ ದುಃಖಗಳೆಲ್ಲವನ್ನೂ ನಿವಾರಿಸುತ್ತಾನೆ. ಅವನನ್ನು ನಾಯಕನನ್ನಾಗಿ ಮಾಡಿ, ಪ್ರೇಮಿಸಿ, ಬಿಟ್ಟುಕೊಂಡು, ಅವನೊಡನೆ ಕೂಡಿಕೊಳ್ಳುವುದೇ 'ಬದುಕದೆ'ಯ ಮಾರ್ಗ

3. புணர்க்குமயனாய் அழிக்குமரனாய்,
புணர்த்தன்னுந்தியொடு ஆகத்து மன்னி,
புணர்த்த திருவாகித் தன் மார்வில் தான் சேர்,
புணர்ப்பன் பெரும் புணர்ப்பு எங்கும் புலனே.

ಪುಣರ್ಕ್ಕುಮಯನಾಯ್ ಅಳಿಕ್ಕುಮರನಾಯ್,
ಪುಣರ್ತ್ತನ್ನುನ್ದಿಯೊಡು ಆಹತ್ತು ಮನ್ನಿ,
ಪುಣರ್ತ್ತ ತಿರುವಾಹಿತ್ತನ್ ಮಾರ್ವಿಲ್ ತಾನ್ ಶೇರ್,
ಪುಣರ್ಪ್ಪನ್ ಪೆರುಮ್ ಪುಣರ್ಪ್ಪು ಎಙ್ಙುಮ್ ಪುಲನೇ

ಪುಣರ್ಕ್ಕುಮ್ புணர்க்கும் ಸೃಷ್ಟಿಸುವ, ಅಯನ್ ಆಯ್

அயன் ஆய் = ಅಜನಾಗಿ, ಅಳಿಕ್ಕುಮ್ அழிக்கும் = ನಾಶ
ಪಡಿಸುವ (ದಂಡಿಸುವ) ಅರನ್ ಆಮ್ அரன் ஆம் = ಹರನೂ
ಆಗುತ್ತಾನೆ, ಪುಣರ್ತ್ತ (ತನ್) புணர்த்த தன் = ತನ್ನನ್ನು ಪಡೆದ, ಉನ್ದಿಯೊ
ಡು உந்தியொடு ನಾಭಿಯಲ್ಲೂ, ಆಹತ್ತು ஆகத்து = ದೇಹದಲ್ಲೂ,
ಮನ್ನಿ மன்னி = ಇಟ್ಟುಕೊಂಡು, ಪುಣರ್ತ್ತ புணர்த்த = (ತನ್ನನ್ನು)
ಪಡೆದ, ತಿರು ಆಹಿ திரு ஆகி = ಶ್ರೀದೇವಿಯನ್ನುಳ್ಳವನಾಗಿ,
ತನ್ ಮಾರ್ವಿಲ್ ತಾನ್ தன் மார்வில் தான் = ತನ್ನ ಎದೆಯಲ್ಲಿಯೇ,
ಶೇರ್ சேர் = ಇಟ್ಟುಕೊಂಡು, ಪುಣರ್ಪ್ಪನ್ புணர்ப்பன் =
ಕೈಗೊಳ್ಳುವನು, ಪೆರುಮ್ ಪುಣರ್ಪ್ಪು பெரும் புணர்ப்பு
ಹಿರಿದಾದ ಕಾರ್ಯಭಾರವನ್ನು, ಎಙ್ಗುಮ್ எங்கும் = ಎಲ್ಲೆಲ್ಲಿಯೂ,
ಪುಲನೇ புலனே = ಪ್ರತ್ಯಕ್ಷನಾಗಿ

ಸೃಷ್ಟಿಸುವ ಅಜನಾಗಿ, ದಂಡಿಸುವ ಹರನೂ ಆಗುತ್ತಾನೆ.
ತನ್ನನ್ನು ಅಜನಾಗಿ ಪಡೆದ ನಾಭಿಯಲ್ಲೂ, ತನ್ನ ದೇಹದಲ್ಲೂ ಇಟ್ಟುಕೊಳ್ಳು
ತ್ತಾನೆ. ತನ್ನನ್ನು ಪಡೆದ ಶ್ರೀದೇವಿಯನ್ನು ತನ್ನ ಎದೆಯಲ್ಲಿಯೇ
ಇಟ್ಟುಕೊಂಡು, ಎಲ್ಲೆಲ್ಲೂ ಪ್ರತ್ಯಕ್ಷನಾಗಿ, ಬಲು ದೊಡ್ಡ ಕಾರ್ಯಭಾರ (3)
ವನ್ನು ಕೈಗೊಳ್ಳುತ್ತಾನೆ.

ಭಗವಂತನ ಕಾರ್ಯವ್ಯಾಪ್ತಿ ಎಷ್ಟು ವಿಸ್ತಾರವಾದದ್ದು ಎಂಬುದನ್ನು
ಈ ಪಾಶುರ ತಿಳಿಯಪಡಿಸುತ್ತದೆ.

ಮೊದಲನೆಯ ಪಾಶುರದಲ್ಲಿ ಹೇಳಿದ ಬ್ರಹ್ಮರುದ್ರರ ವಿಷಯ
ವನ್ನು ಶ್ರೀದೇವಿಯ ವಿಷಯವನ್ನು ಇಲ್ಲಿ ವಿಶದೀಕರಿಸಲಾಗಿದೆ.
ಭಗವಂತನು ತನ್ನ ನಾಭಿಕಮಲದಲ್ಲೇ ಅಜನನ್ನು (ಚತುರ್ಮುಖ
ಬ್ರಹ್ಮನನ್ನು) ಸೃಷ್ಟಿಸಿ, ಅವನನ್ನು ಜಗತ್ಸೃಷ್ಟಿ ಕಾರ್ಯದಲ್ಲಿ ತೊಡಗಿಸಿ
ದ್ದಾನೆ. ಸಂಹಾರ ಕಾರ್ಯಕ್ಕಾಗಿ ಹರನನ್ನು ಸೃಷ್ಟಿಸಿ, ಅವನಿಗೆ ತನ್ನ
ದೇಹದ ಬಲಭಾಗವನ್ನೇ ಒಪ್ಪಿಸಿದ್ದಾನೆ. ಕ್ಷೀರಸಾಗರದಲ್ಲಿ ಸಾಟಿಯಿಲ್ಲ-
ದ ಕಮಲದ ಹೂವಿನಲ್ಲಿ ಉದ್ಭವಿಸಿ, ಭಗವಂತನನ್ನು ವರಿಸಿ, ಮಡ
ದಿಯಾಗಿ, ಸಕಲೈಶ್ವರ್ಯದಾತೆಯಾಗಿರುವ ಶ್ರೀದೇವಿಯನ್ನು ಭಗವಂ
ತನು ಆದರದಿಂದ ತನ್ನ ವಕ್ಷದಲ್ಲಿಯೇ ಇಟ್ಟುಕೊಂಡಿದ್ದಾನೆ. ಹೀಗೆ, ಸೃಷ್ಟಿ
ಸುವ ಅಜನೂ ತಾನೇ ಆಗಿ, ದಂಡಿಸುವ ಹರನೂ ತಾನೇ ಆಗಿ, ಎಲ್ಲಾ
ಬಗೆಯ ಐಶ್ವರ್ಯಪ್ರದನೂ ತಾನೇ ಆಗಿ ಭಗವಂತನು ತನ್ನ ಕಾರ್ಯಭಾ
ರವನ್ನು ನಡೆಸುತ್ತಾನೆ. ಅಲ್ಲದೆ, ಇವೆಲ್ಲಕ್ಕಿಂತಲೂ ಹೆಚ್ಚಿನದಾದ
ತಾನು ಸೃಷ್ಟಿಸಿದ ಸಕಲ ಚೇತನಾಚೇತನ ವಸ್ತುಗಳ ರಕ್ಷಣೆಯ

ಜ್ಞಾನಿಯನ್ನು ಕನ್ನಡಿಯ ಹಾಗೆ ಮಾಡಿಕೊಂಡಿದ್ದಾನೆ. ಮತ್ತು, ಭಾಗವತನು ಕನಿಷ್ಠನು ಆಗಿದ್ದರೂ ಅವುಗಳಲ್ಲಿ ಬಂದಂತಹ ಅಂಶ ಯಾವುದು ಆಗಿದ್ದರೂ ಆ ವಿಷಯವನ್ನು ಅಂಗೀಕರಿಸಬಹುದಾದ ಶಿಷ್ಯರಾದರೂ ಆಗಿದ್ದರೂ ಭಾಗವತನು ಎಲ್ಲರಿಗೂ ಕಂಗೊಳಿಸುತ್ತಾನೆ. ಹೀಗಿದೆ ಭಾಗವತನ ಬಲು ದೊಡ್ಡ ಕಾರ್ಯಭಾರ.

4. புலனைந்துமேயும் பொறியைந்து நீங்கி,
நலமந்தமில்லாதோர் நாடு புகுவீர்,
அலமந்துவீய அசுரரைச்செற்றவன்,
பலமுந்து சீரில் படிமினோவாதே.

ಪುಲನೈನ್ದು ಮೇಯುಮ್ ಪೊರಿಯೈನ್ದು ನೀಙ್ಗಿ,
ನಲಮನ್ದಮಿಲ್ಲಾದೋರ್ ನಾಡು ಪುಗುವೀರ್,
ಅಲಮನ್ದು ವೀಯ ಅಸುರೈಚ್ಚೆಟ್ರಾನ್,
ಪಲ ಮುನ್ದು ಶೀರಿಲ್ ಪಡಿಮಿನೋವಾದೇ.

ಪುಲನ್ ಐನ್ದುಮ್ புலன் ஐந்தும் = ಇಂದ್ರಿಯಗಳು ಐದನ್ನು, ಮೇಯುಮ್ மெயும் = ಉಣ್ಣುವ, ಪೊರಿ ಐನ್ದುಮ್ பொறி ஐந்தும் = ಕಂತ್ರಗಳು (ಸಾಧನಗಳು) ಐದನ್ನು, ನೀಙ್ಗಿ நீங்கி = ಕಳೆದುಕೊಂಡು, (ನೀಗದವರಾಗಿ), ನಲಮ್ நலம் = ಆನಂದಕ್ಕೆ, ಅನ್ದಮ್ அந்தம் = ಅಂತ್ಯ, ಇಲ್ಲಾದು இல்லாது = ಇಲ್ಲದ, ಓರ್ ஓர் = ಅದ್ವಿತೀಯವಾದ, ನಾಡು நாடு = ನಾಡನ್ನು, ಪುಗುವೀರ್ புகுவீர் = ಪ್ರವೇಶಿಸಬಯಸುವವರೇ, ಅಲಮನ್ದು அலமந்து = ನರಳಿ ಗಂಟಬಿಟ್ಟು, ವೀಯ வீய = ನಾಶವಾಗುವಂತೆ, ಅಸುರೈ அசுரரை = ಅಸುರರನ್ನು, ಶೆಟ್ರಾನ್ செற்றான் = ಕೊಂದವನ, ಪಲಮ್ பலம் = ಫಲವನ್ನೇ, ಮುನ್ದು முந்து = ಮುಂದಾಗಿ ಕೊಡುವ, (ಮುಂದಾಗಿಸಿಕೊಂಡಿರುವ), ಶೀರಿಲ್ சீரில் = ಶ್ರೇಷ್ಠವಾದ ಗುಣಗಳಲ್ಲಿ, ಪಡಿಮಿನ್ படிமின் = ಮುಳುಗಿರಿ, ಓವಾದೇ ஓவாதே = ಎಡೆಬಿಡದಂತೆ

ಐದು ಇಂದ್ರಿಯಗಳನ್ನೂ ಉಣ್ಣುವ ಐದು ಸಾಧನ (ಕಂತ್ರ)ಗಳನ್ನೂ ನೀಗದವರಾಗಿ, ಆನಂದಕ್ಕೆ ಕೊನೆಯೆಂಬುದೇ ಇಲ್ಲದ ಅದ್ವಿತೀಯವಾದ ನಾಡನ್ನು ಪ್ರವೇಶಿಸಬಯಸುವವರೇ, ನರಳಿ ಗಂಟಬಿಟ್ಟು ನಾಶವಾಗುವಂತೆ ರಾಕ್ಷಸರನ್ನು ಕೊಂದವನ, ಫಲವನ್ನೇ ಮುಂದಾಗಿ ಕೊಡುವ ಶ್ರೇಷ್ಠವಾದ ಗುಣಗಳಲ್ಲಿ ಎಡೆಬಿಡದಂತೆ ಮುಳುಗಿರಿ. (4)

ಈ ಪ್ರಕಾರದಲ್ಲಿ ಭಗವದ್ಗುಣಾನುಭವದ ಒಂದು ಯೋಜನೆಂಬುದರ ಸೂಚನೆ ಇದೆ. ಸಾಧನೆಯ, ಪರಮಪದ, ಮತ್ತು ಅದರ ಪ್ರಾಪ್ತಿಯ ವಿಷಯವೂ ಸೂಚಿತವಾಗಿದೆ.

ಐದು ಇಂದ್ರಿಯಗಳನ್ನುಳ್ಳವ (ಐದು ಸಾಧನಗಳು" –

ಐದು ಇಂದ್ರಿಯಗಳನ್ನುಳ್ಳವ ಐದು. ಒಂದೊಂದಕ್ಕೂ ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು. ಒಂದೊಂದಕ್ಕೂ ಇದೆ ಇಂದ್ರಿಯ ಅದರದರ 'ವ್ಯಾಪಾರ', ಅದಕ್ಕೆ ಬೇಕಾಗುವ 'ವಿಷಯ' ಇದೆ. ಇಂದ್ರಿಯಗಳನ್ನು ಆಕರ್ಷಿಸಿ ತಮ್ಮ ವಶ ಮಾಡಿಕೊಳ್ಳುವ ಸಾಧನವೇ "ಇಂದ್ರಿಯಾರ್ಥ" ಅಥವಾ 'ವಿಷಯ'. ಈ ವ್ಯಾಪಾರದಲ್ಲಿ ಇಂದ್ರಿಯಗಳು ಮನ್ನಾರಾದವೆಂದರೆ, ಭಗವದ್ಗುಣಾನುಭವಕ್ಕೆ ಬೇಕಾಗಿವೆಯಲ್ಲ?

ಜ್ಞಾನೇಂದ್ರಿಯಗಳು	ವ್ಯಾಪಾರ	ವಿಷಯ
ಕಿವಿ	ಕೇಳುವಿಕೆ	ಶಬ್ದ
ಕಣ್ಣು	ನೋಡುವಿಕೆ	ರೂಪ
ನಾಲಗೆ	ರುಚಿನೋಡುವಿಕೆ	ರಸ
ಮೂಗು	ಮೂಸುವಿಕೆ	ಗಂಧ
ಚರ್ಮ	ಮುಟ್ಟುವಿಕೆ	ಸ್ಪರ್ಶ

ಕರ್ಮೇಂದ್ರಿಯಗಳು		
ವಾಕ್ಕು	ಉಚ್ಚಾರಣೆ	ಮಾತು
ಕೈ	(ಆದಾನ: ಸ್ವೀಕರಿಸುವುದು)	ಕುಶಲಕಾರ್ಯ
ಕಾಲು	ವಿಹರಣೆ	ಸಂಚಾರ
ಪಾಯು	ಮಲತ್ಯಾಗ	ವಿಸರ್ಜನ
ಉಪಸ್ಥ	ಆನಂದ	ಆನಂದ

ಇಂದ್ರಿಯಗಳ ಮೂಲಕ ನಡೆಯುವ ವ್ಯಾಪಾರವು ಇಂದ್ರಿಯ ವಿಷಯಗಳೂ 'ಆನಂದ' ವೆಂದು ಹೇಳಿದರೆ ಅವೆಲ್ಲವೂ ಕ್ಷಣಿಕ ಅಥವಾ ತಾತ್ಕಾಲಿಕ ಎನಿಸಿಕೊಳ್ಳುವುವು. ಕೊನೆಯೇ ಇಲ್ಲದಂಥ ಆನಂದವನ್ನು ಅನುಭವಿಸಬೇಕೆನ್ನುವವರು ಅವಿನಾಶವಾದ ಅಂಥ ಆನಂದ ತರುವ ನಾಡನ್ನು ಸೇರಬೇಕು.

"ನಕಳ್ ಸೆಂಬುರಾಳ್ವು ... ಕೊಂಡವನ" – ಇಲ್ಲಿ ಭಗವಂತನ ಶ್ರೀರಾಮಾವತಾರದ ಸೂಚನೆ ಇದೆ. ರಾಕ್ಷಸಕುಲವನ್ನೇ ನರಳಿಸಿ ನಾಶಪಡಿಸಿದವನು ಶ್ರೀರಾಮನು.

ಫಲವನ್ನೇ ಮುಂದಾಗಿಸಿಕೊಂಡಿರುವ .. — ಸಾಮಾನ್ಯವಾ

Garani Srinivasan

ಎಲ್ಲ ಕಾರ್ಯಕ್ಕೂ ಬರುವ ಫಲ ಯಾವಾಗಲೂ ಕಡೆಯಲ್ಲೇ. ಆದರೆ, ಭಗವದ್ಗುಣಾನುಭವವೆಂಬ ಕಾರ್ಯ ಎಂದೆಂದಿಗೂ ಆರಂಭದಲ್ಲಿ ಕಷ್ಟ ಪಡಿದರೆ ಆನಂದವನ್ನುಂಟು ಮಾಡತಕ್ಕದ್ದು ಅದು. ಅಷ್ಟೇ ಅಲ್ಲ. ಸಿದ್ಧಿಯನ್ನು ತರುವುದು. ಆದ್ದರಿಂದಲೇ ಆನಂದ ಮತ್ತು ಸಿದ್ಧಿ ಎಂಬ ಫಲವನ್ನೇ ಮುಂದಿಟ್ಟು ಕೊಂಡಿರುವ ಕಾರ್ಯವೆಂದರೆ 'ಭಗವದ್ಗುಣಾನುಭವ' ಎನ್ನುವುದು

ಇನ್ನು 'ಪರಮಪದ' ಮತ್ತು ಅದರ ಪ್ರಾಪ್ತಿ' ಯ ವಿಷಯ:

ಯಾವ ಬಗೆಯ ಕಳಂಕವೂ ಇಲ್ಲದಂತೆ, ಪರಿಶುದ್ಧವಾದ ಆನಂದಕ್ಕೆ ಕೊನೆಯೇ ಇಲ್ಲದಂತೆ ಅದನ್ನು ಅನುಭವಿಸಬಹುದಾದ ಅದ್ವಿತೀಯವಾದ ಸ್ಥಾನವನ್ನು 'ಪರಮಪದ' ಎನ್ನುವುದು

ಇಂದ್ರಿಯಗಳನ್ನು ಎಡೆಬಿಡದಂತೆ ಉನ್ಮತ್ತಲೇ ಇರುವ ವಿಷಯಗಳನ್ನು ಕೊಲಗಿಸಿ, ಮನಸ್ಸನ್ನು ಪರಿಶುದ್ಧಗೊಳಿಸಿ ಕೊ ಆನಂದವನ್ನು ಸಿದ್ಧಿಯನ್ನು ತಪ್ಪದೆ ಒದಗಿ ಸುವುದು. ಮತ್ತು, ಅನವರತವೂ ಇಳೆಯ ಮೇಲೂ ಸಿಗುವ ಭಗವದ್ಗುಣಾನುಭವದಲ್ಲಿ ತರತಕ್ಕವು ಗರುವುದು - ಇವೇ ಪರಮಪದ ಪ್ರಾಪ್ತಿ

5. ஒவாத்துயர்ப்பிறவி உட்பட மற்றெவ்வெவையும்,
மூவாத்தனி முதலாய் மூவுலகும் காவலோன்,
மாவாகி யாமையாய் மீனாகி மானிடமாம்,
தேவாதிதேவ பெருமான் என் தீர்த்தனே.

ಓವಾತ್ತುಯರ್ಪ್ಪಿರವಿ ಉಟ್ಪಡ ಮಟ್ರೆವ್ವೆವೈಯುಮ್,
ಮೂವಾತ್ತನಿ ಮುದಲಾಯ್ ಮೂವುಲಹುಮ್ ಕಾವಲೋನ್,
ಮಾವಾಹಿ ಯಾಮೈಯಾಯ್ ಮೀನಾಹಿ ಮಾನಿಡಮಾಮ್,
ದೇವಾದಿದೇವ ಪೆರುಮಾನ್ ಎನ್ ತೀರ್ತ್ತನೇ..

ಓವಾ ஓவா = ಎಡೆಬಿಡದ, ತುಯರ್ துயர் = ದುಃಖಪೂರ್ಣವಾದ, ಪಿರವಿ ಉಟ್ಪಡ பிறவி உட்பட = ಹುಟ್ಟಿಗೆ ಸಂಬಂಧಿಸಿದ, ಮತ್ತು ಎವ್ವೆವೈಯುಮ್ மற்று எவ்வெவையும் = ಇತರ ಎಲ್ಲವನ್ನೂ, ಮೂವಾ மூவா = ಮುದಿಯಾಗದಂತೆ ಇರುವ, ತನಿ ಮುದಲಾಯ್ தனி முதலாய் = ಒಂಟಿಯಾಗಿ, ಅದ್ವಿತೀಯ ಕಾರಣಭೂತನಾಗಿ ಮೂವುಲಹುಮ್ மூ உலகும் = ಮೂರು ಲೋಕಗಳನ್ನು, ಕಾವಲೋನ್ காவலோன் = ರಕ್ಷಿಸತಕ್ಕವನಾಗಿ, ಮಾಆಹಿ மாஆகி = ಹಯಗ್ರೀವನಾಗಿ,

ಆಮ್ಮೆ ಆಂಯ್ ಆಹಾಮ ಆಯ್ = ಆಮೆಯಾಗಿ, ಮೀನ್ ಆಗ ಮಾಣ
ಆಹಿ = ಮೀನಾಗಿ, ಮಾನಿಡಮ್ ಆವ ಐಾರ್ನಿಡಮ್ ಆಮ್ =
ಮನುಷ್ಯನಾಗುವವನು ತೇವಾದಿದೇವ ಪೆರುಮಾನ್ = ದೇವತೆ
ಗಳಿಗೆಲ್ಲ, (ಅವರ ಮೇಲ್ಪಟ್ಟ) ಅಮರರಿಗೆಲ್ಲ, ಹಿರಿಯನ್ ಗಾಬರುಮಗ
ಣ = ಸ್ವಾಮಿಯಾಗಿರುವವನು, ಎನ್ ತೀರ್ತ್ತನೇ ಗಾಣ ಕ್ರೊಗ್ಕ
ಣ = ನನ್ನ ಪರಮ ಪವಿತ್ರನೇ

ಮುದಿತನವಿಲ್ಲದಂತೆ ಒಬ್ಬನೇ ಆಗಿ, ಅದ್ವಿತೀಯ ಕಾರಣಭೂತನಾಗಿ, ಎಡೆಬಿಡದ ದುಃಖಮಯವಾದ ಹುಟ್ಟನ್ನೂ ಅದಕ್ಕೆ ಸಂಬಂಧಿಸಿದ ಇತರ ಎಲ್ಲವನ್ನೂ, (ಲೋಕಗಳ) ಮೂರುಲೋಕಗಳನ್ನೂ ರಕ್ಷಿಸತಕ್ಕವನಾಗಿ, ದೇವತೆಗಳಿಗೂ (ಅವರಿಗೆ ಮೇಲ್ಪಟ್ಟ) ಅಮರರಿಗೂ ಸ್ವಾಮಿಯಾಗಿ, ಹಯಗ್ರೀವನಾಗಿ, ಆಮೆಯಾಗಿ, ಮೀನಾಗಿ, ಮಾನವರೂಪಿಯಾಗಿರುವವನು ನನ್ನ ಪರಮಪವಿತ್ರನೇ (5)

ಹಿಂದಿನ ಪಾಶುರದಲ್ಲಿ 'ಭಗವದ್ಗುಣಾನುಭವದ ಫಲವೇನೆಂದು ತಿಳಿಸಲಾಯಿತು. ಅದಕ್ಕೆ ಇದು ಮೇಲ್ಪಂಕ್ತಿಯಾಗಿರಲೇಬೇಕೆ, ಇಲ್ಲಿ ಭಗವದ್ಗುಣ ಕಥನ ಮಾಡುತ್ತದೆ.

ಭಗವಂತನನ್ನು 'ನಿತ್ಯಯೌವನಸುಂದರ' ಎಂದು ವರ್ಣಿಸುತ್ತಾರೆ. ಸ್ವಾಮಿಯ ಯೌವನವೂ ಅದಕ್ಕೆ ಸಾಟಿಯಾದ ಸೊಬಗೂ ಶಾಶ್ವತವಂತೆ. ಯೌವನವೂ ಸೌಂದರ್ಯವೂ ಒಟ್ಟುಗೂಡಿದರೆ, ಅವುಗಳ ಆಕರ್ಷಣೆ ಇನ್ನೆಷ್ಟು ಪ್ರಖರವೋ! ಅನುಭವಿಸಿಯೇ ಅರಿಯಬೇಕಾದ ವಿಷಯವಲ್ಲವೇ?

ಭಗವಂತನನ್ನು 'ಅಜ' ಎನ್ನುತ್ತಾರೆ. ಅವನಿಗೆ ಹುಟ್ಟೂ ಇಲ್ಲ, ನಾಶವೂ ಇಲ್ಲ. ಹೀಗಿರುವಾಗ ಅವನಿಗೆ ಮುಪ್ಪೆಲ್ಲಿಂದ ಬಂದೀತು?

ಭಗವಂತನೊಬ್ಬನೇ! ಅದ್ವಿತೀಯನವನು. ಎಲ್ಲಕ್ಕೂ ಆದಿಯೂ ಕಾರಣನೂ ಅವನೇ. ಅವನಿಂದಲೇ ಎಲ್ಲವೂ. ಅವನೇ ಜಗದ್ರಕ್ಷಕನು: ಚೇತನರ ಹುಟ್ಟು, ರೋಗ, ಮುಪ್ಪು, ಮರಣ ಭಯ ಇವುಗಳನ್ನೆಲ್ಲಾ ನಿವಾರಿಸತಕ್ಕವನೂ ಅವನೇ. ಬ್ರಹ್ಮನಿಂದ ಹಿಡಿದು ಎಲ್ಲಾ ದೇವತೆಗಳಿಗೂ ಸ್ವಾಮಿ. ಅವರಿಗೆ ಮೇಲ್ಪಟ್ಟು, ಪರಮಪದವಾಸಿಗಳಾಗಿರುವ ನಿತ್ಯಸೂರಿ(ಅಮರರು)ಗಳಿಗೂ ಒಡೆಯನು. ಅವನೇ ನಾನಾ ರೂಪಗಳನ್ನು ತಳೆದವನು. ವೇದಗಳನ್ನು ಉದ್ಧರಿಸುವುದಕ್ಕಾಗಿ ಅವನು ಹಯಗ್ರೀವನಾಗಿ ಅವತರಿಸಿದನು. ದೇವತೆಗಳಿಗೆ

Garani Srinivasan

ಅಮೃತವನ್ನು ದೊರಕಿಸಿ ಕೊಟ್ಟು ಅವರನ್ನು ಅಮರರನ್ನಾಗಿ ಮಾಡಿದ್ದಕ್ಕಾಗಿ
ಆಮೆಯಾಗಿ ಅವತರಿಸಿ, ಸಮುದ್ರ ಮಥನಕ್ಕೆ ಅನುಕೂಲ ಮಾಡಿಕೊ
ಟ್ಟನು. ಪ್ರಳಯ ಜಲ ಪ್ರವಾಹದಿಂದ ತನ್ನ ಸೃಷ್ಟಿಯು ನಾಶವಾಗದಂತೆ
ರಕ್ಷಿಸುವುದಕ್ಕಾಗಿ ಅವನು ಮೀನಾದನು. ಬಹಳವಾಗಿ ಕೊಬ್ಬಿ
ಹೆಚ್ಚಿಕೊಂಡಿದ್ದ ದುಷ್ಟ ರಾಕ್ಷಸ ಕುಲವನ್ನೇ ನಿರ್ಮೂಲಗೊಳಿಸುವ
ದಕ್ಷನಾಗಿಯೂ, ದುಷ್ಟ ಶಿಕ್ಷಣ, ಶಿಷ್ಟ ರಕ್ಷಣಕ್ಕಾಗಿಯೂ ರಾಮ,
ಕೃಷ್ಣಾದಿ ಮಾನವರೂಪಿಯಾಗಿ ಅವತರಿಸಿದನು. ಪರಮೋಲಿಕಾ
ಠಿಯಾಗಿ, ಪರಮ ಪವಿತ್ರನಾಗಿ, ಅದ್ವಿತೀಯನಾಗಿ ತೋರ್ಪಡುವವನಾ
ಅವನೇ

6. தீர்த்தனுலகளந்த சேவடிமேல் பூந்தாமம்,
சேர்த்தியவையே சிவன் முடிமேல் தான் கண்டு,
பார்த்தன் தெளிந்தொழிந்த பைந்துழாயான் பெருமை,
பேர்த்துமொருவரால் பேசக்கிடந்ததே.

ತೀರ್ತ್ತನುಲಗಳನ್ದ ಶೇವಡಿ ಮೇಲ್ ಪೂನ್ದಾಮಮ್,
ಶೇರ್ತ್ತಿಯವೈಯೇ ಶಿವನ್ ಮುಡಿ ಮೇಲ್ ತಾನ್ ಕಣ್ಡು,
ಪಾರ್ತ್ತನ್ ತೆಳಿನ್ದೊೞಿನ್ದ ಪೈನ್ದುೞಾಯಾನ್ ಪೆರುಮೈ,
ಪೇರ್ತ್ತುಮೊರುವರಾಲ್ ಪೇಶಕ್ಕಿಡನ್ದದೇ.

ತೀರ್ತ್ತನ್ தீர்த்தன் = ಪರಮ ಪವಿತ್ರನ, ಉಲಗು ಅಳನ್ದ உலகு அளந்த = ಲೋಕಗಳನ್ನು ಅಳೆದ, ಶೇ ಅಡಿ ಮೇಲ್ சேஅடி மேல் = ಕೆಂಪಾದ (ಕೋಮಲವಾದ) ಪಾದಗಳ ಮೇಲೆ, ಪೂ ತಾಮಮ್ பூ தாமம் = ಹೂವಿನ ದಂಡೆಯನ್ನು, ಶೇರ್ತ್ತಿ சேர்த்தி = ಸಮರ್ಪಿಸಿ, ಅವೈಯೇ அவையே = ಆ ದಂಡೆಯನ್ನೇ, ಶಿವನ್ ಮುಡಿ ಮೇಲ್ சிவன் முடி மேல் = ಶಿವನ ತಲೆಯ ಮೇಲೆ, ತಾನ್ ಕಣ್ಡು தான் கண்டு = ತಾನು ಕಂಡವನಾಗಿ, ಪಾರ್ತ್ತನ್ பார்த்தன். ಪಾರ್ಥನು, ತೆಳಿನ್ದು ಒೞಿನ್ದ தெளிந்து ஒழிந்த = ತಿಳಿವಳಿಕೆಯನ್ನು ಪಡೆದ, ಪೈ ತುೞಾಯಾನ್ பை துழாயான் = ಹಸಿರಾದ ತುಳಸಿಯ ಹಾರವನ್ನು ಧರಿಸುವವನ, ಪೆರುಮೈ பெருமை = ಹಿರಿಮೆಯನ್ನು, ಪೇರ್ತ್ತುಮ್ பேர்த்தும் = ಮತ್ತೆ (ಪುನಃ), ಒರುವರಾಲ್ ஒருவரால் = ~~[illegible]~~ ಬೇರೆ ಒಬ್ಬರಿಂದಲೂ, ಪೇಶಕ್ಕಿಡನ್ದದೇ பேசக்கிடந்ததே = ಹೇಳುವಂತೆ ಇದೆಯಲ್ಲ.

Garani Srinivasan

ಪರಮ ಪವಿತ್ರನ ಲೋಕಗಳನ್ನು ಅಳೆದ ಕೆಂಪಾದ (ಕೋಮಲಪಾದ) ತಿರುವಡಿಗಳ ಮೇಲೆ ಧ್ಯಾನದ ದಂಡೆಯನ್ನು ಸಮರ್ಪಿಸಿ, ಆ ದಂಡೆಯನ್ನೇ ಶಿವನ ತಲೆಯ ಮೇಲೆ ತಾನು ಕಂಡವನಾಗಿ, ಪಾರ್ಥನು ತಿಳಿವಳಿಕೆಯನ್ನು ಪಡೆದಂಥ ಸೊಬಗಿನ ತುಲಸಿಯ ಹಾರವನ್ನು ಧರಿಸಿರುವವನ ಹಿರಿಮೆಯನ್ನು ಮತ್ತೆ ಮತ್ತೆ ಒಬ್ಬೊಬ್ಬರಿಂದಲೂ ಹೇಳುವಂತೆ (6)
ಇದೆಯಲ್ಲ.

ಭಗವಂತನ ತಿರುವಡಿಗಳ ಹಿರಿಮೆಯನ್ನು ಸೂಚಿಸುವುದಕ್ಕೆ ಪಾರ್ಥನ ಪ್ರಸಂಗವೊಂದನ್ನು ನಿದರ್ಶನವಾಗಿ ಇಲ್ಲಿ ಸೂಚಿಸಲಾಗಿದೆ. ಪಾರ್ಥನಿಗೆ ಶ್ರೀಕೃಷ್ಣನೊಡನೆ ಸ್ನೇಹದಾರ್ಢ್ಯದ ನಂಟು. ಒಂದು ಸಲ, ತಾನು ಶಿವನನ್ನು ಮೆಚ್ಚಿಸಿ, ವರವನ್ನು ಪಡೆದು ಬರುವೆನೆಂದು ಪಾರ್ಥನು ಶ್ರೀಕೃಷ್ಣನಿಗೆ ಹೇಳಿದನಂತೆ. ಎಲ್ಲಿಗೋ ಹೋಗಿ, ಕಷ್ಟಪಟ್ಟು ತಪಸ್ಸನ್ನು ಆಚರಿಸಿ, ಶಿವನಿಂದ ವರವನ್ನು ಪಡೆದುಕೊಳ್ಳಬೇಕಾದ ಪ್ರಮೇಯವೇ ಇಲ್ಲವೆಂದೂ, ಅದಕ್ಕೆ ಬದಲಾಗಿ ತನ್ನ ತಿರುವಡಿಗಳನ್ನು ಪೂಜಿಸಿದರೆ ಶಿವನು ಸಂಪ್ರೀತನಾಗಿ ಬೇಕಾದದ್ದನ್ನು ನೀಡುವನೆಂದೂ ಶ್ರೀಕೃಷ್ಣನು ಹೇಳಿದನಂತೆ. ಈ ಮಾತನ್ನು ಪಾರ್ಥನು ನಂಬಿದನೋ ಬಿಟ್ಟನೋ! ಶ್ರೀಕೃಷ್ಣನ ತಿರುವಡಿಗಳಿಗೆ ಧ್ಯಾನದ ದಂಡೆಗಳನ್ನು ಅರ್ಪಿಸಿ, ಅವಕ್ಕೆ ಪಾರ್ಥನು ಎರಗಿದನಂತೆ. ಅಂದು ರಾತ್ರಿ ಪಾರ್ಥನಿಗೆ ಕನಸು ಬಿತ್ತಂತೆ. ಕನಸಿನಲ್ಲಿ ಶಿವನು ಪಾರ್ಥನ ಮುಂದೆ ಮುಗುಳ್ನಗೆ ನಗುತ್ತಾ, ಪ್ರಸನ್ನನಾಗಿ ಕಂಡನಂತೆ. ಅಂದು ತಾನು ಶ್ರೀಕೃಷ್ಣನ ತಿರುವಡಿಗಳಿಗೆ ಅರ್ಪಿಸಿದ್ದ ಧ್ಯಾನದ ದಂಡೆಗಳು ಶಿವನ ತಲೆಯ ಮೇಲೆ ಇದ್ದದ್ದನ್ನು ಕಂಡು ಪಾರ್ಥನಿಗೆ ತಿಳಿವಳಿಕೆ ಬಂತಂತೆ. ತನಗೆ ಒಲಿದು ತನ್ನ ಒಡನಾಡಿಯಾಗಿರುವ ಭಗವಂತನ (ಶ್ರೀಕೃಷ್ಣನ) ಸೇವೆಯಿಂದಲೇ ತನ್ನ ಎಲ್ಲ ಕೋರಿಕೆಗಳೂ ಈಡೇರುವುದೆಂದೂ ಅದಕ್ಕಾಗಿ ಬೇರೆ ದೈವಗಳನ್ನು ಬೇಡುವ ಅಗತ್ಯವೇ ಇಲ್ಲವೆಂದೂ ಅವನಿಗೆ ಮನದಟ್ಟಾಯಿತಂತೆ. ಪಾರ್ಥನ ಕೋರಿಕೆಯನ್ನು ಶಿವನೂ ಪೂರ್ಣಗೊಳಿಸಿದನಂತೆ.

ಪರಮ ಪವಿತ್ರನಾದ ಭಗವಂತನ ತಿರುವಡಿಗಳು ಸಾಮಾನ್ಯವಾದವಲ್ಲ. ಅವನು ತ್ರಿವಿಕ್ರಮನಾಗಿ ಮೂರು ಲೋಕಗಳನ್ನು ಅಳೆದುಕೊಂಡ ಕಾಲದಲ್ಲಿ, ಬ್ರಹ್ಮಲೋಕದವರೆಗೆ ಎತ್ತರಿಸಿದ್ದ ಭಗವಂತನ ತಿರುವಡಿಗಳನ್ನು ಬ್ರಹ್ಮನು ದೇವಗಂಗೆಯಿಂದ ತೊಳೆದು ಕೃತಾರ್ಥನಾದನಂತೆ.

ಕಿರುವಡಿಗಳ ಮಹಿಮೆಯೇ ಇಷ್ಟು ಹಿರಿದೆಂದಾಗ, ಭಗವಂತ
ನ ಸಕಲ ಕಲ್ಯಾಣ ಗುಣಗಳ ಹಿರಿಮೆಯನ್ನು ಬಣ್ಣಿಸಲು ಎಷ್ಟೆ
ಷ್ಟು ಹೊಗಳಿದರೂ ಮುಗಿಯದಂತೆ ಇದೆಯಲ್ಲ ಎನ್ನುತ್ತಾರೆ ಆಳ್ವಾರರು

7. கிடந்திருந்து நின்றளந்து கேழலாய்க் கீழ்புக்
கிடந்திடும், தன்னுள் கரக்கும் உமிழும்,
தடம்பெருந்தோளாரத் தழுவும் பாரென்னும்
மடந்தையை, மால்செய்கின்றமால் ஆர்காண்
பாரே.

ಕಿಡನ್ದಿರುನ್ದು ನಿನ್ಱಳನ್ದು ಕೇೞಲಾಯ್ಕ್ಕೀೞ್ಪು
ಕ್ಕಿಡನ್ದಿಡುಮ್, ತನ್ನುಳ್ ಕರಕ್ಕುಮ್ ಉಮಿೞುಮ್,
ತಡಮ್ ಪೆರುನ್ದೋಳಾರತ್ತೞುವುಮ್ ಪಾರೆನ್ನುಮ್
ಮಡನ್ದೈಯೈ, ಮಾಲ್ ಶೆಯ್ಹಿನ್ಱ ಮಾಲ್ ಆರ್ ಕಾಣ್ಬಾರೇ.

ಕಿಡನ್ದು கிடந்து = ಮಲಗಿ, ಇರುನ್ದು இருந்து = ಯೋಗನಿದ್ದೆಯಲ್ಲಿದ್ದು, ನಿನ್ಱು நின்று = (ಯಾಗಶಾಲೆಯಲ್ಲಿ) ನಿಂತು, ಅಳನ್ದು அளந்து = ಅಳೆದುಕೊಂಡು, ಕೇೞಲ್ ಆಯ್ கேழல் ஆய் = ಮಹಾವರಾಹನಾಗಿ, ಕೀೞ್ கீழ் = ಕೆಳಗಿನ ಅಡಿಯಲ್ಲಿ, ಪುಕ್ಕು புக்கு = ಪ್ರವೇಶಿಸಿ, ಇಡನ್ದು ಇಡುಮ್ இடந்து இடும் = ಗಿಡಿದು (ಅದರ ಸ್ಥಾನದಲ್ಲಿ) ಇಡುವಂಥ, ತನ್ನುಳ್ தன்னுள் = ತನ್ನ ಬಳಗದೆಯೇ, ಕರಕ್ಕುಮ್ கரக்கும் = ಮರೆಮಾಡಿ ಇಟ್ಟುಕೊಳ್ಳುವಂಥ, ಉಮಿೞುಮ್ உமிழும் = ಹೊರಕ್ಕೆ ಹಾಕುವಂಥ, ತಡಮ್ தடம் = ವಿಸ್ತಾರವಾದ, ಪೆರು பெரு = ಬಲು ದೊಡ್ಡ, ತೋಳ್ தோள் = ತೋಳುಗಳಿಂದ, ಆರ ஆர = ಪೂರ್ತಿಯಾಗಿ, ತೞುವುಮ್ தழுவும் = ಆಲಂಗಿಸುವಂಥ, ಪಾರ್ ಎನ್ನುಮ್ ಮಡನ್ದೈಯೈ பார் என்னும் மடந்தையை = ಭೂಮಿ ಎಂಬ ಕನ್ನಿಕೆಯನ್ನು, ಶೆಯ್ಹಿನ್ಱ செய்கின்ற = ಮಾಲ್ மால் = ಸರ್ವೇಶ್ವರನು, ಮಾಡುತ್ತಿರುವ, ಮಾಲ್ மால் = ಹಿರಿಮೆಯನ್ನು, ಆರ್ ಕಾಣ್ಬಾರೇ ஆர் காண்பாரே = ಯಾರು ಕಂಡು ಹೇಳ್ತಾರೆ?

ಮಲಗಿ ಯೋಗನಿದ್ದೆಯಲ್ಲಿರುವಂಥ, ನಿಂತು ಅಳೆದುಕೊಳ್ಳುವಂಥ, ಮಹಾವರಾಹನಾಗಿ ಕೆಳಗಿನ ಅಡಿಯಲ್ಲಿ ಪ್ರವೇಶಿಸಿ, ಕಿತ್ತು ಇಡುವಂಥ, ತನ್ನ ಬಳಗದೆಯೇ ಮರೆಮಾಡಿ ಇಟ್ಟುಕೊಳ್ಳುವಂಥ, ಮತ್ತು ಹೊರಕ್ಕೆ ಹಾಕುವಂಥ, ವಿಸ್ತಾರವಾದ ದೊಡ್ಡ ತೋಳುಗಳಿಂದ ಪೂರ್ತಿಯಾಗಿ ~~ಆಲಂಗಿಸುವಂಥ~~ ಭೂಮಿ ಎಂಬ ಕನ್ಯೆಯನ್ನು ಆಲಂಗಿಸುವಂಥ.

Garani Srinivasan

ಸರ್ವೇಶ್ವರನು ಮಾಡುತ್ತಿರುವ ಹಿರಿಯ ಕಾರ್ಯಗಳನ್ನು ಯಾರು ಕಂಡು ಕೇಳಬಲ್ಲರು?

ಹಿಂದಿನ ಪಾಠದ ಭಗವಂತನ ಹಿರಿಮೆಯನ್ನು ಕಂಡುಕೊಳ್ಳುವ ಬಗೆಯನ್ನು ಇಲ್ಲಿ ಸೂಚಿಸಲಾಗಿದೆ:

"ಪವಡಿಸಿ ಯೋಗನಿದ್ರೆಯಲ್ಲಿರುವಂಥ" — ಮಹಾಪ್ರಳಯದ ಬಳಿಕ ಎಲ್ಲೆಲ್ಲೂ ನೀರೇ ನೀರಾಗಿರುವಾಗ, ಆ ಅಪಾರವಾದ ಜಲರಾಶಿಯಲ್ಲಿ ಪುಟ್ಟದೊಂದು ಆಲದೆಲೆಯ ಮೇಲೆ ಭಗವಂತನು ಎಳೆಯ ಮಗುವಾಗಿ ಪವಡಿಸಿ ಬಹುಕಾಲ ಯೋಗನಿದ್ರೆಯಲ್ಲಿ ನಿರ್ಲಿಪ್ತತೆಯಿಂದ ಇರುತ್ತಾನೆ ಎನ್ನುತ್ತಾರೆ. ಅಲ್ಲದೆ, ಭಗವಂತನು ಕ್ಷೀರಸಾಗರದಲ್ಲಿ ಶೇಷಶಯನನಾಗಿ, ತನ್ನ ಎಲ್ಲ ಕಾರ್ಯ ಚಟುವಟಿಕೆಗಳಿಂದಲೂ ನಿರ್ಲಿಪ್ತನಾಗಿ ಯೋಗನಿದ್ರೆಯಲ್ಲಿ ಪವಡಿಸಿರುತ್ತಾನೆ ಎನ್ನುತ್ತಾರೆ. ಆದರೇನು? ಅವನ ಸಂಕಲ್ಪದಂತೆಯೇ ಅಲ್ಲವೇ ಜಗತ್ಕಾರ್ಯಗಳೆಲ್ಲವೂ ನಡೆದು ಹೋಗುವುದು? ಅದೇ ಅಲ್ಲವೇ ಅವನ ಹಿರಿಮೆ?

"ನಿಂತು ಅಳೆದುಕೊಳ್ಳುವಂಥ" — ಬಲಿ ಚಕ್ರವರ್ತಿಯ ಕೀರ್ತಿಯನ್ನು ಅವನ ಶಕ್ತಿಯನ್ನು ಯಾರಿಂದಲೂ ಮೀರಿಸಲು ಸಾಧ್ಯವಾಗದೆ, ಅವನ ಸುಸ್ವಭಾವಗಳಿಗೆ ತಕ್ಕಂತೆ ಭಗವಂತನೇ ಅವನನ್ನು ಅನುಗ್ರಹಿಸುವುದಕ್ಕಾಗಿ, ಬಲಿಯ ಯಾಗಶಾಲೆಯಲ್ಲಿ ಅದ್ಭುತವಾದ [illegible]ಯಾದ ವಾಮನ ವಟುವಾಗಿ ಬಂದು ನಿಂತದ್ದು. ತನಗಾಗಿ ಮೂರು ಹೆಜ್ಜೆಯಷ್ಟು ನೆಲವನ್ನು ಯಾಚಿಸಿ, ಬಲಿಯಿಂದ ಅದನ್ನು ಪಡೆದದ್ದು. ಕೂಡಲೇ ತ್ರಿವಿಕ್ರಮನಾಗಿ ಬೆಳೆದು ಎಲ್ಲಾ ಲೋಕಗಳನ್ನು ತನ್ನ ಎರಡೇ ಹೆಜ್ಜೆಗಳಿಂದ ಆವರಿಸಿ, ಅಳೆದುಕೊಂಡದ್ದು. ಬಳಿಕ, ತನ್ನ ತಿರುವಡಿಯನ್ನೇ ಬಲಿಚಕ್ರವರ್ತಿಯ ತಲೆಯ ಮೇಲಿರಿಸಿ, ಅವನಿಗೆ ತನ್ನ ದಿವ್ಯಜ್ಞಾನಾನುಗ್ರಹವನ್ನು ಕರುಣಿಸಿದ್ದು.

"ಮಹಾವರಾಹನಾಗಿ, ಕಡಲ ಅಡಿಯಲ್ಲಿ ಪ್ರವೇಶಿಸಿ ಹಿಡಿದು ಇರುವಂಥ" — ಹಿರಣ್ಯಕಶಿಪುವಿನ ತಮ್ಮನಾದ ಹಿರಣ್ಯಾಕ್ಷನು ಭೂಮಿಯನ್ನೇ ಕದ್ದೊಯ್ದು ಕಡಲ ಅಡಿಯಲ್ಲಿ ಎಲ್ಲಿಯೋ ಬಚ್ಚಿಟ್ಟಿ~~ದ್ದನು~~. ಆಗ ಭಗವಂತನು ಮಹಾವರಾಹನಾಗಿ ಅವತರಿಸಿ, ಕಡಲಲ್ಲಿ ನುಗ್ಗಿ ಭೂಮಿಯನ್ನು ತನ್ನ ಕೋರೆಹಲ್ಲುಗಳಿಂದ ಹಿಡಿದು ಮೇಲಕ್ಕೆತ್ತಿ, ಅದರ ಸ್ಥಾನದಲ್ಲಿ ಅದನ್ನು ನೆಲೆಗೊಳಿಸಿದನು

ತನ್ನ ಬಳಗದವರೊಡನೆ ಮರೆಮಾಡಿ ಇಟ್ಟುಕೊಳ್ಳುವಂಥ" — ಪ್ರಳಯ ಕಾಲ ಬಂದಾಗ, ಭಗವಂತನು ತನ್ನ ಸೃಷ್ಟಿಯೆಲ್ಲವನ್ನು ಒಂದೇ ಗುಕ್ಕಿಗೆ ನುಂಗಿ, ಅದನ್ನು ತನ್ನ ಹೊಟ್ಟೆಯಲ್ಲಿ ಅಡಗಿಸಿ ಇಟ್ಟುಕೊಂಡು, ಅದನ್ನು ಸಂರಕ್ಷಿಸುತ್ತಾನೆ ಅವನ ಹೊಟ್ಟೆ ಎಷ್ಟು ದೊಡ್ಡದೋ ಕಾಣೆ!

"ಮತ್ತೆ ಹೊರಕ್ಕೆ ಹಾಕುವಂಥ" — ಪ್ರಳಯ ಸಮಯದಲ್ಲಿ ತಾನು ತಬ್ಬಿದ ಸೃಷ್ಟಿಯನ್ನೆಲ್ಲಾ ಬಹು ದೀರ್ಘಕಾಲ ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಕಾಪಾಡುತ್ತ, ಮತ್ತೆ ಸೃಷ್ಟಿ ಸಮಯ ಬಂದ ಕೂಡಲೇ ಅದೆಷ್ಟನ್ನು ಹೊರಕ್ಕೆ ಹಾಕುತ್ತಾನೆ.

"ಭೂಮಿ ಎಂಬ ಕನ್ಯೆಯನ್ನು ಆಲಂಗಿಸುವಂಥ" — ತನ್ನನ್ನು ಹಿರಣ್ಯಾಕ್ಷನ ಕೈಯಿಂದ ಬಿಡಿಸಿದ್ದಕ್ಕಾಗಿ, ಕೃತಜ್ಞತೆಯಿಂದ ಭೂದೇವಿ ಎಂಬ ಕನ್ಯೆಯು ಭಗವಂತನನ್ನೇ ವರಿಸಿದಳು ಎಂಬುದು ಇಲ್ಲಿಯ ವಿಷಯ.

ಸರ್ವೇಶ್ವರನಾದ ಭಗವಂತನು ಮಾಡುವ ಅದ್ಭುತ[illegible]ತರಾದ ಕಾರ್ಯಗಳಿಂದಲೇ ಅವನ ಹಿರಿಮೆಯೆಷ್ಟೆಂಬುದನ್ನು ಕಂಡುಕೊಳ್ಳುವುದಕ್ಕೆ ಸಾಧ್ಯ ಎನ್ನುತ್ತಾರೆ ಆಳ್ವಾರರು

8. காண்பாரார் எம்மீசன் கண்ணனையென் காணுமாறு,
ஊண்பேசில் எல்லாவுலகுமோர் துற்றாற்றா,
சேண்பாலவீடோ உயிரோ மற்றெப்பொருட்கும்,
ஏண்பாலும் சோரான் பரந்துளனாமெங்கும்.

ಕಾಣ್ಬಾರಾರೆಮ್ಮೀಶನ್ ಕಣ್ಣನ್ನೈಯೆನ್ ಕಾಣುಮಾಱು,
ಊಣ್ ಪೇಶಿಲ್ ಎಲ್ಲಾವುಲಗುಮೋರ್ ತುಱ್ಱಾಱ್ಱಾ,
ಶೇಣ್ಪಾಲ ವೀಡೋ ಉಯಿರೋ ಮಱ್ಱೆಪ್ಪೊರುಟ್ಕುಮ್,
ಏಣ್ಪಾಲುಮ್ ಶೋರಾನ್ ಪರನ್ದುಳನಾಮೆಙ್ಗುಮೇ

ಕಾಣ್ಬರ್ ಆರ್ காண்பார் ஆர் = ಕಂಡುಕೊಳ್ಳುವವರು ಯಾರು, ಎಮ್ ಈಶನ್ ಕಣ್ಣನ್ನೈ எம் ஈசன் கண்ணனை = ನಮ್ಮ ಸ್ವಾಮಿಯಾದ ಕೃಷ್ಣಪರಮಾತ್ಮನನ್ನು, ಎನ್ ಕಾಣುಮಾ

Garani Srinivasan

ಆಯಿ ನಾಣ್ ಕಾಣ್ಣುಮ್ ಆರು = ಕಂಡುಕೊಳ್ಳುವ ಬಗೆಯಾದರೂ ಏನು, ಉಣ್ಣೋ ಉಣ್ಣಣ್ = ಉಣ್ಣಿದು, ಪೇಶಲ್ ಪೆಱಿಲ್ = ಹೇಳಹೊರಟರೆ, ಎಲ್ಲಾ ಉಲಗುಮ್ ನಾಲುನಾ ಉಲಗ್ರುಂ = ಎಲ್ಲಾ ಲೋಕಗಳು, ಓರ್ ಕುಕ್ಷಿ ಶೇರ್ ತುಱ್ಱು = ಒಂದು ಕುಕ್ಷಿಗೆ, ಅಱ್ಱಾ ಅಱ್ಱು = ಆಗದು (ಸಾಲದು), ಎಡೋಲ್ ವಾಡ್ಟಾ = ಮನೆಯಾದರೋ, ಶೇಣ್ಪಾಲ ಶೆಣ್ಣಪಾಲ = ಅತ್ಯಂತ ದೂರದಲ್ಲಿರುವವಸ್ತುಗಳು, ಮತ್ತು ಎಪ್ಪೊರುಟ್ಕುಮ್ ಮಱ್ಱು ನಾಲುಪಾರು ಉಯಿರೋ ಟ್ರುಂ = ಇತರ ಎಲ್ಲಾ ವಸ್ತುಗಳಿಗೂ, ಉಯಿರೋ = ಪ್ರಾಣವಾಗಿರುವವನು, ಪಿನ್ ಸಾಲುಮ್ ಶ್ಯಣ್ಪಾಲುಮ್ = ಸಾಮರ್ಥ್ಯ, ದಾರ್ಢ್ಯ ಮುಂತಾದ ಒಲವೆಯಲ್ಲಿ, ಶೇರಾನ್ ಶೇರಾಣ್ = ಕುಗ್ಗುವವನಲ್ಲ (ಸೋಲುವವನಲ್ಲ), ಪಿರನ್ದ ಪಾರನ್ತು = ದರಡಿ (ವಿಸ್ತಾರ), ಉಳನ್ ಉಣಾಣ್ = ಇದ್ದಾನೆ, ಎಙ್ಙುಮೇ ನಾಙ್ಗುಂ ಮೇ = ಎಲ್ಲೆಲ್ಲಿಯೂ.

ನಮ್ಮ ಸ್ವಾಮಿಯಾದ ಕೃಷ್ಣ ಪರಮಾತ್ಮನನ್ನು ಕಂಡುಕೊಳ್ಳುವವರು ಯಾರು? ಕಂಡುಕೊಳ್ಳುವ ಬಗೆಯಾದರೂ ಏನು? ಉಣಿದನ್ನು ಹೇಳಹೊರಟರೆ, ಎಲ್ಲಾ ಲೋಕಗಳೂ ಒಂದು ಕುಕ್ಷಿಗೆ (ಕುಕ್ಷಿಗೆ) ಸಾಲದು. ಮನೆಯಾದರೋ ಅತ್ಯಂತ ದೂರದಲ್ಲಿರುವ ಸ್ಥಳ, ಇತರ ಎಲ್ಲಾ ವಸ್ತುಗಳಿಗೂ ಪ್ರಾಣವಾಗಿರುವವನು ಎಲ್ಲೆಲ್ಲೂ ದರಡಿ (ವಿಸ್ತಾರ)ನು. ಸಾಮರ್ಥ್ಯ, ದಾರ್ಢ್ಯ ಮುಂತಾದ ಒಲವೆಯಲ್ಲಿ ಕುಗ್ಗುವವನಲ್ಲ. ಇದ್ದಾನೆ. (8)

ಭಗವಂತನನ್ನು ಯಾರು ಕಂಡುಕೊಳ್ಳುತ್ತಾರೆ? ಕಂಡುಕೊಳ್ಳುವ ಬಗೆಯೇನು? — ಈ ಎರಡು ಪ್ರಶ್ನೆಗಳಿಗೆ ಉತ್ತರವಾಗಿರುವಂತೆ ಈ ಪಾಶುರದ ವಿಷಯವಿದೆ.

ಭಗವಂತನ ಗುಣ ಸ್ವಭಾವಗಳು ಅದ್ಭುತ, ಆಶ್ಚರ್ಯಪೂರ್ಣ! ಪ್ರಳಯ ಕಾಲದಲ್ಲಿ ಎಲ್ಲಾ ಲೋಕಗಳು ಸ್ವಾಮಿಯ ಒಂದು ಕುಕ್ಷಿಗೆ ಸಾಲದು. ದಾನೆ, ತಬ್ಬಿ, ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಂಡು ಅವುಗಳನ್ನು ಸಂರಕ್ಷಿಸುತ್ತಾನಲ್ಲ! ಅವನನ್ನು ಸೇರುವುದಾದರೂ ಹೇಗೆ? ಅವನಿರುವುದು ಎಲ್ಲಾ ಲೋಕಗಳ ಎಲ್ಲೆಯ ಆಚೆಗೆ, ಅತ್ಯಂತ ದೂರದ ಸ್ಥಳದಲ್ಲಿ! ಆದರೇನು, ಅವನು ಸೃಷ್ಟಿಸಿರುವ ಎಲ್ಲಾ ಚರಾಚರ ವಸ್ತುಗಳಲ್ಲಿ, ಅವುಗಳ ಅಂತರ್ಯಾಮಿಯಾಗಿ, ಎಲ್ಲೆಲ್ಲೂ ದರಡಿ, ಎಲ್ಲಕಡೆಯೂ ವ್ಯಾಪಿಸಿಕೊಂಡಿದ್ದಾನೆ! ನಾನಾ ಅವತಾರಗಳನ್ನು ತಳೆದು, ಅವನು

Garani Srinivasan

ಮಾಡಿ ತೋರಿಸುವ ಒಂದೊಂದು ಕಾರ್ಯವೂ ಅದ್ಭುತವೇ, ಆಶ್ಚರ್ಯಪೂರ್ಣವೇ! ಶ್ರೀಕೃಷ್ಣನ ಶರೀರದ ವೈಭವ ಹೊಂದೇ ಸಾಲದೇ? ಅದಷ್ಟನ್ನು ಪೂರ್ಣವಾಗಿ ಅರಿತುಕೊಂಡರೆ ಸಾಲದೇ? ಬಲ, ಶಕ್ತಿ, ಸಾಮರ್ಥ್ಯ, ದಾರ್ಢ್ಯ ಮುಂತಾದವುಗಳಲ್ಲಿ ಅವನ ಹಿರಿಮೆಯನ್ನು ವರ್ಣಿಸುವವರಾದರೂ ಇದ್ದಾರೆಯೇ? ಹೀಗಿರುವಲ್ಲಿ, ಭಗವಂತನನ್ನು ಅರಿತುಕೊಳ್ಳುವುದಾದರೂ ಹೇಗೆ? ಅರಿತುಕೊಳ್ಳುವವರು ಯಾರು?

ಭಗವಂತನ ಹಿರಿಮೆಯ ಕಾರ್ಯಗಳನ್ನು ಅರಿತುಕೊಳ್ಳುವುದರ ಮೂಲಕವೇ ಅವನನ್ನು ಕಂಡುಕೊಳ್ಳಬೇಕು. ಅದೇ ವಿಧ ಭಗವಾನ್- ಎನ್ನುತ್ತಾರೆ ಆಳ್ವಾರರು

ಪೆರ್ರಾಣ್ - ಎಂಬುದಕ್ಕೆ "ಬಲ, ಶಕ್ತಿ, ಸಾಮರ್ಥ್ಯ, ದಾರ್ಢ್ಯ, ಹಿರಿಮೆ, ಎಲ್ಲೆ, ದುರದಂತರದ ಬಾಹು (ದರ್ಪದ ಬಾಹು), ಬಹುವಿಕೆ, ವಕ್ರಾವಿಕೆ" ಎಂದೆಲ್ಲಾ ಅರ್ಥವಾಗುತ್ತದೆ

9. எங்குமுளன் கண்ணனென்ற மகனைக் காய்ந்து,
இங்கில்லையாலென்று இரணியன் தூண் புடைப்ப, என்
அங்கப்பொழுதே அவன் வீயத் தோன்றிய
சிங்கப்பிரான் பெருமை ஆராயும் சீர்மைத்தே.

ಎಙ್ಗುಮುಳನ್ ಕಣ್ಣನೆನ್ರ ಮಗನೈಕ್ಕಾಯ್ನ್ದು,
ಇಙ್ಗಿಲ್ಲೈಯಾಲೆನ್ರು ಇರಣಿಯನ್ ತೂಣ್ ಪುಡೈಪ್ಪ,
ಅಙ್ಗಪ್ಪೊಳುದೇ ಅವನ್ ವೀಯತ್ತೋನ್ರಿಯ, ಎನ್
ಶಿಙ್ಗಪ್ಪಿರಾನ್ ಪೆರುಮೈ ಆರಾಯುಮ್ ಶೀರ್ಮೈತ್ತೇ.

ಎಙ್ಗುಮ್ ಉಳನ್ எங்கும் உளன் = ಎಲ್ಲೆಲ್ಲಿಯೂ ಇದ್ದಾನೆ, ಕಣ್ಣನ್ கண்ணன் = ಆಶ್ಚರ್ಯನಾದ ಭಗವಂತನು (ಶ್ರೀಕೃಷ್ಣನಾದ ಭಗವಂತನು), ಎನ್ರ என்ற = ಎನ್ನುವ, ಮಗನೈ மகனை = ಮಗನ ಮೇಲೆ, ಕಾಯ್ನ್ದು காய்ந்து = ಕೋಪಿಸಿಕೊಂಡು, ಇಙ್ಗು இங்கு = ಇಲ್ಲಿ, ಇಲ್ಲೈ ಆಲ್ இல்லை ஆல் = ಇಲ್ಲವಲ್ಲವೇ, ಎನ್ರು என்று = ಎನ್ನುತ್ತಾ (ಎಂದು), ಇರಣಿಯನ್ இரணியன் = ಹಿರಣ್ಯಕಶಿಪು, ತೂಣ್ ಪುಡೈಪ್ಪ தூண் புடைப்ப = ಕಂಬವನ್ನು ಒಡೆಯಲು, ಅಙ್ಗು அங்கு = ಅಲ್ಲಿಯೇ, ಅಪ್ಪೊಳುದೇ அப்பொழுதே = ಆ ಕ್ಷಣದಲ್ಲಿಯೇ (ಆಗಲೇ), ಅವನ್ ವೀಯ அவன் வீய = ಅವನು ಸಾಯಲೆಂದು, ತೋನ್ರಿಯ தோன்றிய = ಅವತರಿಸಿದ, ಎನ್ ಶಿಙ್ಗಪ್ಪಿರಾನ್ என் சிங்கப்பிரான் = ನನ್ನ ನರಸಿಂಹಸ್ವಾಮಿಯ, ಪೆರುಮೈ பெருமை =

ಹಿರಿಮೆಯೆಂಬುದು, ಆರಾಯುವ ஆராயும் = ಆಲೋಚಿಸು
ವುದಕ್ಕೆ ಶೀರ್ಮೈತ್ತೇ சீர்மைத்தே = ಶ್ರೇಷ್ಠವಾದದ್ದೇ

ಆಶ್ಚರ್ಯಕರವಾದ ಭಗವಂತನು (ಕೃಷ್ಣನು) ಎಲ್ಲೆಲ್ಲಿಯೂ ಇದ್ದಾನೆ ಎನ್ನುವ ಮಾತನ ಮೇಲೆ ಕೋಪಿಸಿಕೊಂಡು, ಇಲ್ಲಿ ಇಲ್ಲ ಅಲ್ಲವೇ (ಅಯ್ಯೋ) ಎನ್ನುತ್ತಾ ಹಿರಣ್ಯಕಶಿಪುವು ಕಂಬವನ್ನು ಒದೆಯಲು, ಅಲ್ಲಿಯೇ ಆ ಕ್ಷಣದಲ್ಲೇ (ಆಗಲೇ) ಅವನು ಸಾಯುವಂತೆ ಅವತರಿಸಿದ ನನ್ನ ನರಸಿಂಹಸ್ವಾಮಿಯ ಹಿರಿಮೆಯೆಂಬುದು ಆಲೋಚಿಸುವುದಕ್ಕೆ ಶ್ರೇಷ್ಠವಾದದ್ದೇ. (9)

ಹಿಂದಿನ ಪಾಶುರದಲ್ಲಿ ಭಗವಂತನನ್ನು ಕಂಡುಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಬಂತು. ಅದಕ್ಕೆ ಉತ್ತರವಾಗಿ ಅವನ ಕಾರ್ಯಗಳ ಹಿರಿಮೆಯಿಂದಲೇ ಅವನನ್ನು ಕಂಡುಕೊಳ್ಳಬಹುದು ಎಂದು ಹೇಳಲಾಯಿತು. ಭಗವಂತನ ಕಾರ್ಯದ ಹಿರಿಮೆಯನ್ನು ತಿಳಿಸುವ ಒಂದು ನಿದರ್ಶನ ಇಲ್ಲಿದೆ:

ಪ್ರಹ್ಲಾದನು ಹರಿಭಕ್ತ. ಅವನ ತಂದೆ ಹಿರಣ್ಯಕಶಿಪು ಹರಿದ್ವೇಷಿ. "ಹರಿ ಸರ್ವವ್ಯಾಪಿ. ಅವನು ಎಲ್ಲೆಲ್ಲೂ, ಎಲ್ಲ ವಸ್ತುಗಳಲ್ಲೂ ಇದ್ದಾನೆ" ಎಂಬುದು ಪ್ರಹ್ಲಾದನ ನಂಬಿಕೆಯ ಮಾತು. ಅದನ್ನು ಸುಳ್ಳುಮಾಡಬೇಕು ಎಂದು ಅವರ ತಂದೆ. ಅವನು ತನ್ನ ಮುಂದಿರುವ ಉಕ್ಕಿನ ಕಂಬವನ್ನು ಒದೆಯುತ್ತಾ "ಇಲ್ಲಿ ನಿನ್ನ ಆ ಹರಿ ಇಲ್ಲವೇ ಇಲ್ಲ! ಅಯ್ಯೋ!!" ಎಂದು ಮಾತನ್ನು ಮುಗಿಸಿದ. ಕೂಡಲೇ ಬಂತು ಅದಕ್ಕೆ ಉತ್ತರ! ಆಗಲೇ, ಆ ಕಂಬದಿಂದಲೇ ಹರಿಯು ಹಿರಣ್ಯಕಶಿಪುವಿನ ಮೃತ್ಯುದ್ವಾರವಾದ 'ನರಹರಿ'ಯಾಗಿ ಉದ್ಭವಿಸಿ ಬಂದನು. ನರಸಿಂಹಾವತಾರದ ಹಿರಿಮೆ ಎಷ್ಟು ದೊಡ್ಡದು!

"ಇದಲ್ಲವೇ ಭಗವಂತನ ಹಿರಿಮೆ! ಇದನ್ನಲ್ಲವೇ ಚೆನ್ನಾಗಿ ಆಲೋಚಿಸಿ ಅರಿತುಕೊಳ್ಳಬೇಕಾದದ್ದು! ಇದೇ ಅಲ್ಲವೇ ಭಗವಂತನನ್ನು ಕಂಡುಕೊಳ್ಳುವ ಮಾರ್ಗ!" - ಎನ್ನುತ್ತಾರೆ ಆಳ್ವಾರರು.

10. சீர்மை கொள் வீடு சுவர்க்கம் நரகீறு,
ஈர்மை கொள் தேவர் நடுவா மற்றைப் பொருட்கும்
வேர்முதலாய் வித்தாய் பரந்து தனிநின்ற,
கார்முகில் போல் வண்ணன் என் கண்ணனை நான் கண்டேனே.

ಶೀರ್ಮೈ ಕೊಳ್ ವೀಡು ಶುವರ್ಕ್ಕ ನರ ಱು;
ಈರ್ಮೈ ಕೊಳ್ ದೇವರ್ ನಡುವಾ ಮಱ್ಱೈಪ್ಪೊರುಟ್ಕುಮ್,
ವೇರ್ ಮುದಲಾಯ್ ವಿತ್ತಾಯ್ ಪರನ್ದು ತನಿ ನಿನ್ಱ,
ಕಾರ್ ಮುಹಿಲ್ ಪೋಲ್ ವಣ್ಣನ್ ಎನ್ ಕಣ್ಣನೈ ನಾನ್ ಕಂಡೇನೇ.

Garani Srinivasan

ಶೀರ್ಮೈ ಕೊಳ್ சீர்மை கொள் = ಅತ್ಯುತ್ತಮವಾದ, ವೀಡು வீடு = ಮೋಕ್ಷವನ್ನು, ಶುವರ್ಕ್ಕಮ್ சுவர்க்கம் = ಸ್ವರ್ಗವನ್ನು, ನರಕು நரகு = ನರಕವನ್ನು, ಈರು ಆ ஈறா = ಅಂತ್ಯವು ಆಗಿ, ಈರ್ಮೈ ಕೊಳ್ ஈர்மை கொள் = ಕನಿಕರವುಳ್ಳ, ತೇವರ್ தேவர் = ದೇವತೆಗಳು, ನಡುವಾ நடுவா = ನಡುವೆಯಾಗಿ, ಮತ್ತು ಎಪ್ಪೊರುಟ್ಕುಮ್ மற்றெப்பொருட்கும் = ಇತರ ಎಲ್ಲಾ ವಸ್ತುಗಳಿಗೆ, ವೇರ್ வேர் = ಬೇರು, ಮುದಲ್ ಆಯ್ முதலாய் = ಮೊದಲಾಗಿ, ವಿತ್ತು ಆಯ್ வித்தாய் = ಬೀಜವು ಆಗಿ, ಪರನ್ದು பரந்து = ಹರಡಿಕೊಂಡು, ತನಿ தனி = ವಿಲಕ್ಷಣವಾಗಿ (~~ಬೇರೆಯಾಗಿ~~), ನಿನ್ರ நின்ற = ಇರುವ, ಕಾರ್ ಮುಗಿಲ್ ಪೋಲ್ ವಣ್ಣನ್ கார்முகில் போல் வண்ணன் = ಕಾರ್ಮುಗಿಲಿನ ಹಾಗೆ ಬಣ್ಣವುಳ್ಳವನಾದ, ಎನ್ ಕಣ್ಣನೈ என் கண்ணனை = ನನ್ನ ಆಕರ್ಷಕನನ್ನು (ಶ್ರೀಕೃಷ್ಣನಾಮಧೇಯನನ್ನು), ನಾನ್ ಕಣ್ಡೇನೇ நான் கண்டேனே = ನಾನು ಕಂಡುಕೊಂಡೆನಲ್ಲ!

ಅತ್ಯುತ್ತಮ ನೆಲೆಯಾದ ಮೋಕ್ಷವನ್ನು, ಸ್ವರ್ಗವನ್ನು, ನರಕವನ್ನು ಅಂತ್ಯಗೊಳಿಸುವವನಾಗಿ, ಕನಿಕರವುಳ್ಳವನಾಗಿ, ದೇವತೆಗಳ ನಡುವೆಯಾಗಿ, ಇತರ ಎಲ್ಲಾ ವಸ್ತುಗಳಿಗೆ ಬೇರು ಮೊದಲಾಗಿ ಬೀಜವು ಆಗಿ, ಹಾಗೆ ಹರಡಿಕೊಂಡು, ಸಂಪೂರ್ಣವಾಗಿ ವಿಲಕ್ಷಣವಾಗಿರುವ ಕಾರ್ಮುಗಿಲನ್ನ ಬಣ್ಣದವನಾದ ನನ್ನ ಆಕರ್ಷಕನನ್ನು (ಶ್ರೀಕೃಷ್ಣನಾಮಧೇಯನನ್ನು) ನಾನು ಕಂಡುಕೊಂಡೆನಲ್ಲ! (10)

ಈ ಪಾಶುರದಲ್ಲಿ ಆಳ್ವಾರರು ಭಗವದ್ದರ್ಶನಾನುಭವದಲ್ಲಿ ಓಲಾಡುತ್ತಾ ಆನಂದಿಸುತ್ತಿದ್ದಾರೆ. "ಇದಲ್ಲ" ಇದನ್ನಲ್ಲವೇ ಆಲ್ಹ್ಯಾದಿಸಿ ಅಂತುಕೊ ಭಗವಂತನನ್ನು ಕಂಡುಕೊಳ್ಳಬೇಕಾದದ್ದು. ಇದೇ ಅಲ್ಲವೇ ಭಗವಂತನನ್ನು ಕಂಡುಕೊಳ್ಳಬೇಕಾದದ್ದು! - ಎಂಬುದಕ್ಕೆ ಆಳ್ವಾರರೇ ನಿದರ್ಶನ, ಅವರ ಅನುಭವದ ಮಾತೇ ಅದು ಎಂಬಂತೆ ಪಾಶುರದ ವಿಷಯ ಇದೆ.

"ಅತ್ಯುತ್ತಮನೆಲೆಯಾದ ... ಅಂತ್ಯಗೊಳಿಸುವವನಾಗಿ -

ಜೀವನಂತೆ ಅವರವರ ಕರ್ಮಾನುಸಾರವಾಗಿ ಸ್ವರ್ಗ ನರಕಗಳು ದೊರೆಯುತ್ತವೆ. ಪಾಪಕರ್ಮಗಳು ನರಕಾನುಭವವನ್ನು ತರುತ್ತವೆ. ಪುಣ್ಯಕರ್ಮಗಳಿಂದ ಸ್ವರ್ಗವಾಸ. ಪುಣ್ಯಫಲ ಇರುವವರೆಗೂ ಸ್ವರ್ಗಾನುಭವ. ಆ ಪುಣ್ಯ ಕ್ಷೀಣಿಸಿದ ಕೂಡಲೇ ಸ್ವರ್ಗದಿಂದ ಮತ್ತೆ ಮರ್ತ್ಯಲೋಕಕ್ಕೆ. ಮತ್ತೆ ಕರ್ಮಾನುಭವ ಅದಕ್ಕೆ ತಕ್ಕಂತೆ ನರಕ ನಾಕಗಳು ಹುಟ್ಟು-

ನಾವುಗಳ ಸಂಕೋಲೆ ಜೀವನನ್ನು ಬಿಗಿದಿರುವವರೆಗೂ ಇದು ತಪ್ಪಿದ್ದಲ್ಲ. ಈ ಸಂಕೋಲೆಯನ್ನು ಕಡಿದು ದಾಟುವುದೇ ಮೋಕ್ಷ. ಅದಿಲ್ಲವಾದರೆ ನರಕದ ದುಃಖ ಸಂಕಟಗಳೂ, ಸ್ವರ್ಗದ ಸುಖಾನುಭವವೂ ಹೀಗೆ ಪರಿವರ್ತನೆ ಹೊಂದುತ್ತಾ, ಕೊಳ್ಳುತ್ತಿರುತ್ತವೆ. ಆದರೆ ಮೋಕ್ಷಾನಂದವು ಶಾಶ್ವತವಾದದ್ದು. ಈ ಅರಿವನ್ನು, [illegible] ಜೀವಿಗೆ ಕೊಡುವುದು ಬಿಡುಗಡೆಗೆ ಉಪಾಯವನ್ನು ತೋರುವವನು ಭಗವಂತನೇ.

ಪ್ರಕೃತಿಯ ಬಂಧನದಲ್ಲಿ ಸಿಕ್ಕಿಕೊಳ್ಳುತ್ತಿರುವ ಜೀವನಿಗೆ ಬಿಡುಗಡೆ ಭಗವಂತನಿಗೆ ಅಪಾರವಾದ ಕನಿಕರ. ಅವರನ್ನು ತನ್ನ ಕಡೆಗೆ ಆಕರ್ಷಿಸಿ ಸೆಳೆದುಕೊಂಡು, ಉದ್ಧರಿಸುವುದೇ ಆ ಕನಿಕರದ ಫಲ.

ದೇವತೆಗಳಿಗೆ ಆಧಾರನಾಗಿ, ಅವರ ಮೇಲೆ ಪ್ರೇರಕನಾಗಿ, ಅವರ ನಡುವೆಯೇ, ಅವರ ಧರ್ಮ ನೀತಿಗಳ ನಿರ್ದೇಶಕನಾಗಿರುತ್ತಾನೆ ಭಗವಂತ.

"ಬೇರು ಮೇಲಾಗಿ ಬೀಳು ವೃಕ್ಷ" — ಇದೊಂದು ಸುಂದರವಾದ ರೂಪಕ. ಬೇರು ಮರಕ್ಕೆ ಆಧಾರ. ಅದನ್ನು ಭದ್ರವಾಗಿ, ನೆಲಕ್ಕೆ ನಿಲ್ಲಿಸಿಟ್ಟುಕೊಳ್ಳುವುದು ನೆಲದ ಒಳಗಡೆ, ಕಣ್ಣಿಗೆ ಕಾಣಿಸದಂತೆ ಇದ್ದುಕೊಂಡು, ಮರಕ್ಕೆ ಬೇಕಾದ ಆಹಾರವನ್ನು ನೀರನ್ನು ಒದಗಿಸಿಕೊಡುತ್ತದೆ. ಮರದ ಬೆಳವಣಿಗೆಗೆ ಎಲ್ಲಾ ಬಗೆಯಲೂ ಸಹಕಾರಿ. ಮರವು ಬೆಳೆಯುವ ತನಕವೂ ([illegible]) ಅದನ್ನು ಕಾಪಾಡುತ್ತದೆ. ಹಾಗೆಯೇ, ಭಗವಂತನು ತಾನು ಸೃಷ್ಟಿಸಿದ ಎಲ್ಲಾ ಚೇತನ ಅಚೇತನ ವಸ್ತುಗಳಿಗೂ, ಬೇರಿನ ಹಾಗೆ, ಕಣ್ಣಿಗೆ ಕಾಣಿಸದಂತೆ, ಅವುಗಳ ಅಂತರ್ಯಾಮಿಯಾಗಿದ್ದುಕೊಂಡು, ಅವುಗಳಿಗೆ ಪ್ರೇರಕನಾಗಿ, ನಿರ್ದೇಶಕನಾಗಿ, ರಕ್ಷಕ, ಸಹಜ ಆಧಾರನಾಗಿ, ಅಭಿವೃದ್ಧಿಕಾರಕನಾಗಿ, ಲಯಕಾಲದಲ್ಲಿ ಅವುಗಳನ್ನು ಬೀಜರೂಪದಲ್ಲಿ ತನ್ನಲ್ಲಿಟ್ಟುಕೊಂಡು ಸಂರಕ್ಷಿಸುತ್ತಾನೆ.

'ಹರಡಿಕೊಂಡು, ಸಂಪೂರ್ಣವಾಗಿ, ವಿಲಕ್ಷಣವಾಗಿರುವ ಕಾಮನಬಿಲ್ಲಿನ ಹಾಗೆ ಬಣ್ಣದವನಾದ' — ಸುಂದರವಾದ ಉಪಮಾನ. ಕಾಮನಬಿಲ್ಲು ನೋಡಿದರೆ ಭಗವಂತನನ್ನು ಜ್ಞಾಪಿಸಲಾಗದೆ. ಕಾಮನಬಿಲ್ಲು ತನಗೆ ಎಷ್ಟು ಸಾಧ್ಯವೋ ಅಷ್ಟು ನೀರನ್ನು ತನ್ನಲ್ಲಿ ತುಂಬಿಟ್ಟುಕೊಂಡು ಸಂಪೂರ್ಣವಾಗಿರುತ್ತದೆ. ಎಲ್ಲೆಲ್ಲೂ ಹರಡಿಕೊಳ್ಳುತ್ತದೆ ತನ್ನ ವಿಲಕ್ಷಣವಾದ ರೂಪ ಬಣ್ಣಗಳಿಂದ ಆಶ್ಚರ್ಯಚಕಿತವಾಗುತ್ತದೆ. ವಿರಾಟ ರೂಪದ, ಕೆಳಗಡೆ ನೆಲದ ಮೇಲೆ ಲಕ್ಷ ವಸ್ತುಗಳು ಬೆಳೆದು-

ವೃಕ್ಷಂಗಳೂ ಹೆಚ್ಚಾಗಿಯೇ, ತಾನು ಒಡೆದಬ್ಬು ಕೊಂಡಿರುವ ನೀರನ್ನು ಎರೆಯುತ್ತದೆ. ಹಾಗೆಯೇ ಭಗವಂತನೂ ಸರ್ವವ್ಯಾಪಿ. ತಾಯಾರ್‌ಗೂ ನಬಿನ್ನಾದವನು ವಿಲಕ್ಷಣ ಸುಂದರ. ಆಶ್ಚರ್ಯಕರ. ಮತ್ತು ಪರಮ ಉದಾರ

ಆಳ್ವಾರರು ಹೇಳುತ್ತಾರೆ: ಸ್ವರ್ಗ, ನರಕಗಳ ~~[illegible]~~ ಬಗ್ಗೆ ಅಂತವನ್ನುಂಟು ಮಾಡಿ. ಅವುಗಳ ಪುನರಾವರ್ತನೆಯಿಂದ ಬಿಡುಗಡೆ ಹೊಂದುವುದಕ್ಕೆ ಉಪಾಯವನ್ನು ತಿಳಿಸಿ, ನನ್ನನ್ನು ತನ್ನ ಕಡೆಗೆ ಆಕರ್ಷಿಸಿಕೊಂಡು, ನನ್ನನ್ನುದ್ಧರಿಸಿದ ಶ್ರೀಕೃಷ್ಣನಾಗಿಯಾದ ಭಗವಂತನನ್ನು ನಾನು ಕಂಡುಕೊಂಡೆ! ಈ ನನ್ನ ಭಾಗ್ಯಕ್ಕೆ ಎಣೆ ಯುಂಟೇ?

11. கண்டலங்கள் செய்ய கருமேனியம்மானை,
வண்டலம்பும் சோலை வழுதிவளநாடன்,
பண்டலையில் சொன்ன தமிழ் ஆயிரத்திப்பத்தும் வல்லார்,
விண்டலையில் வீற்றிருந்தாள்வர் எம்மாவீடே.

ಕಣ್ಡಲಙ್ಗಳ್ ಶೆಯ್ಯ ಕರುಮೇನಿ ಯಮ್ಮಾನೈ,
ವಣ್ಡಲಮ್ಬುಮ್ ಶೋಲೈ ವಳುದಿ ವಳನಾಡನ್,
ಪಣ್ಡಲೈಯುಳ್ ಶೊನ್ನ ತಮಿೞ್ ಆಯಿರತ್ತಿಪ್ಪತ್ತುಮ್ ವಲ್ಲಾರ್,
ವಿಣ್ಡಲೈಯುಳ್ ವೀಱ್ಱಿರುನ್ದಾಳ್ವರ್ ಎಮ್ಮಾವೀಡೇ.

கண் தலங்கள் செய்ய = ಕಣ್ಣು ಕಣ್ ತಲಙ್ಗಳ್ ಶೆಯ್ಯ ಗಳು ಕೆಂಪಗಾ, ಕರುಮೇನಿ கருமேனி = ಕರಿಯ ದೇಹವು, ಉಳ್ಳ, ಅಮ್ಮಾನೈ அம்மானை = ಸ್ವಾಮಿಯನ್ನು, ಕೂಡ, ವಣ್ಡು வண்டு = ದುಂಬಿಗಳು, ಅಲಮ್ಬುಮ್ அலம்பும் = ಗಾನಮಾಡುವ, ಶೋಲೈ சோலை = ತೋಟಗಳನ್ನುಳ್ಳ, ವಳುದಿ வழுதி = ತಿರುವಳುದಿ ಎಂಬ, ವಳಮ್ வளம் = ಸಮೃದ್ಧವಾದ, ನಾಡನ್ நாடன் = ನಾಡಿನವನು, ಪಣ್ ತಲೈಯುಳ್ ಶೊನ್ನ பண் தலையில் சொன்ன = ಗಾನವನ್ನೇ ಪ್ರಧಾನವಾಗಿಟ್ಟುಕೊಂಡು ಹೇಳಿದ, ತಮಿೞ್ தமிழ் = ತಮಿಳಿನ, ಆಯಿರತ್ತು ஆயிரத்து = ಒಂದು ಸಾವಿರ (ಪಾಶುರ) ದಲ್ಲಿ, ಇ ಪತ್ತುಮ್ ವಲ್ಲಾರ್ இ பத்தும் வல்லார் = ಈ ಹತ್ತು ಪಾಶುರಗಳನ್ನು ಬಲ್ಲವರು, ವಿಣ್ ತಲೈಯುಳ್ விண் தலையில் = ಪರಮಪದದಲ್ಲಿ, ವೀಱ್ಱಿರುನ್ದು வீற்றிருந்து = ವಾಸಮಾಡುತ್ತ, ಆಳ್ವರ್ ஆள்வர் = ಆಳುತ್ತಾರೆ, ಎಮ್ಮಾವೀಡೇ எம்மாவீடே = ಆ ಮಹಾ ಬಿಡುಗಡೆಯನ್ನೇ.

ಕಣ್ಣುಗಳು ಕೆಂಪಾಗಿ, ದೇಹವು ಕೃಶವಾಗಿ ಇರುವ ಸ್ವಾಮಿಯನ್ನ
ಕುರಿತು ದುಂಬಿಗಳು ಗಾನಮಾಡುವ ಕೋಳ್ಪಿಗಳನ್ನುಳ್ಳ ತಿರು-
ವಳ್ಳಿ ಎಂಬ ಸಮೃದ್ಧವಾದ ನಾಡಿನವನು ಗಾನವನ್ನೇ ಪ್ರಧಾನವಾ
ಗಿ ಉಳ್ಳ ಕೊಂಡು ಹೇಳಿದ ತಮಿಳಿನ ಒಂದು ಸಾವಿರ ಪಾಶುರಗಳ
ಲ್ಲಿ ಈ ಹತ್ತನ್ನು ಬಲ್ಲವರು ಪರಮಪದದಲ್ಲಿ ವಾಸಮಾಡುತ್ತಾ (11)
ಆ ಮಹಾ ಬಿಡುಗಡೆಯನ್ನೇ ಆಳುವವರಾಗುತ್ತಾರೆ.

ಇದು ಈ ತಿರುವಾಯ್ಮೊಳಿಯ ಕಡೆಯ ಪಾಶುರ. ಮಿಕ್ಕ
ತಿರುವಾಯ್ಮೊಳಿಗಳ ಕಡೆಯ ಪಾಶುರಗಳಂತಲ್ಲ. ಅಂಕಿತದಲ್ಲಿ "ಕುರುಕೂರ್
ಇದು ಭಿನ್ನವಾಗಿದೆ ಎಂಬುದನ್ನು ಗಮನಿಸಬಹುದಾಗಿದೆ. ಸ್ಪಷ್ಟವಾಗಿ ಹೇಳಿ
ಶಠಕೋಪನ್" ಎಂದು ಕವಿಯು ತನ್ನ ಗುರುತನ್ನು ಸ್ಪಷ್ಟವಾಗಿ ಹೇಳಿ
ಕೊಳ್ಳಲಾಗುತ್ತಿತ್ತು. ಈ ತಿರುವಾಯ್ಮೊಳಿಯಲ್ಲಾದರೋ ಹಾಗಲ್ಲ
ಅದಕ್ಕೆ ಬದಲಾಗಿ "ವಳುದಿ ವಳನಾಡನ್" ಎಂದು ತನ್ನ ನಾಡಿನ
ಹಿರಿಮೆಯನ್ನು ವ್ಯಕ್ತಪಡಿಸಿದ್ದಾನೆ. ಹೆಸರನ್ನು ಗೋಪ್ಯಮಾಡಿದ್ದಾನೆ.
ತನ್ನ ಹಿರಿಮೆ ತನ್ನ ನಾಡಿಗೆ ಸೇರಿದ್ದು ಎಂಬ ವಿಶಾಲವಾದ ದಾರ್ಶನಿಕ
ಮನೋಭಾವವನ್ನು ವ್ಯಕ್ತಪಡಿಸಿದ್ದಾನೆ. ಇದೊಂದು ಹಿರಿಮೆಯೇ!

ಕೆಂದಾವರೆಯಂತೆ ವಿಶಾಲವೂ ಸುಂದರವೂ ಆದ ಕಣ್ಣುಗಳನ್ನು
ಸಂಪೂರ್ಣವಾದ ಭವ್ಯವಾದ ಕಾರ್ಯಗಳ ಅನಂತ ಆಶ್ಚರ್ಯಕರವಾದ
ದೇಹಕಾಂತಿಯನ್ನುಳ್ಳವನೂ ಆದ ಭಗವಂತನ ಗುಣಸ್ವಭಾವಗಳ
ನ್ನು ಕುರಿತು, ಅವನನ್ನು ಕಂಡುಕೊಳ್ಳುವ ಸುಲಭೋಪಾಯವೇ
ಇದು ಎಂದು ಹೇಳುತ್ತಾ ಶಠಕೋಪನು (ನಮ್ಮಾಳ್ವಾರರು) ಒಂದು
ಸಾವಿರ ಪಾಶುರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಒಂದು ಭಾಗವಾ
ದ ಈ ಹತ್ತು ಪಾಶುರಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಅರಿತುಕೊಂ
ಡವರು ಪರಮಪದವಾಸಿಗಳಾಗಿ ಅಲ್ಲಿಯ ಅಖಂಡಾನಂದವನ್ನು
ಸೂರೆಗೊಳ್ಳುತ್ತಾರೆ. ಹೀಗಿದೆ, ಈ ತಿರುವಾಯ್ಮೊಳಿಯ ಫಲಶ್ರುತಿ!

——— o ———

ತಿರುವಾಯ್ ಮೊಳಿ — ಎರಡನೆಯ ದಶಕ — ಒಂಬತ್ತನೆಯ ತಿರುವಾಯ್ಮೊಳಿ

திருவாய்மொழி - இரண்டாம் பத்து - ஒன்பதாந் திருவாய்மொழி.

೧. ಎಮ್ಮಾವೀಟ್ಟುತ್ತಿಱಮುಮ್ எம்மாவீட்டுத்திறமும்

1. எம்மாவீட்டுத்திறமும் செப்பம், நின்
செம்மாபாதபற்புத்தலை சேர் தொல்லை,
கைம்மாதுன்பம் கடிந்தபிரானே,
அம்மா! அடியேன் வேண்டுவதீதே.

ಎಮ್ಮಾವೀಟ್ಟುತ್ತಿಱಮುಮ್ ಶೆಪ್ಪಮ್, ನಿನ್
ಶೆಮ್ಮಾಪಾದ ಪಱ್ಪುತ್ತಲೈ ಶೇರ್ ತ್ತೊಲ್ಲೈ,
ಕೈಮ್ಮಾದುನ್ಬಮ್ ಕಡಿನ್ದ ಪಿರಾನೇ,
ಅಮ್ಮಾ! ಅಡಿಯೇನ್ ವೇಣ್ಡುವದೀದೇ.

ಎಮ್ಮಾವೀಟ್ಟು ತಿಱಮುಮ್ எம்மா வீட்டு திறமும் = ಆ ಮಹಾ ಬಹುಗಡೆಯ ವಿಷಯವನ್ನು, ಶೆಪ್ಪಮ್ செப்பம் = ಹೇಳೆವು, ಮಾ மா = ಪರಮ ನಿನ್ நின் = ನಿನ್ನ, ಶೆಮ್ செம் = ಕೆಂಪಾದ, ಶ್ರೇಷ್ಠವಾದ, ಪಾದಪಱ್ಪು பாதபற்பு = ಪಾದಪದ್ಮಗಳು, ತಲೈ ತಲೈ = ತಲೆಯನ್ನು, ಶೇರ್ತ್ತು ಒಲ್ಲೈ சேர்த்து ஒல்லை = ಬೇಗನೆ (ಬೇಗನೇ) ಸೇರಿಸು, ಕೈಮ್ಮಾ கைம்மா = ಆನೆಯ, ತುನ್ಬಮ್ துன்பம் = ಸಂಕಟವನ್ನು, ಕಡಿನ್ದ ಪಿರಾನೇ கடிந்த பிரானே = ಹೋಗಲಾಡಿಸಿದ ಸ್ವಾಮಿಯೇ, ಅಮ್ಮಾ அம்மா = ನನ್ನ ಸ್ವಾಮಿಯೇ, ಅಡಿಯೇನ್ அடியேன் = ಪಾದಸೇವಕನಾದ ನಾನು, ವೇಣ್ಡುವದು வேண்டுவது ஈதே = ಬೇಡುವುದು ಇದನ್ನೇ.

ಆನೆಯ ಸಂಕಟವನ್ನು ನಿವಾರಿಸಿದ ಸ್ವಾಮಿಯೇ, ಆ ಮಹಾಬಹುಗಡೆಯ ವಿಷಯವನ್ನು ಹೇಳೆವು. ನಿನ್ನ ಕೆಂಪಾದ ಪರಮಶ್ರೇಷ್ಠವಾದ ಪಾದಪದ್ಮದಲ್ಲಿ (ನನ್ನ) ತಲೆಯನ್ನು ಬೇಗನೆ (ಬೇಗನೇ) ಸೇರಿಸಬೇಕು ನನ್ನ ಸ್ವಾಮಿಯೇ, ಪಾದಸೇವಕನಾದ ನಾನು ಬೇಡುವುದು ಇದನ್ನೇ (1)

ಸರ್ವಶಕ್ತನೂ, ಕರುಣಾಸಾಗರನೂ ಆಗಿರುವ ಭಗವಂತನನ್ನು ಕಂಡುಕೊಳ್ಳುವ ಬಗೆಯೇನು ಎಂಬ ಪ್ರಶ್ನೆಯನ್ನು ಮುಂದಿಟ್ಟು, ಸ್ವಾಮಿಯ ಅಸಾಧಾರಣವೂ ವಿಲಕ್ಷಣವೂ ಆದ ಕಾರ್ಯಗಳಿಂದಲೇ, ಅವನನ್ನು ಸುಲಭವಾಗಿ ಕಂಡುಕೊಳ್ಳಬಹುದು ಎಂದು ತಿಳಿಸಲಾಯಿತು

Garani Srinivasan

ಇಂದಿನ ತಿರುವಾಯ್ಮೊಳಿಯಲ್ಲಿ

ಈಗ, ಹಾಗೆ ಕಂಡುಕೊಂಡಿರುವ ಭಗವಂತನು ನಮ್ಮ ಮುಂದೆ ನಿಂತಾಗ, ಅವನಲ್ಲಿ ನಾವು ಆಶೆ ಮಾಡಿಕೊಳ್ಳಬಹುದಾದದ್ದು ಏನು? ಈ ಪ್ರಶ್ನೆಗೆ ಉತ್ತರವಾಗಿ ಈ ಸುಂದರವಾದ ಪಾಶುರ

"ಆನೆಯು ಸಂಕಟವನ್ನು ಕಳೆಯಿಸಿದ್ದು" — ಗಜೇಂದ್ರ ಮೋಕ್ಷದ ವಿಷಯ. ಕೇವಲ ಪ್ರಾಣಿಯಾದರೂ, ಸಂಕಟದಲ್ಲಿ ಸಿಕ್ಕಿ ಬಿದ್ದು, ಭಗವಂತನ ಮರೆಹೊಕ್ಕಾಗ, ಸ್ವಾಮಿಯು ಅದರ ಬಗೆಗೆ ಎಷ್ಟು ಬೇಗ ಮರುಕಗೊಳ್ಳುತ್ತಾನೆ! ಎಷ್ಟು ಬೇಗ ಗರುಡಾರೂಢನಾಗಿ ಅದರ ಬಳಿಗೆ ಧಾವಿಸುತ್ತಾನೆ! ಎಷ್ಟು ಬೇಗ ಅದರ ಶತ್ರುವಾದ ಮೊಸಳೆಯನ್ನು ತನ್ನ ಚಕ್ರಾಯುಧದಿಂದ ಕೊಂದುಹಾಕಿಬಿಡುತ್ತಾನೆ! ಇದಲ್ಲವೇ ಅವನ ಪರಮಕಾರುಣ್ಯ, ಆಶ್ರಿತವಾತ್ಸಲ್ಯ!

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಆನೆಯು ಸಂಕಟವನ್ನು ಹರಿಸಿದ ಪರಮ ಕಾರುಣ್ಯನಿಧಿಯೇ ನೀನು. ನಾವು ಸಂಸಾರವೆಂಬ ಸಂಕಟದಲ್ಲಿ ~~...~~ ಸಿಕ್ಕಿಬಿದ್ದು ಕೊಳ್ಳುತ್ತಿದ್ದೇವೆ. ಆದರೆ, ಆ ಮಹಾ ಬಿಡುಗಡೆಯಾದ ಮೋಕ್ಷವನ್ನು ಕೂಡ ನಿನ್ನಲ್ಲಿ ಆಶೆ ಮಾಡಿಕೊಳ್ಳುವುದಿಲ್ಲ. ~~...~~ ಅದರ ವಿಷಯವಾಗಿ ಪ್ರಸ್ತಾಪವನ್ನು ಮಾಡುವುದಿಲ್ಲ. ನಿನ್ನ ಕೋ- ಮಲವಾದ ಪದ್ಮಗಳ ಮೇಲೆ ನಮ್ಮ ತಲೆಯನ್ನು ಈಗಲೇ (ಬೇಗಲೇ) ಇಡಬೇಕೆಂದು ಹಾತೊರೆಯುತ್ತಿದ್ದೇವೆ. ಪಾದಸೇವಕನಾದ ನಾನು ~~...~~ ಇದೊಂದನ್ನೇ ಬೇಡುವುದು. ಇಷ್ಟನ್ನು ಮಾತ್ರ ನೀನು ನನಗೆ ಅನುಗ್ರಹ ಮಾಡು.

ಭಗವಂತನ ಅಡಿದಾವರೆಯನ್ನು ತಲೆಯ ಮೇಲೆ ಇರಿಸಿಕೊಳ್ಳುವುದು, ಅಡಿದಾವರೆಯ ಮೇಲೆ ತಲೆಯನ್ನಿಡುವುದು, (ಅಥವಾ, ಅವು ಎಡೆಬಿಡದೆ ತನ್ನ ತಲೆಯ ಮೇಲಿರಲಿ ಎಂದು ಭಾವಿಸಿಕೊಳ್ಳುವುದು) ಭಗವಂತನೊಡನೆ ನಿಕಟವಾದ ಸಂಪರ್ಕ ಹೊಂದುವ ಒಂದು ರೀತಿ. ಇದು ಮೋಕ್ಷಾನಂದಕ್ಕಿಂತಲೂ ಹೆಚ್ಚಿನದು ಎಂದು ಆಳ್ವಾರರು ಅಭಿಪ್ರಾಯಪಡುತ್ತಾರೆ.

ಭಗವಂತನ ಅಡಿದಾವರೆಯ ಆಶ್ರಯಕ್ಕಿಂತಲೂ ಬೇರೆಲ್ಲ ಬಗೆಯ ಸುಖ ಆನಂದಗಳೂ, ಮೋಕ್ಷವೂ ಕೂಡ ಕೀಳುಮಟ್ಟದ್ದೇ!

2. ஈதே யானுன்னைக் கொள்வதெஞ்ஞான்றும், என்
மைதோய் சோதி மணிவண்ணா வெந்தாய்,
எய்தா நின் கழல் யானெய்த, ஞானக்
கைதா காலக்கழிவு செய்யேலே.

Garani Srinivasan

ಈದೇಯಾನುನ್ನೈ ಕೊಳ್ವದಿಞ್ಞಾನ್ರುಮ್, ಎನ್
ಮೈದೋಯ್ ಶೋದಿ ಮಣಿವಣ್ಣಾ ಎನ್ದಾಯ್,
ಎಯ್ದಾ ನಿನ್ ಕಳಲ್ ಯಾನೆಯ್ದ, ಞಾನ
ಕೈದಾ ಕಾಲಕ್ಕಳಿವು ಶೆಯ್ಯೇಲೇ.

ಈದೇ ஈதே = ಇದನ್ನೇ ಯಾನ್ யான் ನಾನು, ಉನ್ನೈ உன்னை = ನಿನ್ನನ್ನು, ಕೊಳ್ವದು ಎಞ್ಞಾನ್ರುಮ್ கொள்வது எஞ்ஞான்றும் = ಎಂದೆಂದಿಗೂ ಕೇಳುವುದು, ಎನ್ என் = ನನ್ನ, ಮೈ ತೋಯ್ ಶೋದಿ மைதோய் சோதி = ಕಾಡಿಗೆಯನ್ನು ಸೋಲಿಸುವಂಥ ಜ್ಯೋತಿಯುಳ್ಳ (ಕಾಡಿಗೆಯನ್ನು ಸೂಡುವಂಥ ಜ್ಯೋತಿಯುಳ್ಳ), ಮಣಿವಣ್ಣಾ ಮಣಿ ಎನ್ದಾಯ್ மணிவண்ணா எந்தாய் = ಇಂದ್ರನೀಲ ಮಣಿಯ ಬಣ್ಣದವನಾದ ನನ್ನ ಸ್ವಾಮಿಯೇ, ಎಯ್ದಾ எய்தா = ಪಡೆಯಲಾಗದಂಥ (ಸಮೀಪಿಸಲು ಸಾಧ್ಯವಾಗದಂಥ), ನಿನ್ ಕಳಲ್ நின் கழல் = ನಿನ್ನ ಶಿರುವಡಿಗಳನ್ನು, ಯಾನ್ ಎಯ್ದ யான் எய்த = ನಾನು ಪಡೆದುಕೊಳ್ಳುವಂತೆ (ಸೇರುವಂತೆ), ಞಾನಮ್ ஞானம் = ಕರುಣಿಸು ಜ್ಞಾನವೆಂಬ, ಕೈ ದಾ கைதா = ಸಾಧನವನ್ನು (ಕೈಯನ್ನು), ಕಾಲಮ್ காலம் = ಕಾಲವನ್ನು, ಕಳಿವು கழிவு = ಕಳೆಯುವಂತೆ, ಶೆಯ್ಯೇಲ್ செய்யேலே = ಮಾಡಬೇಡ.

ನನ್ನ ಕಾಡಿಗೆಯನ್ನು ಸೂಡುವಂಥ ಜ್ಯೋತಿಯುಳ್ಳ. ಇಂದ್ರನೀಲಮಣಿಯ ಬಣ್ಣದವನಾದ ನನ್ನ ಸ್ವಾಮಿಯೇ, ಇದನ್ನೇ ನಾನು ನಿನ್ನನ್ನು ಎಂದೆಂದಿಗಾ ಬೇಡುವುದು. ಸಮೀಪಿಸಲಾಗದಂಥ ನಿನ್ನ ಶಿರುವಡಿಗಳನ್ನು ನಾನು ಸೇರುವಂತೆ (ಪಡೆದುಕೊಳ್ಳುವಂತೆ) ಜ್ಞಾನವೆಂಬ ಸಾಧನವನ್ನು (ಕೈಯನ್ನು) ಕರುಣಿಸು. ಕಾಲವನ್ನು ಕಳೆಯುವಂತೆ ಮಾಡಬೇಡ. (2)

"ಇದನ್ನೇ ನಾನು ನಿನ್ನಲ್ಲಿ ಬೇಡುವುದು" – ಎಂದು ಹಿಂದಿನ ಪಾಶುರದಲ್ಲಿ ಹೇಳುತ್ತಾ ಆಳ್ವಾರರು ಭಗವಂತನ ಅಡಿದಾವರೆಗಳು ತಮ್ಮ ತಲೆಯ ಮೇಲೆ ನಿರಂತರವೂ ಇರಬೇಕೆಂದರು. ಮೋಕ್ಷಾನಂದಕ್ಕಿಂತಲೂ ಅದೇ ಮೇಲೆಂದರು. ಆದರೆ, ಭಗವಂತನ ಶಿರುವಡಿಗಳನ್ನು ಸೇರುವುದಾದರೂ ಹೇಗೆ? ಅವು ಸುಲಭವಾಗಿ ಪಡೆದುಕೊಳ್ಳುವಂಥವಲ್ಲ! ಇದನ್ನು ಕುರಿತು ಯೋಚಿಸುತ್ತಾ, ~~ಆಳ್ವಾರರು~~ ~~[illegible]~~ ಅದನ್ನು ಸಾಧಿಸಿಕೊಳ್ಳುವ ಮತ್ತೊಂದು ಸಾಧನವನ್ನು ಆಳ್ವಾರರು ಇಲ್ಲಿ ಬೇಡುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಬೇಗನಲೇ (ಈಗಲೇ) ನಿನ್ನ ದಿವ್ಯ ಶಿರುವಡಿಗಳನ್ನು ಸೇರಬೇಕೆಂಬ ಆತುರ ನನಗಿದೆ. ಸುಲಭವಾಗಿ ಪಡೆದುಕೊಳ್ಳುವಂಥದ್ದಲ್ಲ ಅವು! ನನ್ನಲ್ಲಿರುವ ಸಾಧನವಾದ

ಭಕ್ತಿ ವಿರಕ್ತಿಗಳು ಸಾಲವು. ಆದ್ದರಿಂದ, ನನಗೆ ಜ್ಞಾನವೆಂಬ ಮಹತ್ತ್ವಾದ ಸಾಧನವನ್ನು ಕರುಣಿಸು. ನಾನು ವ್ಯರ್ಥವಾಗಿ ಕಾಲವನ್ನು ಕಳೆಯುವಂತೆ ಮಾಡಬೇಡ.

ಇಲ್ಲಿ ಒಂದು ರೂಪಕವನ್ನು ನೆನಪಿಗೆ ತಂದುಕೊಳ್ಳಬಹುದು. ಭಕ್ತಿ ಎಂಬ ಹಕ್ಕಿಗೆ ಜ್ಞಾನವೂ ವೈರಾಗ್ಯವೂ ಎರಡು ರೆಕ್ಕೆಗಳು. ಅವುಗಳನ್ನು ಬಳಸಿಕೊಂಡು ಅದು [illegible] ಸೇರುವುದು.

ಭಕ್ತಿಯ ಪೂರ್ಣತೆಗೆ ಜ್ಞಾನವೂ ವೈರಾಗ್ಯವೂ ಸಾಧಕಗಳು.

"ಕೈ ணக" — ಎಂಬುದಕ್ಕೆ ಕೈ, ತೋಳು, ಸೊಂಡಿಲು, ಕಿರಣ, ಪಕ್ಷ, ವಿಷ, ಕೈಮರ, ಸಾಧನ, ಬುದ್ಧಿ, ಶಿಕ್ಷೆ, ಸೇನೆ, ಸಿದ್ಧಿಕೈದಾ, ಮಾಡತಕ್ಕದ್ದು, ಭೂಷಣ, ಶಕ್ತಿ, ಅಲ್ಪತನ, ಬಳಕೆ, ಸಾಲು, ಶಿಸ್ತು, ಉರಿತನ, ನಡತೆ" - ಇವೆಲ್ಲಾ ಶಂಕೆ, ಕಹಿ, ದುಃಖ, ಕೋಪ, ದ್ವೇಷ, ಅರ್ಥವಿದೆ. ಹೊಂದಿಕೊಳ್ಳತಕ್ಕವನ್ನು ಕೂಡಿಸಿಕೊಂಡು "ಜ್ಞಾನವೈಕೈ" ಎಂಬುದನ್ನು ಯುಕ್ತವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

3\. செய்யேல் தீவினையென்று அருள்செய்யும், என்
கையார் சக்கரக் கண்ண பிரானே,
ஐயார் கண்ட மடைக்கிலும் நின் கழல்,
எய்யாதேத்த, அருள் செய்யெனக்கே.

ಶೆಯ್ಯೇಲ್ ತೀವಿನೈಯೆನ್ರು ಅರುಳ್ ಶೆಯ್ಯುಮ್, ಎನ್
ಕೈಯಾರ್ ಶಕ್ಕರಕ್ಕಣ್ಣ ಪಿರಾನೇ,
ಐಯಾರ್ ಕಣ್ಡಮಡೈಕ್ಕಿಲುಮ್ ನಿನ ಕಳಲ್,
ಎಯ್ಯಾದೇತ್ತ, ಅರುಳ್ ಶೆಯ್ಯೆನಕ್ಕೇ.

ಶೆಯ್ಯೇಲ್ செய்யேல் = ಮಾಡಬೇಡ, ತೀವಿನೈ தீவினை = ಕೆಟ್ಟ ಕೆಲಸಗಳನ್ನು (ಪಾಪಕಾರ್ಯಗಳನ್ನು), ಎನ್ರು என்று = ಎಂದು ಅರುಳ್ ಶೆಯ್ಯುಮ್ அருள் செய்யும் = ಕೃಪೆಮಾಡುವ, ಎನ್ என் = ನನ್ನ, ಕೈ ಆರ್ கை ஆர் = ಕೈತುಂಬ (ಪೂರ್ಣವಾಗಿ), ಶಕ್ಕರಮ್ சக்கரம் = ಚಕ್ರಾಯುಧವನ್ನು ಹಿಡಿದಿರುವ, ಕಣ್ಣಪಿರಾನೇ கண்ணபிரானே = ಆಕರ್ಷಕನಾದ ಸ್ವಾಮಿಯೇ (ಶ್ರೀಕೃಷ್ಣಸ್ವಾಮಿಯೇ), ಐ ಆರ್ ஐ ஆர் = ಶ್ಲೇಷ್ಮವು ತುಂಬಿಕೊಂಡು, ಕಣ್ಡಮ್ கண்டம் = ಗಂಟಲನ್ನು, ಅಡೈಕ್ಕಿಲುಮ್ அடைக்கிலும் = ಅಡಕಿಕೊಂಡರೂ, ನಿನ್ ಕಳಲ್ நின் கழல் = ನಿನ್ನ ತಿರುವಡಿಗಳನ್ನು ಎಯ್ಯಾದು எய்யாது = ಸೋರದೆ, ಏತ್ತ ஏத்த = ಸ್ತುತಿಸುವಂತೆ, ಅರುಳ್ ಶೆಯ್ ಎನಕ್ಕೇ அருள் செய் எனக்கே = ನನಗೆ ಕೃಪೆಮಾಡು

ಕೈತುಂಬ (ಸಿದ್ಧವಾಗಿ) ಚಕ್ರಾಯುಧವನ್ನು ಹಿಡಿದಿರುವ ನನ್ನ ಆಕರ್ಷಕನಾದ ಸ್ವಾಮಿಯೇ (ಶ್ರೀಕೃಷ್ಣಸ್ವಾಮಿಯೇ), ಪಾಪಕಾರ್ಯಗಳನ್ನು ಮಾಡಬೇಡ ಎಂದು ನನಗೆ ಕೃಪೆಮಾಡುವಾಗ, ಶ್ಲೇಷ್ಮವು ತುಂಬಿಕೊಂಡು ಗಂಟಲನ್ನು ಅಡೆಕಟ್ಟಿದಾಗಲೂ ನೋಗದೆ ನಿನ್ನ (3) ತಿರುವಡಿಗಳನ್ನು ಸ್ತುತಿಸುವಂತೆ, ಕೃಪೆಮಾಡು

"ಜ್ಞಾನವನ್ನು ಕರುಣಿಸು" ಎಂಬುದು ಹಿಂದಿನ ಪಾಶುರದ ಬೇಡಿಕೆ "ಯಾವ ಬಗೆಯ ಜ್ಞಾನ ಬೇಕಾದದ್ದು" ಎಂಬುದರ ವಿವರಣೆ ಇಲ್ಲಿ ಬರುತ್ತದೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನನ್ನನ್ನು ನಿನ್ನ ಕಡೆಗೆ ಆಕರ್ಷಿಸಿದ್ದೀ. ಕೈಯಲ್ಲಿ ಚಕ್ರಾಯುಧವನ್ನು ಸಿದ್ಧವಾಗಿ ಹಿಡಿದು ನಿಂತಿದ್ದೀ. ಪಾಪಕಾರ್ಯಗಳನ್ನು ಎಂದರೆ ಕೆಟ್ಟ ಕೆಲಸಗಳನ್ನು ಮಾಡಬೇಡ ಎಂದು ಆಜ್ಞಾಪಿಸುತ್ತ ಅದನ್ನು ನಾನು ಮಾಡದಿರುವಂತೆ ಮಾಡಿ ನನ್ನನ್ನು ಕರುಣಿಸಿದ್ದೀ. ಈ ಮಾನವ ದೇಹವು ಬಿದ್ದುಹೋಗುವಾಗ, ನನ್ನ ಗಂಟಲು ಕಟ್ಟಿಹೋಗಿ ಗಂಟಲಲ್ಲಿ ಶ್ಲೇಷ್ಮ ತುಂಬಿಕೊಳ್ಳಬಹುದು ನೋವು ತುಂಬಿಬರಬಹುದು ಅಂಥ ಸಮಯದಲ್ಲಿ ಕೂಡ ನಿನ್ನ ತಿರುವಡಿಗಳ ಸ್ಮರಣೆಯನ್ನು ಬಿಡದೆ ನಾನು ಮಾಡುವಂತೆ ನನಗೆ ಜ್ಞಾನವನ್ನು ಕರುಣಿಸು.

4. எனக்கே ஆட்செய் எக்காலத்தும் என்று, என்
மனக்கே வந்து இடைவீடின்றி மன்னி,
தனக்கே ஆக எனைக் கொள்ளும் ஈதே,
எனக்கே கண்ணனை யான் கொள் சிறப்பே.

ಎನಕ್ಕೇಯಾಟ್ಚೆಯ್ ಎಕ್ಕಾಲತ್ತುಮೆನ್ಱು, ಎನ್
ಮನಕ್ಕೇ ವನ್ದು ಇಡೈವೀಡಿನ್ಱಿ ಮನ್ನಿ,
ತನಕ್ಕೇಯಾಗ ಎನೈಕ್ಕೊಳ್ಳುಮೀದೇ,
ಎನಕ್ಕೇ ಕಣ್ಣನೈ ಯಾನ್ ಕೊಳ್ ಸಿಱಪ್ಪೇ.

ಎನಕ್ಕೇ எனக்கே = ನನಗೇಯೇ, ಆಟ್ಚೆಯ್ ஆட்செய் = ದಾಸ್ಯವನ್ನು ನಡೆಸು, ಎಕ್ಕಾಲತ್ತುಮ್ எக்காலத்தும் = ಎಲ್ಲಾ ಕಾಲಗಳಲ್ಲಿಯೂ, ಎನ್ಱು என்று = ಎಂದು, ಎನ್ என் = ನನ್ನ, ಮನಕ್ಕೇ மனக்கே = ಮನಸ್ಸಿನಲ್ಲಿಯೇ (ಮನಸ್ಸಿನೊಳಕ್ಕೇ), ವನ್ದು வந்து = ಬಂದು, ಇಡೈವೀಡು ಇನ್ಱಿ இடைவீடு இன்றி = ನಡುವೆ ಸ್ವಲ್ಪವೂ ಅವಕಾಶವಿಲ್ಲದಂತೆ. ಮನ್ನಿ மன்னி = ನೆಲಸಿ, ತನಕ್ಕೇ ಆಗ

Garani Srinivasan

தனக்கே ஆக = ತನಗಾಗಿಯೇ ಆಗಿರುವಂತೆ (ತನಗೆ ಶಕ್ಯವನ್ನಾ-ಬಂತೆ), ಎನೈ எனை = ನನ್ನನ್ನು, ಕೊಳ್ಳುಮಾ கொள்ளும் = ಸ್ವೀಕರಿಸುವ (ಅಂಗೀಕರಿಸುವ), ಈದೇ ஈதே = ಇದನ್ನೇ, ಎನಕ್ಕೇ எனக்கே = ನನಗೆ ಶಕ್ಯವನಾದ, ಕಣ್ಣನ್ನೈ கண்ணனை = ಆಕೃಷ್ಣನಾದವನನ್ನು (ಶ್ರೀಕೃಷ್ಣನನ್ನು), ಯಾನ್ ಕೊಳ್ யான் கொள் = ನಾನು ಬಯಸುವ, ಶಿಱಪ್ಪೇ சிறப்பே = ಉತ್ತಮವಾದ ಪ್ರಯೋಜನವನ್ನೇ.

ನನಕ್ಕೇಯೇ ದಾಸ್ಯನಡಸು, ಎಲ್ಲಾ ಕಾಲಗಳಲ್ಲಿಯೂ ಎಂದು ನನ್ನ ಮನಸ್ಸಿನೊಳಕ್ಕೇ ಬಂದು, ನಡುವೆ ಸ್ವಲ್ಪವೂ ಕಾಲಾವಕಾಶವಿಲ್ಲದಂತೆ (ಎಡೆಬಿಡದಂತೆ) ನೆಲಸಿ, ತನಗಾಗಿಯೇ ಆಗಿರುವಂತೆ ನನ್ನನ್ನು ಸ್ವೀಕರಿಸುವ (ಅಂಗೀಕರಿಸುವ) ಇದನ್ನೇ, ನನಗೇ ಆಗಿರುವ (ನನಗೆ ಶಕ್ಯವನಾಗಿರುವ) ಆ ಕೃಷ್ಣನನ್ನು (ಶ್ರೀಕೃಷ್ಣನನ್ನು) ನಾನು ಬಯಸುವ, ಉತ್ತಮವಾದ ಪ್ರಯೋಜನವ. (4)

"ಇದನ್ನೇ ನಾನು ಬಯಸುವುದು. ಇದನ್ನೇ ನಾನು ನಿನ್ನಲ್ಲಿ ಬೇಡುವುದು"- ಎಂಬುದು ಈ ತಿರುವಾಯ್ಮೊಳಿಯ ಪಲ್ಲವಿ ಎನ್ನಬಹುದೇನೋ. ಮೊದಲ ದಾಶುರದಲ್ಲಿ "ನಿನ್ನ ದಿವ್ಯ ತಿರುವಡಿಗಳನ್ನು ನನ್ನ ತಲೆಯ ಮೇಲೆ ಇಟ್ಟುಕೊಳ್ಳುವುದನ್ನೇ ಕರುಣಿಸು" ಎಂದೂ, ಎರಡನೆಯ ದಾಶುರದಲ್ಲಿ "ನಿನ್ನ ಅಡಿದಾವರೆಗಳನ್ನು ನಾನು ಸೇರುವಂತೆ (ಪಡೆಯುವಂತೆ) ಜ್ಞಾನವೆಂಬ ಸಾಧನವನ್ನು ಕರುಣಿಸು ಎಂಬುದನ್ನೇ" ಎಂದೂ, ಮೂರನೆಯ ದಾಶುರದಲ್ಲಿ "ಶ್ಲೇಷ್ಮ ತುಂಬಿ, ಗಂಟಲು ಕಟ್ಟಿ, ನನ್ನ ಅವಸಾನ ಕಾಲದಲ್ಲಿ, ಕೊನೆಯುಸಿರು ನಡೆಯುವವರೆಗೂ ನಿನ್ನ ತಿರುವಡಿಗಳ ಸ್ಮರಣೆಯಿರುವಂತೆ ಕರುಣಿಸು" ಎಂಬುದನ್ನೇ"- ನಾನು ಬಯಸುವುದು ಎನ್ನಲಾಗಿತ್ತು.

ಈಗ, 'ನಿನ್ನ ತಿರುವಡಿಗಳ ದಾಸ್ಯಕ್ಕೆ ನನ್ನನ್ನು ಅಂಗೀಕರಿಸಿ, ನನ್ನ ಅಂತರಂಗದಲ್ಲೇ ಬಂದು ಎಡೆಬಿಡದೆ ನೆಲಸು" ಎಂಬುದನ್ನೇ ಬೇಡುವುದಾಗಿದೆ.

ಆಳ್ವಾರರು ಹೇಳುತ್ತಾರೆ: ಭಗವಂತನಿಂದ ನಾನು ಬಯಸುವ ಅತ್ಯುತ್ತಮವಾದ ಪ್ರಯೋಜನ ಇದೇ. ಭಗವಂತನು ನನ್ನನ್ನು ತನ್ನ ಕೈಂಕರ್ಯಕ್ಕೆ ಶಕ್ಯವನು ಎಂದು ಒಪ್ಪುವುದು. ಮತ್ತು, ಆ ಕೈಂಕರ್ಯವನ್ನು ನನ್ನಿಂದ ಸ್ವೀಕರಿಸುವುದಕ್ಕಾಗಿ, ಸ್ವಾಮಿಯೇ ಬಂದು ನನ್ನ ಅಂತರಂಗದಲ್ಲಿ ಎಡೆಬಿಡದಂತೆ ನೆಲಸುವುದು. ಸ್ವಾಮಿಯು ಮೆಚ್ಚುವುದಕ್ಕೆ ಶಕ್ಯನಾದ

GaraniSrinivasan

ಅರಿಯುಲ್ಲಿ ~~ನನ್ನ~~ ಕೈಂಕರ್ಯವನ್ನು ನನ್ನಿಂದ ಸ್ವೀಕರಿಸುವುದು ಇದನ್ನೇ ನಾನು ಸ್ವಾಮಿಯಲ್ಲಿ ಬೇಡುವುದು. ನನಗಾಗುವ ಅತಿಶ್ರೇಷ್ಠವಾದ ಪ್ರಯೋಜನವೂ ಇದೇ.

ಭಕ್ತನಿಗೂ ಭಗವಂತನಿಗೂ ನಡುವಣ ಸಂಬಂಧ ಎಷ್ಟು ಮ... ಭಕ್ತನಿಗೆ ಬೇಕು? ಸ್ವಾಮಿಗೆ ಭಕ್ತನೇ ಶಕ್ತಿ ಕೇವಲವಾದ ಕೈಂಕರ ಭಕ್ತನಿಗೆ ಸ್ವಾಮಿಯೇ ಶಕ್ತಿ ಒಡೆಯ ಇಂಥ ಸ್ವಾಮಿ-ಭೃತ್ಯ ಸಂಬಂಧವೂ ಟ ಗುವುದೇ ಪರಮ ಶ್ರೇಷ್ಠವಾದ ಭಕ್ತಿಗೆ ಪ್ರಯೋಜನ

5. சிறப்பில் வீடு சுவர்க்க நரகம்,
இறப்பில் எய்துக எய்தற்க, யானும்
பிறப்பில் பல்பிறவிப் பெருமானை,
மறப்பொன்றின்றி என்றும் மகிழ்வனே.

ಶಿಱಪ್ಪಿಲ್ ವೀಡು ಶುವರ್ಕ್ಕ ನರಹಮ್,
ಇಱಪ್ಪಿಲ್ ಎಯ್ದುಹ ಎಯ್ದಱ್ಕ, ಯಾನುಮ್
ಪಿಱಪ್ಪಿಲ್ ಪಲ್ ಪಿಱವಿಪ್ಪೆರುಮಾನೈ,
ಮಱಪ್ಪೊನ್ಱಿನ್ಱಿ ಎನ್ಱುಮ್ ಮಹಿೞ್ವನೇ.

ಶಿಱಪ್ಪಿಲ್ சிறப்பில் = ಪರಮಾನಂದದಿಂದ ಕೂಡಿದ, ವೀಡು வீடு = ಬಿಡುಗಡೆಯನ್ನೋ, ಶುವರ್ಕ್ಕಮ್ சுவர்க்கம் = ಸ್ವರ್ಗವನ್ನೋ, ನರಹಮ್ நரகம் = ನರಕವನ್ನೋ, ಇಱಪ್ಪಿಲ್ இறப்பில் = ಮರಣಾನಂತರ, ಎಯ್ದುಹ எய்துக = (ನಾನು) ಪಡೆಯದೆ ಹೋದರೂ, ಪಡೆಯಲಿ, ಎಯ್ದಱ್ಕ எய்தற்க = ... ಯಾನುಮ್ யானும் = ನಾನು ಸಹ, ಪಿಱಪ್ಪಿಲ್ பிறப்பில் = ಈ ~~...~~ ಜನ್ಮದಲ್ಲಿ (ಬದುಕಿರುವಾಗ), ಪಲ್ ಪಿಱವಿ பல் பிறவி = ಹಲವಾರು ಜನ್ಮಗಳ, ಪೆರುಮಾನೈ பெருமானை = ಭಗವಂತನನ್ನು, ಮಱಪ್ಪು ಒನ್ಱು ಇನ್ಱಿ மறப்பு ஒன்று இன்றி = ಸ್ವಲ್ಪವೂ ಮರೆಯದಂತೆ, ಎನ್ಱುಮ್ என்றும் = ಎಂದೆಂದಿಗೂ (ಯಾವಾಗಲೂ), ಮಹಿೞ್ವನೇ மகிழ்வேனே = (ಸಂತೋಷ) ಆನಂದಿಸುವೆನಲ್ಲ!

ಪರಮಾನಂದದಿಂದ ಕೂಡಿದ ಬಿಡುಗಡೆಯನ್ನೋ, ಸ್ವರ್ಗವನ್ನೋ, ನರಕವನ್ನೋ, ಮರಣಾನಂತರ ನಾನು ಪಡೆಯಲಿ ಪಡೆಯದೆ ಹೋಗಲಿ. ನಾನು ಈ ಜನ್ಮದಲ್ಲಿ (ಬದುಕಿರುವಾಗ) ಹಲವಾರು ಜನ್ಮಗಳ ಸ್ವಾಮಿಯನ್ನು ಸ್ವಲ್ಪವೂ ಮರೆಯದಂತೆ ಯಾವಾಗಲೂ ಚಿಂತಿಸುತ್ತಾ ಆನಂದಿಸುತ್ತಿರುವೆನಲ್ಲ!

Garani Srinivasan

ಹಿಂದಿನ ಪಾಶುರದಲ್ಲಿ ಹೇಳಲಾದ 'ಪ್ರಯೋಜನ' ಎಂಬುದರ ಪರಿಣಾಮವನ್ನು ಇಲ್ಲಿ ಎತ್ತಿ ಹೇಳಲಾಗಿದೆ. ಭಗವಂತನಿಗೆ ಮೆಚ್ಚಿನ ಭೃತ್ಯನಾಗಿ ಪ್ರಯೋಜನ ಪಡೆಯಬಹುದಾದ್ದೇನು? ಅದು ಎರಡು ಬಗೆಯ ಪರಿಣಾಮವನ್ನುಂಟು ಮಾಡುವುದು: ಒಂದು, ಇದೇ ಜನ್ಮದಲ್ಲೇ ಒದಗಬರತಕ್ಕದ್ದು, ಮತ್ತೊಂದು ಮರಣಾನಂತರ ಒದಗತಕ್ಕದ್ದು. ಈ ವಿಷಯದಲ್ಲಿ ಆಳ್ವಾರರು ಹೇಳುತ್ತಾರೆ:

ನನ್ನ ಮರಣಾನಂತರ ನನಗೆ ಒದಗಬರುವುದೇನಿದೆಯೋ ಕಾಣೆ. ಅದು ನರಕವೇಯೋ, ಸ್ವರ್ಗವೇಯೋ, ಅಥವಾ ನಿತ್ಯಾನಂದಮಯವಾದ ಮೋಕ್ಷವೇಯೋ! ಅವುಗಳಲ್ಲಿ ನನಗೆ ಯಾವುದಾದರೂ ಬರಲಿ. ಅದು ನನಗೆ ಈಗ ಮುಖ್ಯವಲ್ಲ; ಈ ಜನ್ಮದಲ್ಲಿಯೇ, ನಾನು ಬದುಕಿರುವಷ್ಟು ಕಾಲವೂ, ನಾನಾ ಅವತಾರಗಳನ್ನೆತ್ತಿ ಭಗವಂತನು ನಡೆಸಿದ ಆಶ್ಚರ್ಯಕರ ಕಾರ್ಯಗಳನ್ನು ಕುರಿತು ಚಿಂತಿಸುತ್ತಾ, ಅವುಗಳನ್ನು ಕೀರ್ತಿಸುತ್ತಾ, ಅನುಭವಿಸುತ್ತಾ, ಎಡೆಬಿಡದಂತೆ ಆನಂದಿಸುತ್ತಿರುವುದೊಂದನ್ನೇ ಈಗ ನಾನು ಬಯಸುವುದು. ಮರಣದ ಬಳಿಕ ಬರುವುದರ ವಿಚಾರ ಭಗವಂತನಿಗೆ ಸೇರಿದ್ದಲ್ಲವೇ?

"ಪಿಱವಿಲ್ ಪಲ್ ಪಿಱವಿ ಪ್ಪೆರುಮಾನೈ" — ಭಗವಂತನು 'ಅಜ' ಎಂದರೆ ಹುಟ್ಟಿಲ್ಲದವನು. ಅವನು 'ಅಮರ' ಎಂದರೆ ಸಾವಿಲ್ಲದವನು. "ಪಿಱವು ಇಲ್" – ಹುಟ್ಟು ಇಲ್ಲದವನು. ಇಂಥವನಿಗೆ "ಪಲ್ ಪಿಱವಿ" – ಹಲವಾರು ಹುಟ್ಟುಗಳು ಉಂಟಾದವಂತೆ! ಆಶ್ಚರ್ಯಕರವಾದುದು! ಇದು ಭಗವಂತನ ನಾನಾ ಅವತಾರಗಳನ್ನು ಕುರಿತು ಹೇಳುವ ಮಾತು. ಒಂದೊಂದು ಅವತಾರವೂ 'ಶಿಷ್ಟರ ಉದ್ಧಾರಕ್ಕಾಗಿಯೇ. ಅದರಿಂದ, ಭಗವಂತನ ಅವತಾರಗಳಲ್ಲಿ ನಡೆಸಿದ ಅದ್ಭುತ ಲೀಲೆಯನ್ನು ಭಕ್ತನಾದವನು "ಪಿಱವಿಲ್" – ಈ ಜನ್ಮದಲ್ಲಿಯೇ, ಚಿಂತಿಸುತ್ತಾ, ಸ್ತುತಿಸುತ್ತಾ, ಅನುಭವಿಸುತ್ತಾ ಬರುವುದರಿಂದ, ದಿವ್ಯವಾದ ಭಗವದನುಭವವುಂಟಾಗಿ, ತನ್ಮೂಲಕ ಆನಂದವು ಲಭಿಸುವುದು. ಭಕ್ತಿ ಹೆಚ್ಚುವುದು. ಮರಣಾನಂತರ ಸದ್ಗತಿಯೂ ಭಗವತ್ಸಾನ್ನಿಧ್ಯ ದೊರೆಯುವುದು. ದೊರೆಯುವುದು.

6. மகிழ்கொள் தெய்வம் உலோகமலோகம்,
மகிழ்கொள் சோதி மலர்ந்தவம்மானை,
மகிழ்கொள் சிந்தை சொல் செய்கை கொண்டு என்றும்
மகிழ்வுற்று உன்னை வணங்கவாராயே.

ಮಹಿೞ್ಕೊಳ್ ದೆಯ್ವಮ್ ಉಲೋಹಮ್ ಅಲೋಹಮ್,
ಮಹಿೞ್ಕೊಳ್ ಶೋದಿ ಮಲರ್ನ್ದವಮ್ಮಾನ್ನೆ,
ಮಹಿೞ್ಕೊಳ್ ಶಿನ್ದೈ ಶೊಲ್ ಶೆಯ್‍ಹೈ ಕೊಣ್ಡು, ಎನ್ಱುಮ್
ಮಹಿೞ್ವುಱ್ಱು ಉನ್ನೈ ವಣಙ್ಗ ವಾರಾಯೇ.

ಮಹಿೞ್ಕೊಳ್ மகிழ்கொள் = ಆನಂದವನ್ನು ಪಡೆದಿರುವ, (ದೇವಲೋಕವನ್ನು) ಉಲೋಹಮ್ உலோகம் ದೆಯ್ವಮ್ தெய்வம் = ದೇವತೆಗಳನ್ನು; ಅಲೋಹಮ್ அலோகம் = ಇತರಲೋಕಗಳನ್ನು, = ಭೂಲೋಕವನ್ನು. ಮಹಿೞ್ಕೊಳ್ மகிழ்கொள் = ಆನಂದವನ್ನು ಕೊಡುವ, ಶೋದಿ ஜோதி = ಜ್ಯೋತಿಗಳನ್ನು, ಮಲರ್ನ್ದ மலர்ந்த = ಉಂಟುಮಾಡಿದ, ಅಮ್ಮಾನ್ನೆ அம்மானை = ಸ್ವಾಮಿಯನ್ನು, ಮಹಿೞ್ಕೊಳ್ மகிழ்கொள் = ಆಶೆ, ಶೊಲ್ சொல் = ಮಾತನ್ನು, ಕೊಣ್ಡು, ಶಿನ್ದೈ சிந்தை = ಚಿಂತನವನ್ನು, ಶೆಯ್‍ಹೈ செய்கை = ಮಾಳ್ಕೆಯನ್ನು (ಕಾರ್ಯವನ್ನು), ಕೊಣ್ಡು கொண்டு = ಪಡೆದವನಾಗಿ; ಎನ್ಱುಮ್ என்றும் = ಯಾವಾಗಲೂ, ಮಹಿೞ್ವುಱ್ಱು மகிழ்வுற்று = ಬಹಳವಾಗಿ ಆನಂದಿಸಿ, ಉನ್ನೈ உன்னை = ನಿನ್ನನ್ನು, ವಣಙ್ಗ வணங்க = ನಮಸ್ಕರಿಸುವುದಕ್ಕಾಗಿ, ವಾರಾಯೇ வாராயே = ಕೃಪೆಮಾಡಿಬಾ.

ಆನಂದವನ್ನು ಪಡೆದಿರುವ ದೇವಲೋಕವನ್ನು, ಭೂಲೋಕವನ್ನು, ಆನಂದವನ್ನು ಕೊಡುವ ದಿವ್ಯಜ್ಯೋತಿಗಳನ್ನು ಇತರಲೋಕಗಳನ್ನು, ಆನಂದವನ್ನು ಉಂಟುಮಾಡಿದ ಸ್ವಾಮಿಯನ್ನು (ಮೇಲೆ ನಿನ್ನನ್ನು) / ಚಿಂತನದಲ್ಲಿಯೂ, ಮಾತಿನಲ್ಲಿಯೂ, ಮಾಳ್ಕೆಯಲ್ಲಿಯೂ (ಕಾರ್ಯದಲ್ಲಿಯೂ) ಎಡೆಬಿಡದಂತೆ ಬಹಳವಾಗಿ ಕೃಪೆಮಾಡಿಬಾ. (6)
ಆನಂದಿಸಿ, ನಿನ್ನನ್ನು ನಮಸ್ಕರಿಸುವುದಕ್ಕಾಗಿ ಬೇಡಿಕೆಗಳಿಂದ ಭಿನ್ನವಾದದ್ದು.

ಈ ಪಾಶುರದ ಬೇಡಿಕೆ ಹಿಂದಿನ ಬೇಡಿಕೆಗಳಿಗಿಂತ ಭಿನ್ನವಾದದ್ದು. ಅದರಲ್ಲಿ ಭಗವಂತನನ್ನು ಕಾಯಾ ವಾಚಾ ಮನಸಾ ಆರಾಧಿಸಬೇಕೆಂದೂ ಆಳ್ವಾರರ ಬೇಡಿಕೆ. ಇಲ್ಲಿ ತಮಗೆ ಭಗವದ್ದರ್ಶನ ದೊರೆಯಬೇಕೆಂದೂ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ನೀನು ದೇವಲೋಕವನ್ನು ಅದರಲ್ಲಿ ಸದಾ ಆನಂದದಲ್ಲಿ ಓಲಾಡುತ್ತಿರುವಂಥ ದೇವತೆಗಳನ್ನು ಸೃಷ್ಟಿಸಿದ್ದೀ. ಹಾಗೆಯೇ ಭೂಲೋಕವನ್ನು ಅದರಲ್ಲಿ ಮನುಷ್ಯ ತಿರ್ಯಕ್ ಜಂತುಗಳನ್ನು, ನಾನಾ ಬಗೆಯ ಸ್ಥಾವರ ವಸ್ತುಗಳನ್ನು ಸೃಷ್ಟಿಸಿದ್ದೀ. ಮತ್ತು ಇತರಲೋಕಗಳನ್ನು ಅವುಗಳಲ್ಲಿ ಚರಾಚರ ವಸ್ತುಗಳನ್ನು ಸೃಷ್ಟಿಸಿದ್ದೀ. ಈ ಎಲ್ಲ ಲೋಕಗಳಿಗೂ ಆಹ್ಲಾದವನ್ನು ಉತ್ಸಾಹವನ್ನು ತರುವಂಥ ಸೂರ್ಯ ಚಂದ್ರರೆಂಬ ದಿವ್ಯಜ್ಯೋತಿಗಳನ್ನು ಸೃಷ್ಟಿಸಿದ್ದಿ

Garani Srinivasan

ಪರಮ ಸಮರ್ಥನಾದ ನಿನ್ನನ್ನು ಕೂಡಲು ಎಡೆಬಿಡದೆ ಚಿಂತಿಸುತ್ತಾ, ನಿನ್ನ ಕಲ್ಯಾಣಸ್ವಭಾವಗಳನ್ನು ಹೊಗಳಿ ಹಾಡುತ್ತಾ, ನೀನು ನಡೆಸಿದ ಆಶ್ಚರ್ಯಕರ ಕಾರ್ಯಗಳನ್ನು ಅರಿತು ಆನಂದಿಸುತ್ತಾ, ಅತ್ಯಂತ ಸಂಪ್ರೀತಿಯಿಂದ ನಿನ್ನ ತಿರುವಡಿಗಳಿಗೆ ಎರಗಬೇಕೆನಿಸುತ್ತದೆ. ಇದಕ್ಕಾಗಿ, ಸ್ವಾಮಿ, ನನ್ನ ಬಳಿಗೆ ಕೃಪೆಮಾಡಿ ಬಾ.

7 வாராய் உன் திருப்பாத மலர்க்கீழ்,
பேராதே யான் வந்து அடையும்படி
தாராதாய், உன்னை யென்னுள் வைப்பிலென்றும்
ஆராதாய், எனக்கென்றுமெக்காலே.

ವಾರಾಯ್ ಉನ್ ತಿರುಪ್ಪಾದ ಮಲರ್ಕ್ಕೀೞ್,
ಪೇರಾದೇ ಯಾನ್ ವಂದು ಅಡೈಯುಮ್ಬಡಿ
ತಾರಾದಾಯ್, ಉನ್ನೈ ಯೆನ್ನುಳ್ ವೈಪ್ಪಿಲೆನ್ರುಮ್
ಆರಾದಾಯ್, ಎನಕ್ಕೆನ್ರುಮೆಕ್ಕಾಲೇ.

ವಾರಾಯ್ வாராய் = ಕೃಪೆಮಾಡಿ ಬರುವವನಾನು, ಉನ್ உன் = ನಿನ್ನ, ತಿರು திரு = ಪವಿತ್ರವಾದ, ಪಾದಮ ಮಲರ್ ಕೀೞ್ பாதம மலர் கீழ் = ಪಾದಕಮಲದಡಿಯಲ್ಲಿ, ಪೇರಾದೇ பேராதே = ಅಗಲಿಕೆಯಿಲ್ಲದಂತೆ, ಯಾನ್ யான் = ನಾನು, ವಂದು வந்து = ಬಂದು, ಅಡೈಯುಮ್ಬಡಿ அடையும்படி = ಸೇರುವಂತೆ, ತಾರಾದಾಯ್ தாராதாய் = ಕೃಪೆಮಾಡದವನೇ, ಉನ್ನೈ உன்னை = ನಿನ್ನನ್ನು, ಎನ್ನುಳ್ என் உள் = ನನ್ನ ಅಂತರಂಗದಲ್ಲಿ, ಎನ್ರುಮ್ = ಎಡೆಬಿಡದಂತೆ, ವೈಪ್ಪಿಲ್ வைப்பில் = ಇಟ್ಟುಕೊಂಡಿರುವುದರಲ್ಲಿ (ಅನುಭವಿಸುವುದರಲ್ಲಿ), ಆರಾದಾಯ್ ஆராதாய் = ತೃಪ್ತಿಯುಂಟುಮಾಡದವನೇ, ಎನಕ್ಕು என்றும் = ಯಾವಾಗಲೂ, எனக்கு = ನನಗಾಗಿಯೂ, ಎಕ್ಕಾಲೇ எக்காலே = ಎಲ್ಲಾ ಸಮಯಗಳಲ್ಲಿಯೂ, (ಎಂದೆಂದಿಗೂ), (ಕೃಪೆಮಾಡಿ ಬರುವವನಾನು)

ನಿನ್ನ ಪವಿತ್ರವಾದ ಪಾದಕಮಲದಡಿಯಲ್ಲಿ ಅಗಲಿಕೆಯಿಲ್ಲದಂತೆ ನಾನು ಬಂದು ಸೇರುವಂತೆ ಕೃಪೆಮಾಡದವನೇ, ನಿನ್ನನ್ನು ನನ್ನ ಅಂತರಂಗದಲ್ಲಿ ಎಡೆಬಿಡದಂತೆ ಇಟ್ಟುಕೊಂಡು ಅನುಭವಿಸುವುದರಲ್ಲಿ ತೃಪ್ತಿಯನ್ನುಂಟುಮಾಡದವನೇ, ನನಗಾಗಿಯೂ ಎಂದೆಂದಿಗೂ ಎಲ್ಲಾ ಸಮಯಗಳಲ್ಲಿಯೂ ಕೃಪೆಮಾಡಿ ಬರುವವನಾನು (7)

ಒಂದನೇ ಪಾಶುರದ ಬೇಡಿಕೆ ಇಲ್ಲಿಯೂ ಮುಂದುವರಿಯುತ್ತದೆ.

ಆಳ್ವಾರರು ಹೇಳುತ್ತಾರೆ ಸ್ವಾಮೀ, ನಿನ್ನನ್ನು ನನ್ನ ಅಂತರಂಗದಲ್ಲಿ ನೆಲೆಗೊಳಿಸಿಕೊಂಡು ಎಷ್ಟೆಷ್ಟು ಅನುಭವಿಸಿದರೂ ನನಗೆ ತೃಪ್ತಿಯುಂಟಾಗದು. ನಾನು ಬಂದು ನಿನ್ನನ್ನು ಸೇರಬೇಕು. ನಿನ್ನಿಂದ ಅಗಲಿಕೆಯೆಂಬುದೇ ಇಲ್ಲದಂತೆ ನಿನ್ನ ಪವಿತ್ರ ಪಾದಕಮಲಗಳ ಕೆಳಗೆ ನಾನು ಬಂದು ಸೇರಬೇಕು ಇಷ್ಟನ್ನು ನನಗೆ ಈಗಲೇ ನೀನು ಕರುಣಿಸಿದಾದರೆ, ಎಂದೆಂದಿಗೂ ಎಲ್ಲಾ ಸಮಯಗಳಲ್ಲೂ ನಾನು ನಿನ್ನನ್ನು ಕಣ್ತುಂಬ ನೋಡುತ್ತಾ ಆನಂದಿಸುವಂತೆ ಕೃಪೆಮಾಡು ನನ್ನ ಕಣ್ಣ ಮುಂದೆ ಬರುವವನಾಗು!

ಎಂಥ ಆಶಯ! ಬದುಕಿರುವಷ್ಟು ಕಾಲವೂ ನಾನು ಎಡೆಬಿಡದಂತೆ ನಿನ್ನನ್ನು ನೋಡುತ್ತಾ, ಆನಂದಿಸುತ್ತಿರಬೇಕು! ಮರಣಾನಂತರವೂ ನಿನ್ನ ತಿರುವಡಿಗಳ ಸೇವೆ ಎಡೆಬಿಡದಂತೆ ನಡೆಯುತ್ತಿರಬೇಕು!

8. எக்காலத்தெந்தையாய் என்னுள் மன்னில், மற்று
எக்காலத்திலும் யாதொன்றும் வேண்டேன்,
மிக்கார் வேதவிமலர் விழுங்கும், என்
அக்காரக்கனியே! உன்னை யானே.

ಎಕ್ಕಾಲತ್ತೆನ್ದೈಯಾಯ್ ಎನ್ನುಳ್ ಮನ್ನಿಲ್, ಮಱ್ಱು
ಎಕ್ಕಾಲತ್ತಿಲುಮ್ ಯಾದೊನ್ಱುಮ್ ವೇಣ್ಡೇನ್,
ಮಿಕ್ಕಾರ್ ವೇದವಿಮಲರ್ ವಿೞುಙ್ಗುಮ್, ಎನ್
ಅಕ್ಕಾರಕ್ಕನಿಯೇ! ಉನ್ನೈಯಾನೇ

ಎಕ್ಕಾಲತ್ತು எக்காலத்து = ಯಾವಾಗಲೂ, ಎನ್ದೈ ಆಯ್ எந்தை ஆய் = ನನ್ನ ತಂದೆಯಾಗಿ (ಸ್ವಾಮಿಯಾಗಿ), ಎನ್ಉಳ್ என் உள் = ನನ್ನ ಅಂತರಂಗದಲ್ಲಿ, ಮನ್ನಿಲ್ மன்னில் = ನೆಲೆಸಿರುವುದಾದರೆ, ಮಱ್ಱು மற்று = ಬೇರೊಂದನ್ನು, ಎಕ್ಕಾಲತ್ತಿಲುಮ್ எக்காலத்திலும் = ಎಂದೆಂದಿಗೂ, ಯಾದು ಒನ್ಱುಮ್ யாது ஒன்றும் = ಏನೊಂದನ್ನೂ, ವೇಣ್ಡೇನ್ வேண்டேன் = ಬೇಡೆನು, ಮಿಕ್ಕಾರ್ மிக்கார் = ಶ್ರೇಷ್ಠರಾದ, ವೇದಮ್ வேதம் = ವೇದಗಳಿಂದ, ವಿಮಲರ್ விமலர் = ಪರಿಶುದ್ಧರಾದವರು, ವಿೞುಙ್ಗುಮ್ விழுங்கும் = ನುಂಗುವಂಥ, ಎನ್ என் = ನನ್ನ, ಅಕ್ಕಾರಮ್ ಕನಿಯೇ அக்காரம் கனியே = ಬೆಲ್ಲದ ಮುದ್ದೆಯೇ (ಅತ್ಯಂತ ಮಧುರನೇ), ಉನ್ನೈ உன்னை = ನಿನ್ನನ್ನು, ಯಾನೇ யானே = ನಾನೇ.

ಶ್ರೇಷ್ಠರಾದವರೂ, ವೇದವಿದ್ವಾಂಸರೂ, ಪರಿಶುದ್ಧರಾದವರೂ, ಸವಿಯು
ವಂಥ ಬೆಲ್ಲದ ಮುದ್ದೆಯೇ (ಅತ್ಯಂತ ಮಧುರನೇ), ನೀನು ನನ್ನ ಕಂದಯಾಗಿ
(ಸ್ವಾಮಿಯಾಗಿ) ಯಾವಾಗಲೂ ನನ್ನ ಅಂತರಂಗದಲ್ಲಿ ನೆಲಸಿರುವುದಾದರೆ, (8)
ನಿನ್ನನ್ನು ಎಂದೆಂದಿಗೂ ಬೇರೆ ಏನನ್ನೂ ನಾನು ಬೇಡುವುದಿಲ್ಲ.

'ವೇದವಿಮಲರ್, ಮಿಶ್ಕರ್' - ಶ್ರೇಷ್ಠರು, ವಿದ್ವಾಂಸರು, ಜ್ಞಾನಿಗಳು. ವೇದ ವೇದಾಂತ
ಗಳನ್ನು ಚೆನ್ನಾಗಿ ಓದಿ, ಅಭ್ಯಾಸ ಮಾಡಿರುವವರು. ತಮ್ಮ ವಿದ್ಯೆಗೆ, ಜ್ಞಾನ
ಕ್ಕೆ ತಕ್ಕಂತೆ ನಡೆದುಕೊಳ್ಳುವವರು. ಮಾನಸಿಕವಾಗಿ ಪರಿಶುದ್ಧರಾಗಿ
ಇರುವವರು. ಭಗವದ್ಗುಣಾನುಭವವೊಂದರಲ್ಲಿಯೇ ಆಸೆಯುಳ್ಳವರು.
ಸದಾ ಅದನ್ನು ಸವಿಯುತ್ತಾ ಆನಂದಿಸುತ್ತಾ ಕಾಲ ಕಳೆಯುವವರು

'ಎನ್ ಅಪ್ಪರಕ್ಕನಿಯೇ" - ಸುಂದರವಾದ ರಾಶಿಕೆ ಜನ ಬೆಲ್ಲವನ್ನು
ಆಸೆಯಿಂದ ಬಾಯಲ್ಲಿ ಒಂದು ಕಡೆಯಲ್ಲಿ ಅದಕ್ಕಿಟ್ಟುಕೊಂಡು, ಅದರಿಂದ
ಸ್ರವಿಸುವ ಮಧುರವನ್ನು ಸವಿಯುತ್ತಾ ಆನಂದಿಸುವಂತೆ, ಭಗವದ್ಭಕ್ತರು
(ಜ್ಞಾನಿಗಳು) ವೇದ ಮುಂತಾದವುಗಳ ಮೂಲಕ ತಾವು ಅರಿತುಕೊಂಡಂಥ
ಭಗವದ್ಗುಣ ಸ್ವಭಾವಾದಿಗಳನ್ನು ಎಡೆಬಿಡದಂತೆ ಪಠಿಸುತ್ತಾ,
ಆನಂದಿಸುತ್ತಾ ಇರುತ್ತಾರೆ. ನನಗೂ (ಆಳ್ವಾರರಿಗೂ) ಹಾಗೆಯೇ ಭಗವಂತ
ಬೆಲ್ಲದ ಮುದ್ದೆಯಂತೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು ನನ್ನ ಕಂದಯಾಗಿ
(ಪ್ರೀತಿಯ ರಕ್ಷಕನಾಗಿ) ಬಂದು ನನ್ನ ಅಂತರಂಗದಲ್ಲಿ ಯಾವಾಗಲೂ
ನೆಲಸಿರು. ಅದು ಹೊರತಾಗಿ, ನಾನು ನಿನ್ನನ್ನು ಬೇರೇನನ್ನೂ ಬೇಡುವು
ದಿಲ್ಲ. ನಿನ್ನ ಸಾನ್ನಿಧ್ಯವೊಂದೇ ನನಗೆ ಬೇಕಾದದ್ದು.

ಈ ಪಾಶುರದ ಬೇಡಿಕೆ ಎಷ್ಟು ಸರಳವಾದದ್ದು! -' ಭಗವಂತ
ಸದಾ ನನ್ನ ಅಂತರಂಗದಲ್ಲಿ ನೆಲಸಿರು!' ಎಂಬುದೇ ಅದು. ಎಲ್ಲ ಜೀವಿಗಳ
ಅಂತರಂಗದಲ್ಲೂ ಭಗವಂತನು ಸದಾ ನೆಲಸಿದ್ದಾನೆ. ಆದರೂ, ಭಗವತ್ಕೃಪೆ
ಯ ಹೊರತು, ನಾವೆಷ್ಟೇ ಪ್ರಯತ್ನಪಟ್ಟರೂ, ನಮ್ಮ ಅಂತರಂಗದಲ್ಲೇ
ಇರುವ ಭಗವಂತನನ್ನು ನಾವು ಗುರುತಿಸಿಕೊಳ್ಳುವುದು ಸಾಧ್ಯವಾಗುವು
ದಿಲ್ಲ. ಏನು ಪಡೆಯಬೇಕಾದರೂ, ಭಗವತ್ಕೃಪೆಗಾಗಿ ಪ್ರಾರ್ಥನೆ ಮಾಡಬೇಕು ಎಂದ
ರೆ.

9. யானேயென்னை அறியகிலாதே,
யானேயென்தனதே என்றிருந்தேன்,
யானே நீ என்னுடைமையும் நீயே,
வானேயேத்தும் வானவரேறே

Garani Srinivasan

ಯಾನೇ ಯೆನ್ನೈ ಅಱಿಯಗಿಲಾದೇ,
ಯಾನೇ ಯೆನ್ ತನದೇ ಎನ್ಱಿರುನ್ದೇನ್,
ಯಾನೇ ನೀ ಎನ್ನುಡೈಮೈಯುಮ್ ನೀಯೇ,
ವಾನೇಯೇತ್ತುಮ್ ವಾನವರೇಱೇ.

ಯಾನ್ யான் = ನಾನು, ಎನ್ನೈ என்னை = ನನ್ನನ್ನು, ಅಱಿಯಗಿಲಾದೇ அறியகிலாதே ಅರಿತುಕೊಳ್ಳದಂತೆ, ಯಾನೇ யானே = ನಾನೇ, ಎನ್ ತನದೇ என்தனதே = ನನ್ನದೇ, ಎನ್ಱು என்று = ಎನ್ನುತ್ತ (ಎಂದುಕೊಂಡು), ಇರುನ್ದೇನ್ இருந்தேன் = ಇದ್ದೆ, ಯಾನೇ ನೀ யானே நீ = ನಾನೇ ನೀನು, ಎನ್ ಉಡೈಮೈಯುಮ್ ನೀಯೇ என் உடைமையும் நீயே = ನನ್ನ (ಸರ್ವ) ಸ್ವತ್ತೂ ನೀನೇ, ವಾನೇ வானே = ಮೇಲಣ ಲೋಕಗಳೆಲ್ಲವೂ, ಏತ್ತುಮ್ ஏத்தும் = ಸ್ತುತಿಸುವಂಥ, ವಾನವರ್ வானவர் = ದೇವತೆಗಳ, ನಿತ್ಯಸೂರಿಗಳ, ಏಱೇ ஏறே = ವೃಷಭನೇ (ಸಮರ್ಥರಕ್ಷಕನೇ)

ಮೇಲಣ ಲೋಕಗಳೆಲ್ಲವೂ ಸ್ತುತಿಸುವಂಥ ದೇವತೆಗಳ ಮತ್ತು ನಿತ್ಯಸೂರಿಗಳ ಪರಮಸಮರ್ಥನಾದ ರಕ್ಷಕನೇ, ನಾನು ನನ್ನನ್ನು ಅರಿತುಕೊಳ್ಳದಂತೆ 'ನಾನೇ, ನನ್ನದೇ' ಎನ್ನುತ್ತ ಇದ್ದೆ. ನಾನೇ ನೀನು. (9) ನನ್ನ (ಸರ್ವ) ಸ್ವತ್ತೂ ನೀನೇ.

ಹಿಂದಿನ ಪಾಶುರದಲ್ಲಿ 'ನೀನು ನನ್ನಲ್ಲಿ ಬಂದು ನೆಲಸು' ಎಂದು ಬೇಡಲಾಗಿತ್ತು, ಇಲ್ಲಿ 'ನಾನು, ನನ್ನದು' ಎಂಬುದನ್ನು ತೊಲಗಿಸಿಕೊಳ್ಳುವ ಕ್ರಮವನ್ನು ಹೇಳಲಾಗಿದೆ.

'ನಾನು, ನಾನು, ನಾನು' ಎಂದು ಒಂದೊಂದು ವಿಷಯದಲ್ಲೂ, ಒಂದೊಂದು ಕ್ಷಣದಲ್ಲೂ ಹೇಳಿಕೊಳ್ಳುತ್ತ, 'ನಾನೇ ಎಲ್ಲ ರೀತಿಯಲ್ಲೂ ಸಮರ್ಥ, ನನ್ನಿಂದಲೇ ಎಲ್ಲವೂ ಆಗುವುದು' ಎಂದು ಭಾವಿಸುವುದು ಇದು 'ಅಹಂ'ಕಾರ - 'ನಾನು' ಎನ್ನುವ ದುರ್ಗುಣ

ಮತ್ತು, ನನ್ನನ್ನು ಆಶ್ರಯಿಸಿರುವವರ ಬಗೆಗೂ, ನನ್ನಲ್ಲಿರುವ ವಸ್ತು ವಾಹನಾದಿಗಳ ಬಗೆಗೂ ಬಹಳವಾಗಿ ಹೇಳಿಕೊಳ್ಳುತ್ತ 'ನನ್ನದು, ನನ್ನದು, ನನ್ನದು' ಎನ್ನುವುದು 'ಮಮ'ಕಾರ - ಎಂಬ ದುರ್ಗುಣ

ಈ 'ನಾನು, ನನ್ನದು' ಎಂಬ ಎರಡು ದುರ್ಗುಣಗಳು ಜನ್ಮಜನ್ಮಾಂ ಬರುತ್ತವೆ. ಇವು ತೊಡೆದು ಹೋಗುವವರೆಗೆ ಭಗವಂತನಲ್ಲಿ ಮನಸ್ಸು ಪೂರ್ಣವಾಗಿ ನೆಲೆಗೊಳ್ಳುವುದಿಲ್ಲ. ಎಲ್ಲಕ್ಕೂ ಭಗವತ್ಕೃಪೆ ಬೇಕಲ್ಲವೇ?

Garani Srinivasan

ಆಳ್ವಾರರು ಹೇಳುತ್ತಾರೆ: ದೇವತೆಗಳಿಗೂ ನಿತ್ಯಸೂರಿಗಳಿಗೂ ಒಡೆಯನಾಗಿ, ನಮ್ಮ ಧರ್ಮರಕ್ಷಕನಾಗಿರುವ ಸ್ವಾಮಿಯೇ, ಇದುವರೆಗೆ 'ನಾನು, ನನ್ನದು' ಎಂಬ ಅಜ್ಞಾನ ಭಾವನೆಯಲ್ಲಿ ಮುಳುಗಿ ಕೆಟ್ಟಿದ್ದೆ. ನೀನು ನನ್ನ ಅಂತರಂಗದಲ್ಲಿ ಬಂದು ನೆಲಸಿ, ಕರುಣಿಸಿದೆ. ಅದರ ಫಲವಾಗಿ 'ನಾನು, ನನ್ನದು' ಎಂಬ ಭಾವನೆ ಮಾಯವಾಯಿತು. ಅದಕ್ಕೆ ಬದಲಾಗಿ 'ಎಲ್ಲವೂ ನೀನೇ, ಎಲ್ಲವೂ ನಿನ್ನದೇ' ಎಂಬ ಸುಜ್ಞಾನವುಂಟಾಯಿತು.

'ನಾನು, ನನ್ನದು' ಎಂಬುದನ್ನು 'ನೀನು, ನಿನ್ನದು' ಎಂಬುದಕ್ಕೆ ಬದಲಾಯಿಸಿಕೊಳ್ಳುವುದೇ ಕ್ರಮ: ಭಗವಚ್ಛೇಷತ್ವ ವಿವೇಕದ, ಎಂದರೆ

10. ஏறேலேழும் வென்று ஏர்கொளிலங்கையை,
நீறு செய்த நெடுஞ்சுடர்ச் சோதி,
தேறேலென்னை. உன் பொன்னடிச் சேர்ந்தொழிவு,
வேறே போக எஞ்ஞான்றும் விடலே

ಏಱೇಲೇೞುಮ್ ವೆನ್ಱು ಏರ್ಕೊಳಿಲಙ್ಗೈಯ್ಯೈ,
ನೀಱೇ ಶೆಯ್ದ ನೆಡುಂಜುಡರ್ ಶೋದಿ,
ತೇಱೇ ಲೆನ್ನೈ ಉನ್ ಪೊನ್ನಡಿ ಶ್ಶೇರ್ ತ್ತೊಳಿವೈ,
ವೇಱೇ ಪೋಹ ಎಞ್ಞಾನ್ಱುಮ್ ವಿಡಲೇ.

ಏಲ್ ಏಱು ಏೞುಮ್ ஏல் ஏறு ஏழும் ಎದುರಿಸಿ, ಏಳು ಗೂಳಿಗಳನ್ನು, ವೆನ್ಱು வென்று = ಗೆದ್ದು, ಏರ್ ಕೊಳ್ ஏர்கொள் = ಸೊಬಗಿನಿಂದ ತುಂಬಿದ, ಇಲಙ್ಗೈಯ್ಯೈ இலங்கையை = ಲಂಕಾಪಟ್ಟಣವನ್ನು, ನೀಱೇ ಶೆಯ್ದ நீறு செய்த (ನಾಶ, ನಾಶಮಾಡಿದ) = ಬೂದಿಯನ್ನಾಗಿಸಿದ, ನೆಡುಮ್ நெடும் = ಅತ್ಯುನ್ನತ ಶುಡರ್ சுடர் = ತೇಜಸ್ಸಿನ, ಶೋದಿ சோதி = ಜ್ಯೋತಿಸ್ವರೂಪಿಯೇ, ತೇಱು ಏಲ್ தேறு ஏல் = ಜಯಿಸುವುದನ್ನು ಯಾಚಿಸುತ್ತೇನೆ, ಎನ್ನೈ என்னை = ನನ್ನನ್ನು, ಉನ್ ಪೊನ್ ಅಡಿ ಶೇರ್ ತ್ತು ಒಳಿವೈ உன் பொன் அடி சேர்ந்து ஒழிவை = ನಿನ್ನ ಸುಂದರವಾದ ತಿರುವಡಿಗಳಲ್ಲಿ ಸೇರಿಸಿಕೊಂಡು ಬೇಗನೇ, ವೇಱೇ ಪೋಹ வேறே போக = ಬೇರೆ ಹೋಗುವುದಕ್ಕೆ, ಎಞ್ಞಾನ್ಱುಮ್ எஞ்ஞான்றும் = ಎಂದೆಂದಿಗೂ, ವಿಡಲೇ விடலே = ಬಿಡಬೇಡ.

ಏಳು ಗೂಳಿಗಳನ್ನು ಎದುರಿಸಿ ಗೆದ್ದವನೇ, ಸೊಬಗಿನಿಂದ ತುಂಬಿದ

Garani Srinivasan

ಲಂಕಾ ಪಟ್ಟಣವನ್ನು ಬೂದಿಯನ್ನಾಗಿಸಿದವನೇ, ನಾಶಿಯಿಲ್ಲದ ತೇಜಸ್ಸಿನ ಜ್ಯೋತಿಸ್ವರೂಪನೇ, (ನಾನು) ಜಯವನ್ನು ಯಾಚಿಸುತ್ತೇನೆ. ಬೇಗನೆ ನಿನ್ನ ಸುಂದರವಾದ ತಿರುವಡಿಗಳಲ್ಲಿ (ನನ್ನನ್ನು) ಸೇರಿಸಿಕೊಂಡು, ಬೇರೆ (10)
~~ಹೋಗದಂತೆ~~ ಹೋಗುವುದಕ್ಕೆ ಎಂದೆಂದಿಗೂ ಬಿಡಬೇಡ

ಏಳು ಮದಿಸಿದ ಗೂಳಿಗಳನ್ನು ಒಬ್ಬನೇ ಎದುರಿಸಿ, ಅವುಗಳನ್ನು ಸುಲಭವಾಗಿ ಜಯಿಸಿದ್ದ ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದನು. ಸತ್ಯೆ ಎಂಬವಳನ್ನು ಮದುವೆಯಾಗುವುದಕ್ಕಾಗಿ, ಭೀಕರವಾಗಿ ಇದ್ದಂಥ ಏಳು ಗೂಳಿಗಳನ್ನು ಒಬ್ಬನೇ ಮಣಿಸಿ ಕಟ್ಟಿಹಾಕುವುದನ್ನು ನಡೆಸಿ ಜಯಿಸಿದ್ದ.

ಅತ್ಯಂತ ಸುಂದರವೂ ಸಕಲೈಶ್ವರ್ಯ ಸಂಪನ್ನವೂ ಆದ ಲಂಕಾಪಟ್ಟಣವನ್ನು ಸುಟ್ಟು ಬೂದಿಯನ್ನಾಗಿಸಿದ್ದ ಭಗವಂತನು ಶ್ರೀರಾಮನಾಗಿ ಅವತರಿಸಿದನು. ರಾಕ್ಷಸರ ಕುಲವನ್ನೇ ನಿರ್ಮೂಲಗೊಳಿಸುವುದಕ್ಕಾಗಿಯೇ ಶ್ರೀರಾಮನಾಗಿ ಅವತರಿಸಿ, ರಾಕ್ಷಸರಾಜನೂ ಅಸದೃಶ ವೀರಾಗ್ರಣಿಯೂ ಆದ ರಾವಣಾಸುರನ ರಾಜಧಾನಿಯಾದ ಲಂಕೆಯನ್ನು ನಾಶಮಾಡಿ, ಅಲ್ಲಿ ಸೇರಿಕೊಂಡಿದ್ದ ರಾವಣನ ಎಲ್ಲ ರಾಕ್ಷಸರನ್ನು ಕೊಂದು ಹಾಕಿದ್ದ.

ಭಗವಂತನ ತೇಜಸ್ಸನ್ನು ಸಂಪೂರ್ಣ ವರ್ಣಿಸಲಾರದೆ ಕೋಟಿ ಕೋಟಿ ಸೂರ್ಯ ಪ್ರಕಾಶವನ್ನು ಮೀರಿಸಿದ, ಅಮಿತವಾದ ತೇಜಸ್ಸಿನ ಜ್ಯೋತಿಸ್ವರೂಪಿ ಎಂದು ಮಾತ್ರ ಹೇಳುವುದು

ಆಳ್ವಾರರು ಹೇಳುತ್ತಾರೆ: ಭಗವಂತ, ನಿನ್ನ ಸಾಮರ್ಥ್ಯಕ್ಕೆ ಎಣೆಯಿಲ್ಲ. ಏಳು ಗೂಳಿಗಳನ್ನು ಒಬ್ಬನೇ ಎದುರಿಸಿ ಜಯಿಸಿದ ಶ್ರೀಕೃಷ್ಣನೇ ನೀನು. ಸುಂದರವೂ, ಸಕಲೈಶ್ವರ್ಯ ಸಮೃದ್ಧವೂ, ಪ್ರವೇಶಿಸಲು ಅಸದಳವೂ ಆದ ಲಂಕಾಪಟ್ಟಣವನ್ನು ಬೂದಿ ಮಾಡಿದ ಶ್ರೀರಾಮನೇ ನೀನು ನಾಶಿಯಿಲ್ಲದ ತೇಜಸ್ಸಿನಿಂದ ಕೂಡಿದ ಜ್ಯೋತಿಸ್ವರೂಪಿ ನೀನು. ನಿನ್ನಲ್ಲಿ ನನ್ನ ಬೇಡಿಕೆ ಇದೇ – ನನ್ನನ್ನು ಈ ಸಾಂಸಾರಿಕ ಬಂಧನದಿಂದ ಬಿಡಿಸು. ಮತ್ತು, ಬೇಗನೆ ನಿನ್ನ ಸುಂದರವಾದ ತಿರುವಡಿಗಳಲ್ಲಿ ನನ್ನನ್ನು ಸೇರಿಸಿಕೊ ಮತ್ತು, ಅವನ್ನಗಲಿ ಬೇರೆ ಹೋಗುವುದಕ್ಕೆ ಎಂದೆಂದಿಗೂ ಅವಕಾಶ ಕೊಡಬೇಡ.

ಭಗವಂತನ ತಿರುವಡಿಗಳು ದೊರಕುವೆಂದರೆ ಮನಸ್ಸು ನೆಮ್ಮದಿಗೊಳ್ಳುತ್ತದೆ. ಆದರೂ ಆಳ್ವಾರರಿಗೆ ಅಂಜಿಕೆ. ಒಂದು ವೇಳೆ ತಮ್ಮ ಚಪಲ ಚಿತ್ತ ತಮ್ಮನ್ನು ಬೇರೆ ಕಡೆಗೆ ಸೆಳೆದು ಬಿಟ್ಟರೆ ಗತಿಯೇನು ಎಂಬುದೇ ಅಂಜಿಕೆ. ಅದಕ್ಕಾಗಿಯೇ, ಅವರ ಕಡೆಯ ಬೇಡಿಕೆ: ತಿರುವಡಿಗಳನ್ನು ಎಂದೆಂದಿಗೂ ಅಗಲದಂತೆ ಮಾಡು ಎಂದು.

Garani Srinivasan

11. விடலில் சக்கரத்து அண்ணலை மேவல்,
விடலில் வண்குருகூர்ச் சடகோபன் சொல்,
கெடலிலாயிரத்துள் இவை பத்தும்,
கெடலில் வீடு செய்யும் கிளர்வார்க்கே

ವಿಡಲಿಲ್ ಶಕ್ಕರತ್ತು ಅಣ್ಣಲೈ ಮೇವಲ್,
ವಿಡಲಿಲ್ ವಣ್ ಕುರುಹೂರ್ ಚ್ಚಡಗೋಪನ್ ಶೊಲ್,
ಕೆಡಲಿಲಾಯಿರತ್ತುಳ್ ಇವೈ ಪತ್ತುಮ್,
ಕೆಡಲಿಲ್ ವೀಡು ಶೆಯ್ಯುಮ್ ಕಿಳರ್ವಾರ್ಕ್ಕೇ.

ವಿಡಲ್ ಇಲ್ விடல் இல் = ಬಿಡುವಿಲ್ಲದ, ಶಕ್ಕರತ್ತು சக்கரத்து = ಚಕ್ರಾಯುಧವನ್ನುಳ್ಳ, ಅಣ್ಣಲೈ அண்ணலை = ಸ್ವಾಮಿಯನ್ನು, [redacted] ಮೇವಲ್ மேவல் = ಹೊಂದಿಕೊಳ್ಳುವುದು, ವಿಡಲ್ ಇಲ್ விடல் இல் = ಬಿಡದಂತೆ ಇರುವ, ವಣ್ ಕುರುಹೂರ್ ಶಡಗೋಪನ್ வண் குருகூர் சடகோபன் = ಸುಂದರವಾದ ಕಿರುಕ್ಕುರುಹೂರಿನ ಶಡಗೋಪನು (ನಮ್ಮಾಳ್ವಾರರು), ಶೊಲ್ சொல் = ಹೇಳಿದ, ಕೆಡಲ್ ಇಲ್ கெடல் இல் = ನಾಶವಿಲ್ಲದ, ಆಯಿರತ್ತುಳ್ ஆயிரத்துள் = ಒಂದು ಸಾವಿರ ಪಾಶುರಗಳಲ್ಲಿ, ಇವೈ இவை = ಇವುಗಳಾದ (ಈ), ಪತ್ತುಮ್ பத்தும் = ಹತ್ತನ್ನೂ, ಕಿಳರ್ವಾರ್ಕ್ಕೇ கிளர்வார்க்கே = ಓದಿ ಅಭ್ಯಾಸಮಾಡುವವರಿಗೆ, ಕೆಡಲ್ ಇಲ್ கெடல் இல் = ನಾಶವಿಲ್ಲದ (ಶಾಶ್ವತವಾದ), ವೀಡು வீடு = ಬಿಡುಗಡೆಯನ್ನು, ಶೆಯ್ಯುಮ್ செய்யும் = ಉಂಟುಮಾಡುತ್ತದೆ.

ಬಿಡುವಿಲ್ಲದ ಚಕ್ರಾಯುಧವನ್ನುಳ್ಳ ಸ್ವಾಮಿಯನ್ನು ಹೊಂದಿಕೊಳ್ಳುವುದನ್ನು ಬಿಡದಂತೆ ಇರುವ ಸುಂದರವಾದ ಕಿರುಕ್ಕುರುಹೂರಿನ ಶಡಗೋಪನು ಹೇಳಿದ ನಾಶವಿಲ್ಲದ ಒಂದು ಸಾವಿರ ಪಾಶುರಗಳಲ್ಲಿ, ಈ ಹತ್ತನ್ನೂ ಓದಿ ಅಭ್ಯಾಸಮಾಡುವವರಿಗೆ ಶಾಶ್ವತವಾದ ಬಿಡುಗಡೆಯನ್ನುಂಟುಮಾಡುತ್ತದೆ. (11)

ಭಗವಂತನಲ್ಲಿ ಸಲ್ಲಿಸಬೇಕಾದ ಬೇಡಿಕೆ ಮತ್ತು ಅದರಿಂದ ಉಂಟಾಗುವ ಅಂತಿಮಗುರಿ – ಈ ಎರಡು ವಿಷಯಗಳು ಈ ತಿರುವಾಯ್ಮೊಳಿಗೆ ಪ್ರಾಶಸ್ತ್ಯವನ್ನು ತಂದಿರುವುದು. ಭಗವಂತನಲ್ಲಿ ಬೇಡುವುದೆಂದರೆ ಅಂತಿಮ ಪುರುಷಾರ್ಥವಾದ 'ಬಿಡುಗಡೆ' ಎಂಬುದನ್ನೇ. ಅದನ್ನು ಪಡೆಯು-

Garani Srinivasan

ಕೊಳ್ಳುವುದಕ್ಕೆ ಉಪಾಯವೆಂದರೆ - ಭಗವಂತನ ದಿವ್ಯ ತಿರುವಡಿಗಳನ್ನು ಅನನ್ಯವಾಗಿ ಆಶ್ರಯಿಸುವುದು, ಮತ್ತು, ಅದರಿಂದ ಎಂದೆಂದಿಗೂ ಅಗಲಿಕೆಯಿಲ್ಲದಂತೆ ಮಾಡಿಕೊಳ್ಳುವುದು. ಅದು ಹೇಗೆ? ಭಗವಂತನ ನಾನಾ ಅವತಾರಗಳಲ್ಲಿ ನಡೆಸಿದ ಅದ್ಭುತಾಶ್ಚರ್ಯಕರವಾದ ಲೀಲೆಗಳನ್ನೆಲ್ಲಾ ಸ್ಮರಿಸುತ್ತಾ, ಕೀರ್ತಿಸುತ್ತಾ ಕಾಲ ಕಳೆಯುವುದು. ಅವನನ್ನು ಅಂತರಂಗದಲ್ಲಿ ನೆಲೆಗೊಳಿಸಿಕೊಳ್ಳುವುದು. ಅವನ ತಿರುವಡಿಗಳ ಸ್ಮರಣೆಯನ್ನು ಕಡೆಯುಸಿರಿನವರೆಗೂ ನಡೆಸುತ್ತಿರುವುದು. ಮತ್ತು, 'ನಾನು, ನನ್ನದು' ಎಂಬುದನ್ನು ಮರೆತು, ಎಲ್ಲವೂ 'ನೀನೇ, ನಿನ್ನದೇ' ಎಂದು ಭಗವದರ್ಪಣ ಮಾಡುವುದು. ಬದುಕಿರುವಷ್ಟು ಕಾಲವೂ ಹೀಗೆ ಅಭ್ಯಾಸ ಮಾಡುತ್ತಾ ಹೋದರೆ, ಮರಣಾನಂತರ, ಭಗವತ್ಪ್ರೀತಿಯಿಂದ ಬಿಡುಗಡೆಯೂ ಭಗವಂತನ ತಿರುವಡಿಗಳ ಕೈಂಕರ್ಯವೂ ತಪ್ಪದೆ ಲಭಿಸುವುದು

ಹೀಗೆ, ಚಕ್ರಾಯುಧಧಾರಿಯಾದ ಭಗವಂತನೊಡನೆ ಸೇರಿಕೊಳ್ಳುವ ಅತ್ಯಂತ ಸುಲಭವಾದ ಮಾರ್ಗವನ್ನು ತಿಳಿಸಿರುವವನು ತಿರುಕ್ಕುರುಹೂರಿನ ಶಠಗೋಪನು. ಆತನು ರಚಿಸಿ ಹಾಡಿರುವ ಒಂದು ಸಾವಿರ ಪಾಶುರಗಳ ಪೈಕಿ ಈ ಹತ್ತನ್ನು ಚೆನ್ನಾಗಿ ಅಭ್ಯಾಸಮಾಡಿ, ಅನುಷ್ಠಾನದಲ್ಲಿ ತಂದುಕೊಳ್ಳುವವರಿಗೆ ಖಂಡಿತವಾಗಿಯೂ ಬಿಡುಗಡೆಯೂ, ಭಗವತ್ಕೈಂಕರ್ಯವೂ ಲಭಿಸುವುದು. ಹೀಗಿದೆ ಈ ತಿರುವಾಯ್ಮೊಳಿಯ ಫಲಶ್ರುತಿ.

— o —

13.6.80

ತಿರುವಾಯ್ಮೊಳಿ - ಎರಡನೆಯ ದಶಕ - ಹತ್ತನೆಯ ತಿರುವಾಯ್ಮೊಳಿ

திருவாய்மொழி - இரண்டாம்பத்து - பத்தாந்திருவாய்மொழி

10 ಕಿಳರೊಳಿಯಿಳಮೈ - கிளரொளியிளமை

1. கிளரொளியிளமை கெடுவதன் முன்னம்,
வளரொளி மாயோன் மருவிய கோயில்,
வளரிளம் பொழில்சூழ் மாலிருஞ்சோலை,
தளர்விலராகில் சார்வது சதிரே.

ಕಿಳರೊಳಿಯಿಳಮೈ ಕೆಡುವದನ್ ಮುನ್ನಮ್,
ವಳರೊಳಿ ಮಾಯೋನ್ ಮರುವಿಯ ಕೋಯಿಲ್,
ವಳರಿಳಮ್ ಪೊೞಿಲ್ ಶೂೞ್ ಮಾಲಿರುಂಜೋಲೈ,
ತಳರ್ವಿಲರಾಹಿಲ್ ಶಾರ್ವದು ಶದಿರೇ

ಕಿಳರ್ கிளர் = ಉಕ್ಕಿಬರುವ, ಒಳಿ ஒளி = ತೇಜಸ್ಸು, ಇಳಮೈ இள-
மை = ಯೌವನವೂ, ಕೆಡುವದನ್ ಮುನ್ನಮ್ கெடுவதன் முன்னம் =
(ಹಾಳಾಗುವುದಕ್ಕೆ) ಕೆಡುವುದಕ್ಕೆ ಮುಂಚಿತವಾಗಿಯೇ, ವಳರ್ ಒಳಿ வளர் ஒளி
= ಕಡಮೆಯಾಗದ (ಬೆಳೆಯುತ್ತಿರುವ) ತೇಜಸ್ಸನ್ನುಳ್ಳ, ಮಾಯೋನ್ மாயோன்
= ಆಶ್ಚರ್ಯಕಾರಿಯು (ಭಗವಂತನು), ಮರುವಿಯ மருவிய = ನೆಲಸಿರು-
ವ, ಕೋಯಿಲ್ கோயில் = ಮಂದಿರವಾಗಿ, ವಳರ್ வளர் = ಬೆಳೆ-
ಯುತ್ತಿರುವ, ಇಳ இள = ಎಳೆಯ (ಪ್ರಾಯದ) ಪೊೞಿಲ್ பொழில் = ತೋಪು-
ಗಳಿಂದ, ಶೂೞ್ சூழ் = ಸುತ್ತುವರಿದಿರುವ, ಮಾಲಿರುಂಜೋಲೈ மாலி
ருஞ்சோலை = ತಿರುಮಾಲಿರುಂಜೋಲೈ ಮಲೈ ಕ್ಷೇತ್ರವನ್ನು ಕೂಡು, ತಳರ್ವು
ಇಲರ್ தளர்வு இலர் = ಆಲಸ್ಯವಿಲ್ಲದವರು, ಆಹಿಲ್ ஆகில் = ..., ಶದಿರೇ சதி-
ಆದರೆ, (ಅವರು), ಶಾರ್ವದು சார்வது = ಸೇರುವುದು,
ரே = ಮಹದೈಶ್ವರ್ಯವನ್ನೆ.

ಉಕ್ಕಿಬರುವ ತೇಜಸ್ಸು ಯೌವನವೂ ಕೆಡುವುದಕ್ಕೆ ಮುಂಚೆಯೇ, ಕಡಮೆ-
ಯಾಗದ (ಬೆಳೆಯುತ್ತಿರುವ) ತೇಜಸ್ಸನ್ನುಳ್ಳ ಆಶ್ಚರ್ಯಕಾರಿಯು (ಭಗವಂತನು)
ನೆಲಸಿರುವ ಮಂದಿರವಾಗಿ, ಬೆಳೆಯುತ್ತಿರುವ ಎಳೆಯ ಪ್ರಾಯದ ತೋಪುಗಳಿಂ-
ದ ಸುತ್ತುವರಿದಿರುವ ತಿರುಮಾಲಿರುಂಜೋಲೈ ಮಲೈ ಕ್ಷೇತ್ರವನ್ನು ಕೂಡು
ಆಲಸ್ಯವಿಲ್ಲದವರಾದರೆ, ಅವರು ಸೇರುವುದು ಮಹದೈಶ್ವರ್ಯವನ್ನೆ. (1)

ಮನುಷ್ಯನು ಚಿಕ್ಕವನಾಗಿರುವಾಗಲೇ, ಅವನ ಎಳೆಯ ಪ್ರಾಯದಲ್ಲೇ
ಮಾಡಬೇಕಾದ ಒಂದು ಮುಖ್ಯ ಕೆಲಸವಿದೆ. ಸಾಮಾನ್ಯವಾಗಿ, ಎಲ್ಲರಿಂಗೆ,

Garani Srinivasan

ಪ್ರಾಪಂಚಿಕ ಜೀವನಕ್ಕೆ ಸಂಬಂಧಪಟ್ಟ ಕೆಲಸಗಳನ್ನೇ ಮಾಡುತ್ತಾ ಕಾಲಕಳೆಯುವುದರ ಬದಲಾಗಿ, ತನ್ನ ಉದ್ಧಾರಕ್ಕಾಗಿಯೂ ತಾನು ಯತ್ನಿಸಬೇಕಲ್ಲವೇ? ಪ್ರಾಪಂಚಿಕ ಸಂಬಂಧವಾದ ಕೆಲಸಗಳಿಂದ 'ಬಂಧನ'ವೇರ್ಪಡುವುದಲ್ಲದೆ 'ಬಿಡುಗಡೆ'ಯುಂಟಾಗುವುದಿಲ್ಲ. ತನ್ನ ಆತ್ಮೋದ್ಧಾರ ಕಾರ್ಯಕ್ಕಾಗಿ ಪ್ರತಿಯೊಬ್ಬನೂ ಎಳೆವಯಸ್ಸಿನಿಂದಲೇ ಮನಃಪೂರ್ವಕವಾಗಿ ಪ್ರಯತ್ನಿಸಬೇಕು.

ಚಿಕ್ಕ ವಯಸ್ಸಿನಿಂದಲೇ ಮಾಡಬಹುದಾದ ಆತ್ಮೋನ್ನತಿಯ ಕಾರ್ಯ ಯಾವುದು? ಭಗವಂತನು ದೇಶದ ಬೇರೆಬೇರೆ ಕಡೆಗಳಲ್ಲಿ ಅರ್ಚಾಸ್ವರೂಪನಾಗಿ ನೆಲಸಿದ್ದಾನೆ. ಇಂಥ ಸ್ಥಳಗಳನ್ನು ಪವಿತ್ರ ಕ್ಷೇತ್ರಗಳು ಎನ್ನುತ್ತಾರೆ. ಈ ಪವಿತ್ರ ಕ್ಷೇತ್ರಗಳಿಗೆ ಹೋಗುವುದು. ಅಲ್ಲಿ ದಿವ್ಯಮಂಗಳವಿಗ್ರಹನಾದ ಸ್ವಾಮಿಯನ್ನು ದರ್ಶನ ಮಾಡುವುದು ಅವನ ತಿರುವಡಿಗಳ ಸೇವೆಯಲ್ಲಿ ಆಸಕ್ತಿ ವಹಿಸುವುದು. ಇದರಿಂದ ಭಕ್ತಿ ಹೆಚ್ಚಿ, ಭಗವತ್ಪ್ರೀತಿಗೆ ಶಕ್ತನಾಗುತ್ತಾನೆ. ಇದು ಸುಲಭವೂ, ಹಿತವೂ, ಸಂತೋಷಕರವೂ ಆಗಿದೆ.

ಇಂಥ ಪವಿತ್ರ ಕ್ಷೇತ್ರಗಳು ಭಾರತದಲ್ಲಿ ನೂರ ಎಂಟಿವೆ ಎಂದು ಪರಿಗಣಿಸಲಾಗಿದೆ. ಅವುಗಳಲ್ಲಿ ಒಂದು ಈ ಪಾಶುರದಲ್ಲಿ ಸೂಚಿಸಿರುವ ತಿರುಮಾಲಿರುಂಜೋಲೈ ಮಲೈ ಎಂಬುದು. ಸುಂದರವಾ ಬೆಳೆಯುತ್ತಿರುವ ಗಿಡಮರಗಳಿಂದ ತುಂಬಿ ಶೋಭಿಸುವ ಬೆಟ್ಟದ ಮೇಲ್ಗಡೆ ಒಂದು ದೇವಾಲಯ. ರಮಣೀಯವಾದ ಪ್ರಕೃತಿಯ ನಡುವೆ ಭಗವಂತನು, ಭಕ್ತೋದ್ಧಾರಕ್ಕಾಗಿಯೇ ಅಲ್ಲಿ ನೆಲಸಿದ್ದಾನೆ.

ಆಳ್ವಾರರು ಹೇಳುತ್ತಾರೆ: ವಯಸ್ಸು ಚಿಕ್ಕದಾಗಿರುವಾಗಲೇ, ಯೌವನ ಉಕ್ಕಿ ಬರುತ್ತಿರುವಾಗಲೇ, ಎಂದರೆ, ದೇಹದಲ್ಲಿ ಬಲವೂ ಉತ್ಸಾಹವೂ ತುಂಬಿ, ಅವು ಕುಂದಿಹೋಗುವುದಕ್ಕೆ ಮುಂಚಿತವಾಗಿಯೇ ಆಶ್ಚರ್ಯಕಾರಿಯಾದ ಭಗವಂತನು ನೆಲಸಿರುವ ಪವಿತ್ರ ಕ್ಷೇತ್ರಗಳಲ್ಲಿ ಒಂದಾಗಿ, ದಿವ್ಯದೇಶವಾಗಿ, ರಮಣೀಯವಾಗಿ ಶೋಭಿಸುವ ತಿರುಮಾಲಿರುಂಜೋಲೈಮಲೈ ಕ್ಷೇತ್ರಕ್ಕೆ ಯಾರು ಆಸಕ್ತಿಯಿಂದ ಹೋಗುತ್ತಾರೋ ಅವರು 'ಮಹದೈಶ್ವರ್ಯ'ನಿಧಿಯಾದ ಭಗವಂತನನ್ನೊಡನೆ ಸಂಬಂಧವನ್ನು ಪಡೆದುಕೊಳ್ಳುತ್ತಾರೆ.

2. சதிரிள மடவார் தாழ்ச்சியை மதியாது,
அதிர்குரல் சங்கத்து அழகர்தம் கோயில்,
மதிதவழ் குடுமி மாலிருஞ்சோலை,
பதியது ஏத்தி எழுவது பயனே.

ಶದಿರಿಳ ಮಡವಾರ್ ತಾೞ್ಚ್ಚಿಯೈ ಮದಿಯಾದು,
ಅದಿರ್ ಕುರಲ್ ಶಙ್ಗತ್ತು ಅೞಗರ್ ತಮ್ ಕೋಯಿಲ್,
ಮದಿ ತವೞ್ ಕುಡುಮಿ ಮಾಲಿರುಂಜೋಲೈ,
ಪದಿಯದು ಏತ್ತಿ ಎೞುವದು ಪಯನೇ.

ಶದಿರ್ சதிர் = ಶೋಭನ, ಇಳ இளா = ಯೌವನದ, ಮಡವಾರ್ மடவார் = ಸ್ತ್ರೀಯರ, ತಾೞ್ಚ್ಚಿಯೈ தாழ்ச்சியை = ದಂಪೋದನವನ್ನು, ಮದಿಯಾದು மதியாது = ಲಕ್ಷಿಸದೆ, ಅದಿರ್ ಕುರಲ್ ಶಙ್ಗತ್ತು அதிர் குரல் சங்கத்து = ಮೊಳಗುವ ದನಿಯುಳ್ಳ ಶಂಖವುಳ್ಳ. ಅೞಗರ್ ತಮ್ ಕೋಯಿಲ್ அழகர் தம் கோயில் = 'ಅೞಗರ್' ಅವರ ಆಲಯವಾಗಿ, ಮದಿ மதி = ಚಂದ್ರನು, ತವೞ್ தவழ் = ತೆವಳುವಂಥ, ಕುಡುಮಿ குடுமி = ಶಿಖರವುಳ್ಳ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೈ ಎಂಬ, ~~[illegible]~~ ಪದಿ ಅದು பதி அது = ಆ ತಿರುಪತಿಯನ್ನು, ಏತ್ತಿ ஏத்தி = ಸ್ತುತಿಸಿ, ಎೞುವದು எழுவது = ಉದ್ಧಾರಗೊಳ್ಳುವುದು, ಪಯನೇ பயனே = ಪ್ರಯೋಜನವೇ ಅಲ್ಲವೇ!

ಶೋಭನ, ಯೌವನದ, ಸ್ತ್ರೀಯರ ದಂಪೋದನವನ್ನು ಲಕ್ಷಿಸದೆ, ಮೊಳಗುವ ದನಿಯ ಶಂಖವುಳ್ಳ ಅೞಗರ್-ಅವರ ಆಲಯವಾಗಿರುವ, ಚಂದ್ರನು ತೆವಳುವಂಥ ಶಿಖರವುಳ್ಳ, ತಿರುಮಾಲಿರುಂಜೋಲೈ ಎಂಬ ಆ ತಿರುಪತಿಯನ್ನು ಸ್ತುತಿಸಿ ಉದ್ಧಾರಗೊಳ್ಳುವುದು ಪ್ರಯೋಜನ (2) ವಲ್ಲವೇ?

ಉತ್ತಮವಾದ ಪ್ರಯೋಜನ ಯಾವುದು? ಸುಂದರಿಯರಾ ಯೌವನವತಿಯರಾ ಆ ಸ್ತ್ರೀಯರ ವೈಯಾರಕ್ಕೆ ದಂಪೋದನಕ್ಕೆ ಒಳಗಾಗಿ ವಿಷಯಸುಖದಲ್ಲಿ ತೊಡಗುವುದೇ? ಅಥವಾ, ನಾನಾ ದಿವ್ಯಕ್ಷೇತ್ರಗಳಲ್ಲಿ ನೆಲಸಿರುವ ಭಗವಂತನನ್ನು ಭಜಿಸಿ ಪೂಜಿಸಿ ಉಜ್ಜೀವನಗೊಳ್ಳುವುದೇ?

ಆಳ್ವಾರರು ಹೇಳುತ್ತಾರೆ: ಸುಂದರ ಯುವತಿಯರ ದಂಪೋದನವನ್ನು ಲಕ್ಷಿಸದೆ, ಇಂದ್ರಿಯ ಚಾಪಲ್ಯಕ್ಕೆ ಒಳಗಾಗದೆ, ದಿವ್ಯಕ್ಷೇತ್ರ (ತಿರುಪತಿ) ಎನಿಸಿದ ತಿರುಮಾಲಿರುಂಜೋಲೈ ಮಲೆಯ ಅತ್ಯುನ್ನತ ಶಿಖರದಲ್ಲಿ 'ಅೞಗರ್' ಆಗಿ ನೆಲಸಿರುವ ಭಗವಂತನನ್ನು ಕೊಂಡಾಡುವುದರಿಂದ ಉಜ್ಜೀವನಗೊಳ್ಳುವುದೇ ಪರಮ ಪುರುಷಾರ್ಥ. ಲಕ್ಷ್ಯವನ್ನೆಲ್ಲಾ ಅತ್ತಕಡೆಗೆ ತಿರುಗಿಸಬೇಕು.

Garani Srinivasan

"ಶದಿರ್-சதிர்" — ಎಂಬುದಕ್ಕೆ "ಅಂದವು, ಮಹದೈಶ್ವರ್ಯ, ಸೌಬಗು, ನೆಲೆ, ನಾಟ್ಯ ವೈಯಾರ ಎಂದೆಲ್ಲ ಅರ್ಥವಾಗುತ್ತದೆ

3 பயனல்ல செய்து பயனில்லை நெஞ்சே,
புயல்மழை வண்ணர் புரிந்துறை கோயில்,
மயல் மிகு பொழில்சூழ் மாலிருஞ்சோலை,
அயன் மலையடைவது அது கருமமே.

ಪಯನಲ್ಲ ಶೆಯ್ದು ಪಯನಿಲ್ಲೈ ನೆಂಜೇ,
ಪುಯಲ್ ಮೞೈ ವಣ್ಣರ್ ಪುರಿನ್ದುಱೈ ಕೋಯಿಲ್,
ಮಯಲ್ ಮಿಗು ಪೊೞಿಲ್ ಶೂೞ್ ಮಾಲಿರುಂಜೋಲೈ,
ಅಯನ್ ಮಲೈಯಡೈವದು ಅದು ಕರುಮಮೇ.

ಪಯನ್ ಅಲ್ಲ பயன் அல்ல = ಉಪಯೋಗವಿಲ್ಲದ್ದನ್ನು (ನಿಷ್ಫಲವಾದದ್ದನ್ನು), ಶೆಯ್ದು செய்து = ಮಾಡುವುದರಿಂದ, ಪಯನ್ ಇಲ್ಲೈ ನೆಂಜೇ பயன் இல்லை நெஞ்சே = ಪ್ರಯೋಜನವಿಲ್ಲ, ಮನಸ್ಸೇ, ಪುಯಲ್ புயல் = ವರ್ಷಾಕಾಲದ, ಮೞೈ மழை = ಮೋಡದ, ವಣ್ಣರ್ வண்ணர் = ಬಣ್ಣದವನಾದ ಸ್ವಾಮಿಯು, ಪುರಿನ್ದು புரிந்து = ಆಶೆಯಿಂದ, ಉಱೈ உறை = ನೆಲೆಸಿರುವ, ಕೋಯಿಲ್ கோயில் = ದೇವಾಲಯವಾದ, ಮಯಲ್ ಮಿಗು மயல் மிகு = ಬಹಳವಾಗಿ ಭ್ರಾಂತಿಗೊಳಿಸುವ, ಪೊೞಿಲ್ பொழில் = ತೋಪುಗಳಿಂದ, ಶೂೞ್ சூழ் = ಸುತ್ತುವರಿದಿರುವ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೈ ಎಂಬ, ಅಯನ್ ಮಲೈ அயன் மலை = ಹುಟ್ಟಿಲ್ಲದವನ ತಿರುಮಲೆಯನ್ನು (ಬೆಟ್ಟವನ್ನು), ಅಡೈವದು ಅದು அடைவது அது = ಸೇರುವುದು ಎಂಬುದು, ಕರುಮಮೇ கருமமே = ಕರ್ತವ್ಯವೇ.

ಮನಸ್ಸೇ, ಉಪಯೋಗವಿಲ್ಲದ್ದನ್ನು (ನಿಷ್ಫಲವಾದದ್ದನ್ನು) ಮಾಡುವುದರಿಂದ ಪ್ರಯೋಜನವಿಲ್ಲ. ಮಳೆಗಾಲದ ಮೋಡದ ಬಣ್ಣದವನಾದ ಸ್ವಾಮಿಯು ಆಶೆಯಿಂದ ನೆಲೆಸಿರುವ ದೇವಾಲಯವಾದ, ಬಹಳವಾಗಿ ಭ್ರಾಂತಿಗೊಳಿಸುವ (ಚಿತ್ತಾಕರ್ಷಕವಾದ) ತೋಪುಗಳಿಂದ ಸುತ್ತುವರಿದ ತಿರುಮಾಲಿರುಂಜೋಲೈ ಮಲೈ ಎಂಬ, ಹುಟ್ಟಿಲ್ಲದವನ ಬೆಟ್ಟವನ್ನು ಸೇರುವುದೇ ಕರ್ತವ್ಯ. (3)

ಆೞ್ವಾರರು ಹೇಳುತ್ತಾರೆ: ವಿಷಯ ಸುಖಕ್ಕೆ ಬಳಲುವುದು ನಿಷ್ಫಲವಾದ ಕೆಲಸ. ಅದಕ್ಕೆ ಈಡಾಗಿ ಪ್ರಯೋಜನವೇನು? ತಿರುಮಾಲಿರುಂಜೋಲೈ ಮಲೈಯ ಶಿಖರದಲ್ಲಿ ಕಾರ್ಮುಗಿಲ ಬಣ್ಣದವನಾದ ಭಗವಂತನು ನೆಲಸಿದ್ದಾನೆ. ಅಲ್ಲಿಗೆ ಹೋಗಿ, ಅವನನ್ನು ಪಡೆಯಲಿಕ್ಕೆ ಹೋಗುವುದೇ ನಿಜವಾದ ಫಲಪ್ರದವಾದ ಕರ್ತವ್ಯ.

Galani Srinivasan

~~ಶಬ್ದ ಜಾತ್ರಿಗ - ಎಂಬುದಕ್ಕೆ "ರೂಪ, ಮಾಹಾತ್ಮ್ಯವೈಭವ,~~
~~ಹೆಸರು, ಶೀಲ, ಸಾಮ್ಯ, ವೈಭವ" ಎಂದೆಲ್ಲ ಅರ್ಥವಾಗುತ್ತದೆ.~~

4. கருமவன்பாசம் கழித்துழன்றுய்யவே,
பெருமலையெடுத்தான் பீடுறை கோயில்,
வருமழை தவழும் மாலிருஞ்சோலை,
திருமலையதுவே அடைவது திறமே.

ಕರುಮವನ್ ಪಾಶಮ್ ಕಳಿತ್ತುಉನ್ಱುಯ್ಯವೇ,
ಪೆರುಮಲೈಯೆಡುತ್ತಾನ್ ಪೀಡುಱೈ ಕೋಯಿಲ್,
ವರುಮೞೈ ತವೞುಮ್ ಮಾಲಿರುಂಜೋಲೈ,
ತಿರುಮಲೈ ಯದುವೇ ಅಡೈವದು ತಿಱಮೇ.

ಕರುಮಮ್ கருமம் = ಕರ್ಮವೆಂಬ, ವನ್ ಪಾಶಮ್ வண் பாசம் = ಬಲವಾದ ಬಂಧನವನ್ನು, ಕಳಿತ್ತು கழித்து = ಕಡಿದುಹಾಕಿ, (ಕಳಚಿ), ಉಳನ್ಱು உழன்று = ದೀನನಾಗಿ ಅಲೆದಾಡುತ್ತಾ, ಉಯ್ಯವೇ உய்யவே = ಉಜ್ಜೀವನ ಹೊಂದುವುದಕ್ಕಾಗಿಯೇ, ಪೆರುಮಲೈ ಎಡುತ್ತಾನ್ பெருமலை எடுத்தான் = ಬಹುದೊಡ್ಡ ಬೆಟ್ಟವನ್ನೆತ್ತಿದವನ, ಪೀಡು பீடு = ಮಹಾಮಹಿಮೆಯನ್ನು, ಉಱೈ உறை = ಹೊಳ್ಳುವಂಥ (ಬೆಳಗುವಂಥ), ಕೋಯಿಲ್ கோயில் = ಆಲಯವಾದ, ವರುಮೞೈ வருமழை = ಬರುವ ಮಳೆಯ ಮೋಡಗಳು, ತವೞುಮ್ தவழும் = ತೆವಳಿಕೊಂಡು ಹೋಗುವಂಥ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೈ, ಎಂಬ, ತಿರುಮಲೈ திருமலை = ಶ್ರೇಷ್ಠವಾದ ಬೆಟ್ಟವು, ಅದುವೇ அதுவே = ಅದನ್ನೇ, ಅಡೈವದು அடைவது = ಸೇರುವುದು, ತಿಱಮೇ திறமே = ಉಪಾಯವೇ (ಮಾರ್ಗವೇ).

ಕರ್ಮವೆಂಬ ಬಲವಾದ ಬಂಧನವನ್ನು ಕಡಿದುಹಾಕಿ (ಕಳಚಿ), ದೀನನಾಗಿ ಅಲೆದಾಡುತ್ತಾ, ಉಜ್ಜೀವನ ಹೊಂದುವುದಕ್ಕಾಗಿಯೇ, ಬಹುದೊಡ್ಡ ಬೆಟ್ಟವನ್ನೆತ್ತಿದವನ ಮಹಾಮಹಿಮೆಯನ್ನು ಹೊಳ್ಳುವಂಥ (ಬೆಳಗುವಂಥ) ದೇವಾಲಯವಾದ, ಬರುವ ಮಳೆಯ ಮೋಡಗಳು ತೆವಳಿಕೊಂಡು ಹೋಗುವಂಥ ತಿರುಮಾಲಿರುಂಜೋಲೈ ಮಲೈ ಎಂಬ ಶ್ರೇಷ್ಠವಾದ ಆ ಬೆಟ್ಟವನ್ನು ಸೇರುವುದೇ ಉಪಾಯ (ಮಾರ್ಗ) (4)

ಉಜ್ಜೀವನ ಹೊಂದುವುದಕ್ಕೆ ಏನು ಉಪಾಯ? ಎಂಬುದನ್ನು

ಇಲ್ಲಿ ಹೇಳಲಾಗುತ್ತದೆ

ಆಳ್ವಾರರು ಹೇಳುತ್ತಾರೆ: ಕರ್ಮ ಎಂಬುದು ಬಲು ಬಲವಾದ ಬಂಧನ. ಅದನ್ನು ಕಡಿದುಹಾಕಿದ ಹೊರತು ಮನುಷ್ಯನು ಉಜ್ಜೀವಿಸಲಾರ. ಅದಕ್ಕೆ ತಕ್ಕ ಉಪಾಯವೇನೆಂಬುದನ್ನು ಅರಿತುಕೊಳ್ಳದಂತೆ, ಅಲೆದಾಡುತ್ತಾ ಹೋಗುವುದರಿಂದ ಫಲವೇನು? ಭಗವಂತನು ಬಾಲಕೃಷ್ಣನಾಗಿ ಬೆಳೆಯುತ್ತಿರುವಾಗಲೇ ಬಲು ದೊಡ್ಡ ಬೆಟ್ಟವಾದ ಗೋವರ್ಧನಗಿರಿಯನ್ನು ಎತ್ತಿ ಕೊಡೆಯಂತೆ ಹಿಡಿದು, ಅದರಡಿಯಲ್ಲಿ ಗೋವುಗಳನ್ನೂ ಗೋಪಾಲಕರನ್ನೂ ದೇವೇಂದ್ರನ ಕಡು-ಕೋಪದ ಫಲವಾದ ಬಿರುಸಿನ ಮಳೆಯಿಂದ ರಕ್ಷಿಸಿದನಲ್ಲವೇ! ಅವನ ಅಪರಿಮಿತವಾದ ಮಹಿಮೆಯನ್ನು ಬೆಳಗಿಸುವಂಥ ದೇವಾಲಯ ತಿರು-ಮಾಲಿರುಂಜೋಲೈ ಎಂಬ ತಿರುಮಲೆಯ ಅತ್ಯುನ್ನತ ಶಿಖರದಲ್ಲಿದೆ. ಆ ಪವಿತ್ರವಾದ ಬೆಟ್ಟವನ್ನು ಸೇರುವುದು, ಅಲ್ಲಿ ನೆಲಸಿರುವ ದಿವ್ಯಸುಂದರ ಮೂರ್ತಿಯನ್ನು (ಅಳಗರ್) ಭಜಿಸಿ ಪೂಜಿಸುವುದು. ಕರ್ಮಬಂಧನದಿಂದ ಬಿಡುಗಡೆ ಹೊಂದುವುದಕ್ಕೂ, ಉಜ್ಜೀವನಗೊಳ್ಳುವುದಕ್ಕೂ ಇದೇ ಸುಲಭವೂ ಉತ್ತಮವೂ ಆಗಿರುವ ಉಪಾಯ.

5 திறமுடை வலத்தால் தீவினை பெருக்காது,
அறமுயலாழிப் படையவன் கோயில்,
மறுவில் வண் சுனைசூழ் மாலிருஞ்சோலை,
புறமலை சாரப் போவது கிறியே.

ತಿಱಮುಡೈ ವಲತ್ತಾಲ್ ತೀವಿನೈ ಪೆರುಕ್ಕಾದು,
ಅಱಮುಯಲಾೞಿ ಪ್ಪಡೈಯವನ್ ಕೋಯಿಲ್,
ಮಱುವಿಲ್ ವಣ್ ಶುನೈ ಶೂೞ್ ಮಾಲಿರುಂಜೋಲೈ,
ಪುಱಮಲೈ ಶಾರಪ್ಪೋವದು ಕಿಱಿಯೇ.

ತಿಱಮ್ ಉಡೈ திறம் உடை = [illegible]ದೊಂದಿಗೆ, (ಕೂಡಿದ), ವಲತ್ತಾಲ್ வலத்தால் = ಬಲದಿಂದ, ತೀವಿನೈ தீவினை = ಕೆಟ್ಟ ಕೆಲಸಗಳನ್ನು (ಕರ್ಮಪಾಪಗಳನ್ನು), ಪೆರುಕ್ಕಾದು பெருக்காது = ಬೆಳೆಸದಂತೆ (ಹೆಚ್ಚು ಮಾಡಿಕೊಳ್ಳದಂತೆ), ಅಱಮ್ அறம் = ಧರ್ಮವನ್ನು, ಮುಯಲ್ முயல் = ಬಿಡದೆ ~~ಮಾಡುವ~~ ನಡೆಸುವ, ಆೞಿ ಪಡೈಯವನ್ ஆழி படையவன் = ಚಕ್ರಾಯುಧಧಾರಿಯ, ಕೋಯಿಲ್ கோயில் = ದೇವಾಲಯವಾದ, ಮಱು ಇಲ್ மறு இல் = ಕೊಳೆಯಿಲ್ಲದ, ವಣ್ ಶುನೈ வண் சுனை = ಸುಂದರವಾದ ಪ್ರವಾಹಗಳಿಂದ, ಶೂೞ್ சூழ் = ಸುತ್ತುವರಿದ

ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ
ಎಂಬ, ಪುಱ(ಮಾಲೆ)ಮಲೈ புறம் மலை = ಎದುರಲ್ಲಿರುವ (ಮಗ್ಗುಲಲ್ಲಿರುವ)
ಬೆಟ್ಟವನ್ನು, ಸಾರ ಹೋಗುವುದು சார போவது = ಸೇರಲು ಹೋಗು
ವುದು, ಕಿಱಿಯೇ. கிறியே = ಸದುಪಾಯವೇ.

ದೇಹದಲ್ಲಿರುವ ಬಲದಿಂದ ಸದುಪಾಯಗಳನ್ನು ಬಳಸಿಕೊಳ್ಳ-
ದಂತೆ, ಧರ್ಮವನ್ನು ಬಿಡದೆ ನಡೆಯುವ ಚಕ್ರಾಯುಧ ಧಾರಿಯ ದೇವಾಲಯ
ವಾದ, ಕೊಳೆಯಿಲ್ಲದ ಸುಂದರವಾದ ಪ್ರವಾಹಗಳಿಂದ ಸುತ್ತುವರಿದಿರುವ
ತಿರುಮಾಲಿರುಂಜೋಲೈ ಎಂಬ ಎದುರಲ್ಲಿರುವ (ಮಗ್ಗುಲಲ್ಲಿರುವ) ಬೆಟ್ಟ (5)
ವನ್ನು ಸೇರಲು ಹೋಗುವುದು ಸದುಪಾಯವೇ

ಆಚಾರ್ಯರು ಹೇಳುತ್ತಾರೆ: ಇಂದ್ರಿಯಗಳು ದೇಹದ ಮೇಲಂ ಕೆಲಸ
ಮಾಡುತ್ತವೆ. ಅವು (ಮನಸ್ಸನ್ನು) ದೇಹವನ್ನು ವಿಷಯ ಸುಖಗಳ ಕಡೆಗೆ ಎಳೆದು ಬಿಡು
ತ್ತವೆ. ದೇಹದಲ್ಲಿ ಬಲವಿರುವ ತನಕ ಈ ಇಂದ್ರಿಯಗಳ ದಾಸ್ಯದ ಬಲೆ
ಯುತ್ತಲೇ ಹೋಗುತ್ತದೆ. ಪರಿಣಾಮವಾಗಿ, ಮನುಷ್ಯನು ಕೆಟ್ಟ ಕೆಲಸ
ಗಳಲ್ಲಿ ತೊಡಗುತ್ತಾನೆ. ಪಾಪವನ್ನು ಬೆಳೆಸುತ್ತಲೇ ಹೋಗುತ್ತಾನೆ. ಇದು
ಕರ್ಮಬಂಧನವನ್ನು ಗಟ್ಟಿ ಮಾಡುತ್ತಲೇ ಹೋಗುತ್ತದೆ. ಈ ಕರ್ಮ
ಬಂಧನದಿಂದ ಬಿಡುಗಡೆ ಹೊಂದಬೇಡವೇ? ಇದಕ್ಕೆ ಸುಲಭವಾದ
ಉಪಾಯವಿದೆ. ಆಶ್ರಿತರನ್ನು ರಕ್ಷಿಸುವುದಕ್ಕೆ ಭಗವಂತನು ಬದ್ಧನಾ
ಗಿದ್ದಾನೆ. ಅವನ ಧರ್ಮ ಆಶ್ರಿತರಕ್ಷಣೆಯೇ. ಅದನ್ನು ಅವನು
ತಪ್ಪದೆ ನಡೆಸುತ್ತಿದ್ದಾನೆ. ಚಕ್ರಾಯುಧವನ್ನು ಹಿಡಿದಿರುವ ಸ್ವಾಮಿಯು
ಕರ್ಮವೆಂಬ ಪಾಶವನ್ನು ತುಂಡರಿಸಿ ಹಾಕುತ್ತಾನೆ. ಅವನು ಕೃಪಾಪೂರ್ಣ.
ಆಶ್ರಿತರನ್ನು ಉದ್ಧರಿಸುವುದಕ್ಕಾಗಿಯೇ, ನಾನಾ ದಿವ್ಯಕ್ಷೇತ್ರಗಳಲ್ಲಿ
ಅರ್ಚಾಮೂರ್ತಿಯಾಗಿ ನೆಲಸಿದ್ದಾನೆ. ಆ ಕ್ಷೇತ್ರಗಳಿಗೆ ಹೋಗಿ, ಭಗವ
ತನನ್ನು ಭಜಿಸಿ ಪೂಜಿಸಬೇಕು. ಅಂಥ ಒಂದು ದಿವ್ಯಕ್ಷೇತ್ರವೇ
ತಿರುಮಾಲಿರುಂಜೋಲೈಮಲೈ. ಆ ತಿರುಮಲೆಯು ನಿರ್ಮಲವಾದ
ನೀರಿನ ಪ್ರವಾಹದಿಂದ ಸುತ್ತುವರಿಯಲ್ಪಟ್ಟು, ರಮಣೀಯವಾಗಿದೆ
ಅಲ್ಲಿಗೆ ಹೋಗಿ ಸೇರುವುದೇ ಭಗವಂತನ ಕೃಪೆಯನ್ನು ಪಡೆದುಕೊಳ್ಳು
ವುದಕ್ಕೆ ಸದುಪಾಯ.

6. கிறியென நினைமின் கீழ்மை செய்யாதே,
உறியமர் வெண்ணெ

மறியொடு பிணை சேர் மாலிருஞ்சோலை,
நெறிபட அதுவே நினைவது நலமே.

ಕಿಳೆಯೆನ ನಿನ್ನಮಿನ್ ಕೀಳ್ಮೈ ಶೆಯ್ಯಾದೇ,
ಉಳೆಯಮರ್ ವೆಣ್ಣೆಯುಣ್ ಉಣ್ಡವನ್ ಕೋಯಿಲ್,
ಮಱಿಯೊಡು ಪಿಣೈಶೇರ್ ಮಾಲಿರುಂಜೋಲೈ
ನೆಱಿಪಡ ಅದುವೇ ನಿನೈವದು ನಲಮೇ.

ನಿನ್ನಮಿನ್ நினைமின் = ಕಿಳೆ ಎನ கிளை என = ಬಂಧುಗಳೆಂದು, ಕೀಳ್ಮೈ ಶೆಯ್ಯಾದೇ கீழ்மை செய்யாதே = ಕೀಳು ಕೆಲಸಗಳನ್ನು ಮಾಡದಂತೆ, ಉಳೆ ಅಮರ್ உறி அமர் = ನೆಲುವುಗಳಲ್ಲಿ ಕೂಡಿಟ್ಟ, ವೆಣ್ಣೆಯ್ ಉಣ್ಡವನ್ வெண்ணெய் உண்டவ ನ = ಬೆಣ್ಣೆಯನ್ನು ಉಂಡವನ, ಕೋಯಿಲ್ கோயில் = ದೇವಾಲಯ ವಾದ, ಮಱಿಯೊಡು மறியொடு = ಜಿಂಕೆಯ ಮರಿಯೊಡನೆ, ಪಿಣೈಶೇರ್ பிணை சேர் = ಕೂಡಿಕೊಂಡಿರುವ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೆ ಎಂಬುದರ, ನೆಱಿ நெறி = ದಾರಿಯನ್ನು, ಪಡ பட = ನಡೆಯುವುದು, ಅದುವೇ அதுவே = ಅದುವೇ, ನಿನೈವದು நினைவது = ಸ್ಮರಿಸುವುದು, ನಲಮೇ நலமே = ಒಳ್ಳೆಯದೇ(ಹಿತ).

(ಇದು) ಬಂಧುಗಳೆಂದು ತಿಳಿಯಿರಿ. ಕೀಳು ಕೆಲಸಗಳನ್ನು ಮಾಡದಂತೆ ನೆಲುವುಗಳಲ್ಲಿ ಕೂಡಿಟ್ಟ ಬೆಣ್ಣೆಯನ್ನುಂಡವನ ದೇವಾಲಯವಾದ, ಜಿಂಕೆಯ ಮರಿಯೊಡನೆ ಕೂಡಿಕೊಂಡಿರುವ ತಿರುಮಾಲಿರುಂಜೋಲೈ ಮಲೆಯ ದಾರಿಯನ್ನು ನಡೆಯುವುದು (ನಡೆಯುವುದು) ಎಂಬುದನ್ನೇ ಸ್ಮರಿಸುವುದು (ಚಿಂತಿಸುವುದು) ಒಳ್ಳೆಯದು. (6)

ಆಳ್ವಾರರು ಹೇಳುತ್ತಾರೆ: ಇಂದ್ರಿಯಗಳಿಗೆ ವಶನಾಗಿ ಕೀಳು ಬಯಕೆಗಳ ಕೆಲಸಗಳನ್ನು ಮಾಡುವುದರಿಂದ, ಪಾಪರಾಶಿ ಬೆಳೆಯುತ್ತಾ ಹೋಗುತ್ತದೆ. ಕರ್ಮಪಾಶದಿಂದ ಬಿಡುಗಡೆ ಹೊಂದುವುದಕ್ಕೆ ಭಗವಂತನು ನೆಲೆಸಿರುವ ದಿವ್ಯಕ್ಷೇತ್ರಗಳಿಗೆ ಹೋಗಿ ಅಲ್ಲಿ ಭಗವಂತನನ್ನು ಭಜಿಸಿ ಪೂಜಿಸಿ ಉದ್ಧಾರಗೊಳ್ಳಬೇಕಲ್ಲವೇ? ಶ್ರೀಕೃಷ್ಣನಾಗಿ ಅವತರಿಸಿ, ಗೊಲ್ಲರ ಮನೆಗಳಲ್ಲಿ ಎತ್ತರವಾದ ಕಡೆಗಳಲ್ಲಿ, ನೆಲುವುಗಳಲ್ಲಿ ಕೂಡಿಟ್ಟ ಬೆಣ್ಣೆಯನ್ನು ಯಾರಿಗೂ ತಿಳಿಯದಂತೆ ಉಂಡವನಾದ ವಿಸ್ಮಯಕಾರಿಯಾದ ಭಗವಂತನು ತಿರುಮಾಲಿರುಂಜೋಲೈ ಮಲೆ ಕ್ಷೇತ್ರದಲ್ಲಿ ದಿವ್ಯಸುಂದರನಾಗಿ (ಅಳಗರ್ ಆಗಿ) ನೆಲೆಸಿದ್ದಾನೆ. ಆ ಕ್ಷೇತ್ರ ಬಹಳ ಪ್ರಶಾಂತವಾದದ್ದು. ಅಲ್ಲಿ ಜಿಂಕೆಗಳು ತಮ್ಮ ತಮ್ಮ ಮರಿಗಳೊಂದಿಗೆ ನಿರ್ಭಯವಾಗಿ ಜೀವಿಸುತ್ತಾ

Garani Srinivasan

ಈ ಕ್ಷೇತ್ರವನ್ನು ಸೇರಬೇಕು, ಅದರ ದಾರಿಯನ್ನು ಹಿಡಿಯಬೇಕು - ಎಂಬ ಚಿಂತನೆಯನ್ನು ಎಡೆಬಿಡದೆ ನಡೆಸುವುದು, ಉಜ್ಜೀವನಕ್ಕೆ ಒಂದು ಸಾಧನವಾಯಿತು ಏಕೆಂದರೆ, ಬಲವಾದ ಚಿಂತನೆಯು, ಎಂದಾದರೊಂದು ದಿನ ಕಾರ್ಯರೂಪಕ್ಕೆ ಬರುವುದು. ಈ ಪವಿತ್ರ ಕ್ಷೇತ್ರವನ್ನು ಸೇರಬಹುದು. ಭಗವಂತನ ಸೇವೆಯೂ ದೊರಯುತ್ತದೆ.

7. நலமென நினைமின் நரகழுந்தாதே,
நிலமுனமிடந்தான் நீடுறை கோயில்,
மலமறு மதிசேர் மாலிருஞ்சோலை
வலமுறையெய்தி மருவுதல் வலமே

ನಲಮೆನ ನಿನೈಮಿನ್ ನಾರಗಳುನ್ದಾದೇ,
ನಿಲಮುನ ಮಿಡನ್ದಾನ್ ನೀಡುಱೈ ಕೋಯಿಲ್,
ಮಲಮಱು ಮದಿ ಶೇರ್ ಮಾಲಿರುಂಜೋಲೈ,
ವಲಮುಱೈಯೆಯ್ದಿ ಮರುವುದಲ್ ವಲಮೇ

ನಲಮ್ ಎನ நலம் என = ಶ್ರೇಯಸ್ಕರವೆಂದು, ನಿನೈಮಿನ நினைமின் = ತಿಳಿಯಿರಿ, ನಾರಗಮ್ ಅಳುನ್ದಾದೇ நரகம் அழுந்தாதே = ನರಕದಲ್ಲಿ ಬಿದ್ದುಕೊಳ್ಳದೆ, ನಿಲಮ್ நிலம் = ಭೂಮಿಯನ್ನು, ಮುನಮ್ முனம் = ಹಿಂದೆ ಒಂದು ಕಾಲದಲ್ಲಿ, ಇಡನ್ದಾನ್ இடந்தான் = ಗಿಡಿದು ಮೇಲಕ್ಕೆತ್ತಿದವನು, ನೀಡು நீடு = ಶಾಶ್ವತವಾಗಿ, ಉಱೈ உறை = ನೆಲಸಿರುವ, ಕೋಯಿಲ್ கோயில் = ದೇವಾಲಯವಾಗಿ, ಮಲಮ್ ಅಱು மலம் அறு = ಕಳಂಕವನ್ನೆಲ್ಲಾ ಕಳೆದುದಾಕಿರುವ, ಮದಿ ಶೇರ್ மதி சேர் = ಚಂದ್ರನು ಸೇರುವಂಥ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೆಯನ್ನು, ವಲಮ್ ಮುಱೈ ಎಯ್ದಿ வலம் முறை எய்தி = ಬಲಗಡೆಯಿಂದ ಕ್ರಮವರಿತು ಸೇರಿ, ಮರುವುದಲ್ மருவுதல் = (ಭಗವಂತನೊಡನೆ) ಕೂಡಿಕೊಳ್ಳುವುದು. ವಲಮೇ வலமே = ಶ್ಲಾಘ್ಯವಲ್ಲವೇ (ಬಲವಲ್ಲವೇ)?

ನರಕದಲ್ಲಿ ಬಿದ್ದುಕೊಳ್ಳದೆ ಇರುವುದಕ್ಕೆ ಇದು ಶ್ರೇಯಸ್ಕರವೆಂದು ತಿಳಿಯಿರಿ. ಹಿಂದೆ, ಒಂದು ಕಾಲದಲ್ಲಿ, ಭೂಮಿಯನ್ನು ಗಿಡಿದು ಎತ್ತಿದವನು ಶಾಶ್ವತವಾಗಿ ನೆಲಸಿರುವ ದೇವಾಲಯವಾಗಿ, ಕಳಂಕರಹಿತನಾದ ಚಂದ್ರನು ಸೇರುವಂಥ ತಿರುಮಾಲಿರುಂಜೋಲೈ ಮಲೆಯನ್ನು ಬಲಗಡೆಯಿಂದ

Garani Srinivasan

(ಪ್ರದಕ್ಷಿಣೆಯೂ) ಕ್ರಮವರಿತು ನೇರ, (ಭಗವಂತನೊಡನೆ) ಕೂಡಿರಲು ಒಪ್ಪುವುದು ಬಲವೇ ಅಲ್ಲವೇ? (ಆಜ್ಞೆಯೇ ಅಲ್ಲವೇ?) (ಜಯವೇ ಅಲ್ಲವೇ?)

ಆಳ್ವಾರರು ಹೇಳುತ್ತಾರೆ: ನರಕದಲ್ಲಿ ಬಿದ್ದು ಕೊಳೆಯುವುದಕ್ಕಿಂತಲೂ ಭಗವಂತನು ನೆಲಸಿರುವ ಪವಿತ್ರ ಕ್ಷೇತ್ರಗಳಿಗೆ ಹೋಗಿ ಸ್ವಾಮಿಯ ಸೇವೆಯಲ್ಲಿ ತೊಡಗುವುದು ಶ್ರೇಯಸ್ಕರವಾದ ಮಾರ್ಗವಲ್ಲವೇ? ಹಿಂದೆ, ಹಿರಣ್ಯಾಕ್ಷನೆಂಬ ರಾಕ್ಷಸನು ಭೂಮಿಯನ್ನು ಅಪಹರಿಸಿ ನೀರಿನಲ್ಲಿ ಬಚ್ಚಿಟ್ಟಿದ್ದ ಕಾಲದಲ್ಲಿ, ಭಗವಂತನು ಮಹಾವರಾಹನಾಗಿ ಅವತರಿಸಿ, ನೀರಿನಲ್ಲಿ ಮುಳುಗಿ, ಭೂಮಿಯನ್ನು ತನ್ನ ಕೋರೆ ಹಲ್ಲುಗಳಿಂದ ಹಿಡಿದು ಮೇಲಕ್ಕೆತ್ತಿ, ಅದರ ಸ್ಥಾನದಲ್ಲಿ ಅದನ್ನು ನಿಲ್ಲಿಸಿದ ಉಪಕಾರವಿಲ್ಲವೇ? ಆಶ್ರಿತರಕ್ಷಣೆಯೇ ಭಗವಂತನ ಧರ್ಮವಲ್ಲವೇ? ಅದಕ್ಕಾಗಿಯೇ ಅವನು ಭೂಮಿಯ ಮೇಲೆ ಅರ್ಚಾವತಾರಿಯಾಗಿ ನೆಲಸಿರುವ ಪವಿತ್ರ ಕ್ಷೇತ್ರಗಳಲ್ಲಿ ಒಂದಾದ ತಿರುಮಾಲಿರುಂಜೋಲೈಮಲೈ ಕ್ಷೇತ್ರಕ್ಕೆ ಹೋಗಿ, ಪ್ರದಕ್ಷಿಣಾಪೂರ್ವಕವಾಗಿ ಭಗವತ್ಸನ್ನಿಧಿಯನ್ನು ಸೇರಿ, ಅವನನ್ನು ಭಜಿಸಿ ಪೂಜಿಸುವುದರಿಂದ, ನರಕದಲ್ಲಿ ಕೊಳೆಯುವುದನ್ನು ಜಯಿಸಿದಂತೆಯೇ ಅಲ್ಲವೇ? ಇದನ್ನೇ ಭಗವದಾಜ್ಞೆಯೆಂದೂ, ಅವನಿತ್ತ ಬಲವೆಂದೂ ಭಾವಿಸಬೇಡವೇ?

೮. வலஞ்செய்து வைகல் வலங்கழியாதே,
வலஞ்செய்யும் ஆயமாயவன் கோயில்,
வலஞ்செய்யும் வானோர் மாலிருஞ்சோலை,
வலஞ்செய்து நாளும் மருவுதல் வழக்கே.

ವಲಂಜೆಯ್ದು ವೈಹಲ್ ವಲಙ್ಗಳಿಯಾದೇ,
ವಲಂಜೆಯ್ಯುಮ್ ಆಯ ಮಾಯವನ್ ಕೋಯಿಲ್,
ವಲಂಜೆಯ್ಯುಮ್ ವಾನೋರ್ ಮಾಲಿರುಂಜೋಲೈ,
ವಲಂಜೆಯ್ದು ನಾಳುಮ್ ಮರುವುದಲ್ ವಳಕ್ಕೇ.

ವಲಮ್ ಶೆಯ್ದು வலம் செய்து = ಬಲವನ್ನುಂಟುಮಾಡಿ, ವೈಹಲ್ வைகல் = ಯಾವಾಗಲೂ, ವಲಮ್ ಕಳಿಯಾದೇ வலம் கழியா தே = ಆ ಬಲವನ್ನು ಕಳೆದುಕೊಳ್ಳದಂತೆ, ವಲಮ್ ಶೆಯ್ಯುಮ್ வலம் செய்யும் = ಬಲವನ್ನುಂಟುಮಾಡುವ, ಆಯನ್ ஆயன் = ಗೋಪಾಲನಾದ, ಮಾಯನ್ மாயன் = ಆಶ್ಚರ್ಯಕರವಾದ.

Garani Srinivasan

ಕೋಯಿಲ್ கோயில் = ದೇವಾಲಯವಾಗಿ, ವಲಮ್ ಶೆಯ್ಯುಮ್
வலம் செய்யும் = ಪ್ರದಕ್ಷಿಣೆ ಮಾಡುವ, ವಾನೋರ್ வானோர்
ದೇವತೆಗಳು (ನಿತ್ಯಸೂರಿಗಳು), ಮಾಲಿರುಂಜೋಲೈ மாலிருஞ்சோ
லை = ತಿರುಮಾಲಿರುಂಜೋಲೈಯನ್ನು, ವಲಮ್ ಶೆಯ್ದು வலம்
செய்து = ಪ್ರದಕ್ಷಿಣೆ ಮಾಡಿ, ನಾಳುಮ್ நாளும் = ದಿನದಿನವೂ,
ಮರುವುದಲ್ மருவுதல் = (ಭಗವಂತನೊಡನೆ) ಕೂಡಿಕೊಂಡಿರುವುದು
ವಳಕ್ಕೇ வழக்கே = ಯುಕ್ತವಾದದ್ದೇ.

ಬಲವನ್ನುಂಟುಮಾಡಿ, ಯಾವಾಗಲೂ, ಆ ಬಲವನ್ನು ಕಳೆದು ಕೊಳ್ಳುವಂತೆ, ಗೆಲುವನ್ನುಂಟುಮಾಡುವ ಗೋಪಾಲನಾದ ಆಶ್ಚರ್ಯ ಕಾರಯ ದೇವಾಲಯವಾಗಿ, ದೇವತೆಗಳು (ನಿತ್ಯಸೂರಿಗಳು) ಪ್ರದಕ್ಷಿಣೆ ಮಾಡುವಂಥ ತಿರುಮಾಲಿರುಂಜೋಲೈಯನ್ನು ದಿನದಿನವೂ ಪ್ರದಕ್ಷಿಣೆ ಮಾಡಿ (ಭಗವಂತನೊಡನೆ) ~~[illegible]~~ ಕೂಡಿಕೊಳ್ಳುವುದು ಯುಕ್ತವಾದದ್ದು (8)

ಆಳ್ವಾರರು ಹೇಳುತ್ತಾರೆ: ಭಗವಂತನು ನಮಗೆ ದೇಹಬಲವನ್ನು ಕೃಪೆ ಮಾಡಿದ್ದಾನೆ. ಇಂದ್ರಿಯಗಳಿಗೆ ವಶರಾಗಿ ~~ನಾವು~~ ಅದನ್ನು ಕೆಟ್ಟರೀತಿಯಲ್ಲಿ ಕಳೆದುಕೊಳ್ಳದ ಹಾಗೆ ನಮಗೆ ಜ್ಞಾನವೂ ~~[illegible]~~ ಬುದ್ಧಿಬಲವನ್ನು ದಯೆಪಾಲಿಸಿದ್ದಾನೆ. ಹೀಗೆ ನಾವು ಇಂದ್ರಿಯಗಳನ್ನು ಗೆಲ್ಲಲು ಸಾಧ್ಯವಾಗುತ್ತದೆ. ಗೋಪಾಲರ ಕುಲದಲ್ಲಿ ಅವತರಿಸಿ, ಆಶ್ಚರ್ಯಕಾರಿ ಎನಿಸಿಕೊಂಡ ಶ್ರೀಕೃಷ್ಣ ಭಗವಂತನ ಕೃಪೆಯಿಂದಲೇ ಇದೆಲ್ಲಾ. ಈ ವಿಷಯವನ್ನು ಮನಗಂಡು ನಾವು ಭಗವಂತನ ತಿರುವಡಿಗಳ ಸೇವೆಯಲ್ಲಿ ತೊಡಗಬೇಡವೇ. ನಾನಾ ಪವಿತ್ರ ಕ್ಷೇತ್ರಗಳಲ್ಲಿ ಸ್ವಾಮಿಯು ಅರ್ಚಾವತಾರಿಯಾಗಿ ನೆಲೆಸಿದ್ದಾನಷ್ಟೆ. ತಿರುಮಾಲಿರುಂಜೋಲೈ ಮಲೈ ಎಂಬುದು ಅಂಥ ಪವಿತ್ರ ಕ್ಷೇತ್ರಗಳಲ್ಲಿ ಒಂದು. ದೇವತೆಗಳೂ ನಿತ್ಯಸೂರಿಗಳೂ ತಮ್ಮ ತಮ್ಮ ವಾಸಸ್ಥಳಗಳಿಂದ ಅಲ್ಲಿಗೆ ಬಂದು ಭಗವಂತನಿಗೆ ಪ್ರದಕ್ಷಿಣಾ ನಮಸ್ಕಾರಗಳನ್ನು ಸಲ್ಲಿಸಿ ಹೋಗುವಂಥ ದಿವ್ಯ ಕ್ಷೇತ್ರವದು. ಆದ್ದರಿಂದ, ನಾವೂ ಅಲ್ಲಿಗೆ ಹೋಗಬೇಕು. ಭಗವಂತನ ದರ್ಶನ ಪಡೆದುಕೊಳ್ಳಬೇಕು. ಪ್ರದಕ್ಷಿಣಾ ನಮಸ್ಕಾರಾದಿಗಳನ್ನು ಪ್ರತಿದಿನವೂ ಮಾಡುತ್ತಾ, ಭಗವಂತನನ್ನು ಭಜಿಸಿ ಪೂಜಿಸುತ್ತಾ, ಅವನೊಡನೆ ಕೂಡಿಕೊಳ್ಳಬೇಕು. ಇದೇ ಯುಕ್ತವಾದ ಕೆಲಸ. ಇದರಿಂದ ನಮಗೆ ಶ್ರೇಯಸ್ಸು ಖಂಡಿತ.

9. வழக்கென நினைமின் வல்வினை மூழ்காது,
அழக்கொடியட்டான் அமர்பெருங்கோயில்,
மழக்களிற்றினம் சேர் மாலிருஞ்சோலை,
தொழக்கருதுவதே துணிவது சூதே.

ವಳಕ್ಕೆನ ನಿನೈಮಿನ್ ವಲ್ವಿನೈ ಮೂಳ್ಗಾದು,
ಅಳಕ್ಕೊಡಿಯಟ್ಟಾನ್ ಅಮರ್ ಪೆರುಙ್ಗೋಯಿಲ್,
ಮಳಕ್ಕಳಿಱ್ಱಿನಮ್ ಶೇರ್ ಮಾಲಿರುಞ್ಜೋಲೈ,
ತೊಳಕ್ಕರುದುವದೇ ತುಣಿವದು ಶೂದೇ.

ವಳಕ್ಕೆನ வழக்கென = ಯುಕ್ತವಾದ ಕ್ರಮ ಎಂದು, ನಿನೈಮಿನ್ நினைமின் = ಭಾವಿಸಿರಿ (ತಿಳಿಯಿರಿ), ವಲ್ ವಿನೈ வல்வினை = ಕ್ರೂರಪಾಪಗಳೆಲ್ಲ, ಮೂಳ್ಗಾದು மூழ்காது = ಮುಳುಗಿರದಂತೆ, ಅಳಲ್ ಕೊಡಿ அழல் கொடி = ಕಾಳ್ಗಿಚ್ಚನ್ನು, ಅಟ್ಟಾನ್ அட்டான் = ನುಂಗಿ ಹಾಕಿದವನು, ಅಮರ್ அமர் = ನೆಲಸಿರುವ, ಪೆರುಙ್ಗೋಯಿಲ್ பெருங்கோயில் = ಪ್ರಸಿದ್ಧವಾದ ದೇವಾಲಯವಾಗಿ, ಮಳ மழ = ಯೌವನದ, ಕಳಿಱು களிறு = ಆನೆಗಳ, ಇನಮ್ இனம் = ಗುಂಪುಗಳು, ಶೇರ್ சேர் = ಸೇರುವ, (ದೇವಾ ಮಾಲಿರುಞ್ಜೋಲೈ மாலிருஞ்சோலை = ತಿರುಮಾಲಿರುಞ್ಜೋಲೈ ಕ್ಷೇತ್ರವನ್ನು (ಸ್ವಾಮಿಯನ್ನು), ತೊಳ தொழ = ಪೂಜಿಸಲು, ಕರುದುವದೇ கருதுவதே = ಆಶಿಸುವುದೇ, ತುಣಿವದು துணிவது = ನಿಶ್ಚಯಿಸುವುದು, ಶೂದೇ சூதே = ಉಪಾಯವೇನಂ.

ಯುಕ್ತವಾದ ಕ್ರಮವೆಂದು ಭಾವಿಸಿರಿ. ಕ್ರೂರಪಾಪಗಳೆಲ್ಲ ಮುಳುಗಿರದಂತೆ, ಕಾಳ್ಗಿಚ್ಚನ್ನು ನುಂಗಿ ಹಾಕಿದವನು ನೆಲಸಿರುವ ಪ್ರಸಿದ್ಧವಾದ ದೇವಾಲಯವಾಗಿ, ಯೌವನದ ಆನೆಗಳ ಗುಂಪುಗಳು ಸೇರುವ ತಿರುಮಾಲಿರುಞ್ಜೋಲೈ ಕ್ಷೇತ್ರವನ್ನು (ಸ್ವಾಮಿಯನ್ನು) ಪೂಜಿಸಲು ಆಶಿಸುವುದೂ ಮತ್ತು ದೃಢವಾಗಿ ನಿಶ್ಚಯಿಸುವುದೂ ಇದು ಉಪಾಯವೇನಂ. (೯)

"ಕಾಳ್ಗಿಚ್ಚನ್ನು ನುಂಗಿ ಹಾಕಿದವನು" — ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ, ನಂದಗೋಕುಲದಲ್ಲಿ ಬೆಳೆಯುತ್ತಿದ್ದಾಗ, ಅವನು ಬೇರೆ ಗೋವಳ ಬಾಲಕರೊಡನೆ ದನಕರುಗಳ ಹಿಂಡೆ ಅವುಗಳನ್ನು ಮೇಯಿಸುವ ನಿಮಿತ್ತ ಕಾಡಿಗೆ ಪ್ರತಿದಿನವೂ ಹೋಗುತ್ತಿದ್ದನು. ಒಂದು ದಿನ, ಅವರೆಲ್ಲರೂ ಕಾಡಿನಲ್ಲಿರುವಾಗ, ಭಯಂಕರವಾದ ಕಾಳ್ಗಿಚ್ಚು ಕಾಣಿಸಿಕೊಂಡಿತು. ಅದು ಬಲು ಬೇಗನೆ, ಎಲ್ಲ ಕಡೆಯಿಂದಲೂ ಆವರಿಸುತ್ತಾ ಬಂತು. ಗೋವಳ ಬಾಲಕರು ಭಯದಿಂದ ಕಲಕಬ್ಬರು. ತಮ್ಮನ್ನೂ ತಮ್ಮ ದನಕರುಗಳನ್ನೂ ಅದು ಸುಟ್ಟು ಬಿಡುವುದಲ್ಲ ಎಂದು ಹೆದರಿದರು. "ಏನುಗತಿ ಕೃಷ್ಣಾ" ಎಂದರು. ಆಗ

Garani Srinivasan

ಶ್ರೀಕೃಷ್ಣನು ಅವರನ್ನು ಸಂತೈಸಿ, ಒಂದು ಕ್ಷಣಕಾಲ ಕಣ್ಣು ಮುಚ್ಚಿಕೊಳ್ಳುವಂತೆ ಅವರಿಗೆ ಆಣತಿಯಿತ್ತನು ಆಗ, ಆ ಕಾಳ್ಗಿಚ್ಚನ್ನು ಒಂದೇ ಆಪೋಶನವಾಗಿ ಮಾಡಿ, ಅದನ್ನು ನುಂಗಿ ಬಿಟ್ಟನು ಬಾಲಕರು ಆಶ್ಚರ್ಯಾನಂದಗಳಿಂದ ಕಣ್ಣುಕಣ್ಣು ಬಿಟ್ಟರು. ಮಾಯನ್! ಅಲ್ಲವೆ ಭಗವಂತ!

ಆಳ್ವಾರರು ಹೇಳುತ್ತಾರೆ: ಚೇತನನು ಇಂದ್ರಿಯಗಳಿಗೆ ವಶನಾಗಿ ಕ್ರೂರವಾದಗಳಿಗೆ ಎಡೆಕೊಡುವುದರ ಬದಲಾಗಿ, ತಾನು ಉದ್ಧಾರಗೊಳ್ಳುವುದಕ್ಕಾಗಿ, ಭಗವಂತನನ್ನು ಭಜಿಸಿ ಪೂಜಿಸುವುದು ಯುಕ್ತವಾದ ಕ್ರಮ. ತಿರುಮಾಲಿರುಂಜೋಲೈ ಕ್ಷೇತ್ರದಲ್ಲಿ ಆಶ್ಚರ್ಯಕಾರಿಯಾದ ಭಗವಂತನು ಆಶ್ರಿತೋದ್ಧಾರ ಕಾರ್ಯಕ್ಕಾಗಿಯೇ ನೆಲಸಿದ್ದಾನಷ್ಟೆ. ಅಲ್ಲಿಗೆ ಹೋಗಿ, ಅವನನ್ನು ಪೂಜಿಸಬೇಕೆಂದು ಆಶಿಸುವುದು, ಅದನ್ನು ನಡೆಸಲೇ ಬೇಕೆಂದು ದೃಢ ನಿಶ್ಚಯ ಮಾಡುವುದು, ಹಾಗೆಯೇ ನಡೆದುಕೊಳ್ಳುವುದು ಅತ್ಯುತ್ತಮವಾದ ಉಪಾಯ.

10. சூதென்றுகளவும் சூதும் செய்யாதே,
வேதமுன் விரித்தான் விரும்பிய கோயில்,
மாதுறு மயில் சேர் மாலிருஞ்சோலை,
போதவிழ் மலையே புகுவது பொருளே.

ಸೂದೆನ್ಱುಕ್ಕಳವುಮ್ ಸೂದುಮ್ ಶೆಯ್ಯಾದೇ,
ವೇದಮುನ್ ವಿರಿತ್ತಾನ್ ವಿರುಮ್ಬಿಯ ಕೋಯಿಲ್,
ಮಾದುಱು ಮಯಿಲ್ ಶೇರ್ ಮಾಲಿರುಂಜೋಲೈ,
ಪೋದವಿೞ್ ಮಲೈಯೇ ಪುಗುವದು ಪೊರುಳೇ.

ಸೂದು சூது = ಉಪಾಯ, ಎನ್ಱು என்று = ಎಂದು, ಕಳವುಮ் களவும் = ಕಳವನ್ನು (ವಂಚನೆಯನ್ನು), ಸೂದುಮ್ சூதும் = ಜೂಜನ್ನು, ಶೆಯ್ಯಾದೇ செய்யாதே = ಮಾಡದಂ[ತೆ], ಮಾದು மாது = ಹೆಣ್ಣಿನೊಡನೆ, ಉಱು உறு = ಕೂಡಿಕೊಂಡು, ಮಯಿಲ್ மயில் = ಗಂಡು ನವಿಲು, ಶೇರ್ சேர் = ಬಾಳುವ[...]ದ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂ[...]

Garani Srinivasan

ಜೋಲೈ ಎಂಬ, ಪೋದು போது = ಹೂಗಳು ಅವಿಳ್ ಮಲೈ அவிழ் மலை = ವಿಕಸಿಸುವಂಥ (ಅರಳುವ) ಬೆಟ್ಟಕ್ಕೆ, ಪುಗುವದು புகுவது = ಹೋಗಿ ಸೇರುವುದು, ಪೊರುಳೇ பொருளே = ಅಂತಿಮ ಪುರುಷಾರ್ಥವೇ ಸರಿ.

ಉಪಾಯ ಎಂದು ವಂಚನೆ ಜೂಜು (ಮುಂತಾದವನ್ನು) ಮಾಡದಂತೆ, ಹೆಣ್ಣು ಗಂತು ನವಿಲುಗಳು (ಆನಂದದಿಂದ ಕುಣಿ) ಬಾಳುವಂಥ ತಿರುಮಾಲಿರುಂಜೋಲೈ ಎಂಬ ಹೂಗಳು ಅರಳುವ ಬೆಟ್ಟಕ್ಕೆ ಹೋಗಿ ಸೇರುವುದು ಅಂತಿಮ ಪುರುಷಾರ್ಥವೇ ಸರಿ. (10)

ಆಳ್ವಾರರು ಹೇಳುತ್ತಾರೆ: 'ಉಪಾಯ' ಎಂಬುದನ್ನು ಚೇತನನು ತನ್ನ ಉನ್ನತಿಗಾಗಲಿ ಅವನತಿಗಾಗಲಿ ಉಪಯೋಗಿಸಿಕೊಳ್ಳಬಹುದು. ಕಳವು, ವಂಚನೆ, ಜೂಜು ಮುಂತಾದ ಉಪಾಯಗಳು ಅವನನ್ನು ಕ್ರೂರವಾದಗಳಲ್ಲಿ ತೊಡಗಿಸಿ, ದುರ್ಗತಿಗೆ ಎಳೆದು, ನರಕಭಾಜನ ಮಾಡುತ್ತವೆ. ಅಂಥ ಕೆಟ್ಟ ವಿಷಯಗಳ ಕಡೆಗೆ ಗಮನ ಕೊಡದಂತೆ ಭಗವಂತನು ನೆಲೆಸಿರುವ ದಿವ್ಯಕ್ಷೇತ್ರಗಳತ್ತ ಗಮನವನ್ನು ತಿರುಗಿಸಬೇಕು. ಎಲ್ಲ ಕಾಲದಲ್ಲೂ ಹಿಂಮಳ ಪುಷ್ಪಗಳು ಅರಳಿ ಕಣ್ಮನಗಳಿಗೆ ಇಂಪನ್ನು ಕೊಡುವ ಬೆಟ್ಟವೇ ತಿರುಮಾಲಿರುಂಜೋಲೈ ಮಲೈ ಎಂಬುದು. ಆ ಬೆಟ್ಟವನ್ನು ಸೇರಿ, ಅದರ ಶಿಖರದಲ್ಲಿ ನೆಲೆಸಿರುವ ದಿವ್ಯಸುಂದರನನ್ನು (ಅಳಗರ್ ಅನ್ನು) ಎರಗಿ ಪೂಜಿಸುವುದೇ ಅಂತಿಮ ಪುರುಷಾರ್ಥವಾದ ಮೋಕ್ಷಕ್ಕೆ ಅತ್ಯುತ್ತಮವಾದ ಉಪಾಯ. ಚೇತನನು ಅದನ್ನು ಹಿಡಿದು ತನ್ನ ಉನ್ನತಿಯನ್ನು ತಪ್ಪದೆ ಸಾಧಿಸಿಕೊಳ್ಳಬೇಕು.

11. பொருளென்றிவ்வுலகம் படைத்தவன் புகழ்மேல்,
மருளில் வண் குருகூர் வண் சடகோபன்,
தெருள்கொள்ளச் சொன்ன ஓராயிரத்துள் இப்பத்து,
அருளுடையவன் தாள் அணைவிக்கும் முடித்தே

ಪೊರುಳೆನ್ರಿವ್ವುಲಗಮ್ ಪಡೈತ್ತವನ್ ಪುಗಳ್ ಮೇಲ್,
ಮರುಳಿಲ್ ವಣ್ ಕುರುಗೂರ್ ವಣ್ ಶಠಗೋಪನ್,

ತೆರುಳ್ ಕೊಳ್ಳ ಚ್ಚೊನ್ನ ಓರಾಯಿರತ್ತುಳ್ ಇಪ್ಪತ್ತುಂ.
ಅರುಳುಡೈಯವನ್ ತಾಳ್ ಅಣೈವಿಕ್ಕುಂ ಮುಡಿತ್ತೇ.
(ಫಲಪ್ರದವಾದ)

ಪೊರುಳ್ ಎನ್ರು பொருள் என்று = ಸತ್ಯವಸ್ತುವೆಂದು, ಇ-ವುಲಗಮ್ இவ்வுலகம் = ಈ ಲೋಕವನ್ನು (ಈ ಲೋಕಗಳನ್ನು), ಪಡೈತ್ತವನ್ படைத்தவன் = ಪಡೆದವನ (ಸೃಷ್ಟಿಸಿದವನ), (ಹಿರಿಮೆಯನ್ನು) ಪುಗಳ್ ಮೇಲ್ புகழ் மேல் = ಕೀರ್ತಿಯನ್ನು ಕುರಿತು, ಮರುಳ್ ಇಲ್ மருள் இல் = ಭ್ರಾಂತಿಯಿಲ್ಲದ, (ಭ್ರಾಂತನಲ್ಲದ) ವಣ್ ಕುರುಕೂರ್ வண் குருகூர் = ಸೊಬಗಿನ ಕುರುಕೂರು ಗ್ರಾಮದ, ವಣ್ ಶಠಕೋಪನ್ வண் சடகோபன் = ಔದಾರ್ಯಗುಣವುಳ್ಳ (ಸುಂಶವನಾದ), ಶಠಕೋಪನು, ತೆರುಳ್ ಕೊಳ್ಳ தெருள் கொள்ள = ಚೆನ್ನಾಗಿ ಅರಿತುಕೊಳ್ಳುವುದಕ್ಕಾಗಿ, ಚೊನ್ನ சொன்ன = ಹೇಳಿದ, ಓರ್ ஓர் = ಅದ್ವಿತೀಯವಾದ, ಆಯಿರತ್ತುಳ್ ஆயிரத்துள் = ಒಂದು ಸಾವಿರದಲ್ಲಿ, ಇಪ್ಪತ್ತು இப்பத்து = ಈ ಹತ್ತು [illegible], ಅರುಳ್ ಉಡೈಯವನ್ ತಾಳ್ அருள் உடையவன் தாள் = ಪರಮಕೃಪಾಳುವಿನ ತಿರುವಡಿಗಳನ್ನು, ಅಣೈವಿಕ್ಕುಮ್ அணைவிக்கும் = ಸೇರಿಸುತ್ತವೆ, ಮುಡಿತ್ತೇ முடிக்கே = ಸಂಸಾರಬಂಧನವನ್ನು ನೀಗಿಸಿಯೇ.

(ಫಲಪ್ರದವಾದ) (ಹಿರಿಮೆಯನ್ನು)
ಸತ್ಯವಸ್ತುವೆಂದು ಈ ಲೋಕವನ್ನು ಸೃಷ್ಟಿಸಿದವನ ಕೀರ್ತಿಯನ್ನು ಕುರಿತು ಭ್ರಾಂತನಲ್ಲದ (ಭ್ರಾಂತಿಯಿಲ್ಲದ) ಸೊಬಗಿನ ಕುರುಕೂರು ಗ್ರಾಮದ ಔದಾರ್ಯಗುಣವುಳ್ಳ (ಸುಂಶವನಾದ) ಶಠಕೋಪನು, (ಹೇಳಿದ) ಚೆನ್ನಾಗಿ ಅರಿತುಕೊಳ್ಳುವುದಕ್ಕಾಗಿ ಹೇಳಿದ ಅದ್ವಿತೀಯವಾದ ಒಂದು ಸಾವಿರದಲ್ಲಿ ಈ ಹತ್ತು ಪಾಶುರಗಳು ಸಂಸಾರಬಂಧನವನ್ನು ನೀಗಿಸಿ ಪರಮಕೃಪಾಳುವಿನ ತಿರುವಡಿಗಳನ್ನು ಸೇರಿಸುತ್ತವೆ. (11)

ಈ ಜಗತ್ತು ಸತ್ಯವಾದದ್ದು ಮತ್ತು ಫಲಪ್ರದವಾದದ್ದು. ಅಂತಿಮ ಪುರುಷಾರ್ಥವಾದ ಮೋಕ್ಷ ಫಲವನ್ನು ಗಳಿಸಿಕೊಳ್ಳುವುದಕ್ಕೆ ಅನುಕೂಲವಾಗಿರುವುದು. ಇಲ್ಲಿ ನಾನಾ ಪವಿತ್ರ ಕ್ಷೇತ್ರಗಳಿವೆ. ಒಂದೊಂದರಲ್ಲೂ ಭಗವಂತನು ಅರ್ಚಾಸ್ವರೂಪಿಯಾಗಿ, ಆಶ್ರಿತ ಜನೋದ್ಧಾರಣಾರ್ಥವಾಗಿಯೇ ನೆಲಸಿದ್ದಾನೆ. ಅವನ ದಿವ್ಯ ತಿರುವಡಿಗಳನ್ನಾಶ್ರಯಿಸಿ, ಉದ್ಧಾರಗೊಳ್ಳುವುದಕ್ಕೆ ಎಲ್ಲಾ ಬಗೆಯಲ್ಲೂ ಸಹಕಾರಿಯಾಗಿದೆ.

Garani Srinivasan

ಇಂಥ ಫಲಪ್ರದವಾದ ಈ ಜಗತ್ತನ್ನು ಸೃಷ್ಟಿಸಿದ ಭಗವಂತನು ಎಷ್ಟು ಕರುಣಾಮಯಿ! ಅವನ ಮಹಿಮೆ ಎಷ್ಟು ದೊಡ್ಡದು! ಅವನ ಲೀಲೆ ಎಷ್ಟು ಅಪಾರ!

ಭಗವಂತನ ಮಹಿಮೆಯನ್ನು, ಅಪಾರ ಲೀಲೆಯನ್ನು ತುಂಬು ಕೊರಳಿನಿಂದ ಬಂದು ಸಾವಿರ ಪಾಶುರಗಳಲ್ಲಿ ಹೊಗಳಿ ಹಾಡಿರುವವನು ತಿರುಕ್ಕುರುಗೂರಿನ ಶ್ರೀ ಕಾರಿಯಾರ್‌ರವರ ಮುಂತಾದ ವಿದ್ವಾಂಸರುಗಳ ಸದ್ಯೋಗಿ ಶಠಗೋಪನು ಸಾಮಾನ್ಯಜನರಿಗೆ ಭಗವದ್ವಿಷಯವಾಗಿ ತಿಳಿವಳಿಕೆ ಕೊಡುವುದಕ್ಕಾಗಿಯೂ, ಭಗವಂತನ ಕಡೆಗೆ ಅವರ ಲಕ್ಷ್ಯವನ್ನು ತಿರುಗಿಸುವುದಕ್ಕಾಗಿಯೂ, ಅವರು ಭಗವಂತನನ್ನು ಆಶ್ರಯಿಸಿ ಉಜ್ಜೀವನಗೊಳ್ಳುವುದಕ್ಕಾಗಿಯೂ ಈ ಸಾವಿರ ಪಾಶುರಗಳ ರಚನೆ.

ಮನುಷ್ಯನು ಬಿಡುಗಡೆ ಹೊಂದುವುದಕ್ಕೆ ತಕ್ಕ ಉಪಾಯ ಯಾವುದು?

ಇಂದ್ರಿಯಗಳು ದೇಹದ ಮೂಲಕ ಕೆಲಸ ಮಾಡುತ್ತವೆ. ದೇಹದಲ್ಲಿ ಬಲ ಉತ್ಸಾಹಗಳು ತುಂಬಿರುವವರೆಗೆ, ಇಂದ್ರಿಯಗಳು ಅವನನ್ನು ವಿಷಯಸುಖದ ಕಡೆಗೆ ಎಳೆಯುತ್ತಿರುತ್ತವೆ. ಇದರಿಂದ ಮನುಷ್ಯನು ಕೀಳು ಕೆಲಸಗಳಲ್ಲಿ ತೊಡಗುತ್ತಾನೆ. ಪಾಪಕಾರ್ಯಗಳನ್ನು ಮಾಡುತ್ತಾನೆ. ಪಾಪವನ್ನು ಬೆಳಸಿಕೊಳ್ಳುತ್ತಲೇ ಹೋಗುತ್ತಾನೆ. ಹೀಗಾಗಿ, ~~[illegible]~~ ಕರ್ಮದ ಸಂಕೋಲೆಯು ಬಿಗಿ ಬಿಗಿಯುತ್ತಲೇ ಹೋಗುತ್ತದೆ. ಕರ್ಮಬಂಧನದಿಂದ ಬಿಡುಗಡೆಯಾಗುವವರೆಗೆ ಅವನ ಆತ್ಮೋದ್ಧಾರವಾಗುವುದಿಲ್ಲ.

ಕರ್ಮಬಂಧನದಿಂದ ಬಿಡುಗಡೆ ಹೊಂದುವುದಾದರೂ ಹೇಗೆ? ಅದಕ್ಕೆ ಉಪಾಯವೇನು?

ಭಗವಂತನು ಪರಮಕಾರುಣ್ಯನಿಧಿ. ಆಶ್ರಿತರಕ್ಷಣೆಯೇ ಅವನಧರ್ಮ. ಆಶ್ರಿತರನ್ನು ಕರ್ಮಬಂಧನದಿಂದ ಉದ್ಧರಿಸುವುದಕ್ಕಾಗಿಯೇ ಸ್ವಾಮಿಯು ಈ ಲೋಕದಲ್ಲಿ ನಾನಾ ಪವಿತ್ರ ಕ್ಷೇತ್ರಗಳಲ್ಲಿ ಅರ್ಚಾಸ್ವರೂಪಿಯಾಗಿ ನೆಲಸಿದ್ದಾನೆ. ಆಶ್ರಿತನು ಅಲ್ಲಿಗೆ ಹೋಗಬೇಕೆಂದು ಸಂಕಲ್ಪಿಸಿ, ಅಲ್ಲಿಗೆ ಹೋಗಿ, ಅಲ್ಲಿ ಭಗವಂತನ ದಿವ್ಯ ತಿರುವಡಿಗಳಲ್ಲಿ ಎರಗಿ ಪೂಜಿಸಬೇಕು. ಸಕಲಸೌಭಾಗ್ಯನಿಧಿಯಾದ ಭಗವಂತನು ಅವನಲ್ಲಿ ಕೃಪೆದೋರುತ್ತಾನೆ. ಅವನನ್ನು ಇಹಲೋಕದ ಬಂಧನದಿಂದ ಬಿಡಿಸುತ್ತಾನೆ. ಮುಕ್ತ

ಮೋಕ್ಷವೆಂಬ ಅಂತಿಮ ಪುರುಷಾರ್ಥವನ್ನು ದಯೆನೀಡುತ್ತಾನೆ.

ಜ್ಞಾನನಿಧಿಯಾದ ಶಠಗೋಪನು ರಚಿಸಿರುವ ಅದ್ವಿತೀಯವಾದ ಒಂದು ಸಾವಿರ ಪಾಶುರಗಳಲ್ಲಿ ಈ ತಿರುವಾಯ್ಮೊಳಿಗೆ ಸಂಬಂಧಿಸಿದವು ಹತ್ತು ಪಾಶುರಗಳು ಮಾತ್ರವೇ. ಇವುಗಳನ್ನು ಚೆನ್ನಾಗಿ ಕಲಿತು, ಅರಿತುಕೊಂಡು, ಅನುಷ್ಠಾನ ಮಾಡುವುದರಿಂದ ಇಹಲೋಕದ ಸಾಂಸಾರಿಕ ಸಂಕೋಲೆಯು ಕಡಿದು ಹೋಗುತ್ತದೆ ಮತ್ತು ಪರಮ ಶ್ರೇಷ್ಠರಾದ ಭಗವಂತನ ತಿರುವಡಿಗಳ ಪ್ರಾಪ್ತಿ-ಶ್ರೇಯಸ್ಸು ತಪ್ಪದೆ ಲಭಿಸುತ್ತದೆ ಎಂಬುದೆ ಈ ತಿರುವಾಯ್ಮೊಳಿಯ ಫಲಶ್ರುತಿ।

10.7.80

— o —

Garani Srinivasan